ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 14
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನಲ್ಲಿ ಬರುವ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸಂಕೇಶ್ವರ, ಗೋಟೂರ, ಹೆಬ್ಬಾಳ, ಕೋಚರಿ, ಬಡಕುಂದ್ರಿ ಮತ್ತು ಯರನಾಳ ಬ್ಯಾರೇಜ್‌ಗಳಿಗೆ ಸುಲ್ತಾನಪೂರ ಬ್ಯಾರೇಜ್‌ನಿಂದ ನೀರು ತುಂಬಿಸುವ ಯೋಜನೆಯನ್ನು ರೂಪಿಸಲಾಗಿದೆಯೇ;	ಪ್ರಸ್ತುತ ಜನಪ್ರತಿನಿಧಿಗಳ ಬೇಡಿಕೆಯಂತೆ ಸಂಕೇಶ್ವರ, ಗೋಟೂರ, ಹೆಬ್ಬಾಳ, ಕೋಚರಿ, ಬಡಕುಂದ್ರಿ ಮತ್ತು ಯರನಾಳ ಬ್ಯಾರೇಜುಗಳಿಗೆ ಬೇಸಿಗೆ ಕಾಲದಲ್ಲಿ ಸುಲ್ತಾನಪುರ ಬ್ಯಾರೇಜ್ ಹತ್ತಿರದಿಂದ ಒಂದು ಬಾರಿ ನೀರು ತುಂಬಿಸುವ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ಈ ಯೋಜನೆಗೆ 0.15 ಟಿ.ಎಮ್.ಸಿ. ನೀರಿನ ಅವಶ್ಯಕತೆ ಇರುತ್ತದೆ. ಇದಕ್ಕೆ ಘಟಪ್ರಭಾ ಜಲಾಶಯದ ನೀರನ್ನು ಬಳಸುವ ಅವಶ್ಯಕತೆಯಿರುವುದರಿಂದ ನೀರಿನ ಹಂಚಿಕೆ ಬಗ್ಗೆಯೂ ಪರಿಶೀಲಿಸಬೇಕಿದೆ.
ಆ)	ಹಾಗಿದ್ದಲ್ಲಿ, ಈ ಯೋಜನೆಯು ಯಾವ ಹಂತದಲ್ಲಿದೆ (ಯೋಜನೆವಾರು ಸಂಪೂರ್ಣ ವಿವರಗಳನ್ನು ನೀಡುವುದು);	
ಇ)	ಸದರಿ 6 ಬ್ಯಾರೇಜ್‌ಗಳಿಗೆ ನೀರು ತುಂಬುವ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ಹಾಗೂ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಹಾಕಿಕೊಂಡ ಕಾಲಮಿತಿಯೇನು?	ಸಂಕೇಶ್ವರ, ಗೋಟೂರ, ಹೆಬ್ಬಾಳ, ಕೋಚರಿ, ಬಡಕುಂದ್ರಿ, ಯರನಾಳ ಮತ್ತು ಸುಲ್ತಾನಪುರ ಬ್ಯಾರೇಜುಗಳಿಗೆ ಬೇಸಿಗೆ ಕಾಲದಲ್ಲಿ ನೀರು ತುಂಬಿಸುವ ಯೋಜನೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ ಸಾಧಕ ಬಾಧಕಗಳನ್ನೊಳಗೊಂಡ ಯೋಜನಾ ವರದಿಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಜಸಂಇ 85 ಡಬ್ಲ್ಯೂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 15
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರಸಂ.	ಪ್ರಶ್ನೆಗಳು	ಉತ್ತರಗಳು
ಅ)	ಹುಕ್ಕೇರಿ ತಾಲ್ಲೂಕಿನ ಸುಲ್ತಾನಪೂರ ಬ್ಯಾರೇಜ್‌ನಿಂದ ಏತ ನೀರಾವರಿ ಮೂಲಕ ಶಂಕರಲಿಂಗ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕೋಚರಿ ಬ್ಯಾರೇಜ್ ಹತ್ತಿರ ಕೈಗೊಳ್ಳಲು ಉದ್ದೇಶಿಸಿರುವ ಶ್ರೀ ಶಂಕರಲಿಂಗ ಏತ ನೀರಾವರಿ ಯೋಜನೆಯ ವಿವರವಾದ ಯೋಜನಾ ವರದಿಯು ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.
ಆ)	ಹಾಗಿದ್ದಲ್ಲಿ, ಸದರಿ ಯೋಜನೆಯ ಅಂದಾಜು ಮೊತ್ತವೆಷ್ಟು; ಯೋಜನೆಯಿಂದ ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ (ಯೋಜನೆಯ ಸಂಪೂರ್ಣ ವಿವರಗಳನ್ನು ಒದಗಿಸುವುದು);	
ಇ)	ಯೋಜನೆಯ ಪ್ರಸ್ತುತ ಹಂತವೇನು; ಸರ್ಕಾರದ ಈ ಯೋಜನೆಗೆ ಅನುಮೋದನೆ ನೀಡಿದೆಯೇ (ವಿವರ ನೀಡುವುದು);	
ಈ)	ಹಾಗಿಲ್ಲದಿದ್ದಲ್ಲಿ, ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	

ಸಂಖ್ಯೆ: ಜಸಂಇ 84 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನಸಭೆ

1). ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 134
2). ಸದಸ್ಯರ ಹೆಸರು : ಶ್ರೀ ಪುಟ್ಟರಂಗಶೆಟ್ಟಿ (ಚಾಮರಾಜನಗರ)
3). ಉತ್ತರಿಸುವ ದಿನಾಂಕ : 22.09.2020
4). ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆಗೆ 2019-20ನೇ ಸಾಲಿನಲ್ಲಿ ಬಿಡುಗಡೆಗೊಳಿಸಲಾಗಿರುವ ಅನುದಾನವೆಷ್ಟು;(ವಿವರ ನೀಡುವುದು)	ಚಾಮರಾಜನಗರ ಜಿಲ್ಲೆಗೆ 2019-20ನೇ ಸಾಲಿನಲ್ಲಿ ರೂ. 278.03 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.
(ಆ)	ಉಳಿಕೆ ಅನುದಾನವನ್ನು ಬಿಡುಗಡೆ ಮಾಡದಿರಲು ಕಾರಣಗಳೇನು;	ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ದಿನಾಂಕ-01.04.2019ಕ್ಕೆ ರೂ.16.55 ಕೋಟಿಗಳ ಅನುದಾನವಿರುವುದರಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ ಶೇ 75 ರಷ್ಟು ವೆಚ್ಚವಾಗದೆ ಇರುವುದರಿಂದ ಆರ್ಥಿಕ ಇಲಾಖೆಯ ಆದೇಶದಂತೆ ಅನುದಾನ ಬಿಡುಗಡೆಯಾಗಿರುವುದಿಲ್ಲ.
(ಇ)	ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಬಾಕಿಯಿರುವ ಅನುದಾನ ಬಿಡುಗಡೆ ಮಾಡಲು ಸರ್ಕಾರ ಆಸಕ್ತಿ ಹೊಂದಿದೆಯೇ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು?	ಹೌದು ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ದಿನಾಂಕ-01.04.2019ಕ್ಕೆ ರೂ.16.55 ಕೋಟಿಗಳ ಅನುದಾನವಿರುವುದರಿಂದ ಆರ್ಥಿಕ ಇಲಾಖೆಯ ಆದೇಶದನ್ವಯ ಆರಂಭಿಕ ಶಿಲ್ಕು ಸೇರಿದಂತೆ ಲಭ್ಯವಿರುವ ಅನುದಾನದಲ್ಲಿ ಶೇ.75ರಷ್ಟು ವೆಚ್ಚ ಭರಿಸಿದ ನಂತರ ಉಳಿದ ಕಂತುಗಳನ್ನು ಬಿಡುಗಡೆ ಮಾಡಲು ಆದೇಶವಿರುತ್ತದೆ. ಆದ್ದರಿಂದ ಸದರಿ ಆದೇಶದನ್ವಯ ಲಭ್ಯವಿರುವ ಅನುದಾನದಲ್ಲಿ ಶೇ 75 ರಷ್ಟು ಖರ್ಚು ಮಾಡಿದರೆ ಉಳಿದ ಅನುದಾನ ಬಿಡುಗಡೆ ಮಾಡಲಾಗುವುದು.

ಸಂಖ್ಯೆ: ಪಿಡಿಎಸ್ 54 ಕೆಎಲ್ಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	137
ಸದಸ್ಯರ ಹೆಸರು	:	ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ಬಿರನಾಳ ಗ್ರಾಮದಲ್ಲಿ 220 ಕೆ.ವಿ.ಸಬ್‌ಸ್ಟೇಷನ್ ಮಂಜೂರಾತಿ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ:	ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬಿರನಾಳ ಗ್ರಾಮದಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಮುಗಳಖೋಡ (ಕಬ್ಬೂರ್) ಗ್ರಾಮದಲ್ಲಿ ಹೊಸದಾಗಿ 220 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ವಿದ್ಯುತ್ ಉಪಕೇಂದ್ರವನ್ನು ಡಿಸೆಂಬರ್-2020 ರೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲು ಕವಿಪ್ರನಿನಿಯು ಉದ್ದೇಶಿಸಿದ್ದು, ಈ ವಿದ್ಯುತ್ ಉಪಕೇಂದ್ರವು ಚಾಲನೆಗೊಂಡ ನಂತರ ಬಿರನಾಳ ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ಭಾರವನ್ನು ಸಹ ಹೊಸದಾಗಿ ಸ್ಥಾಪಿಸಲಾಗುವ ಮುಗಳಖೋಡ ವಿದ್ಯುತ್ ಉಪಕೇಂದ್ರದ ಮೇಲೆ ತೆಗೆದುಕೊಳ್ಳುವುದರಿಂದ, ಬಿರನಾಳ ಗ್ರಾಮದಲ್ಲಿ ಹೊಸದಾಗಿ 220 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಯ ಪ್ರಸ್ತಾವನೆ ಪ್ರಸ್ತುತ ಕವಿಪ್ರನಿನಿಯ ಮುಂದೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗಾಗಿ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭಿಸಲಾಗುವುದು :	
ಇ)	ಯಾವ ಕಾಲಮಿತಿಯೊಳಗಾಗಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಇಲ್ಲಿನ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗುವುದು : ಹಾಗೂ ಈ ಕಾಮಗಾರಿಗೆ ತಗುಲಬಹುದಾದ ಅಂದಾಜು ಮೊತ್ತವೆಷ್ಟು:	
ಈ)	ಸದರಿ ಕಾಮಗಾರಿಯನ್ನು ಪ್ರಾರಂಭಿಸುವ ಉದ್ದೇಶ ಇಲ್ಲಿದಿದ್ದಲ್ಲಿ ಕಾರಣಗಳೇನು ? (ವಿವರ ನೀಡುವುದು)	

ಸಂಖ್ಯೆ: ಎನರ್ಜಿ 107 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 138
ಸದಸ್ಯರ ಹೆಸರು	: ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	: 22.09.2020
ಉತ್ತರಿಸಬೇಕಾದ ಸಚಿವರು	: ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ನೌಕರರುಗಳ ವೇತನದಲ್ಲಿ ಬಹಳಷ್ಟು ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಕನಿಷ್ಠ ಮೂಲ ವೇತನದಲ್ಲಿನ ವ್ಯತ್ಯಾಸವು ಕೇವಲ ಶೇ.6ರಷ್ಟು ಇರುತ್ತದೆ. ರಾಜ್ಯ ಸರ್ಕಾರವು ಸಾಂಪ್ರದಾಯಿಕವಾಗಿ ಕೇಂದ್ರ ವೇತನ ಆಯೋಗಗಳ ಶಿಫಾರಸ್ಸು ಹಾಗೂ ಕೇಂದ್ರ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ ತನ್ನದೇ ಆದ ವೇತನ ಆಯೋಗಗಳ / ವೇತನ ಸಮಿತಿಗಳ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿರುತ್ತದೆ. ಕೇಂದ್ರ ಸರ್ಕಾರವು 10 ವರ್ಷಗಳ ಅಂತರದಲ್ಲಿ ಕೇಂದ್ರ ಸರ್ಕಾರಿ ನೌಕರರ ವೇತನ ಪರಿಷ್ಕರಣೆಯನ್ನು ಮಾಡುತ್ತಿದ್ದು, ರಾಜ್ಯ ಸರ್ಕಾರವು ತನ್ನ ನೌಕರರ ವೇತನ ಮತ್ತು ಭತ್ಯೆಗಳನ್ನು ಪ್ರತಿ 5 ರಿಂದ 6 ವರ್ಷಗಳ ಅವಧಿಯಲ್ಲಿ ಪರಿಷ್ಕರಿಸಿಕೊಂಡು ಬರುತ್ತಿದೆ. ಆದುದರಿಂದ, **ರಾಜ್ಯ ಸರ್ಕಾರಿ ನೌಕರರ ವೇತನ ತಾರತಮ್ಯದ ವಿಷಯವನ್ನು** ಮುಂದೆ ರಚಿಸಲಾಗುವ ತಜ್ಞ ಸಮಿತಿಗಳಾದ ವೇತನ ಆಯೋಗ/ಅಧಿಕಾರಿ ವೇತನ ಸಮಿತಿಯ ಪರಿಶೀಲನೆಗೆ ಸಲ್ಲಿಸಿ ಅದರ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿ ಕ್ರಮವಹಿಸುತ್ತದೆ.
ಆ)	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಂಡು ಈ ವೇತನ ಮತ್ತು ಭತ್ಯೆಗಳ ತಾರತಮ್ಯವನ್ನು ಸರಿಪಡಿಸಲಾಗುವುದು? (ವಿವರ ನೀಡುವುದು)	

ಸಂ: ಆಇ 15 ಎಸ್‌ಆರ್‌ಪಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 144
2. ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್.(ದೇವನಹಳ್ಳಿ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)</td><td rowspan="2">ಹೌದು ಬಂದಿದೆ.

ದೇವನಹಳ್ಳಿ ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಮೋದಿತ ಯೋಜನಾ ವರದಿಯಲ್ಲಿ ದೇವನಹಳ್ಳಿ ತಾಲ್ಲೂಕಿನ 2 ಪಟ್ಟಣಗಳು ಮತ್ತು 193 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ 0.41 ಟಿ.ಎಂ.ಸಿ, ದೇವನಹಳ್ಳಿ ಕೈಗಾರಿಕಾ ಪ್ರದೇಶದ ಕುಡಿಯುವ ನೀರಿಗಾಗಿ 0.50 ಟಿ.ಎಂ.ಸಿ ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ದೇವನಹಳ್ಳಿ ತಾಲ್ಲೂಕಿನ 11 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಲು 0.336 ಟಿ.ಎಂ.ಸಿ ನೀರಿನ ಹಂಚಿಕೆಯನ್ನು ಮಾಡಲಾಗಿದೆ.</td></tr>
<tr><td>ಆ)</td><td>ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಎಷ್ಟು ಗ್ರಾಮಗಳಿಗೆ ಎತ್ತಿನಹೊಳೆ ಯೋಜನೆಯಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಯೋಜನೆ ರೂಪಿಸಿದೆ; (ಪೂರ್ಣ ಮಾಹಿತಿ ನೀಡುವುದು)</td></tr>
<tr><td>ಇ)</td><td>ಪ್ರಸ್ತುತ ಈ ಯೋಜನೆಯಲ್ಲಿ ಕ್ಷೇತ್ರದ ಎಷ್ಟು ಕೆರೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗಿದೆ? (ಪೂರ್ಣ ಮಾಹಿತಿ ನೀಡುವುದು)</td><td>ದೇವನಹಳ್ಳಿ ತಾಲ್ಲೂಕಿನ ಈ ಕೆಳಕಂಡಂತೆ 11 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ.

<table>
<tr><th>ಕ್ರ ಸಂ</th><th>ಕೆರೆಯ ಹೆಸರು</th><th>ಹೋಬಳಿ</th><th>ಗ್ರಾಮ</th></tr>
<tr><td>1</td><td>ದೇವನಹಳ್ಳಿ ಹಿರೇಅಮಾನಿಕೆರೆ</td><td>ಕಸಬಾ</td><td>ದೇವನಹಳ್ಳಿ</td></tr>
<tr><td>2</td><td>ದೇವಸ್ಥಾನದ ಅಮಾನಿಕೆರೆ</td><td>ಕಸಬಾ</td><td>ದೇವಸ್ಥಾನ</td></tr>
<tr><td>3</td><td>ಚಿಕ್ಕಸಣ್ಣೇ (ಬಂಡೆ) ಅಮಾನಿಕೆರೆ</td><td>ಕಸಬಾ</td><td>ಚಿಕ್ಕಸಣ್ಣೇಹಳ್ಳಿ</td></tr>
<tr><td>4</td><td>ಕರಿಹಳ್ಳಿ ಅಮಾನಿಕೆರೆ</td><td>ಕುಂದಾಣ</td><td>ಕರಿಹಳ್ಳಿ</td></tr>
<tr><td>5</td><td>ವಿಜಯಪುರ ಅಮಾನಿಕೆರೆ</td><td>ವಿಜಯಪುರ</td><td>ವಿಜಯಪುರ</td></tr>
<tr><td>6</td><td>ತಟ್ಟಮಾಚನಹಳ್ಳಿ ಕೆರೆ</td><td>ವಿಜಯಪುರ</td><td>ವೆಂಕಟಗಿರಿಕೋಟೆ</td></tr>
<tr><td>7</td><td>ಚನ್ನರಾಯಪಟ್ಟಣ ಅಮಾನಿಕೆರೆ</td><td>ಚನ್ನರಾಯಪಟ್ಟಣ</td><td>ಚನ್ನರಾಯಪಟ್ಟಣ</td></tr>
<tr><td>8</td><td>ಕೊನಗಿನಬೆಳೆ ಕೆರೆ</td><td>ಚನ್ನರಾಯಪಟ್ಟಣ</td><td>ಕೊನಗಿನಬೆಳೆಹಳ್ಳಿ</td></tr>
<tr><td>9</td><td>ಬೂದಿಗೆರೆ ಅಮಾನಿಕೆರೆ</td><td>ಚನ್ನರಾಯಪಟ್ಟಣ</td><td>ಬೂದಿಗೆರೆ</td></tr>
<tr><td>10</td><td>ಬಿದಲಾಪುರ ಅಮಾನಿಕೆರೆ</td><td>ಚನ್ನರಾಯಪಟ್ಟಣ</td><td>ಬಿದಲಾಪುರಹಳ್ಳಿ</td></tr>
<tr><td>11</td><td>ಬೆಟ್ಟಕೋಟೆ ಅಮಾನಿಕೆರೆ</td><td>ಚನ್ನರಾಯಪಟ್ಟಣ</td><td>ಬೆಟ್ಟಕೋಟೆ</td></tr>
</table>
</td></tr>
</table>

ಸಂಖ್ಯೆ: ಜಸಂಇ 72 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 147
2. ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್., (ದೇವನಹಳ್ಳಿ)
3. ಉತ್ತರಿಸುವ ದಿನಾಂಕ : 22-09-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿಯಲ್ಲಿ ಘನತ್ಯಾಜ್ಯ ವಿಲೇವಾರಿಗಾಗಿ 2019-20ನೇ ಸಾಲಿನಲ್ಲಿ ಮಂಜೂರಾಗಿದ್ದ ಅನುದಾನವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01-02-2019 ರಂತೆ ಅನುಮೋದಿಸಲಾಗಿದ್ದ "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯನ್ನು ಸಂಪೂರ್ಣವಾಗಿ ರದ್ದುಪಡಿಸಿ, ಬದಲಾಗಿ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019 ರನ್ವಯ ಹೊಸದಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ಹೊಸ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.
ಆ	ಹಾಗಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಅನುದಾನವನ್ನು ತಡೆಹಿಡಿಯಲಾಗಿದೆ; ಈ ಅನುದಾನ ಬಿಡುಗಡೆಯ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	2018-19ನೇ ಸಾಲಿನ ಆಯವ್ಯಯ ಘೋಷಣೆಯ ಹಿನ್ನೆಲೆಯಲ್ಲಿ ಬಿಬಿಎಂಪಿಯಿಂದ ಅನುಷ್ಠಾನಗೊಳಿಸಲು ಪ್ರಸ್ತಾಪಿಸಿದೆ. ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆ ಎಂದು ನಾಮಕರಣ ಮಾಡಿ ರೂ.8015.37 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01-02-2019 ರಂತೆ ಅನುಮೋದಿಸಲಾಗಿತ್ತು. ಆದರೆ, ಸದರಿ ಕ್ರಿಯಾ ಯೋಜನೆಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ನಿಗಧಿಗೊಳಿಸಲಾಗಿದ್ದ ಒಟ್ಟು ರೂ.753.00 ಕೋಟಿಗಳ ಪೈಕಿ ರೂ.150.00 ಕೋಟಿಗಳನ್ನು ನೆಲಮಂಗಲ, ರಾಮನಗರ, ಮಾಗಡಿ ಹಾಗೂ ದೇವನಹಳ್ಳಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಯಿಂದಾಗಿ ಬಾಧಿತಗೊಂಡಿರುವ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ನಿಗಧಿಪಡಿಸಿದ್ದು, ಆದರೆ, ಬೆಂಗಳೂರು ನಗರದ ಘನತ್ಯಾಜ್ಯವನ್ನು ನೆಲಮಂಗಲ, ರಾಮನಗರ, ಮಾಗಡಿ ಅಥವಾ ದೇವನಹಳ್ಳಿ

		ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ವಿಲೇವಾರಿಗೊಳಿಸದ ಹಿನ್ನೆಲೆಯಲ್ಲಿ, ಸದರಿ ಕ್ಷೇತ್ರಗಳಿಗೆ ಮೀಸಲಿಟ್ಟಿದ್ದ ಅನುದಾನದ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು. ಬೆಂಗಳೂರು ನಗರದ ಘನತ್ಯಾಜ್ಯ ವಿಲೇವಾರಿಯಿಂದಾಗಿ ಬಾಧಿತಗೊಂಡಿರುವ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿದ್ದರೂ ಅಂತಹ ಕ್ಷೇತ್ರಗಳಿಗೆ ಮಾತ್ರ ಮೀಸಲಿಡಬೇಕಾಗಿದ್ದ ಅನುದಾನವನ್ನು ಘನತ್ಯಾಜ್ಯ ವಿಲೇವಾರಿಗೆ ಸಂಬಂಧಪಡದ ಜಿಲ್ಲೆಗಳಿಗೆ ಅನುದಾನ ನಿಗಧಿ ಮಾಡಿದ್ದುದು ಅಸಮಂಜಸವೆಂದು ಪರಿಗಣಿಸಲಾಗಿತ್ತು. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01-02-2019ರ ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಲ್ಲಿ ನಿಗಧಿಪಡಿಸಿದ್ದ ರೂ.8015.37 ಕೋಟಿಗಳ ಕ್ರಿಯಾ ಯೋಜನೆಯಲ್ಲಿ ವಿಧಾನಸಭಾ ಕ್ಷೇತ್ರಗಳ ಮಧ್ಯೆ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಕಂಡುಬಂದಿದ್ದು ಮತ್ತು ಬೆಂಗಳೂರು ನಗರಕ್ಕೆ ಅಗತ್ಯವಿಲ್ಲದ ದುಂದು ವೆಚ್ಚದ ಯೋಜನೆಗಳನ್ನು ಕೈಗೆತ್ತಿಕೊಂಡಿರುವ ಬಗ್ಗೆ ಹಲವು ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದು, "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯನ್ನು ಜಾರಿಗೆ ತಂದ ಸಂದರ್ಭದಲ್ಲಿ ಬೆಂಗಳೂರು ನಗರದ ಘನತ್ಯಾಜ್ಯ ನಿರ್ವಹಣೆಗೆ ನಿಗಧಿಯಾಗಿದ್ದ ರೂ.753.00 ಕೋಟಿಗಳನ್ನು ಬೆಂಗಳೂರು ನಗರದ ಘನತ್ಯಾಜ್ಯ ನಿರ್ವಹಣೆಗೆ ಅನಗತ್ಯ ಯೋಜನೆಗಳನ್ನು ಕೈಬಿಟ್ಟು ರೂ.584.34 ಕೋಟಿಗಳಿಗೆ ಮಿತಿಗೊಳಿಸಲಾಗಿದೆ. ಈ ಆದೇಶವನ್ನು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು ಸಚಿವ ಸಂಪುಟದ ಅನುಮೋದನೆಯೊಡನೆ ಹೊರಡಿಸಲಾಗಿದೆ. ಈ ಸಂದರ್ಭದಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಪಡದ ಜಿಲ್ಲೆಗಳಾದ ನೆಲಮಂಗಲ, ರಾಮನಗರ, ಮಾಗಡಿ ಹಾಗೂ ದೇವನಹಳ್ಳಿ ವಿಧಾನಸಭಾ ಕ್ಷೇತ್ರಗಳ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯಲ್ಲಿ ಅನುಮೋದಿತ ಯೋಜನೆಗಳನ್ನು ಸಹ ರದ್ದುಪಡಿಸಲಾಗಿದೆ.

. . .3/-

		ಘನತ್ಯಾಜ್ಯ ವಿಲೇವಾರಿಗಾಗಿ 2019–20ನೇ ಸಾಲಿನ ಮುಖ್ಯ ಮಂತ್ರಿಗಳ ನವ ಬೆಂಗಳೂರು ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹೊರಗೆ ಬರುವ ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಮಂಜೂರು ಮಾಡಲಾಗಿದ್ದು, ಸದರಿ ಕ್ಷೇತ್ರಗಳು ಬಿಬಿಎಂಪಿ ವ್ಯಾಪ್ತಿಗೆ ಒಳಪಡದೇ ಇರುವುದರಿಂದ ಹಾಗೂ ಸದರಿ ಅನುದಾನವು ಇತರೆ ತುರ್ತು ಕಾಮಗಾರಿಗಳಿಗೆ ಅಗತ್ಯವಾಗಿದ್ದ ಹಿನ್ನೆಲೆಯಲ್ಲಿ, ಸದರಿ ಅನುದಾನವನ್ನು ತುರ್ತು ಕಾಮಗಾರಿಗಳಿಗೆ ಬಳಕೆ ಮಾಡಿಕೊಳ್ಳಲು "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆಯ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.
ಇ	ಎಷ್ಟು ದಿನದೊಳಗಾಗಿ ಅನುದಾನ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಸಂಖ್ಯೆ: ನಅಇ 184 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	142
2	ಸದಸ್ಯರ ಹೆಸರು	:	ಶ್ರೀ ಸುರೇಶ್ ಬಿ.ಎಸ್ (ಹೆಬ್ಬಾಳ)
3	ಉತ್ತರಿಸುವ ದಿನಾಂಕ	:	22-09-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 114 "ಎ" ರ ಪ್ರಕಾರ ತಪ್ಪು ಮಾಹಿತಿಯನ್ನು ನೀಡಿ ಅಕ್ರಮವಾಗಿ ಆಸ್ತಿಗಳ ಖಾತೆಗಳನ್ನು ಮಾಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಪುನರ್ ಪರಿಶೀಲನೆ (ರಿವ್ಯೂ) ಮಾಡಲು ಅವಕಾಶವಿದೆಯೇ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸ್ವತ್ತುಗಳಿಗೆ ತಪ್ಪು ಮಾಹಿತಿಗಳನ್ನು ನೀಡಿ ಅಕ್ರಮವಾಗಿ ನಗರ ಪಾಲಿಕೆಯಲ್ಲಿ ಖಾತೆ ದಾಖಲಿಸಿಕೊಂಡಿರುವ ಸ್ವತ್ತುಗಳ ಖಾತೆಯನ್ನು ಪುನರ್ ಪರಿಶೀಲಿಸಲು ಕೆ.ಎಂ.ಸಿ ಕಾಯ್ದೆ 1976ರ ಕಲಂ 114 ಎ ರ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.
ಆ)	ಹಾಗಿದ್ದಲ್ಲಿ, ಬಿಬಿಎಂಪಿ ವಲಯವಾರು ಜಂಟಿ ಆಯುಕ್ತರು ಇವರುಗಳ ಮುಂದೆ ನಿಯಮ 114 "ಎ" ಪ್ರಕಾರ ಇದುವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ; ದಾಖಲಾದ ಪ್ರಕರಣಗಳಲ್ಲಿ ಇತ್ಯರ್ಥಪಡಿಸಿದ ಹಾಗೂ ಬಾಕಿ ಇರುವ ಪ್ರಕರಣಗಳೆಷ್ಟು; (ವಲಯವಾರು ಮಾಹಿತಿ ನೀಡುವುದು)	ಕೆ.ಎಂ.ಸಿ ಕಾಯ್ದೆ 1976ರ ಕಲಂ 114 ಎ ರ ಅಡಿಯಲ್ಲಿ ದಾಖಲಾಗಿರುವ, ಇತ್ಯರ್ಥಪಡಿಸಿರುವ ಮತ್ತು ಬಾಕಿ ಇರುವ ಪ್ರಕರಣಗಳು ವಿವರಗಳು ಈ ಕೆಳಕಂಡಂತೆ ಇರುತ್ತದೆ. (ವಲಯವಾರು)

ಕ್ರ ಸಂ	ವಲಯ	ದಾಖಲಾಗಿರುವ ಪ್ರಕರಣಗಳ ಸಂಖ್ಯೆ	ಇತ್ಯರ್ಥಪಡಿಸಿರುವ ಪ್ರಕರಣಗಳ ಸಂಖ್ಯೆ	ಬಾಕಿ ಇರುವ ಪ್ರಕರಣಗಳ ಸಂಖ್ಯೆ
1	ಬೊಮ್ಮನಹಳ್ಳಿ	26	12	14
2	ದಾಸರಹಳ್ಳಿ	2	0	2
3	ಪೂರ್ವ	346	273	73
4	ಮಹದೇವಪುರ	37	03	34
5	ರಾ.ರಾ.ನಗರ	36	30	6
6	ದಕ್ಷಿಣ	159	84	75
7	ಪಶ್ಚಿಮ	172	148	24
8	ಯಲಹಂಕ	43	29	14
ಒಟ್ಟು		821	579	242

ಕ್ರ.ಸಂ	ಪ್ರಶ್ನೆ	ಉತ್ತರ
ಇ)	ಬಿಬಿಎಂಪಿ ದಾಖಲೆಗಳಲ್ಲಿ ಆಸ್ತಿಗಳ ಹಕ್ಕುಗಳನ್ನು ಬದಲಾಯಿಸಿ ಮೂರು ವರ್ಷಗಳಾದರೂ ಇತ್ಯರ್ಥ ಮಾಡದೇ ಎಷ್ಟು ಪ್ರಕರಣಗಳು ಬಾಕಿ ಉಳಿಸಿಕೊಳ್ಳಲಾಗಿದೆ	ಕೆ.ಎಂ.ಸಿ ಕಾಯ್ದೆ 1976ರ ಕಲಂ 114ಎ ರ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ಪೈಕಿ ಮೂರು ವರ್ಷಗಳಿಂದ ಇತ್ಯರ್ಥವಾಗದೇ ಒಟ್ಟು 105 ಪ್ರಕರಣಗಳು ಬಾಕಿ ಉಳಿದಿರುತ್ತವೆ.

ಈ)	3 ವರ್ಷಗಳು ಮೀರಿದ ಪ್ರಕರಣಗಳನ್ನು ದಾಖಲಿಸಿಕೊಂಡು ಜಂಟಿ ಆಯುಕ್ತರು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಸೆಕ್ಷನ್ 114 ಎ ರ ಪ್ರಕಾರ ಮಾಡಿದ ಪುನರ್ ಪರಿಶೀಲನಾ ಆದೇಶಗಳು ಸಿಂಧುವಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯವು ರದ್ದು ಮಾಡಿದ್ದು ಅಂತಹ ಪ್ರಕರಣಗಳು ಎಷ್ಟು (ವಿವರ ನೀಡುವುದು)	ನಗರ ಪಾಲಿಕೆಯಲ್ಲಿ ಖಾತಾ ದಾಖಲಾದ ಮೂರು ವರ್ಷಗಳ ನಂತರ 114 "ಎ" ರ ಅಡಿಯಲ್ಲಿ ಯಾವುದೇ ಪ್ರಕರಣಗಳನ್ನು ದಾಖಲಿಸಿಕೊಂಡಿರುವುದಿಲ್ಲ.
ಉ)	ಈ ರೀತಿ ತಪ್ಪು ಮಾಡುತ್ತಿರುವ ಬಿಬಿಎಂಪಿ ವಲಯಗಳ ಜಂಟಿ ಆಯುಕ್ತರುಗಳ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಅಥವಾ ಯಾವ ರೀತಿಯ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ ಹಾಗೂ ಈ ರೀತಿಯ ಪ್ರಕರಣಗಳು ದಾಖಲಾಗದಂತೆ ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ (ವಿವರ ನೀಡುವುದು)	ಅನ್ವಯಿಸುವುದಿಲ್ಲ.

ನಅಇ 294 ಎಂಎನ್‌ಯು 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 157
2. ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ,
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ	ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕು ಹಾಗೂ 1000 ಕ್ಕೂ ಅಧಿಕ ಕೆರೆಗಳನ್ನು ಹೊಂದಿರುವ ಸೊರಬ ತಾಲ್ಲೂಕಿನಲ್ಲಿ ಕೆರೆಗಳ ಸಮಗ್ರ ಅಭಿವೃದ್ಧಿ ಹಾಗೂ ಕೋಡಿಗಳ ದುರಸ್ಥಿ ಕಾಮಗಾರಿ ಗಳಿಗೆ 2020-21 ರ ಆರ್ಥಿಕ ವರ್ಷದಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದೇ?	ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಅತಿ ಹಿಂದುಳಿದ ತಾಲ್ಲೂಕಾಗಿರುತ್ತದೆ. ಸೊರಬ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ 122 ಕೆರೆಗಳು ಇರುತ್ತವೆ. ಇದಲ್ಲದೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ಇಲಾಖೆಯಡಿ ಬರುವ ಸುಮಾರು 931 ಕೆರೆಗಳು ಇರುತ್ತವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಸೊರಬ ತಾಲ್ಲೂಕಿನಲ್ಲಿ ಜಲಾಮೃತ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಸೊರಬ ತಾಲ್ಲೂಕಿನ ಒಟ್ಟು 30 ಕರೆಗಳನ್ನು ಆಯ್ಕೆ ಮಾಡಿದ್ದು, ಈ ಕೆರೆಗಳ ಹೂಳೆತ್ತುವ ಕಾಮಗಾರಿಗಳಿಗೆ ರೂ.175.00 ಲಕ್ಷಗಳನ್ನು ಒದಗಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿಗಳ ಪ್ರಗತಿಯನ್ನು ಆಧರಿಸಿ ಹಣ ಬಿಡುಗಡೆ ಮಾಡಲಾಗುವುದು. ಸಣ್ಣ ನೀರಾವರಿ ಇಲಾಖೆಯಡಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಅನುದಾನದ ಲಭ್ಯತೆ ಮತ್ತು ಅವಶ್ಯಕತೆಗನುಗುಣವಾಗಿ ಹಂತ ಹಂತವಾಗಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು 2020-21ನೇ ಸಾಲಿನಲ್ಲಿ ಇಲಾಖೆಯಡಿ ಒದಗಿಸಲಾಗಿರುವ ಅನುದಾನದ ಮಿತಿಯೊಳಗೆ ಆದ್ಯತೆಗೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: MID 152 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 158
2) ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ ಎಸ್
3) ಉತ್ತರಿಸಬೇಕಾದ ದಿನಾಂಕ : 22.09.2020
4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ	ಸೊರಬ ತಾಲ್ಲೂಕು ಅತ್ಯಧಿಕ ಕೆರೆಗಳನ್ನು ಹೊಂದಿರುವ ತಾಲ್ಲೂಕಾಗಿದ್ದರೂ, ಈ ತಾಲ್ಲೂಕಿನ ಹೆಚ್ಚಿನ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಎದುರಿಸುತ್ತಿರವುದು ಸರ್ಕಾರದ ಗಮನದಲ್ಲಿದೆಯೇ;	ಬಂದಿದೆ. ಈಗಾಗಲೇ ತುರ್ತು ಕುಡಿಯುವ ನೀರು ಕಾಮಗಾರಿಗಳನ್ನು ಕೈಗೊಳ್ಳಲು 2020-21ನೇ ಸಾಲಿನಲ್ಲಿ ರೂ.50.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
ಆ	ಬಂದಿದ್ದಲ್ಲಿ, ಮಳೆಗಾಲದಲ್ಲಿ ಉಕ್ಕಿ ಹರಿಯುವ ವರದಾ ನದಿಗೆ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಬ್ಯಾರೇಜ್ ಕಂ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ವರದ ನದಿಗೆ ಅಡ್ಡಲಾಗಿ ಬ್ಯಾರೇಜ್ ಕಂ ರಸ್ತೆ ನಿರ್ಮಾಣ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಯಾವುದೇ ಯೋಜನೆಯು ಪ್ರಸ್ತುತ ಇರುವುದಿಲ್ಲ. ಆದರೆ, ಶಿವಮೊಗ್ಗ ಜಿಲ್ಲೆಯ ಜಿಲ್ಲೆಯ ಸೊರಬ ತಾಲ್ಲೂಕಿನ ಕೆರೆಗಳಲ್ಲಿ ಒಳಹರಿವಿನ ಅಭಾವದಿಂದ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿರುವುದರಿಂದ ಹಾಗೂ ಅಂತರ್ಜಲ ಮಟ್ಟ ಹೆಚ್ಚಿಸುವ ಉದ್ದೇಶದಿಂದ ಸೊರಬ ತಾಲ್ಲೂಕಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಗೊಳ್ಳಲಾಗಿದೆ. 1. **ಮೂಗೂರು ಕೆರೆ ತುಂಬಿಸುವ ಯೋಜನೆ:** ಮೂಗೂರು ಗ್ರಾಮದಲ್ಲಿ ಈಗಾಗಲೇ ವರದಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಬ್ರಿಡ್ಜ್ ಕಂ ಬ್ಯಾರೇಜಿನ ಹತ್ತಿರ ಜಾಕ್‌ವೆಲ್ ನಿರ್ಮಿಸಿ ಏತ ನೀರಾವರಿ ಮುಖಾಂತರ 31 ಕೆರೆಗಳನ್ನು ತುಂಬಿಸುವ ಯೋಜನೆ ಕೈಗೊಳ್ಳಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 2. **ಮೂಡಿ ಕೆರೆ ತುಂಬಿಸುವ ಯೋಜನೆ:** ಸೊರಬ ತಾಲ್ಲೂಕಿನ ಮೂಡಿ ಗ್ರಾಮದಲ್ಲಿ ವರದಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಿ ಏತ

		ನೀರಾವರಿ ಮುಖಾಂತರ 66 ಕೆರೆಗಳನ್ನು ತುಂಬಿಸುವ ಯೋಜನೆ ಕೈಗೊಳ್ಳಲಾಗಿದ್ದು, ಪ್ರಸ್ತುತ ಪ್ರಗತಿಯಲ್ಲಿರುತ್ತವೆ.
ಇ	ಹಾಗಿದ್ದಲ್ಲಿ 2020-21ರ ಆರ್ಥಿಕ ವರ್ಷದಲ್ಲಿ ಎಷ್ಟು ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು?	ಮೂಡಿ ಮತ್ತು ಮೂಗೂರು ಏತ ನೀರಾವರಿ ಯೋಜನೆಗಳು ಈಗಾಗಲೇ ಪ್ರಗತಿಯಲ್ಲಿದ್ದು, 2020-21ನೇ ಆರ್ಥಿಕ ಸಾಲಿನಲ್ಲಿ ಯಾವುದೇ ಹೊಸ ಯೋಜನೆಯನ್ನು ಪ್ರಸ್ತಾಪಿಸಿರುವುದಿಲ್ಲ.

ಸಂಖ್ಯೆ: ಸನೀಇ 136 ವಿಸವಿ 2020.

(ಸಹಿ)

(ಜೆ.ಸಿ ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ	:	159
ಸದಸ್ಯರ ಹೆಸರು	:	ಶ್ರೀ ಕುಮಾರ ಬಂಗಾರಪ್ಪ ಎಸ್.
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯ ಮಂತ್ರಿಗಳು

***

ಪ್ರಶ್ನೆ		ಉತ್ತರ	
ಅ)	ಸೊರಬ ವಿಧಾನ ಸಭಾ ಕ್ಷೇತ್ರದಲ್ಲಿ ಗ್ರಿಡ್‌ಗಳ ಕೊರತೆಯಿಂದ ರೈತರಿಗೆ ಸಮಗ್ರವಾಗಿ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅ) ಮತ್ತು ಆ)	ಸೊರಬ ವಿಧಾನಸಭಾ ಕ್ಷೇತ್ರದ ರೈತರಿಗೆ ಸರ್ಕಾರದ ಆದೇಶದಂತೆ ದಿನವಹಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಇನ್ನೂ ಹೆಚ್ಚಿನ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ಹಾಗೂ ಮುಂಬರುವ ದಿನಗಳಲ್ಲಿನ ಲೋಡ್ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ: • <u>**ಕುಪ್ಪಗಡ್ಡೆ ಗ್ರಾಮದಲ್ಲಿ**</u> 1*10ಎಂ.ವಿ.ಎ, 110/11 ಕೆ.ವಿ ಉಪವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮನ್ವಯ ಸಮತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಸದರಿ 110/11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ಸರ್ಕಾರಿ ಜಮೀನು ಲಭ್ಯವಿದ್ದು, ಸಂಬಂಧಪಟ್ಟ ಪ್ರಸರಣ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವುದರಿಂದ ಅರಣ್ಯ ಇಲಾಖೆಯ ಅನುಮತಿಗಾಗಿ ಪ್ರಸ್ತಾವನೆಯನ್ನು ದಿನಾಂಕ 5-8-2020 ರಂದು ಸಲ್ಲಿಸಲಾಗಿದ್ದು, ಅರಣ್ಯ ಇಲಾಖೆಯ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು, • <u>**ಇಂಡುವಳ್ಳಿ ಗ್ರಾಮದಲ್ಲಿ**</u> ಪ್ರಸ್ತಾವಿತ 110/11ಕೆ.ವಿ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯ ಪ್ರಸ್ತಾವನೆಯು ಕ.ವಿ.ಪ್ರ.ನಿ.ನಿ.ಯ ಮುಂದೆ ಇದ್ದು, ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ. • <u>**ಕಾಗೋಡು ಗ್ರಾಮದಲ್ಲಿ**</u> ನೂತನವಾಗಿ 1*10 ಎಂ.ವಿ.ಎ, 110/11 ಕೆ.ವಿ. ವಿದ್ಯುತ್ ಉಪಕೇಂದ್ರ ನಿರ್ಮಾಣ ಹಾಗೂ 9ಕಿ.ಮೀ. ಉದ್ದದ 110 ಕೆ.ವಿ ಮಾರ್ಗ ನಿರ್ಮಾಣದ ಕಾಮಗಾರಿಯ ಪ್ರಸ್ತಾವನೆಯು ತಾಂತ್ರಿಕ ಸಮನ್ವಯ ಸಭೆ ಸಮಿತಿಯಲ್ಲಿ ಅನುಮೋದನೆಗೊಂಡಿರುತ್ತದೆ. ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕಾಗಿ ಅಗತ್ಯವಿರುವ ಸರ್ಕಾರಿ ಜಮೀನು ಲಭ್ಯವಿರುತ್ತದೆ. ಉದ್ದೇಶಿತ 110/11 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗಗಳು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಬಗ್ಗೆ ಪರಿಶೀಲಿಸಿ ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ರವರನ್ನು ದಿನಾಂಕ 17-07-2020 ರಂದು ಕೋರಲಾಗಿದೆ. ಅರಣ್ಯ ಇಲಾಖೆಯಿಂದ ವರದಿಯನ್ನು
ಆ)	ಬಂದಿದ್ದಲ್ಲಿ, ಇಂಡುವಳ್ಳಿ, ಕುಪ್ಪಗಡ್ಡೆ ಹಾಗೂ ಕಾಗೋಡು ಗ್ರಿಡ್‌ಗಳನ್ನು ಅನುಷ್ಠಾನ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;		

<table>
<tr><td></td><td></td><td></td><td>ನಿರೀಕ್ಷಿಸಲಾಗಿದೆ.</td></tr>
<tr><td>ಇ)</td><td>ರೈತರ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಲು ಸೊರಬ ಮತ್ತು ಆನವಟ್ಟಿಯಲ್ಲಿ ಪ್ರತ್ಯೇಕ ಟಿ.ಸಿ. ಬ್ಯಾಂಕ್ (ವರ್ಕ್‌ಶಾಪ್ ಸಹಿತ) ತೆರೆಯುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ;?</td><td>ಇ)</td><td>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಎಲ್ಲಾ ವಿಭಾಗೀಯ ಕಛೇರಿಗಳಲ್ಲಿನ ಉಗ್ರಾಣದಲ್ಲಿಯೇ ಪರಿವರ್ತಕ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ. ಸೊರಬ ಮತ್ತು ಆನವಟ್ಟಿ ಉಪ ವಿಭಾಗ ವ್ಯಾಪ್ತಿಯಲ್ಲಿ ಪ್ರತ್ಯೇಕ ಪರಿವರ್ತಕ ಬ್ಯಾಂಕ್ ತೆರೆಯುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.
ಪ್ರಸ್ತುತ, ಸೊರಬ ಮತ್ತು ಆನವಟ್ಟಿ ಉಪ ವಿಭಾಗಗಳಿಗೆ, ಸಾಗರ ಮತ್ತು ಶಿಕಾರಿಪುರ ವಿಭಾಗೀಯ ಉಗ್ರಾಣದಿಂದ ಅವಶ್ಯಕತೆಗನುಗುಣವಾಗಿ ಪರಿವರ್ತಕಗಳನ್ನು ಪೂರೈಕೆ ಮಾಡಲಾಗುತ್ತಿದ್ದು ದಿನಾಂಕ: 19.09.2020 ರಂದು ಈ ಕೆಳಗಿನಂತೆ ದಾಸ್ತಾನು ಇರುತ್ತದೆ.
<table>
<tr><th rowspan="2">ಕ್ರ ಸಂ</th><th rowspan="2">ಪರಿವರ್ತಕಗಳ ಸಾಮರ್ಥ್ಯ</th><th colspan="2">ಸಾಗರ</th><th colspan="2">ಶಿಕಾರಿಪುರ</th></tr>
<tr><th>ಹೊಸ</th><th>ದುರಸ್ತಿಗೊಳಿಸ ಲಾದ</th><th>ಹೊಸ</th><th>ದುರಸ್ತಿಗೊಳಿಸ ಲಾದ</th></tr>
<tr><td>1</td><td>25 ಕೆವಿಎ</td><td>6</td><td>38</td><td>30</td><td>15</td></tr>
<tr><td>2</td><td>63 ಕೆವಿಎ</td><td>0</td><td>9</td><td>0</td><td>10</td></tr>
<tr><td>3</td><td>100 ಕೆವಿಎ</td><td>1</td><td>19</td><td>4</td><td>10</td></tr>
</table>
ಸೊರಬ ಮತ್ತು ಆನವಟ್ಟಿ ಉಪವಿಭಾಗಗಳ ವ್ಯಾಪ್ತಿಯಲ್ಲಿ ವಿಫಲವಾದ ಪರಿವರ್ತಕಗಳನ್ನು ಸಾಗರ ಮತ್ತು ಶಿಕಾರಿಪುರಗಳಲ್ಲಿರುವ ಪರಿವರ್ತಕ ದುರಸ್ತಿ ಕೇಂದ್ರಗಳಲ್ಲಿ ದುರಸ್ತಿಗೊಳಿಸಿ ಪೂರೈಕೆ ಮಾಡಲಾಗುತ್ತಿದೆ.
ಪ್ರಸ್ತುತ ಸೊರಬ ಉಪವಿಭಾಗ ವ್ಯಾಪ್ತಿಯಲ್ಲಿ ಹೊಸದಾಗಿ ದುರಸ್ತಿ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆಯಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.</td></tr>
</table>

ಸಂಖ್ಯೆ: ಎನರ್ಜಿ 108 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	162
ಸದಸ್ಯರ ಹೆಸರು	:	ಶ್ರೀ ಪಾಟೀಲ್ (ನಡಹಳ್ಳಿ) ಎ.ಎಸ್.
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

***

	ಪ್ರಶ್ನೆ		ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿ ವಿವಿಧ ಮೂಲಗಳಿಂದ (ವಿಂಡ್, ಹೈಡ್ರೋ, ಜಲವಿದ್ಯುತ್, ಕಾರ್ಖಾನೆಗಳು, ಸೋಲಾರ ಇತ್ಯಾದಿ) ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು;	ಅ)	ವಿಜಯಪುರ ಜಿಲ್ಲೆಯಲ್ಲಿ ವಿವಿಧ ಮೂಲಗಳಿಂದ (ವಿಂಡ್, ಹೈಡ್ರೋ, ಜಲವಿದ್ಯುತ್, ಕಾರ್ಖಾನೆಗಳು, ಸೋಲಾರ್ ಇತ್ಯಾದಿ) ಉತ್ಪಾದನೆಯಾಗುತ್ತಿರುವ ವಿದ್ಯುತ್ತನ್ನು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಖರೀದಿಸುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಸದರಿ ವಿದ್ಯುತ್ ಉತ್ಪಾದನಾ ಘಟಕಗಳಿಂದ ಒಟ್ಟು 1029.08 ದಶಲಕ್ಷ ಯೂನಿಟ್ ಗಳಷ್ಟು ವಿದ್ಯುತ್ತನ್ನು ಖರೀದಿಸಿದ್ದು, ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಸದರಿ ಯೋಜನೆಗಳಿಗೆ ಎಷ್ಟು ಪ್ರಮಾಣದಲ್ಲಿ ಭೂಮಿ ವಶಪಡಿಸಿಕೊಳ್ಳಲಾಗಿದೆ; (ಹೆಸರು, ಯೋಜನೆ ಸಮೇತ ಯೋಜನಾವಾರು ವಿವಿಧ ಮೂಲಗಳ ಪ್ರತ್ಯೇಕ ವಿವರ ಒದಗಿಸುವುದು)	ಆ)	ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೈತರಿಂದ ಜಮೀನುಗಳನ್ನು ಖರೀದಿಸಿರುವುದಿಲ್ಲ/ವಶಪಡಿಸಿಕೊಂಡಿರುವುದಿಲ್ಲ. ಹಂಚಿಕೆ ಪಡೆದ ಅಭಿವೃದ್ಧಿದಾರರು ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾದ ಜಮೀನನ್ನು ಕರ್ನಾಟಕ ಭೂಸುಧಾರಣಾ ಕಾಯ್ದೆಯನ್ವಯ ಪಡೆಯುವುದು ಅವರದೇ ಜವಾಬ್ದಾರಿಯಾಗಿರುತ್ತದೆ.
ಇ)	ಈ ಜಿಲ್ಲೆಯಲ್ಲಿ ಅತಿ ಹೆಚ್ಚು ವಿದ್ಯುತ್ ಉತ್ಪಾದನೆ ಆಗುತ್ತಿದ್ದು, ಜಿಲ್ಲೆಯಲ್ಲಿ 24 ಘಂಟೆಗಳ ನಿರಂತರ ವಿದ್ಯುತ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇ)	ಪ್ರಸ್ತುತ, ವಿಜಯಪುರ ಜಿಲ್ಲೆಯಲ್ಲಿ ಸರ್ಕಾರದ ಆದೇಶದಂತೆ, ನಗರ ಪ್ರದೇಶಗಳಿಗೆ ದಿನದ 24 ಗಂಟೆಗಳ ಕಾಲ ಮೂರು ಫೇಸ್, ಗ್ರಾಮೀಣ ಪ್ರದೇಶಗಳಿಗೆ ನಿರಂತರ ಜ್ಯೋತಿ ಮಾರ್ಗಗಳ ಮೂಲಕ ದಿನದ 22 ರಿಂದ 24 ಗಂಟೆಗಳ ಕಾಲ ಮೂರು ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಹಾಗೂ ನೀರಾವರಿ ಪಂಪ್‌ಸೆಟ್ ಗಳಿಗೆ ದಿನದ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಈ)	ಉತ್ತರ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನದ 24 ಘಂಟೆಗಳ ಕಾಲ ನಿರಂತರ ವಿದ್ಯುತ್ ನೀಡುತ್ತಿರುವುದು ನಿಜವೇ; ನೀಡುತ್ತಿದ್ದಲ್ಲಿ, ಯಾವ ಕಾರಣಕ್ಕೆ ನೀಡಲಾಗುತ್ತಿದೆ; (ವಿವರ ನೀಡುವುದು)	ಈ)	ಉತ್ತರ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಅಡಚಣೆಗಳನ್ನು ಹೊರತು ಪಡಿಸಿ ದಿನದ 24 ಘಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆಯು ಭೌಗೋಳಿಕವಾಗಿ ಗುಡ್ಡಗಾಡು ಪ್ರದೇಶದಿಂದ ಕೂಡಿದ್ದು, ಚದುರಿದ ಮನೆಗಳನ್ನು ಹೊಂದಿರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಫೀಡರಗಳು ಎಲ್ಲಾ ಜಕಾತಿಗಳನ್ನು (ಗೃಹ, ವಾಣಿಜ್ಯ, ಕೈಗಾರಿಕಾ) ಹೊಂದಿದ ಫೀಡರ್ ಗಳಾಗಿದ್ದು ನೀರಾವರಿ ಪಂಪ್‌ಸೆಟ್ ಹಾಗೂ ನಿರಂತರ ಜ್ಯೋತಿ ಫೀಡರ್ ಗಳೆಂದು ಪ್ರತ್ಯೇಕ ಫೀಡರ್ ಗಳಾಗಿ ವಿಭಜಿಸಲು ತಾಂತ್ರಿಕವಾಗಿ ಹಾಗೂ ಭೌಗೋಳಿಕ ಕಾರಣಗಳಿಂದಾಗಿ ಸಾಧ್ಯವಾಗದೇ ಇರುವುದರಿಂದ ಕರ್ನಾಟಕ ಸರಕಾರದ ಅತಿ ದೊಡ್ಡ ಯೋಜನೆಯಾದ ನಿರಂತರ ಜ್ಯೋತಿ ಯೋಜನೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಿರುವುದಿಲ್ಲ.

			ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ರಾಹಕರು ಹೆಚ್ಚಾಗಿ ತುಂಡು ಭೂಮಿಗಳನ್ನು ಹೊಂದಿರುವುದರಿಂದ ಕೃಷಿಗಾಗಿ ಬಹುತೇಕ ತೆರೆದ ಬಾವಿಗಳನ್ನು ಹಾಗೂ ಕಡಿಮೆ ಸಾಮರ್ಥ್ಯದ ನೀರಾವರಿ ಪಂಪ್‌ಸೆಟ್ ಗಳನ್ನು ಬಳಕೆ ಮಾಡುವುದರಿಂದ ನೀರಾವರಿ ಪಂಪ್‌ಸೆಟ್ ಗಳ ವಿದ್ಯುತ್ ಬಳಕೆ ಅತೀ ಕಡಿಮೆ ಇರುತ್ತದೆ. ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯ ಫೀಡರಗಳನ್ನು ನಿರಂತರ ಜ್ಯೋತಿ ಫೀಡರಗಳೆಂದೇ ತಿಳಿದು ಅಡಚಣೆಗಳನ್ನು ಹೊರತುಪಡಿಸಿ ದಿನದ 24 ಘಂಟೆ ವಿದ್ಯುತ್ ಪೂರೈಸಲಾಗುತ್ತಿದೆ.
ಉ)	ಉತ್ತರ ಕನ್ನಡ ಜಿಲ್ಲೆಯ ಮಾದರಿಯಲ್ಲಿ ವಿಜಯಪುರ ಜಿಲ್ಲೆಗೆ 24 ಘಂಟೆಗಳ ಕಾಲ ವಿದ್ಯುತ್ ಕೊಡುವಲ್ಲಿ ಆಗುತ್ತಿರುವ ಸಮಸ್ಯೆಗಳೇನು? (ವಿವರ ನೀಡುವುದು)	ಉ)	ವಿಜಯಪುರ ಜಿಲ್ಲೆಯಲ್ಲಿ ನಿರಂತರ ಜ್ಯೋತಿ ಯೋಜನೆಯು ಅನುಷ್ಠಾನಗೊಂಡಿದ್ದು, ಪ್ರತ್ಯೇಕ ನಿರಂತರ ಜ್ಯೋತಿ ಮತ್ತು ನೀರಾವರಿ ಪಂಪ್‌ಸೆಟ್ ಮಾರ್ಗ ನಿರ್ಮಿಸಿರುವುದರಿಂದ ಮತ್ತು ನೀರಾವರಿ ಪಂಪ್‌ಸೆಟ್‌ಗಳ ಹೆಚ್ಚುವರಿ ಭಾರ ಇರುವುದರಿಂದ, ಸರ್ಕಾರದ ಆದೇಶದಂತೆ ನಗರ ಪ್ರದೇಶಗಳಿಗೆ ದಿನದ 24 ಗಂಟೆಗಳ ಕಾಲ ಮೂರು ಫೇಸ್, ಗ್ರಾಮೀಣ ಪ್ರದೇಶಗಳಿಗೆ ನಿರಂತರ ಜ್ಯೋತಿ ಮಾರ್ಗಗಳ ಮೂಲಕ ದಿನದ 22 ರಿಂದ 24 ಗಂಟೆಗಳ ಕಾಲ ಮೂರು ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ, ಹಾಗೂ ನೀರಾವರಿ ಪಂಪಸೆಟ್‌ಗಳಿಗೆ ದಿನದ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಸಂಖ್ಯೆ:ಎನರ್ಜಿ 109 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	275
ಸದಸ್ಯರ ಹೆಸರು	ಶ್ರೀ ಬಂಡೆಪ್ಪ ಖಾಶೆಂಪುರ್
ಉತ್ತರಿಸುವ ದಿನಾಂಕ:	21.09.2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳೆಷ್ಟು;	ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಒಟ್ಟು 35 ದೇವಸ್ಥಾನಗಳು ಇರುತ್ತವೆ.
ಆ	ಸದರಿ ದೇವಸ್ಥಾನಗಳಿಗೆ ಒದಗಿಸಲಾಗುತ್ತಿರುವ ಅನುದಾನವೆಷ್ಟು; (ದೇವಸ್ಥಾನವಾರು ಮಾಹಿತಿ ಒದಗಿಸುವುದು)	ಸದರಿ ದೇವಾಲಯಗಳಿಗೆ 2019-20ನೇ ಸಾಲಿನಲ್ಲಿ ಅನುದಾನ ಮಂಜೂರಾಗಿರುವುದಿಲ್ಲ.
ಇ	ಸದರಿ ದೇವಸ್ಥಾನಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು ಹಾಗೂ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗವೆಷ್ಟು? (ದೇವಸ್ಥಾನವಾರು ವಿವರ ನೀಡುವುದು)	ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 35 ದೇವಾಲಯಗಳಿದ್ದು, ಈ ದೇವಾಲಯಗಳಿಂದ ಬರುವ ಆದಾಯವನ್ನು ಆಯಾಯ ದೇವಾಲಯಗಳ ನಿರ್ವಹಣೆಗೆ ಬಳಸಲಾಗುತ್ತಿದೆ. ದೇವಾಲಯಗಳಿಂದ ಸರ್ಕಾರಕ್ಕೆ ಆದಾಯ ಬರುವುದಿಲ್ಲ. ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ದೇವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ದೇವಾಲಯವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

(ಸಂಖ್ಯೆ:ಕಂಇ 115 ಮುಸಪ್ರ 2020)

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು

ಅನುಬಂಧ

ಕ್ರ.ಸಂ	ಜಿಲ್ಲೆಯ ಮುಜರಾಯಿ ದೇವಸ್ಥಾನಗಳ ಹೆಸರು	ಪ್ರವರ್ಗ ಎ ಬಿ ಸಿ	ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ (2019-20)	ದೇವಸ್ಥಾನದ ಆದಾಯ (2019-20)	ಸಿಬ್ಬಂದಿಗಳ ವಿವರ
	ಅನುಬಂಧ "ಅ"				
	ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರ				
1	ವೀರಭದ್ರೇಶ್ವರ ದೇವಸ್ಥಾನ ಮನ್ನಳ್ಳಿ	"ಸಿ"			
2	ಸಿದ್ದೇಶ್ವರ ದೇವಸ್ಥಾನ ಕಾಡವಾದ	"ಸಿ"	0	0	1
3	ಮಾರುತಿ ಮಂದಿರ ಕಾಡವಾದ	"ಸಿ"	0	0	1
4	ಪಾಂಡುರಂಗ ದೇವಸ್ಥಾನ ಚಟ್ನಳ್ಳಿ	"ಸಿ"	0	0	0
5	ವೆಂಕಟೇಶ್ವರ ದೇವಸ್ಥಾನ ಜಹೀರಾಪೂರ	"ಸಿ"	0	0	0
6	ಮಾರುತಿ ಮಂದಿರ ಸಿಂದೋಲ	"ಸಿ"	0	0	0
7	ಮಹಾದೇವ ದೇವಸ್ಥಾನ ಕಾಡವಾದ	"ಸಿ"	0	0	0
8	ಮಾರುತಿ ಮಂದಿರ ಬಸವಣಗೇರಾ	"ಸಿ"	0	0	0
9	ಮಾರುತಿ ಮಂದಿರ ಖಾಜಾಪೂರ	"ಸಿ"	0	0	0
10	ಪಾಂಡುರಂಗ ದೇವಸ್ಥಾನ ಕಮಠಾಣ	"ಸಿ"	0	0	0
11	ಮಾರುತಿ ಮಂದಿರ ಶಿಂದಿ(ಬಿ)	"ಸಿ"	0	0	1
12	ಮಲ್ಲಿಕಾರ್ಜುನ ದೇವಸ್ಥಾನ ಬಗದಲ	"ಸಿ"	0	0	1
13	ಮಲ್ಲಯ್ಯಾ ದೇವಸ್ಥಾನ ಸಿಟಿ ವಿ	"ಸಿ"	0	0	0
14	ಹನುಮಾನ ದೇವಸ್ಥಾನ ಮರಕಂದ	"ಸಿ"	0	0	0
15	ಹನುಮಾನ ದೇವಸ್ಥಾನ ಮೋರಗಿ	"ಸಿ"	0	0	0
16	ದಾವಲ ದೇವಸ್ಥಾನ ಕಮಠಾಣ	"ಸಿ"	0	0	0
17	ಮಾರುತಿ ಮಂದಿರ ನಾವದಗೇರಿ	"ಸಿ"	0	0	1
18	ವೆಂಕಟೇಶ್ವರ ದೇವಸ್ಥಾನ ದಾಮ್ಪಗಿ	"ಸಿ"	0	0	0
19	ಮಾರುತಿ ಮಂದಿರ ದಾಮ್ಪಗಿ	"ಸಿ"	0	0	0
20	ಮಾರುತಿ ಮಂದಿರ ಕಮಠಾಣ	"ಸಿ"	0	0	0
21	ವೆಂಕಟೇಶ್ವರ ದೇವಸ್ಥಾನ ದಾವರ	"ಸಿ"	0	0	1
22	ವಿಶ್ವನಾಥ ದೇವಸ್ಥಾನ ಸುಲ್ತಾನಪೂರ (ಕೆ)	"ಸಿ"	0	0	0
23	ಮಾರುತಿ ಮಂದಿರ ಚಿಟ್ಟಾ	"ಸಿ"	0	0	1
24	ಮಹಾದೇವ ದೇವಸ್ಥಾನ ಕಪಲಾಪೂರ (ಎ)	"ಸಿ"	0	0	0
25	ಸಿದ್ದೇಶ್ವರ ದೇವಸ್ಥಾನ ಹೊನ್ನಿಕೇರಿ	"ಸಿ"	0	0	0
26	ಪಾಪನಾಶೇಶ್ವರ ದೇವಸ್ಥಾನ ಬೀದರ	"ಬಿ"	0	3616080	12
27	ಭವಾನಿ ದೇವಸ್ಥಾನ ಬೀದರ	"ಸಿ"	0	0	0
28	ಮಲ್ಲಿಕಾರ್ಜುನ ದೇವಸ್ಥಾನ ಬೀದರ	"ಸಿ"	0	0	0
29	ಹನುಮಾನ ಮಂದಿರ ಬೀದರ	"ಸಿ"	0	0	0
30	ಭವಾನಿ ದೇವಸ್ಥಾನ ಚಾಂಗ್ಲೇರಾ	"ಸಿ"	0	0	0
31	ಮಹಾದೇವ ಮಂದಿರ ಮನ್ನಳ್ಳಿ	"ಸಿ"	0	0	0
32	ಭವಾನಿ ದೇವಸ್ಥಾನ ಮನ್ನಾಏಖೇಳ್ಳಿ	"ಸಿ"	0	0	0
33	ವೀರಭದ್ರೇಶ್ವರ ದೇವಸ್ಥಾನ ಚಾಂಗ್ಲೇರಾ	"ಸಿ"	0	0	0
34	ಝರಣಿ ನರಸಿಂಹ ಮಂದಿರ ದೇವನಗರ	"ಬಿ"	0	10443687	11
35	ಬಸವೇಶ್ವರ ದೇವಸ್ಥಾನ ದೇವನಗರ	"ಸಿ"	0	0	0
		"ಸಿ"	0	0	0
	ಒಟ್ಟು	35	0	14059767	30

ಜಿಲ್ಲಾಧಿಕಾರಿ
ಬೀದರ ಜಿಲ್ಲೆ, ಬೀದರ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	298
ಸದಸ್ಯರ ಹೆಸರು	ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ
ಉತ್ತರಿಸುವ ದಿನಾಂಕ:	21.09.2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ಕಳೆದ 2 ವರ್ಷಗಳಲ್ಲಿ ಧಾರವಾಡ ವಿಧಾನ ಸಭಾ ಮತಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಮಂಜೂರಾದ ಅನುದಾನ ಎಷ್ಟು;	ಕಳೆದ 2 ವರ್ಷಗಳಲ್ಲಿ ಧಾರವಾಡ ವಿಧಾನ ಸಭಾ ಮತಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳಡಿ ಒಟ್ಟು ರೂ.67.89 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿರುತ್ತದೆ. (see table below)
ಆ	ಸದರಿ ಜೀರ್ಣೋದ್ಧಾರಕ್ಕೆ ಆಯ್ಕೆಯಾದ ದೇವಸ್ಥಾನಗಳು ಯಾವುವು ಹಾಗೂ ಕಾಮಗಾರಿಗಳು ಯಾವ ಹಂತದಲ್ಲಿವೆ (ವಿವರ ನೀಡುವುದು)?	ಸದರಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಕಳೆದ ಎರಡು ಸಾಲಿನಲ್ಲಿ ಜೀರ್ಣೋದ್ಧಾರಕ್ಕೆ 11 ದೇವಾಲಯಗಳನ್ನು ಆಯ್ಕೆ ಮಾಡಲಾಗಿರುತ್ತದೆ. ದೇವಾಲಯ ಮತ್ತು ಕಾಮಗಾರಿಗಳ ವಿವರ ಅನುಬಂಧದಲ್ಲಿ ಒದಗಿಸಿದೆ.

ಯೋಜನೆ ವಿವರ	2018-19	2019-
	(ಮೊತ್ತ ರೂ. ಲಕ್ಷಗಳಲ್ಲಿ)	
ದುರಸ್ತಿ ಜೀರ್ಣೋದ್ಧಾರ/ ಅಜಿಸ.ಮಿ	8.00	45.00
ಆರಾಧನಾ ಯೋಜನೆ	4.24	4.24
ಪರಿಶಿಷ್ಟಜಾತಿ ಉಪ	3.38	1.01
ಗಿರಿಜನ ಉಪಯೋಜನೆ	1.01	1.01
ಒಟ್ಟು	16.63	51.26

(ಸಂಖ್ಯೆ:ಕಂಇ 117 ಮುಸಪ್ರ 2020)

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 336
2) ಸದಸ್ಯರ ಹೆಸರು : ಶ್ರೀ ವೆಂಕಟರಾವ್ ನಾಡಗೌಡ
3) ಉತ್ತರಿಸಬೇಕಾದ ದಿನಾಂಕ : 21.09.2020
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 10 ವರ್ಷಗಳ ಹಿಂದೆ ಶಿವಮೊಗ್ಗ ನಗರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಅನುಮೋದನೆಯಾಗಿದ್ದು, ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೂ.22.00 ಕೋಟಿಗಳ ಅನುದಾನ ನೀಡಿರುವುದು ನಿಜವೇ:(ಸಂಪೂರ್ಣ ವಿವರ ನೀಡುವುದು)	ಶಿವಮೊಗ್ಗ ತಾಲ್ಲೂಕು ಸೋಗಾನೆ ಗ್ರಾಮದ ಪರಿಮಿತಿಯಲ್ಲಿನ ವಿಮಾನ ನಿಲ್ದಾಣ ನಿರ್ಮಾಣ ಪ್ರದೇಶದ ಆವರಣದಲ್ಲಿ ಕಾಂಪೌಂಡ್ ವಾಲ್ ನಿರ್ಮಾಣ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳಿಗಾಗಿ ರೂ.25.57 ಕೋಟಿ ಅನುದಾನವನ್ನು ಲೋಕೋಪಯೋಗಿ ಇಲಾಖೆಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ಈಗಾಗಲೇ ಬಿಡುಗಡೆ ಮಾಡಲಾಗಿದೆ
ಆ)	ಶಿವಮೊಗ್ಗ ವಿಮಾನ ನಿಲ್ದಾಣದ ಕಾಮಗಾರಿಗೆ ಹಿಂದೆ ನಿಗದಿಯಾಗಿದ್ದ ಗುತ್ತಿಗೆದಾರರು ಯಾರು ಹಾಗೂ ಸದರಿ ಹಿಂದಿನ ಗುತ್ತಿಗೆದಾರಿಕೆಯನ್ನು ರದ್ದುಪಡಿಸಲು ಕಾರಣಗಳೇನು:(ವಿವರ ನೀಡುವುದು)	ಶಿವಮೊಗ್ಗ ವಿಮಾನ ನಿಲ್ದಾಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ(ಪಿಪಿಪಿ) ಅಭಿವೃದ್ಧಿಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಐಡಿಡಿ 24 ಡಿಐಎ 2000 ದಿನಾಂಕ 23/03/2007ರಲ್ಲಿ ಮಂಜೂರಾತಿ ನೀಡಿ, ಶಿವಮೊಗ್ಗ ಏರ್‌ಪೋರ್ಟ್ ಡೆವಲಪರ್ಸ್ ಪ್ರೈವೇಟ್.ಲಿಮಿಟೆಡ್, (M/s. Shimoga Airport Developers Private Limited) ಇವರೊಂದಿಗೆ ದಿನಾಂಕ 21.12.2010 ರಂದು ಪೂರಕ ಅಭಿವೃದ್ಧಿ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಒಪ್ಪಂದದ ಪ್ರಕಾರ 24 ತಿಂಗಳ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ದಿನಾಂಕ:21.01.2015 ರಂದು ಯೋಜನಾ ಒಪ್ಪಂದವನ್ನು ರದ್ದುಪಡಿಸಲಾಗಿರುತ್ತದೆ.
ಇ)	ಸದರಿ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ:	ಸದರಿ ಕಾಮಗಾರಿಯನ್ನು ಪ್ಯಾಕೇಜ್-1 (ರನ್‌ವೇ ನಿರ್ಮಾಣಕ್ಕಾಗಿ ಪೇವ್‌ಮೆಂಟ್ ಹಾಗೂ ಮಣ್ಣಿನ ಕೆಲಸ ಏರ್‌ಸೈಡ್ ಚರಂಡಿ ಮತ್ತು ಕಲ್ವಡ್ ನಿರ್ಮಾಣ ಹಾಗೂ ವಿಮಾನ ನಿಲ್ದಾಣದ ಆವರಣದಲ್ಲಿ ಕಾಂಪೌಡ್ ಗೋಡೆ ನಿರ್ಮಾಣ ಇತ್ಯಾದಿ) & ಪ್ಯಾಕೇಜ್-2 (ಪ್ಯಾಸೆಂಜರ್ ಟರ್ಮಿನಲ್ ಬಿಲ್ಡಿಂಗ್, ಎ.ಟಿ.ಸಿ. ಟವರ್ ಕಮ್ ಟೆಕ್ನಿಕಲ್ ಬ್ಲಾಕ್, ಫೈರ್ ಸ್ಟೇಷನ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್

		ನಿರ್ಮಾಣ ಇತ್ಯಾದಿ ಕಾಮಗಾರಿಗೆ ಪ್ರತ್ಯೇಕವಾಗಿ ಟೆಂಡರ್ ಕರೆಯಲಾಗಿರುತ್ತದೆ. ಪ್ಯಾಕೇಜ್-1ರ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ಯಾಕೇಕ್-2 ಕಾಮಗಾರಿಯ ತಾಂತ್ರಿಕ ಬಿಡ್ ಪರಿಶೀಲನೆಯಲ್ಲಿರುತ್ತದೆ.
ಈ)	2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾಗಿರುವ ಹಣ ಭರವಸೆ ಪತ್ರಗಳೆಷ್ಟು ಮತ್ತು ತಿರುವಳಿ ಮಾಡಲಾದಪತ್ರಗಳೆಷ್ಟು? (ಸಂಪೂರ್ಣ ವಿವರ ನೀಡುವುದು)	ಸದರಿ ಕಾಮಗಾರಿಯು ಠೇವಣಿ ವಂತಿಕೆ ಕಾಮಗಾರಿಯಾಗಿದ್ದು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ರೂ.25.57 ಕೋಟಿ ಹಣ ಬಿಡುಗಡೆಯಾಗಿರುತ್ತದೆ. ಪ್ರಸ್ತುತ 2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸದರಿ ಕಾಮಗಾರಿಗೆ ರೂ.1957.00 ಲಕ್ಷ ಹಣ ಬಿಡುಗಡೆಯಾಗಿದ್ದು, ರೂ.549.68 ಲಕ್ಷ ವೆಚ್ಚವಾಗಿರುತ್ತದೆ.

ಸಂಖ್ಯೆ: ಮೂಅಇ 127 ರಾಅವಿ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 391
ಸದಸ್ಯರ ಹೆಸರು : ಶ್ರೀ ನಿಂಬಣ್ಣನವರ್ ಸಿ.ಎಂ. (ಕಲಘಟಗಿ)
ಉತ್ತರಿಸುವ ದಿನಾಂಕ : 22.09.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಕಲಘಟಗಿ ಮತಕ್ಷೇತ್ರದಲ್ಲಿ ಬೇಡ್ತಿ ನಾಲಾ ಯೋಜನೆಯಡಿಯಲ್ಲಿ 35 ಕೆರೆಗಳನ್ನು ತುಂಬಿಸುವುದಕ್ಕಾಗಿ ಬೇಡ್ತಿ ಹಳ್ಳಕ್ಕೆ ಬಾಂದಾರ ನಿರ್ಮಿಸುವ ಕಾರ್ಯ ಯಾವ ಹಂತದಲ್ಲಿದೆ; ಯೋಜನೆಗೆ ಮಂಜೂರಾದ ಅನುದಾನ ಹಾಗೂ ಇದುವರೆಗೆ ಖರ್ಚಾದ ಮೊತ್ತವೆಷ್ಟು;	ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಬೆಳವಂತರ ಗ್ರಾಮದ ಹತ್ತಿರ ಬೇಡ್ತಿ ನದಿಗೆ ಅಡ್ಡಲಾಗಿ ವಿಯರ್ ನಿರ್ಮಿಸಿ, ಕಲಘಟಗಿ ತಾಲ್ಲೂಕಿನ 35 ಕೆರೆಗಳನ್ನು ಏತ ನೀರಾವರಿ ಮೂಲಕ ತುಂಬಿಸುವ ಯೋಜನೆಗೆ ಸರ್ಕಾರದ ಆದೇಶ ದಿನಾಂಕ:17/08/2017 ರಲ್ಲಿ ರೂ.125.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಯೋಜನೆಯ ಕಾಮಗಾರಿಯನ್ನು ಟರ್ನಕೀ ಆಧಾರದ ಮೇಲೆ ರೂ.122.19 ಕೋಟಿ ಮೊತ್ತಕ್ಕೆ ಗುತ್ತಿಗೆ ವಹಿಸಿದ್ದು, ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಇತ್ತೀಚಿನ ಹಂತದ ವಿವರಗಳು ಈ ಕೆಳಗಿನಂತಿವೆ: • **ಜಾಕ್ವೆಲ್ ಕಂ ಪಂಪ್‌ಹೌಸ್:** ಮಣ್ಣಿನ ಅಗೆತದ ಕಾಮಗಾರಿಯು ಪ್ರಗತಿಯಲ್ಲಿದೆ. • **ಪೈಪ್‌ಜೋಡಣೆ:** ಒಟ್ಟು 153.324 ಕಿಮೀ ಏರು ಕೊಳವೆ ಮಾರ್ಗ ನಿರ್ಮಾಣದ ಪೈಕಿ 94.00 ಕಿಮೀ ಪೈಪ್‌ಗಳ ಜೋಡಣೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. • **ವಿದ್ಯುತ್ ಮಂಜೂರಾತಿ:** ವಿದ್ಯುತ್ ಪ್ರಸರಣಾ ಮಾರ್ಗದ ಸಲುವಾಗಿ ತಯಾರಿಸಲಾದ ಕಾರ್ಯ ಸಾಧ್ಯತಾ ವರದಿಯನ್ನು ಹೆಸ್ಕಾಂ, ಹುಬ್ಬಳ್ಳಿ ಇಲಾಖೆಗೆ ಸಲ್ಲಿಸಿದ್ದು, ಅನುಮತಿಯನ್ನು ನಿರೀಕ್ಷಿಸಲಾಗಿದೆ. ಸದರಿ ಯೋಜನೆಗೆ ಒಟ್ಟಾರೆ ಆಗಸ್ಟ್ 2020ರ ಅಂತ್ಯಕ್ಕೆ ರೂ.29.50 ಕೋಟಿಗಳ ವೆಚ್ಚ ಮಾಡಲಾಗಿದೆ.
ಆ)	ಸದರಿ ಕಾಮಗಾರಿಯೂ ನಿಧಾನಗತಿಯಲ್ಲಿ ನಡೆಯುತ್ತಿದ್ದು ಕಾಮಗಾರಿ ವಿಳಂಬವಾಗಿರುವುದಕ್ಕೆ ಕಾರಣವೇನು? (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಕಾಮಗಾರಿಯ ಯೋಜನಾ ವರದಿಯಲ್ಲಿ ವಿಯರ್‌ಗೆ ಗೇಟ್‌ಗಳನ್ನು ಅಳವಡಿಸಲು ಪರಿಗಣಿಸಲಾಗಿರುತ್ತದೆ. ಆದರೆ, ಕಾಮಗಾರಿಯ ನಿರ್ಮಾಣ ಹಂತದಲ್ಲಿ ಸ್ಥಳೀಯ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಉದ್ದೇಶಿತ ನಿರ್ಮಾಣದ ವಿನ್ಯಾಸವನ್ನು ಪರಿಷ್ಕರಿಸಿ, ungated solid weir ನಿರ್ಮಾಣದ ವಿನ್ಯಾಸ ಹಾಗೂ ನಕ್ಷೆಗಳನ್ನು ಮಾರ್ಪಡಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ನೀಡಲಾಗಿರುತ್ತದೆ. ಪ್ರಸ್ತುತ ಸದರಿ ವಿಯರ್ ನಿರ್ಮಾಣದ ಮಣ್ಣಿನ ಅಗೆತದ ಕೆಲಸವು ಪ್ರಗತಿಯಲ್ಲಿದ್ದು, ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಜಸಂಇ 87 ಡಬ್ಲ್ಯೂಬಿಎಂ 2020

(ರಮೇಶ್ ಎಲ್. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	340
ಸದಸ್ಯರ ಹೆಸರು	ಶ್ರೀ ನರೇಂದ್ರ ಆರ್
ಉತ್ತರಿಸುವ ದಿನಾಂಕ	21-09-2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆ, ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಶ್ರೀ ಕಿಚ್ಚುಗುತ್ತಿ ಮಾರಮ್ಮ ದೇವಾಲಯದಲ್ಲಿ ಕಳೆದ ಎರಡು ವರ್ಷಗಳಿಂದ ಪೂಜಾ ಕಾರ್ಯಕ್ರಮಗಳು ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಾಮರಾಜನಗರ ಜಿಲ್ಲೆ, ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಶ್ರೀ ಕಿಚ್ಚುಗುತ್ತಿ ಮಾರಮ್ಮ ದೇವಾಲಯದಲ್ಲಿ ಕಳೆದ ಎರಡು ವರ್ಷಗಳಿಂದ ಪೂಜಾ ಕಾರ್ಯಕ್ರಮಗಳು ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಈ ದೇವಾಲಯದಲ್ಲಿ ಮತ್ತೆ ದೇವರ ಪೂಜಾ ಕಾರ್ಯಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು)	ಶ್ರೀ ಕಿಚ್ಚುಗುತ್ತಿ ಮಾರಮ್ಮ ದೇವಾಲಯವನ್ನು ಭಕ್ತಾಧಿಗಳ ಮತ್ತು ಸಾರ್ವಜನಿಕ ದರ್ಶನಕ್ಕಾಗಿ ತೆರೆಯಲು ಧಾರ್ಮಿಕ ದತ್ತಿ ಇಲಾಖೆಯ ಕೇಂದ್ರ ಕಛೇರಿಯ ಹಿರಿಯ ಆಗಮ ಪಂಡಿತರು ಸ್ಥಳ ತನಿಖೆ ಮಾಡಿ, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಅಭಿಪ್ರಾಯವನ್ನು ನೀಡಿದ್ದು, ದೇವಾಲಯದಲ್ಲಿ ನಡೆದಿರುವ ಘಟನೆಯ ಪರಿಹಾರಕ್ಕಾಗಿ ಸದರಿ ದೇವಾಲಯದ ಶಾಸ್ತ್ರ ಸಂಪ್ರದಾಯದಂತೆ ಪ್ರಾಯಶ್ಚಿತ್ತಾದಿ ಪೂಜಾ/ಹೋಮ ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸಿ ದಿನಾಂಕ: 20.10.2020ರಿಂದ ಸದರಿ ದೇವಾಲಯವನ್ನು ಭಕ್ತಾಧಿಗಳ ಮತ್ತು ಸಾರ್ವಜನಿಕ ದರ್ಶನಕ್ಕಾಗಿ ತೆರೆಯಲು ದಿನಾಂಕವನ್ನು ನಿಗದಿಪಡಿಸಲಾಗಿದೆ.

ಸಂಖ್ಯೆ: ಕಂಇ 118 ಮುಸಪ್ರ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 361

2) ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ(ರಾಯಚೂರು ಗ್ರಾಮಾಂತರ)

3) ಉತ್ತರಿಸಬೇಕಾದ ದಿನಾಂಕ : 22.09.2020

4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಪಟ್ಟಣದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಕಳೆದ ಸಾಲಿನ ಆಯ-ವ್ಯಯದಲ್ಲಿ ಘೋಷಣೆಯಾಗಿದ್ದು, ಕಾಮಗಾರಿ ಪ್ರಾರಂಭಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ;	ರಾಯಚೂರು ಪಟ್ಟಣದಲ್ಲಿ ವಿಮಾನ ನಿಲ್ದಾಣದ ಯೋಜನೆಯು ಇನ್ನೂ ಪೂರ್ವ ಸಿದ್ಧತೆಯ ಹಂತದಲ್ಲಿರುವುದರಿಂದ ಅನುದಾನವನ್ನು ಹಂಚಿಕೆ ಮಾಡಿರುವುದಿಲ್ಲ.
ಆ)	ಅನುದಾನ ಬಿಡುಗಡೆ ಮಾಡದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆ ಮಾಡಲಾಗುವುದು ಹಾಗೂ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ರಾಯಚೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಸುಮಾರು 402 ಎಕರೆ ಭೂಮಿಯನ್ನು ಏಗನೂರು ಮತ್ತು ಯರಮರಸ್ ಹಳ್ಳಿಗಳಲ್ಲಿ ಸ್ವಾಧೀನಪಡಿಸಿಕೊಂಡಿದ್ದು, ಜಮೀನಿನ ಸುತ್ತಲು ಯರಮರಸ್ ಶಾಖೋತ್ಪನ್ನ ವಿದ್ಯುತ್ ಮಾರ್ಗಗಳು ಮತ್ತು ಎತ್ತರದ ಚಿಮಿನಿಗಳಿರುವುದಿರಂದ ವಿಮಾನ ಹಾರಾಟಕ್ಕೆ ಅಡಚಣೆ ಉಂಟಾಗುವುದನ್ನು ಪರಿಗಣಿಸಿ, ಸಣ್ಣ ವಿಮಾನಗಳ ಹಾರಾಟಕ್ಕೆ ಸೀಮಿತವಾಗಿರುವುದರಿಂದ, ಈ ಸಂಬಂಧ ಕಾರ್ಯಸಾಧ್ಯತೆಯ ಕುರಿತಂತೆ ಪರಿಶೀಲನಾ ಹಂತದಲ್ಲಿದೆ ಹಾಗೂವಿಮಾನ ನಿಲ್ದಾಣ ಸ್ಥಾಪನೆಗೆ ಸಂಬಂಧಿಸಿದಂತೆ ಪರ್ಯಾಯ ಸ್ಥಳಗಳನ್ನು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಮೂಅಇ 123 ರಾಅವಿ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	362
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ವೈಟಿಪಿಎಸ್ ಮತ್ತು ಆರ್‌ಟಿಪಿಎಸ್‌ಗಳು ರಾಯಚೂರು ಜಿಲ್ಲೆಯ ಬೃಹತ್ ಶಾಖೋತ್ಪನ್ನ ಘಟಕಗಳಾಗಿದ್ದು, ಇತ್ತೀಚೆಗೆ ಇವುಗಳನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ಘಟಕಗಳನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಈ ಶಾಖೋತ್ಪನ್ನ ಘಟಕಗಳನ್ನು ಸ್ಥಗಿತಗೊಳಿಸಿರುವುದಕ್ಕೆ ನಿರ್ದಿಷ್ಟ ಕಾರಣಗಳೇನು; ಇದರಿಂದ ಎಷ್ಟು ಮಂದಿ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ? (ಸಂಪೂರ್ಣ ಮಾಹಿತಿ ಒದಗಿಸುವುದು)	ವೈಟಿಪಿಎಸ್ ಮತ್ತು ಆರ್‌ಟಿಪಿಎಸ್‌ನ ಘಟಕಗಳನ್ನು ಲೋ ಡಿಮಾಂಡ್ ಮತ್ತು ಮೆರಿಟ್ ಆರ್ಡರ್ ಡಿಸ್ಪ್ಯಾಚ್ ಕಾರಣಗಳಿಂದ ರಿಸರ್ವ ಸೆಟ್‌ಡೌನ್ ಮಾಡಲಾಗಿದೆ. ವೈಟಿಪಿಎಸ್‌ನ ಘಟಕ-1ನ್ನು "ಕಾಯ್ದಿರಿಸಿದ ಸ್ಥಗಿತ" (reserve shut down) ರನ್ವಯ ಸ್ಥಗಿತಗೊಳಿಸಲಾಗಿದೆ ಮತ್ತು ಘಟಕ-2ನ್ನು (ದಿನಾಂಕ:18.07.2020 ರಿಂದ) ಜನರೇಟರ್ ಟ್ರಾನ್ಸ್‌ಫಾರ್ಮರ್ ದುರಸ್ಥಿಗಾಗಿ ಸ್ಥಗಿತಗೊಳಿಸಲಾಗಿದೆ. ರಾ.ಶಾ.ವಿ.ಕೇ.ದ 7 ಘಟಕಗಳನ್ನು "ಕಾಯ್ದಿರಿಸಿದ ಸ್ಥಗಿತ" ರನ್ವಯ ಸ್ಥಗಿತಗೊಳಿಸಲಾಗಿದೆ. 8ನೇ ಘಟಕವನ್ನು ಜನರೇಟರ್ ದುರಸ್ಥಿಗಾಗಿ ಸ್ಥಗಿತಗೊಳಿಸಲಾಗಿದೆ. ಸುಮಾರು 683 ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ.

ಸಂಖ್ಯೆ: ಎನರ್ಜಿ 110 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತ್ತಿಲದ ಪ್ರಶ್ನೆ ಸಂಖ್ಯೆ	:	363
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ತಾಲ್ಲೂಕಿನ ಚಿಕ್ಕಮಂಚಾಲಿ ಗ್ರಾಮದ ಹತ್ತಿರ ಸುಕ್ಷೇತ್ರ ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸುವ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ನಿರ್ಮಾಣ ಕಾಮಗಾರಿಯು 2019-20ನೇ ಸಾಲಿನ ಆಯ-ವ್ಯಯದಲ್ಲಿ ಘೋಷಣೆಯಾಗಿದ್ದು, ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ;	ರಾಯಚೂರು ತಾಲ್ಲೂಕಿನ ವ್ಯಾಪ್ತಿಯಲ್ಲಿಯ ಚಿಕ್ಕಮಂಚಾಲಿ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಗೆ 2019-20 ನೇ ಸಾಲಿನ ಆಯವ್ಯಯದಲ್ಲಿ ರೂ.50.00 ಕೋಟಿಗಳನ್ನು ಘೋಷಿಸಲಾಗಿದೆ.
ಆ)	ಸದರಿ ಕಾಮಗಾರಿಗೆ ಎಷ್ಟು ಅನುದಾನವನ್ನು ಮೀಸಲಾಗಿರಿಸಿದೆ ಹಾಗೂ ಈ ಕಾಮಗಾರಿಯನ್ನು, ಯಾವಾಗ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮುಂದುವರೆದು, ಸದರಿ ಕಾಮಗಾರಿಗೆ ರೂ.102.52 ಕೋಟಿಗಳ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಅನುಮೋದಿತ ಕಾರ್ಯಭಾರ ಅಧಿಕವಾಗಿರುವ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯನ್ನು ಸದ್ಯಕ್ಕೆ ಮುಂದೂಡಲಾಗಿದೆ.

ಸಂಖ್ಯೆ: ಜಸಂಇ 100 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 364
2. ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಹಬ್ಬಿಕೊಂಡಿರುವ ಡ್ರಗ್ ಜಾಲವನ್ನು ನಿಯಂತ್ರಿಸುವ ಮತ್ತು ಹತ್ತಿಕ್ಕುವ ನಿಟ್ಟಿನಲ್ಲಿ ಸರ್ಕಾರ ಅನುಸರಿಸುತ್ತಿರುವ ಕಟ್ಟುನಿಟ್ಟಿನ ಕ್ರಮಗಳು ಯಾವುವು; ಈ ಜಾಲದಲ್ಲಿ ತೊಡಗಿಸಿಕೊಂಡಿರುವ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವ ಮೂಲಕ ಮುಂದಿನ ದಿನಗಳಲ್ಲಿ ಅಪರಾಧಿಗಳ ಹೆಚ್ಚಳವನ್ನು ನಿಯಂತ್ರಿಸುವಲ್ಲಿ ಸರ್ಕಾರದ ಕ್ರಮಗಳೇನು;</td><td>ರಾಜ್ಯದಲ್ಲಿ ಡ್ರಗ್ಸ್ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಮತ್ತು ಹತ್ತಿಕ್ಕಲು ಹಾಗೂ ಈ ಜಾಲದಲ್ಲಿ ತೊಡಗಿಸಿಕೊಂಡಿರುವ ಅಪರಾಧಿಗಳಿಗೆ ಕಟ್ಟು ನಿಟ್ಟಿನ ಶಿಕ್ಷೆಯನ್ನು ಕೈಗೊಳ್ಳುತ್ತಿದ್ದು, ಕೈಗೊಂಡ ಕ್ರಮವನ್ನು ಅನುಬಂಧ-1ರಲ್ಲಿ ವಿವರಿಸಿದೆ.</td></tr>
<tr><td>ಆ</td><td>ಕಳೆದ ಮೂರು ವರ್ಷಗಳಲ್ಲಿ ಎಷ್ಟು ಡ್ರಗ್ ಜಾಲಗಳನ್ನು ಗುರುತಿಸಿ ಕ್ರಮ ಜರುಗಿಸಲಾಗಿದೆ; ಅಪರಾಧಿಗಳ ವಿರುದ್ಧ ಕೈಗೊಂಡ ಕ್ರಮಗಳೇನು;</td><td>ಕಳೆದ ಮೂರು ವರ್ಷಗಳಲ್ಲಿ, 2017 ರಿಂದ 2020 (ಸೆಪ್ಟೆಂಬರ್-15 ರವರೆಗೆ) ದಾಖಲಾದ ಡ್ರಗ್ಸ್ ಪ್ರಕರಣದ ವಿವರ
<table><tr><th>ವರ್ಷ</th><th>ದಾಖಲಾದ ಪ್ರಕರಣ</th></tr><tr><td>2017</td><td>1126</td></tr><tr><td>2018</td><td>1032</td></tr><tr><td>2019</td><td>1661</td></tr><tr><td>2020 (ಸೆಪ್ಟೆಂಬರ್-15 ರವರೆಗೆ)</td><td>2589</td></tr></table>ಡ್ರಗ್ಸ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಅಪರಾಧಿಗಳ ವಿರುದ್ಧ ಕೈಗೊಂಡ ಕ್ರಮದ ವಿವರಗಳನ್ನು ಅನುಬಂಧ-1ರಲ್ಲಿ ವಿವರಿಸಿದೆ.</td></tr>
<tr><td>ಇ</td><td>ಸಮಾಜದಲ್ಲಿನ ಯುವಕರು ವಿದ್ಯಾರ್ಥಿಗಳು ಸೇರಿದಂತೆ ಬಹುತೇಕರು ಒಳಗೊಳ್ಳುವ ಈ ದುಶ್ಚಟದ ನಿರ್ಮೂಲನೆ ಮತ್ತು ಹತೋಟಿಗಾಗಿ ಸರ್ಕಾರ ನಿರ್ಣಾಯಕ ಕ್ರಮಗಳನ್ನು ಜರುಗಿಸಲು ಮುಂದಾಗುವುದೇ?</td><td>ರಾಜ್ಯದಲ್ಲಿ ಯುವಕರು ವಿದ್ಯಾರ್ಥಿಗಳು ಸೇರಿದಂತೆ ಬಹುತೇಕರು ಈ ದುಶ್ಚಟಕ್ಕೆ ಒಳಗಾಗುವುದನ್ನು ತಡೆಯಲು ಹಾಗೂ ಡ್ರಗ್ಸ್ ನಿರ್ಮೂಲನೆ ಮತ್ತು ಹತೋಟಿ ಕಾರ್ಯವನ್ನು ಕೈಗೊಂಡಿದ್ದು ಈ ಬಗ್ಗೆ ಜರುಗಿಸಿದ ಕ್ರಮದ ಮಾಹಿತಿಯನ್ನು ಅನುಬಂಧ-1ರಲ್ಲಿ ವಿವರಿಸಿದೆ.</td></tr>
</table>

ಒಇ 14 ಪಿಎನ್‌ಡಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಅನುಬಂಧ

ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಪೊಲೀಸ್ ಠಾಣೆಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ ಮತ್ತು ಮಟ್ಕಾ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ಪೊಲೀಸ್ ಠಾಣಾವಾರು ವಿವರಗಳು.

ಎನ್.ಡಿ.ಪಿ.ಎಸ್. ಕಾಯ್ದೆ ಪ್ರಕರಣಗಳು.

ಪೊಲೀಸ್ ಠಾಣೆ	2017		2018		2019		2020	
	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ
ಶಂಕರನಾರಾಯಣ ಠಾಣೆ	0	0	0	0	0	0	0	0
ಕುಂದಾಪುರ ಠಾಣೆ	0	0	0	0	0	0	0	0
ಕುಂದಾಪುರ ಗ್ರಾಮಾಂತರ ಠಾಣೆ	0	0	0	0	0	0	0	0
ಕೊಲ್ಲೂರು ಠಾಣೆ	0	0	0	0	0	0	0	0
ಗಂಗೊಳ್ಳಿ	0	0	0	0	0	0	0	0
ಬೈಂದೂರು	0	0	0	0	2	6	14	21
ಒಟ್ಟು	**0**	**0**	**0**	**0**	**2**	**6**	**14**	**21**

ಮಟ್ಕಾ ಪ್ರಕರಣಗಳು

ಪೊಲೀಸ್ ಠಾಣೆ	2017		2018		2019		2020	
	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಬಂಧಿಸಿರುವ ಆರೋಪಿಗಳ ಸಂಖ್ಯೆ
ಶಂಕರನಾರಾಯಣ ಠಾಣೆ	10	11	05	07	5	6	01	01
ಕುಂದಾಪುರ ಠಾಣೆ	06	06	01	01	04	04	01	01
ಕುಂದಾಪುರ ಗ್ರಾಮಾಂತರ ಠಾಣೆ	01	01	03	04	03	03	0	0
ಕೊಲ್ಲೂರು ಠಾಣೆ	04	05	04	05	6	6	01	01
ಗಂಗೊಳ್ಳಿ	18	18	19	19	31	33	03	03
ಬೈಂದೂರು	29	29	21	21	23	23	05	05
ಒಟ್ಟು	**68**	**70**	**53**	**57**	**72**	**75**	**11**	**11**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	371
ಮಾನ್ಯ ಸದಸ್ಯರ ಹೆಸರು	ಶ್ರೀ ವೇದವ್ಯಾಸ ಕಾಮತ್ ಡಿ (ಮಂಗಳೂರು ನಗರ ದಕ್ಷಿಣ)
ಉತ್ತರಿಸುವವರು	ಅಬಕಾರಿ ಸಚಿವರು
ಉತ್ತರದ ದಿನಾಂಕ	22-09-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ವೈನ್ ಶಾಪ್/ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಲಾದ ಲೈಸೆನ್ಸ್‌ಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)	1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 (ವೈನ್ ಶಾಪ್) ಮತ್ತು ಸಿಎಲ್-9 (ಬಾರ್ & ರೆಸ್ಟೋರೆಂಟ್) ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರವು ನಿರ್ಬಂಧ ವಿಧಿಸಿರುವುದರಿಂದ ಪ್ರಸ್ತುತ ಸದರಿ ಸನ್ನದುಗಳನ್ನು ಹೊಸದಾಗಿ ಮಂಜೂರು ಮಾಡಲಾಗುತ್ತಿಲ್ಲ.
ಆ)	ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾದ ಲೈಸೆನ್ಸ್ ಸಂಖ್ಯೆಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು);	ಉದ್ಭವಿಸುವುದಿಲ್ಲ.
ಇ)	ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಲೈಸೆನ್ಸ್ ಪಡೆಯಲು ಶುಲ್ಕ ವಿನಾಯಿತಿ ಇದೆಯೇ;	ಉದ್ಭವಿಸುವುದಿಲ್ಲ.
ಈ)	ಹಾಗಿದ್ದಲ್ಲಿ, ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳಿಗೆ ನಿಗಧಿಪಡಿಸಿರುವ ಶುಲ್ಕ ವಿನಾಯಿತಿಯ ಮೊತ್ತವೆಷ್ಟು?	ಉದ್ಭವಿಸುವುದಿಲ್ಲ.

ಆಇ 58 ಇಎಲ್‌ಕ್ಯೂ 2020

(ಹೆಚ್.ನಾಗೇಶ್)

ಅಬಕಾರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	376
ಸದಸ್ಯರ ಹೆಸರು	:	ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಚಿಂತಾಮಣಿ ತಾಲ್ಲೂಕಿನಲ್ಲಿ ರೈತರ ಜಮೀನಿನಲ್ಲಿ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಮತ್ತು ಟಿ.ಸಿ.ಗಳ ಅಳವಡಿಸದೇ ಇರುವುದರಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಚಿಂತಾಮಣಿ ತಾಲ್ಲೂಕಿನ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇ.ಎನ್.41 ಪಿ.ಎಸ್.ಸಿ 2014/ಬಿ ದಿನಾಂಕ:14.07.2014 ಮತ್ತು 23.07.2014 ರಂತೆ ದಿನಾಂಕ:31.07.2012 ರ ನಂತರ ಅನಧಿಕೃತವಾಗಿ ಸೇರ್ಪಡೆಗೊಂಡು ನೋಂದಾಯಿಸಿರುವ ಮತ್ತು ಹೊಸದಾಗಿ ನೋಂದಾಯಿಸಲ್ಪಡುವ ಪಂಪ್ ಸೆಟ್ ಅರ್ಜಿದಾರರು ಮೂಲ ಸೌಕರ್ಯ ರಚನಾ ಶುಲ್ಕವಾದ ರೂ.10,000/- ಮತ್ತು ಇತರೆ ಠೇವಣಿ ಶುಲ್ಕಗಳನ್ನು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಿದ ನಂತರ ಜೇಷ್ಠತೆಯ ಆಧಾರದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಿ ವಿದ್ಯುತ್ ಸಂಪರ್ಕ ಒದಗಿಸಲಾಗುವುದು. ಮೂಲಭೂತ ಸೌಕರ್ಯ ಕಲ್ಪಿಸುವ ಅವಶ್ಯಕತೆ ಇಲ್ಲದಿರುವ ಕೃಷಿ ಪಂಪ್‌ಸೆಟ್‌ಗಳಿಗೆ ಸರ್ವಿಸ್ ಮೈನ್ಸ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.
ಆ)	ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು) ;	
ಇ)	ಇದುವರೆವಿಗೂ ಎಷ್ಟು ರೈತರು ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದ್ದಾರೆ ;	ಚಿಂತಾಮಣಿ ತಾಲ್ಲೂಕಿನಲ್ಲಿ 2017-18 ರಿಂದ 2020-21ನೇ ಸಾಲಿನ ಆಗಸ್ಟ್ 2020ರ ಅಂತ್ಯಕ್ಕೆ ಒಟ್ಟು 1588 ಸಂಖ್ಯೆ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಹಣ ಪಾವತಿಸಿದ್ದು, (2017-18ನೇ ಸಾಲಿಗಿಂತ ಹಿಂದೆ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ಸಂಖ್ಯೆ 500 ಸೇರಿದ್ದು) ಅವುಗಳ ಪೈಕಿ 1,188 ಸಂಖ್ಯೆಯ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಬಾಕಿ ಇರುವ 400 ಸಂಖ್ಯೆಯ ಕೃಷಿ ಪಂಪ್‌ಸೆಟ್‌ಗಳಿಗೆ ಜೇಷ್ಠತೆ ಆಧಾರದ ಮೇಲೆ ಮೂಲಭೂತ ಸೌಕರ್ಯವನ್ನು ಕಲ್ಪಿಸಿ ವಿದ್ಯುತ್ ಸರಬರಾಜು ಒದಗಿಸಬೇಕಾಗಿದ್ದು, ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮೇಲಿನ ಅವಧಿಯಲ್ಲಿ 1139 ಸಂಖ್ಯೆಯ ಪರಿವರ್ತಕಗಳನ್ನು ಅಳವಡಿಸಲಾಗಿದೆ.
ಈ)	ಯಾವ ಕಾಲಮಿತಿಯೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಟಿ.ಸಿ.ಗಳನ್ನು ಅಳವಡಿಸಲಾಗುವುದು (ವಿವರ ನೀಡುವುದು) ?	

ಸಂಖ್ಯೆ: ಎನರ್ಜಿ 111 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	382
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 2019 ಮತ್ತು 2020ನೇ ಸಾಲಿನಲ್ಲಿ ಕೊರೆಯಲಾಗಿರುವ ಕೊಳವೆ ಬಾವಿಗಳ ಪೈಕಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆ; (ವಿವರ ನೀಡುವುದು)	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿವ್ಯಾಪ್ತಿಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ವಿವಿಧ ಅಭಿವೃದ್ಧಿ ನಿಗಮಗಳಿಂದ 2018–19 ರಿಂದ 2020–21ನೇ ಸಾಲಿನ ಆಗಸ್ಟ್ 2020 ರವರೆಗೆ, (2018–19ನೇ ಸಾಲಿಗಿಂತ ಹಿಂದೆ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ಸಂಖ್ಯೆ 139 ಸೇರಿದಂತೆ) ಒಟ್ಟು 392 ಸಂಖ್ಯೆಯ ಅರ್ಜಿಗಳು ವಿದ್ಯುತ್ ಸಂಪರ್ಕಕ್ಕಾಗಿ ನೋಂದಣಿಯಾಗಿರುತ್ತವೆ. ಅವುಗಳ ಪೈಕಿ 386 ಸಂಖ್ಯೆಯ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ ಹಾಗೂ 6 ಸಂಖ್ಯೆಯ ಕೊಳವೆ ಬಾವಿಗಳು ಮಾತ್ರ ವಿದ್ಯುದೀಕರಣಕ್ಕೆ ಬಾಕಿ ಇರುತ್ತವೆ. ವಿವರಗಳು ಈ ಕೆಳಕಂಡಂತಿವೆ:

ವರ್ಷ	ಹಿಂಬಾಕಿ ಇರುವ ಅರ್ಜಿಗಳ ಸಂಖ್ಯೆ	ನೋಂದಾವಣೆ ಗೊಂಡ ಅರ್ಜಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಲಾದ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ	ವಿದ್ಯುತ್ ಸಂಪರ್ಕಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ
2018-19	139	170	291	18
2019-20	18	58	70	6
2020-21 (ಆಗಸ್ಟ್-2020ರ ಅಂತ್ಯಕ್ಕೆ)	6	25	25	6
	139 (ಹಿಂಬಾಕಿ)	253	386	6 (ಪ್ರಸ್ತುತ ಬಾಕಿ)

	ಪ್ರಶ್ನೆ	ಉತ್ತರ
ಆ)	ಉಳಿದ ಕೊಳವೆ ಬಾವಿಗಳಿಗೆ ಯಾವ ಕಾಲಮಿತಿಯೊಳಗಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು (ಸಂಪೂರ್ಣ ವಿವರ ನೀಡುವುದು) ?	ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕಕ್ಕಾಗಿ 06 ಸಂಖ್ಯೆಯ ಕೃಷಿ ಪಂಪ್‌ಸೆಟ್‌ಗಳ ಅರ್ಜಿಗಳು ಈ ಕೆಳಕಂಡ ಕಾರಣಗಳಿಂದಾಗಿ ಬಾಕಿ ಉಳಿದಿರುತ್ತವೆ: 1. 02 ಸಂಖ್ಯೆಯ ಅರ್ಜಿಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸೆಪ್ಟೆಂಬರ್–2020ರ ಅಂತ್ಯದೊಳಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.

		2. ಜಮೀನಿನಲ್ಲಿ ಬೆಳೆ ಇರುವುದರಿಂದ 03 ಸಂಖ್ಯೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಜಮೀನಿನಲ್ಲಿರುವ ಬೆಳೆಗಳು ಕಟಾವಾದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. 3. 01 ಸಂಖ್ಯೆಯ ಅರ್ಜಿಯ ಸ್ಥಳ ವಿವಾದವಿದ್ದು (Right of way) ಪಕ್ಕದ ರೈತರು ಕಂಬ ಹಾಕಲು ತಕರಾರು ಮಾಡುತ್ತಿದ್ದು, ವಿವಾದವನ್ನು ಬಗೆಹರಿಸಿ, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಸಂಖ್ಯೆ: ಎನರ್ಜಿ **112** ಪಿಪಿಎಂ **2020**

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	383
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರವು ರೈತರಿಂದ ನಿಗದಿಪಡಿಸಿದ ಹಣವನ್ನು ಪಾವತಿಸಿಕೊಂಡು, ಟಿಸಿ, ಕಂಬ ಮತ್ತು ಇತರೆ ಪರಿಕರಗಳನ್ನು ನೀಡುತ್ತಿದ್ದು, ಟೆಂಡರ್ ಪಡೆದ ಕಂಪನಿಯ ಖಾಸಗಿ ಗುತ್ತಿಗೆದಾರರು ರೈತರಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದ ಎಲ್ಲಾ 5 ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿರುವ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ರಾಜ್ಯದ 5 ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿರುವ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಇಎನ್/41/ವಿಎಸ್‌ಸಿ/2014, ದಿನಾಂಕ:14/07/2014 ಮತ್ತು ದಿನಾಂಕ:02/12/2014ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಅದರಂತೆ ಹಣ ಪಾವತಿಸಿದ ರೈತರಿಗೆ ಜೇಷ್ಠತೆ ಆಧಾರದ ಮೇಲೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಯಾವುದೇ ವಿಳಂಬವಿಲ್ಲದಂತೆ ನಿರ್ವಹಿಸಲು ಕಾಮಗಾರಿಗಳ ಟೆಂಡರ್ ನೀಡಲಾಗಿದ್ದು, ಟೆಂಡರ್ ಪಡೆದ ಕಂಪನಿಯ ಖಾಸಗಿ ಗುತ್ತಿಗೆದಾರರು ರೈತರಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿರುವ ಬಗ್ಗೆ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.
ಆ)	ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?	

ಸಂಖ್ಯೆ: ಎನರ್ಜಿ 113 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ	:	384
ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪಬಸಪ್ಪ
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯ ಮಂತ್ರಿಗಳು

***

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಪ್ಪಳ ಜಿಲ್ಲೆಯಲ್ಲಿರುವ ಒಟ್ಟು ವಿದ್ಯುತ್ ಪರಿವರ್ತಕಗಳ ದುರಸ್ಥಿ ಕೇಂದ್ರಗಳ ಸಂಖ್ಯೆ ಎಷ್ಟು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ದುರಸ್ಥಿ ಕೇಂದ್ರಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)</td><td>ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 3 ಸಂಖ್ಯೆಯ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರ ಈಕೆಳಕಂಡಂತಿವೆ:-
<table>
<tr><th>ಕ್ರ.ಸಂ.</th><th>ತಾಲ್ಲೂಕು ಹೆಸರು</th><th>ದುರಸ್ತಿ ಕೇಂದ್ರದ ಸ್ಥಳ</th></tr>
<tr><td>1</td><td>ಕೊಪ್ಪಳ</td><td>ಲಿಂಗಾಪುರ</td></tr>
<tr><td>2</td><td>ಯಲಬುರ್ಗಾ</td><td>ಯಲಬುರ್ಗಾ</td></tr>
<tr><td>3</td><td>ಗಂಗಾವತಿ ಮತ್ತು ಕಾರಟಗಿ</td><td>ಗಂಗಾವತಿ.</td></tr>
</table></td></tr>
<tr><td>ಆ)</td><td>ಸದರಿ ಕೇಂದ್ರಗಳಿಗೆ ಪ್ರತಿ ಮಾಹೆ ಸರಾಸರಿ ಸ್ವೀಕೃತವಾಗುವ ಬೇಡಿಕೆಗಳು ಹಾಗೂ ದುರಸ್ಥಿ ಕೇಂದ್ರದಿಂದ ದುರಸ್ಥಿಗೊಂಡು ಇಲಾಖೆಗೆ ಪೂರೈಕೆಯಾಗುತ್ತಿರುವ ಪರಿವರ್ತಕಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>2019-20ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿವರ್ತಕ ದುರಸ್ತಿ ಕೇಂದ್ರಗಳಿಂದ ಪ್ರತಿ ಮಾಹೆಯ ಸರಾಸರಿ ಸ್ವೀಕೃತವಾಗುವ ಹಾಗೂ ದುರಸ್ತಿ ಕೇಂದ್ರದಿಂದ ದುರಸ್ತಿಗೊಂಡು ಪೂರೈಕೆಯಾದ ಪರಿವರ್ತಕಗಳ ವಿವರಗಳು ಕೆಳಕಂಡಂತಿವೆ:-
<table>
<tr><th>ಕ್ರ ಸಂ</th><th>ದುರಸ್ತಿ ಕೇಂದ್ರದ ಹೆಸರು</th><th>ಪ್ರತಿ ಮಾಹೆ ದುರಸ್ತಿಗಾಗಿ ಸ್ವೀಕೃತವಾದ ಸರಾಸರಿ ಪರಿವರ್ತಕಗಳಸಂಖ್ಯೆ</th><th>ಪ್ರತಿ ಮಾಹೆದುರಸ್ತಿಗೊಂಡ ಸರಾಸರಿ ಪರಿವರ್ತಕಗಳ ಸಂಖ್ಯೆ</th></tr>
<tr><td>1</td><td>ಲಿಂಗಾಪುರ</td><td>36</td><td>36</td></tr>
<tr><td>2</td><td>ಯಲಬುರ್ಗಾ</td><td>33</td><td>33</td></tr>
<tr><td>3</td><td>ಗಂಗಾವತಿ</td><td>27</td><td>27</td></tr>
</table></td></tr>
<tr><td>ಇ)</td><td>ವಿದ್ಯುತ್ ಪರಿವರ್ತಕಗಳ ದುರಸ್ಥಿ ಕೇಂದ್ರಗಳ ಸ್ಥಾಪನೆ ಹಾಗೂ ಆಯ್ಕೆಗೆ ಅನುಸರಿಸುವ ಮಾನದಂಡಗಳೇನು;</td><td>ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ನಿಯಮಾನುಸಾರ ಪ್ರತಿ ವರ್ಷಕ್ಕೆ ಕನಿಷ್ಟ 300 ಪರಿವರ್ತಕಗಳು ವಿಫಲಗೊಳ್ಳುವ ಕೇಂದ್ರ ಸ್ಥಾನದಲ್ಲಿ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ ಮತ್ತು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ ಟೆಂಡರ್ ಕರೆಯಲಾಗುತ್ತದೆ.</td></tr>
<tr><td>ಈ)</td><td>ಕೊಪ್ಪಳ ಜಿಲ್ಲೆಯಲ್ಲಿ ವಿದ್ಯುತ್ ಪರಿವರ್ತಕ ದುರಸ್ಥಿ ಕೇಂದ್ರಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ಪರಿವರ್ತಕ ದುರಸ್ತಿ ಕೇಂದ್ರವನ್ನು ಸ್ಥಾಪಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.</td></tr>
</table>

ಸಂಖ್ಯೆ: ಎನರ್ಜಿ 114 ಪಿಪಿಎಂ 2020

ಬಿ.ಎಸ್.ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	386
ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಜೆಸ್ಕಾಂನಲ್ಲಿರುವ ಒಟ್ಟು ಶಾಖಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು;	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 07 ಸಂಖ್ಯೆಯ ಶಾಖಾಧಿಕಾರಿ ಕಛೇರಿಗಳಿದ್ದು, ವಿವರಗಳು ಕೆಳಕಂಡಂತಿವೆ: (ಕೆಳಗಿನ ಪಟ್ಟಿ ನೋಡಿ)
ಆ)	ಸದರಿ ಕಛೇರಿಗಳಿಗೆ ಮಂಜೂರಾದ ಹಾಗೂ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಎಷ್ಟು;	ಸದರಿ ಕಛೇರಿಗಳಿಗೆ ಮಂಜೂರಾದ ಹಾಗೂ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಮತ್ತು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಇ)	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ;	ಖಾಲಿ ಇರುವ ಕೆಲವು ಹುದ್ದೆಗಳನ್ನು ಪದೋನ್ನತಿ ಮೇರೆಗೆ ಹಾಗೂ ನೇರ ನೇಮಕಾತಿ ಮೂಲಕ ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.
ಈ)	ಕ್ಷೇತ್ರದ ಎಲ್ಲಾ ಶಾಖಾ ಕಛೇರಿಗಳಿಗೆ ಸ್ವಂತ ಕಟ್ಟಡಗಳು ಇವೆಯೇ; ಇಲ್ಲವಾದಲ್ಲಿ ಸ್ವಂತ ಕಟ್ಟಡಗಳ ಬೇಡಿಕೆಯೇನಾದರು ಸ್ವೀಕೃತವಾಗಿದೆಯೇ ;	ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿನ ಜೆಸ್ಕಾಂನಲ್ಲಿರುವ 07 ಶಾಖಾ ಕಛೇರಿಗಳ ಪೈಕಿ ಯಲಬುರ್ಗಾ ಶಾಖಾ ಕಛೇರಿಗೆ ಸ್ವಂತ ಕಟ್ಟಡವಿರುವುದಿಲ್ಲ, ಕುಕನೂರು ಶಾಖಾ ಕಛೇರಿಯು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ ಹಾಗೂ ಇನ್ನುಳಿದ 05 ಶಾಖಾ ಕಛೇರಿಗಳು ಸಂಬಂಧಿಸಿದ 33 ಕೆ.ವಿ. ವಿದ್ಯುತ್ ಉಪ–ಕೇಂದ್ರಗಳ ಆವರಣದ ಒಂದು ಕೊಠಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕ್ರಸಂ	ಶಾಖಾ ಕಛೇರಿ ಹೆಸರು
1	ಯಲಬುರ್ಗಾ
2	ಕುಕನೂರು
3	ವಜ್ರಬಂಡಿ
4	ಹಿರೇವಂಕಲಕುಂಟಾ
5	ಮಂಗಳೂರು
6	ಇಟಗಿ
7	ತಳಕಲ್

ಉ)	ಹಾಗಿದ್ದಲ್ಲಿ, ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಶಾಖಾ ಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣದ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.

ಸಂಖ್ಯೆ: ಎನರ್ಜಿ 115 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 388
2. ಉತ್ತರಿಸುವ ದಿನಾಂಕ : 22.09.2020
3. ಸದಸ್ಯರ ಹೆಸರು : ಶ್ರೀ ನರೇಂದ್ರ ಆರ್. (ಹನೂರು)
4. ಉತ್ತರಿಸಬೇಕಾದ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಹನೂರು ಹೊಸ ತಾಲೂಕು ಕೇಂದ್ರವೆಂದು ಘೋಷಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ)	ಹಾಗಿದ್ದಲ್ಲಿ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹನೂರು ತಾಲೂಕಿಗೆ ಸೇರಿದ ಬೃಹತ್ (ಭಾರಿ) ನೀರಾವರಿ ಇಲಾಖಾ ಕಛೇರಿಯನ್ನು ಹನೂರು ತಾಲ್ಲೂಕಿನ ಅಜ್ಜೀಪುರ ಗ್ರಾಮಕ್ಕೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹನೂರು ತಾಲೂಕಿಗೆ ಸೇರಿದ ಬೃಹತ್ (ಭಾರಿ) ನೀರಾವರಿ ಇಲಾಖಾ ಕಛೇರಿಯನ್ನು ಹನೂರು ತಾಲ್ಲೂಕಿನ ಅಜ್ಜೀಪುರ ಗ್ರಾಮಕ್ಕೆ ಸ್ಥಳಾಂತರಿಸುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಬೆಂಗಳೂರು/ಮೈಸೂರು ಇವರಿಗೆ ಪತ್ರ ಬರೆದು ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ. ಪ್ರಸ್ತಾವನೆ ಪಡೆದು ಸರ್ಕಾರವು ನಿಯಮಾನುಸಾರ ಕ್ರಮವಹಿಸಲಾಗುವುದು.

ಕಡತಸಂಖ್ಯೆ: ಜಸಂಇ 165 ಸೇಎಸು 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 396
ಸದಸ್ಯರ ಹೆಸರು	: ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸುವ ದಿನಾಂಕ	: 22.09.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಕಳೆದ ಸರ್ಕಾರದ ಅವಧಿಯಲ್ಲಿ ನಾಗಠಾಣ ಹಾಗೂ ಇಂಡಿ ಮತ ಕ್ಷೇತ್ರಗಳ ಹಳ್ಳಿಗಳಿಗೆ ನೀರು ಪೂರೈಸುವ ಶ್ರೀ ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆಗೆ ಅನುದಾನ ಮೀಸಲಿರಿಸಲಾಗಿದ್ದು, ಈ ಯೋಜನೆಯನ್ನು ಮುಂದುವರೆಸುವ ಇಚ್ಛೆ ಸರ್ಕಾರದ ಮುಂದಿದೆಯೇ;	ಸರ್ಕಾರವು 2019-20ರ ಆಯವ್ಯಯ ಭಾಷಣದಲ್ಲಿ ರೂ.250.00 ಕೋಟಿ ವೆಚ್ಚದಲ್ಲಿ ಇಂಡಿ ಹಾಗೂ ನಾಗಠಾಣ ವ್ಯಾಪ್ತಿಯ 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಹೊರ್ತಿ - ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಘೋಷಿಸಿದೆ. ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ನೀರನ್ನು ಲಿಫ್ಟ್ ಮಾಡಿ ಇಂಡಿ ತಾಲ್ಲೂಕಿನ ಸುಮಾರು 28,000 ಹೆಕ್ಟೇರ್ ಪ್ರದೇಶಕ್ಕೆ 3.245 ಟಿ.ಎಂ.ಸಿ. ನೀರಿನ ಬಳಕೆಯಿಂದ ಪೈಪ್‌ಲೈನ್ ಜಾಲ ಅಳವಡಿಸಿ ನೀರಾವರಿ ಸೌಲಭ್ಯ ಕಲ್ಪಿಸಲು ಹೊರ್ತಿ-ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆಗೆ ರೂ.2639.00ಕೋಟಿ ಅಂದಾಜು ಪ್ರಸ್ತಾವನೆ ತಯಾರಿಸಲಾಗಿರುತ್ತದೆ. ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಆ)	ಈ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು; ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ವಿವರವಾದ ಮಾಹಿತಿ ನೀಡುವುದು)	
ಇ)	ನಾಗಠಾಣ ವಿಧಾನ ಸಭಾ ಕ್ಷೇತ್ರದ ಗೋಟ್ಯಾಳ, ನಂದರಗಿ, ಗೋಡಿಹಾಳ, ಮಣಂಕಲಗಿ ಕೆರೆಗಳು ಕೆರೆ ತುಂಬುವ ಯೋಜನೆಯಡಿ ಬಿಟ್ಟು ಹೋಗಿದ್ದು ಈ ಕೆರೆಗಳನ್ನು ಕೆರೆ ತುಂಬುವ ಯೋಜನೆಯಲ್ಲಿ ಅಳವಡಿಸಿಕೊಂಡು ಕೆರೆ ತುಂಬುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಗೋಟ್ಯಾಳ & ಮಣಂಕಲಗಿ ಕೆರೆಗಳು ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಸದರಿ ಯೋಜನೆಯಿಂದ ತುಂಬಿಸಲಾಗುವುದು. ನಂದರಗಿ ಕೆರೆಯು ಅಣಚಿ ಕೆರೆ ತುಂಬುವ ಯೋಜನೆಯಿಂದ ಮತ್ತು ಗೋಡಿಹಾಳ ಕೆರೆಯು ಸಂಖ್ ಕೆರೆ ತುಂಬುವ ಯೋಜನೆಯಿಂದ ತುಂಬಲಾಗುತ್ತಿದೆ.
ಈ)	ಜಲ ಸಂಪನ್ಮೂಲ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ಮತ ಕ್ಷೇತ್ರಕ್ಕೆ ವಿವಿಧ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; ಅದರಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; ಕಾಮಗಾರಿಗಳು ಯಾವ ಹಂತದಲ್ಲಿವೆ? (ಕಾಮಗಾರಿಗಳ ಹಾಗೂ ಅನುದಾನದ ಸಂಪೂರ್ಣ ವಿವರದ ಪ್ರತಿ ನೀಡುವುದು)	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ಮತ ಕ್ಷೇತ್ರಕ್ಕೆ ವಿವಿಧ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ & ಕಾಮಗಾರಿಗಳ ವಿವರಗಳು ಅನುಬಂಧರಲ್ಲಿ ನೀಡಲಾಗಿದೆ.

ಸಂಖ್ಯೆ: ಜಸಂಇ 82 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.396 ಕ್ಕೆ ಅನುಬಂಧ

ಕ್ರಸಂ.	ಕಾಮಗಾರಿಗಳ ಹೆಸರು	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)			ಪ್ರಸ್ತುತ ಹಂತ
		2017-18	2018-19	2019-20	
1	'Construction of Bijapur Main Canal from Km 70.00 to 90.00 including structures Under Mulwad LIS	2245.30	862.37	207.17	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ.
2	Construction of aqueduct of Bijapur Main Canal from Km 82.00 to 85.00 including structures Under MLIS	2132.63	0.00	0.00	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ.
3	Construction of Bijapur Main Canal from Km 90.00 to 110.00KM including structures Under MLIS.	3341.82	231.32	1064.27	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ. (ನಾಗಠಾಣ ಮತಕ್ಷೇತ್ರದ 5 ಕಿ.ಮೀ ಮಾತ್ರ)
4	Construction of Aquaduct from Ch:53.41 to 55.81 km of Bijapur Main Canal Crossing Don River including Approach embackments under MLI stage-III works.	10228.81	1571.56	0.00	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ.
5	Construction of Bijapur Main Canal from Km 56.000 to 70.00 including structures under MLI Stage III	2593.22	589.80	719.65	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ.
6	Construction of Tidagundi Branch Canal from km 0.00 to 2.70 Under MLIS-III	160.36	385.97	199.71	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ.
7	Survey, Investigation, design, drawing and construction of Tidagundi branch canal from Km 2.70 km to 17.43 Km under MLIS.	14792.99	9381.64	4214.14	ಕಾಮಗಾರಿ ಮುಕ್ತಾಯಗೊಂಡಿದ್ದು, ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುತ್ತಿದೆ.
8	Construction of Tidagundi Branch Canal from km 40 to km 56 under MLI-III	0.00	0.00	478.36	ಕಾಮಗಾರಿ ಪ್ರಗತಿಯಲ್ಲಿದೆ
9	Construction of Tidagundi Branch Canal from km 17.43 to 40.00 Under MLIS-III	6872.57	1475.68	900.80	ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ
10	Chadachana LIS Head work and Canal network	1000.00	8380.00	9700.00	ಮುಖ್ಯ ಸ್ಥಾವರ & ಕಾಲುವೆ ಜಾಲದ ಪೈಪ್ ಅಳವಡಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ.
11	Nagathana Branch Canal KM 50.00 to 80.00	600.00	2000.00	449.94	ಕಾಮಗಾರಿ ಪೂರ್ಣಗೊಂಡಿದೆ.
12	Nagathana Branch Canal KM 80.00 to 90.00	200.00	0.00	700.00	ಕಾಮಗಾರಿ ಪ್ರಗತಿಯಲ್ಲಿದೆ
13	Aheri-Jambhagi tank filling works	74.00	40.00	0.00	ಕಾಮಗಾರಿ ಪೂರ್ಣಗೊಂಡಿದೆ.
14	Anachi Lift tank filling Scheme	500.00	0.00	0.00	ಕಾಮಗಾರಿ ಪೂರ್ಣಗೊಂಡಿದೆ.
15	Sankh Lift tank filling Scheme	2000.00	0.00	0.00	ಕಾಮಗಾರಿ ಪೂರ್ಣಗೊಂಡಿದೆ.
16	SCP works	930.00	300.00	125.00	2017-18ನೇ ಸಾಲಿನಲ್ಲಿ ಒಟ್ಟು 39 ಕಾಮಗಾರಿಗಳ ಪೈಕಿ 25 ಪೂರ್ಣಗೊಂಡಿವೆ & 14 ಪ್ರಗತಿಯಲ್ಲಿವೆ. 2018-19ನೇ ಸಾಲಿನಲ್ಲಿ ಒಟ್ಟು 60 ಕಾಮಗಾರಿಗಳು ಪೂರ್ಣಗೊಂಡಿವೆ. 2019-20ನೇ ಸಾಲಿನಲ್ಲಿ ಒಟ್ಟು 12 ಕಾಮಗಾರಿಗಳು ಪ್ರಗತಿಯಲ್ಲಿವೆ.
	Total	**47871.70**	**25318.34**	**18834.04**	

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397
ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸಬೇಕಾದ ದಿನಾಂಕ : 22.09.2020
ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನಾಗಠಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಉತ್ತೇಜನಕಾರಿಯಾಗಿ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ;	ನಾಗಠಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕೆ.ಐ.ಎ.ಡಿ.ಬಿ ಅಲಿಯಾಬಾದ ಬ್ಲಾಕ್–1 ಮತ್ತು ಬ್ಲಾಕ್–2ರಲ್ಲಿ ಕ್ಲಿಷ್ಟಕರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ರಸ್ತೆ, ಒಳಚರಂಡಿ, ಮತ್ತು ದಾರಿದೀಪ ಮುಂತಾದ ಸೌಲಭ್ಯಗಳ ಉನ್ನತಿಕರಣಕ್ಕಾಗಿ ಈ ಕೆಳಕಂಡಂತೆ ವರ್ಷವಾರು ಹಣ ಖರ್ಚು ಮಾಡಲಾಗಿದೆ. 1) 2016–17 ನೇ ಸಾಲಿನಲ್ಲಿ ರೂ. 4.35 ಕೋಟಿ ಅನುದಾನ ವೆಚ್ಚ ಮಾಡಲಾಗಿದೆ. 2) 2019–20 ನೇ ಸಾಲಿನಲ್ಲಿ ರೂ. 6.00 ಕೋಟಿ ಅನುದಾನ ಬಿಡುಗಡೆಯಾಗಿದ್ದು ಸದರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮುಕ್ತಾಯ ಹಂತದಲ್ಲಿರುತ್ತವೆ. 3) ಕೆ.ಐ.ಎ.ಡಿ.ಬಿಯಿಂದ ಅಲಿಯಾಬಾದ ಬ್ಲಾಕ್–3ರಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ 339 ಎಕರೆ ಭೂಮಿ ಗುರುತಿಸಿ ಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. 4) ರಾಜೀವಗಾಂಧಿ ವಸತಿ ನಿಗಮದ ವತಿಯಿಂದ ವಿಶೇಷ ಗುಂಪು ಯೋಜನೆಯಡಿ ಬಡಗಿತನದ 25 ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ನಿರ್ಮಾಣದ ಕಾಮಗಾರಿಯು 2019–20ನೇ ಸಾಲಿನಲ್ಲಿ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಶಂಕು ಸ್ಥಾಪನೆಗೊಂಡು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. 5) ಕಳೆದ 3 ವರ್ಷಗಳಲ್ಲಿ ಸದರಿ ವಿಧಾನಸಭಾ ಕ್ಷೇತ್ರದಡಿ ನಿರ್ಮಾಣಗೊಂಡ 17 ಘಟಕಗಳಿಗೆ ರೂ.278.67 ಲಕ್ಷ ಸಹಾಯಧನ ಬಿಡುಗಡೆ ಮಾಡಲಾಗಿದೆ. 6) ಪ್ರಧಾನಮಂತ್ರಿಯವರ ಉದ್ಯೋಗ ಸೃಜನಾ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಒಟ್ಟು 35 ಫಲಾನುಭವಿಗಳಿಗೆ ರೂ.93.24 ಲಕ್ಷಗಳ ಅಂಚುಹಣ ಮಂಜೂರಾತಿಗೆ ಶಿಫಾರಸ್ಸು ಮಾಡಲಾಗಿದೆ. 7) ಮುಖ್ಯಮಂತ್ರಿಯವರ ಸ್ವಯಂ ಉದ್ಯೋಗ ಸೃಜನಾ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಒಟ್ಟು 13 ಫಲಾನುಭವಿಗಳಿಗೆ ರೂ.27.30 ಲಕ್ಷಗಳ ಅಂಚುಹಣ ಮಂಜೂರಾತಿಗೆ ಶಿಫಾರಸ್ಸು ಮಾಡಲಾಗಿದೆ. 8) ವಿಶೇಷ ಘಟಕ ಯೋಜನೆಯಡಿ ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ಶೇ 60 ರಂತೆ ಒಟ್ಟು 19 ಘಟಕಗಳಿಗೆ ರೂ.80.42 ಲಕ್ಷಗಳ ಸಹಾಯಧನ ನೀಡಲಾಗಿದೆ.

ಆ)	ಈ ಪೈಕಿ ಅನುಷ್ಠಾನಗೊಳಿಸಲಾದ ಹಾಗೂ ಅನುಷ್ಠಾನಗೊಳ್ಳದೇ ಇರುವ ಯೋಜನೆಗಳಾವುವು;	ಮೇಲೆ ತಿಳಿಸಿದಂತೆ ಕ್ಲಿಷ್ಟಕರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ರೂ.4.35 ಕೋಟಿ ವೆಚ್ಚದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಹಾಗೂ ರೂ.6.00 ಕೋಟಿ ಕಾಮಗಾರಿಗಳು ಪ್ರಗತಿ ಹಂತದಲ್ಲಿದ್ದು ಸೆಪ್ಟೆಂಬರ್–2020ರ ಹಂತಕ್ಕೆ ಪೂರ್ಣಗೊಳ್ಳಲಿದೆ. ಅನುಷ್ಠಾನಗೊಳ್ಳದೇ ಇರುವ ಪ್ರಕರಣಗಳು ಯಾವುದು ಇರುವುದಿಲ್ಲ.
ಇ)	ಪ್ರಸಕ್ತ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ; (ಸಂಪೂರ್ಣ ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಈ ಕೆಳಗಿನ ಯೋಜನೆಗಳನ್ನು ಹಮ್ಮಿಕೊಂಡಿದೆ. 1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನಾ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. 2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಹಿಳಾ ಉದ್ದಿಮೆದಾರರಿಗೆ ಶೇಕಡ 4ರ ಬಡ್ಡಿದರದಲ್ಲಿ ರೂ.2.00 ಕೋಟಿಯವರೆಗೂ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. 3. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು. 4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು (ಗರಿಷ್ಠ 2 ಎಕರೆ) ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. 5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಠ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ. 6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಠ ರೂ.2.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ

ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಟ ರೂ.33 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.

7. ದಿನಾಂಕ: 01-04-2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳು ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್.ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುತ್ತಿದೆ.

8. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ: 01-04-2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುತ್ತಿದೆ.

9. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.
   1. ಮುದ್ರಾಂಕ ಶುಲ್ಕ ವಿನಾಯಿತಿ
   2. ನೋಂದಣಿ ಶುಲ್ಕ ರಿಯಾಯಿತಿ.
   3. ಬಂಡವಾಳ ಹೂಡಿಕೆ ಸಹಾಯಧನ
   4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ
   5. ಭೂ ಪರಿವರ್ತನಾ ಶುಲ್ಕ ಮರುಪಾವತಿ.
   6. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.
   7. ತ್ಯಾಜ್ಯ ಸಂಸ್ಕರಣಾಘಟಕಗಳ ಸ್ಥಾಪನೆಗೆ ಸಹಾಯಧನ.
   8. ವಿದ್ಯುತ್‌ತೆರಿಗೆ ವಿನಾಯಿತಿ
   9. ತಾಂತ್ರಿಕಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ
   10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ

10. ಕರ್ನಾಟಕ ರಾಜ್ಯ ಕೃಷಿ ವಾಣಿಜ್ಯ ಮತ್ತು ಆಹಾರ ಸಂಸ್ಕರಣಾ ನೀತಿ 2015 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.
   1. ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು
   2. ನೋಂದಣಿ ಶುಲ್ಕ ರಿಯಾಯಿತಿ.
   3. ಬಂಡವಾಳ ಹೂಡಿಕೆ ಸಹಾಯಧನ
   4. ಬಡ್ಡಿ ಸಹಾಯಧನ
   5. ಭೂ ಪರಿವರ್ತನಾ ಶುಲ್ಕ ಮರುಪಾವತಿ.
   6. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.
   7. ತ್ಯಾಜ್ಯ ಸಂಸ್ಕರಣಾ ಘಟಕದ ಸ್ಥಾಪನೆಗೆ ಸಹಾಯಧನ

<table>
<tr>
<td>ಈ)</td>
<td>ಪ್ರಸ್ತುತ ಕರೋನಾ ವೈರಸ್ (ಕೋವಿಡ್-19) ನಿಂದಾಗಿ ಕೆಲಸಗಾರರಿಲ್ಲದೆ ಮುಚ್ಚುವ ಹಂತದಲ್ಲಿರುವ ಸಣ್ಣ ಕೈಗಾರಿಕೆಗಳನ್ನು ಮರಳಿ ಪ್ರಾರಂಭಿಸಲು ಉತ್ತೇಜನ ನೀಡುವ ಸಲುವಾಗಿ ಹಾಗೂ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?</td>
<td>ಕೋವಿಡ್-19 ಲಾಕ್‌ಡೌನ್ ಪರಿಣಾಮವಾಗಿ ತೀವ್ರ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಕ್ಷೇತ್ರವನ್ನು ಪುನಶ್ಚೇತನಗೊಳಿಸಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ.

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.

2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಠ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಠ ಮಿತಿ ರೂ.10,000/-
<table>
<tr><td>1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ</td><td>ಶೇ 1% ರಿಯಾಯಿತಿ</td></tr>
<tr><td>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ</td><td>ಶೇ 0.5% ರಿಯಾಯಿತಿ</td></tr>
<tr><td>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ</td><td>ಯಾವುದೇ ರಿಯಾಯಿತಿ ಇರುವುದಿಲ್ಲ</td></tr>
</table>
3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿರುತ್ತದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.

4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್, ಮೇ ಮತ್ತು ಜೂನ್ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.
<table>
<tr><td>ಏಪ್ರಿಲ್ 2020 ತಿಂಗಳ ಕಂತು</td><td>ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಮೇ 2020 ತಿಂಗಳ ಕಂತು</td><td>ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಜೂನ್ 2020 ತಿಂಗಳ ಕಂತು</td><td>ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
</table>
</td>
</tr>
</table>

ಸಿಐ 115 ಸಿಎಸ್‌ಸಿ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 400
2. ಸದಸ್ಯರ ಹೆಸರು : ಶ್ರೀ ಗೌರಿಶಂಕರ್ ಡಿ.ಸಿ.(ತುಮಕೂರು ಗ್ರಾಮಾಂತರ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗೆ ಎತ್ತಿನಹೊಳೆ ಯೋಜನೆಯಡಿ ನೀರು ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಈ ಕೆರೆಗಳಿಗೆ ನೀರು ತುಂಬಿಸಲು ಯಾವ ಭಾಗದಲ್ಲಿ ತೂಬೂ ತೆಗೆಯಲಾಗುವುದು;	ಸಣ್ಣ ನೀರಾವರಿ ಇಲಾಖೆಯೊಂದಿಗೆ ಈ ಕುರಿತು ಚರ್ಚಿಸಿ, ನಂತರ ತೂಬುಗಳಿಗಾಗಿ ತಾಂತ್ರಿಕವಾಗಿ ಸೂಕ್ತ ಸ್ಥಳಗಳನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುವುದು.
ಇ)	ಈ ಯೋಜನೆಗೆ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು);	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಮಂಜೂರು ಮಾಡಿದ ಅನುದಾನ ಮತ್ತು ಬಿಡುಗಡೆ ಮಾಡಿದ ಮೊತ್ತದ ವಿವರಗಳು ಈ ಕೆಳಗಿನಂತಿದೆ: (ರೂ. ಕೋಟಿಗಳಲ್ಲಿ) (ಕೆಳಗಿನ ಕೋಷ್ಟಕ)
ಈ)	ಈ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ? (ವಿವರಗಳನ್ನು ನೀಡುವುದು)	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಕುಡಿಯುವ ನೀರು ಪೂರೈಸಲು ಮತ್ತು ಕೆರೆ ತುಂಬಿಸಲು ಗುರುತ್ವ ಕಾಲುವೆ ಮತ್ತು ಫೀಡರ್ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಂದುವರೆದು ನೀರು ತುಂಬಿಸಲು ಯೋಜಿಸಲಾದ ಕೆರೆಗಳ ಪುನಶ್ಚೇತನ ಕಾಮಗಾರಿಗಳಿಗಾಗಿ ಪ್ರಾಥಮಿಕ ಹಂತದ ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಂಡು ವಿವರವಾದ ಅಂದಾಜು ಪಟ್ಟಿ ಮತ್ತು ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕ ಸಂಸ್ಥೆಗೆ ಫೆಬ್ರವರಿ-2020ರಲ್ಲಿ ವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ	ವರ್ಷ	ಅನುದಾನ	ಬಿಡುಗಡೆ
1	2017-18	895.00	930.94
2	2018-19	1018.00	1550.95
3	2019-20	1107.68	1936.23

ಸಂಖ್ಯೆ: ಜಸಂಇ 75 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 402
2. ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
3. ಉತ್ತರಿಸುವ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಶ್ರವಣಬೆಳಗೊಳ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಿಗೆ ಒದಗಿಸಿರುವ ಪೊಲೀಸ್ ವಾಹನಗಳು ತುಂಬಾ ಹಳೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶ್ರವಣಬೆಳಗೊಳದ ವಿಧಾನಸಭಾ ಕ್ಷೇತ್ರದ ಚನ್ನರಾಯಪಟ್ಟಣ ಟೌನ್, ಗ್ರಾಮಾಂತರ ಮತ್ತು ಹಿರೀಸಾವೆ, ನುಗ್ಗೇಹಳ್ಳಿ ಮತ್ತು ಶ್ರವಣಬೆಳಗೊಳ ಪೊಲೀಸ್ ಠಾಣೆಗಳಿಗೆ ಹಂಚಿಕೆ ಮಾಡಲಾಗಿರುವ ಪೊಲೀಸ್ ವಾಹನಗಳು ಪ್ರಸ್ತುತ ಸುಸ್ಥಿತಿಯಲ್ಲಿದ್ದು, ಚಾಲನೆಯಲ್ಲಿರುತ್ತವೆ.
ಆ	ಹಾಗಿದ್ದಲ್ಲಿ, ಹೊಸ ವಾಹನಗಳನ್ನು ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ ; ಹಾಗಿದ್ದಲ್ಲಿ, ಇದುವರೆವಿಗೂ ಹೊಸ ವಾಹನಗಳನ್ನು ಒದಗಿಸದಿರಲು ಕಾರಣಗಳೇನು?	ಇಲ್ಲಾ.
ಇ	ಪ್ರಸಕ್ತ ಸಾಲಿನಲ್ಲಿ ಹೊಸ ವಾಹನಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು?	ಉದ್ಭವಿಸುವುದಿಲ್ಲ

ಸಂಖ್ಯೆ:ಹೆಚ್‌ಡಿ 37 ಇಎಂವಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 403
2. ಸದಸ್ಯರ ಹೆಸರು : ಶ್ರೀ ಸಿ.ಎನ್.ಬಾಲಕೃಷ್ಣ (ಶ್ರವಣಬೆಳಗೊಳ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಜ್ಯ ಹಣಕಾಸು ನಿಗಮದ ವತಿಯಿಂದ ಅನುದಾನವನ್ನು ತಡೆಹಿಡಿದಿರುವುದರಿಂದ ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವತಿಯಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಯಾವುದೇ ರೀತಿಯ ಅನುದಾನ ಬಿಡುಗಡೆ ಮಾಡುವುದಿಲ್ಲ.

ಆದರೆ, ಹೊಸದಾಗಿ ಉದ್ದಿಮೆಯನ್ನು ಸ್ಥಾಪಿಸುವವರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಬಡ್ಡಿ ಸಹಾಯಧನದ ಸವಲತ್ತುಗಳು ಲಭ್ಯವಿರುತ್ತದೆ. ಇದರನ್ವಯ ಪ್ರಸಕ್ತ ವರ್ಷ–2020–21 (ಏಪ್ರಿಲ್ 2020 ರಿಂದ ಆಗಸ್ಟ್ 2020ರವರೆಗೆ) ರಲ್ಲಿ ರಾಜ್ಯ ಸರ್ಕಾರ ಹಲವು ಯೋಜನೆಗಳಡಿಯಲ್ಲಿ ಬಡ್ಡಿ ಸಹಾಯಧನದ ನೆರವನ್ನು ಒದಗಿಸಿದ್ದು, ಅವುಗಳು ಈ ಕೆಳಗಿನಂತಿವೆ:

<table><tr><td>ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ</td><td>10.00 ಕೋಟಿ ರೂ.ಗಳು</td></tr><tr><td>ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ</td><td>3.00 ಕೋಟಿ ರೂ.ಗಳು</td></tr><tr><td>ಮಹಿಳಾ ಉದ್ದಿಮೆದಾರರಿಗೆ</td><td>16.67 ಕೋಟಿ ರೂ.ಗಳು</td></tr><tr><td>ಸಾಮಾನ್ಯ ವರ್ಗದವರಿಗೆ ಬಡ್ಡಿ ಸಹಾಯಧನ ಯೋಜನೆ</td><td>12.50 ಕೋಟಿ ರೂ.ಗಳು</td></tr></table></td></tr>
<tr><td>ಆ) ಹಾಗಿದ್ದಲ್ಲಿ, ತಡೆಹಿಡಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ ಹಾಗೂ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?</td><td>ಅನ್ವಯಿಸುವುದಿಲ್ಲ.</td></tr>
</table>

ಆಇ 01 ಬಿಎಫ್ ಸಿ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 404
2) ಸದಸ್ಯರ ಹೆಸರು : ಶ್ರೀ ಸೋಮಶೇಖರ ರೆಡ್ಡಿ ಜಿ.
3) ಉತ್ತರಿಸಬೇಕಾದ ದಿನಾಂಕ : 22.09.2020
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ನಗರಕ್ಕೆ ವಿಮಾನ ನಿಲ್ದಾಣ ಮಂಜೂರು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಳ್ಳಾರಿ ನಗರಕ್ಕೆ ವಿಮಾನ ನಿಲ್ದಾಣ ಮಂಜೂರು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಈ ನಿಲ್ದಾಣದ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ;	ಬಳ್ಳಾರಿಯ ಜಿಲ್ಲೆಯ ಸಿರಿವಾರ ಮತ್ತು ಚಾಗನೂರು ಹಳ್ಳಿಗಳಲ್ಲಿ ಸುಮಾರು 900 ಎಕರೆ ಜಮೀನನ್ನು ವಿಮಾನ ನಿಲ್ದಾಣದ ಸ್ಥಾಪನೆಗಾಗಿ ಕೆಐಎಡಿಬಿ ಮೂಲಕ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇದರಲ್ಲಿ ಸುಮಾರು 87 ಎಕರೆ ವಿಸ್ತೀರ್ಣವು ನ್ಯಾಯಾಲಯದಲ್ಲಿ ವ್ಯಾಜ್ಯದಲ್ಲಿದ್ದು, ಸುಮಾರು 40 ಎಕರೆ ಭೂಮಿಯನ್ನು ನ್ಯಾಯಾಲಯವು ತೆರವುಗೊಳಿಸಿದೆ ಮತ್ತು 47.22 ಎಕರೆ ಭೂಮಿಗೆ ಸಂಬಂಧಿಸಿದಂತೆ ನ್ಯಾಯಾಲಯವು ವ್ಯಾಜ್ಯವನ್ನು ಪರಿಹರಿಸಬೇಕಿದ್ದು, ಇದೂ ಸಹ ಶೀಘ್ರದಲ್ಲಿ ತೆರವುಗೊಳ್ಳುವ ನಿರೀಕ್ಷೆಯಲ್ಲಿದ್ದು. ಸಂಪೂರ್ಣ ಭೂಮಿಯನ್ನು ದಾವೆಗಳಿಂದ ಮತ್ತು ಕೃಷಿ ಚಟುವಟಿಕೆಗಳಿಂದ ತೆರವುಗೊಳಿಸಿದ ನಂತರ ಆಯ್ಕೆಯಾಗಿರುವ ಅಭಿವರ್ಧಕರಾದ ಮೆ॥ಮಾರ್ಗ್ ಲಿಮಿಟೆಡ್ ಇವರು ವಿಮಾನ ನಿಲ್ದಾಣದ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.
ಇ)	ಸದರಿ ಕಾಮಗಾರಿಗೆ ತಗಲಬಹುದಾದ ಅಂದಾಜು ಮೊತ್ತವೆಷ್ಟು;	ಬಳ್ಳಾರಿ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಆಯ್ಕೆಯಾಗಿರುವ ಅಭಿವರ್ಧಕರಾದ ಮೆ॥ಮಾರ್ಗ್ ಲಿಮಿಟೆಡ್‌ರವರೊಂದಿಗಿನ ಒಪ್ಪಂದದ ಪ್ರಕಾರ ಯಾವುದೇ ಹಣ ಸಹಾಯವಿಲ್ಲದೇ ವಿಮಾನ ನಿಲ್ದಾಣದ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಳ್ಳಬೇಕಿರುತ್ತದೆ.
ಈ)	ಯಾವ ಕಾಲಮಿತಿಯೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು;	ವಿಮಾನ ನಿಲ್ದಾಣದ ಕಾಮಗಾರಿಯು ಸುಮಾರು ಎರಡು ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.
ಉ)	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ: ಮೂಅಇ 124 ರಾಅವಿ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 405
2] ಮಾನ್ಯ ಸದಸ್ಯರ ಹೆಸರು : ಶ್ರೀ ನಾಗೇಂದ್ರ ಎಲ್ (ಚಾಮರಾಜ)
3] ಉತ್ತರಿಸುವ ದಿನಾಂಕ : 22.09.2020.
4] ಉತ್ತರಿಸುವ ಸಚಿವರು : ಗೃಹ ಸ4ಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ನಗರದಲ್ಲಿರುವ ದೇವರಾಜ ಪೊಲೀಸ್ ಠಾಣೆಯ ಕಟ್ಟಡವು ಕೆ.ಆರ್ ಆಸ್ಪತ್ರೆಯ ಆವರಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಈ ಠಾಣೆಗೆ ಪ್ರತ್ಯೇಕವಾದ ಕಟ್ಟಡವನ್ನು ನಿರ್ಮಿಸಲು ಸ್ಥಳವನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ ಎಲ್ಲಿ ಗುರುತಿಸಲಾಗಿದೆ;	ಸರ್ಕಾರದ ಆದೇಶ ಸಂಖ್ಯೆ: ಕಂಇ/45/ಮುಆಬಿ/2016, ದಿನಾಂಕ:28.02.2018 ರಲ್ಲಿ ಮೈಸೂರು ನಗರದ ಶ್ರೀ ನಂಜರಾಜ ಬಹದ್ದೂರ್ ಛತ್ರದ ಪೂರ್ವ ಭಾಗದಲ್ಲಿ ಖಾಲಿ ಇರುವ 150*150 ಅಡಿ ನಿವೇಶನವನ್ನು ದೇವರಾಜ ಪೊಲೀಸ್ ಠಾಣೆಗೆ ಸ್ಥಳೀಯ ಮಾರುಕಟ್ಟೆ ದರದಂತೆ ಮಾಸಿಕ ಬಾಡಿಗೆ ಆಧಾರದಲ್ಲಿ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ ಆದೇಶಿಸಲಾಗಿರುತ್ತದೆ. ಸದರಿ ನಿವೇಶನವನ್ನು ಪೊಲೀಸ್ ಇಲಾಖೆಗೆ ಖರೀದಿಸುವ ಕುರಿತು ಮಾರ್ಪಾಟು ಆದೇಶಕ್ಕಾಗಿ ಪೊಲೀಸ್ ಆಯುಕ್ತರು, ಮೈಸೂರು ನಗರ ಇವರು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ರವರೊಂದಿಗೆ ಪತ್ರ ವ್ಯವಹರಿಸಿದ್ದು, ಈ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.
ಇ)	ಕಟ್ಟಡ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗಿದೆಯೇ (ವಿವರ ನೀಡುವುದು)	ಸದರಿ ಕಟ್ಟಡ ಕಾಮಗಾರಿ ನಿರ್ಮಾಣದ ಕುರಿತಂತೆ ಅನುದಾನದ ಲಭ್ಯತೆಯನುಸಾರ ಬಿಡುಗಡೆಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಹೆಚ್‌ಡಿ 77 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

(51)

ಕರ್ನಾಟಕ ವಿಧಾನಸಭೆ

1). ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 406
2). ಸದಸ್ಯರ ಹೆಸರು : ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ)
3). ಉತ್ತರಿಸುವ ದಿನಾಂಕ : 22.09.2020
4). ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿಗೆ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
(ಆ)	ಈ ಅನುದಾನವನ್ನು ತಡೆಹಿಡಿದಿರುವುದಕ್ಕೆ ಕಾರಣಗಳೇನು;	ಆರ್ಥಿಕ ಇಲಾಖೆಯ ಆದೇಶದಂತೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿನ ಆರಂಭಿಕ ಶಿಲ್ಕು ಮತ್ತು ಬಿಡುಗಡೆಯಾಗಿರುವ ಅನುದಾನ ಸೇರಿ ಒಟ್ಟಾರೆ ಲಭ್ಯವಿರುವ ಅನುದಾನದಲ್ಲಿ ಶೇ 75 ರಷ್ಟು ವೆಚ್ಚವಾಗದೇ ಇರುವುದರಿಂದ ಉಳಿದ ಕಂತುಗಳನ್ನು ತಡೆಹಿಡಿಯಲಾಗುತ್ತದೆ.
(ಇ)	ಈ ಸದರಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;	ಪ್ರಸ್ತುತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.10.51 ಕೋಟಿಗಳಲ್ಲಿ ಶೇ 75 ರಷ್ಟು ಅನುದಾನವನ್ನು ವೆಚ್ಚ ಮಾಡಿದಾಗ ಆರ್ಥಿಕ ಇಲಾಖೆಯ ಆದೇಶದಂತೆ ಉಳಿದ ಅನುದಾವನ್ನು ಬಿಡುಗಡೆಮಾಡಲಾಗುವುದು.
(ಈ)	2020-21ನೇ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಸರ್ಕಾರದ ಆದೇಶ ಸಂಖ್ಯೆ:ಪಿಡಿಎಸ್ 57 ಕೆಎಲ್ ಎಸ್ 2020, ದಿನಾಂಕ:18.09.2020 ರಂದು 2020-21ನೇ ಸಾಲಿಗೆ ಮೊದಲನೆಯ ಕಂತಿನ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ತಲಾ ರೂ.50.00 ಲಕ್ಷಗಳಂತೆ ಒಟ್ಟಾರೆ ರೂ.141.00ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.

ಸಂಖ್ಯೆ: ಪಿಡಿಎಸ್ 56 ಕೆಎಲ್ಎಸ್ 2020

(ಬಿ.ಎಸ್.ಯಡಿಯೂರಪ್ಪ),
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	552
ಸದಸ್ಯರ ಹೆಸರು	:	ಶ್ರೀ.ಈಶ್ವರ್ ಖಂಡ್ರೆ (ಭಾಲ್ಕಿ)
ಉತ್ತರಿಸುವ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	2019-20ನೇ ಸಾಲಿನ ಆಯವ್ಯಯದಲ್ಲಿ ಮಾಂಜ್ರಾ ನದಿಯಿಂದ ಭಾಲ್ಕಿ ತಾಲ್ಲೂಕಿನ ಮೇಹಕರ್ ಗ್ರಾಮದ ಹತ್ತಿರದಿಂದ 1.0 ಟಿ.ಎಂ.ಸಿ. ನೀರು ಎತ್ತಿ ನೀರಾವರಿ ಕಲ್ಪಿಸುವ ಯೋಜನೆಗೆ ಮಂಜೂರಾತಿ ದೊರಕಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ಕ್ರಮ ಕೈಗೊಂಡಿರುವ ಹಾಗೂ ಕಾಮಗಾರಿಯ ಪ್ರಸ್ತುತ ಹಂತ ಮತ್ತು ಮುಕ್ತಾಯ ಮಾಡುವ ಅವಧಿಗಳ ವಿವರ ಒದಗಿಸುವುದು?	2019-20ನೇ ಸಾಲಿನ ಆಯವ್ಯಯದಲ್ಲಿನ ಘೋಷಣೆಯಂತೆ ಮಾಂಜ್ರಾ ನದಿಯಿಂದ ಭಾಲ್ಕಿ ತಾಲ್ಲೂಕಿನ ಮೇಹಕರ್ ಗ್ರಾಮದ ಹತ್ತಿರದಿಂದ 1.00 ಟಿ.ಎಂ.ಸಿ. ನೀರನ್ನೆತ್ತಿ ನೀರಾವರಿ ಕಲ್ಪಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಪ್ರಸ್ತಾವನೆಯು ನಿಗಮದ ಪರಿಶೀಲನಾ ಹಂತದಲ್ಲಿರುತ್ತದೆ.

ಸಂಖ್ಯೆ:ಜಸಂಇ 94 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು,

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 558

2) ಸದಸ್ಯರ ಹೆಸರು : ಶ್ರೀ ಲಿಂಗೇಶ್ ಕೆ.ಎಸ್.

3) ಉತ್ತರಿಸಬೇಕಾದ ದಿನಾಂಕ : 22.09.2020

4) ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೇಲೂರು ತಾಲ್ಲೂಕಿನ ಹೆಬ್ಬಾಳು ಏತ ನೀರಾವರಿ ಯೋಜನೆ ಜಾರಿಗೆ ಸಲ್ಲಿಸಿರುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಹೆಬ್ಬಾಳು, ರಾಜನಶಿರಿಯೂರು ಮತ್ತು ಇಬ್ಬೀಡು ಪಂಚಾಯಿತಿ ವ್ಯಾಪ್ತಿಯಲ್ಲಿನ ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಏತ ನೀರಾವರಿ ಯೋಜನೆಯ ಡಿ.ಪಿ.ಆರ್.ನ್ನು ರೂ.4000.00 ಲಕ್ಷಗಳಿಗೆ ತಯಾರಿಸಿದ್ದು, ಅಂದಾಜು ಪಟ್ಟಿಯನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ (ಟಿ.ಎ.ಸಿ.) ಮುಂದೆ ಮಂಡಿಸಿ ತೀರುವಳಿ ಪಡೆಯಲು ಕ್ರಮವಹಿಸಲಾಗುವುದು.
ಆ	2020-21 ನೇ ಸಾಲಿನಲ್ಲಿ ಈ ಯೋಜನೆ ಜಾರಿಯ ಪ್ರಕ್ರಿಯೆಯನ್ನು ಆರಂಭಿಸಲಾಗುವುದೇ?	2020-21ನೇ ಸಾಲಿನಲ್ಲಿ ಅನುದಾನ ಲಭ್ಯತೆಯನುಸಾರ ಮತ್ತು ಆದ್ಯತೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಸನೀಇ 133 ವಿಸವಿ 2020.

(ಜೆ.ಸಿ ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	560
ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

***

	ಪ್ರಶ್ನೆ		ಉತ್ತರ
ಅ)	ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ Section Office ಗಳನ್ನು ತೆರೆಯಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಅ)	ಚಾವಿಸನಿನಿಯ ವ್ಯಾಪ್ತಿಯಲ್ಲಿರುವ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಶಾಖಾ ಕಛೇರಿ/ಉಪವಿಭಾಗಗಳನ್ನು ಹೊಸದಾಗಿ ರಚಿಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ಪ್ರಸ್ತಾವನೆ ಇರುತ್ತದೆ.
ಆ)	ಬಂದಿದ್ದಲ್ಲಿ, ಕೋಳಗುಂದ ಗೇರಮರ, ಗಂಗೂರು, ಹೆಬ್ಬಾಳು, ಬಿಕ್ಕೋಡು ಭಾಗಗಳಲ್ಲಿ Section Office ಗಳನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ;	ಆ)	ನಿಗಮದಲ್ಲಿ ಸದರಿ ಪ್ರಸ್ತಾವನೆಗಳು ಪರಿಶೀಲನಾ ಹಂತದಲ್ಲಿದ್ದು, ಮುಂಬರುವ ಮಂಡಳಿ ಸಭೆಯಲ್ಲಿ ಮಂಡಿಸಬೇಕಾಗಿರುತ್ತದೆ.
ಇ)	ಬೇಲೂರು ತಾಲ್ಲೂಕಿನ ಹಳೇಬೀಡು ಪಟ್ಟಣಕ್ಕೆ ಚೆಸ್ಕಾಂ/ ಸೆಸ್ಕ್ ಉಪವಿಭಾಗದ ಕಛೇರಿ ತೆರೆಯಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಯಾವ ಕಾಲ ಮಿತಿಯೊಳಗೆ ಮಂಜೂರಾತಿಗೆ ಕ್ರಮ ಜರುಗಿಸಲಾಗುವುದು ? (ವಿವರ ನೀಡುವುದು)		

ಸಂಖ್ಯೆ: ಎನರ್ಜಿ 116 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	567
ಸದಸ್ಯರ ಹೆಸರು	:	ಶ್ರೀ ಅಂಗಾರ ಎಸ್. (ಸುಳ್ಯ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಪುತ್ತೂರಿನ ನೆಟ್ಲಮುಡ್ನೂರಿನಿಂದ ಸುಳ್ಯಕ್ಕೆ 110/333 ಕೆ.ವಿ. ಲೈನ್ ವಿದ್ಯುತ್ ಪ್ರಸರಣದ ಮಾರ್ಗವು 2010ನೇ ಸಾಲಿನಲ್ಲಿ ಮಂಜೂರುಗೊಂಡು ಮಾಡಾವು 110/33 ಸ್ಟೇಷನ್ ಕಾಮಗಾರಿ ಪೂರ್ತಿಗೊಂಡು, ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದರೂ, ಮಾಡಾವುನಿಂದ ಸುಳ್ಯಕ್ಕೆ 110/33 ಕೆ.ವಿ ಲೈನ್ ಕಾಮಗಾರಿ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸುಳ್ಯದಲ್ಲಿ ಹಾಲಿ ಇರುವ 2*5 ಎಂವಿಎ 33/11 ಕೆ.ವಿ ವಿದ್ಯುತ್ ಕೇಂದ್ರವನ್ನು, 1*10 ಎಂವಿಎ 110/33 ಕೆ.ವಿ ಮತ್ತು 1*10 ಎಂವಿಎ 110/11 ಕೆ.ವಿ.ಗೆ ಉನ್ನತೀಕರಿಸುವುದು ಹಾಗೂ ನೆಟ್ಲಮುಡ್ನೂರಿನಿಂದ ಮಾಡಾವುವರೆಗೂ 110 ಕೆ.ವಿ ವಿದ್ಯುತ್ ಮಾರ್ಗವನ್ನು ವಿಸ್ತರಿಸಿ ಮಾಡಾವಿನಲ್ಲಿ 110 ಕೆ.ವಿ ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಿ, ತದನಂತರ ಮಡಾವುವಿನಿಂದ ಸುಳ್ಯದವರೆಗೂ 110 ಕೆ.ವಿ ವಿದ್ಯುತ್ ಮಾರ್ಗವನ್ನು ನಿರ್ಮಾಣಗೊಳಿಸುವ ಯೋಜನೆಯನ್ನು 2010ನೇ ಸಾಲಿನಲ್ಲಿ 1492.02 ಲಕ್ಷ ರೂ. ಗಳ ವೆಚ್ಚದಲ್ಲಿ ಪ್ರಾರಂಭಿಸಲು ಕಪಿಪ್ರನಿನಿ ವತಿಯಿಂದ ಪರಿಷ್ಕೃತ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಮಡಾವು 110/33 ಕೆ.ವಿ ವಿದ್ಯುತ್ ಉಪ-ಕೇಂದ್ರದ ಕಾಮಗಾರಿಯು ಪೂರ್ಣಗೊಂಡು, ದಿನಾಂಕ: 16.05.2020 ರಂದು ಚಾಲನೆಗೊಳಿಸಲಾಗಿದೆ. ಮಡಾವುನಿಂದ ಸುಳ್ಯಕ್ಕೆ 110 ಕೆ.ವಿ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿಯ ಅರಣ್ಯ ಪ್ರಸ್ತಾವನೆಗೆ ಅನುಮೋದನೆ ದೊರಕದೇ ಇರುವ ಕಾರಣ ಪ್ರಸರಣ ಮಾರ್ಗದ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ.
ಆ)	ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ಪ್ರಾರಂಭಿಸಲಗಿರುವುದಿಲ್ಲ ; ಎಷ್ಟು ಸಮಯದಲ್ಲಿ ಪ್ರಾರಂಭಿಸಲಾಗುವುದು ? (ವಿವರ ನೀಡುವುದು)	ಮಾಡಾವುನಿಂದ ಸುಳ್ಯಕ್ಕೆ ಮಂಜೂರಾಗಿರುವ 110 ಕೆ.ವಿ ಪ್ರಸರಣ ಮಾರ್ಗ ನಿರ್ಮಾಣದ ಕಾಮಗಾರಿಗೆ, 6.745 ಹೆಕ್ಟೇರ್ ಅರಣ್ಯ ಭೂಮಿಯ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಆನ್‌ಲೈನ್‌ನಲ್ಲಿ 02.03.2017 ರಂದು ಸಲ್ಲಿಸಲಾಗಿತ್ತು. ಅರಣ್ಯ ಇಲಾಖೆಯ ನಿರ್ದೇಶನದಂತೆ ಹಲವಾರು ಬಾರಿ ಪ್ರಸ್ತಾವನೆಯನ್ನು ಪರಿಷ್ಕರಿಸಿ, ಪ್ರಸರಣ ಮಾರ್ಗ ಹಾದುಹೋಗುವ ಪಕ್ತೀಂಕರಣದಲ್ಲಿ ಗ್ರಾಮವಾರು ಸರ್ವೆ ನಂಬರ್‌ನ ವಿಸ್ತೀರ್ಣದೊಂದಿಗೆ ನ್ಯೂನ್ಯತೆಯನ್ನು ಸರಿಪಡಿಸಿ 8.896 ಹೆಕ್ಟೇರ್ ಅರಣ್ಯ ಭೂಮಿಯ ಬಿಡುಗಡೆಗಾಗಿ ಅರಣ್ಯ ಪ್ರಸ್ತಾವನೆಯನ್ನು ದಿನಾಂಕ 01.04.2019 ರಂದು ಮರುಸಲ್ಲಿಸಲಾಯಿತು. ನಂತರ ಈ ಪ್ರಸ್ತಾವನೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರು ದಿನಾಂಕ 03.06.2019ರಂದು ವಲಯ ಅರಣ್ಯಾಧಿಕಾರಿ, ಪುತ್ತೂರು ಇವರಿಗೆ ಪರಿಶೀಲನೆ ಮಾಡಿ ವಿಸ್ತೃತ ವರದಿ ಸಲ್ಲಿಸುವಂತೆ ತಿಳಿಸಿರುತ್ತಾರೆ.

...2

		ಕವಿಪ್ರನಿನಿ ವತಿಯಿಂದ ಮತ್ತು ವಲಯ ಅರಣ್ಯಾಧಿಕಾರಿ, ಪುತ್ತೂರು/ಸುಳ್ಯ ಇವರೊಂದಿಗೆ ಜಂಟಿಯಾಗಿ ಸದರಿ ಪ್ರಸ್ತಾವನೆಯ ಸ್ಥಳ ಪರಿಶೀಲನೆ ನಡೆಸಲಾಗಿರುತ್ತದೆ ಹಾಗೂ ಅರಣ್ಯ ಮರಗಳ ಎಣಿಕೆ ಪಟ್ಟಿಯನ್ನು ಕೂಡ ತಯಾರಿಸಲಾಗಿರುತ್ತದೆ. ವಲಯ ಅರಣ್ಯಾಧಿಕಾರಿ, ಪುತ್ತೂರು/ಸುಳ್ಯ ರವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಇದರ ವಿಸ್ತೃತವಾದ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪುತ್ತೂರು ಮುಖಾಂತರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರು ಸದರಿ ಪ್ರಸ್ತಾವನೆಯನ್ನು ದಿನಾಂಕ 13.11.2019 ರಂದು ಹಿಂತಿರುಗಿಸಿ ಪ್ರಸ್ತಾವನೆಯ ವಿಸ್ತೀರ್ಣವು 8.896 ಹೆಕ್ಟೇರ್ ಅರಣ್ಯ ಪ್ರದೇಶದ ಬದಲಾಗಿ 14.694 ಹೆಕ್ಟೇರ್ ವಿಸ್ತೀರ್ಣ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಈಗ ಹೇಳಲಾದ 14.694 ಹೆಕ್ಟೇರ್ ಅರಣ್ಯ ಪ್ರದೇಶದ ವಿಸ್ತೀರ್ಣವು ಡೀಮ್ಡ್ ಅರಣ್ಯ (ಖಾಸಗಿ ಆಕ್ರಮಿತ) ಪ್ರದೇಶವಾದ 5.798 ಹೆಕ್ಟೇರ್ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ. ಈ ವಿಸ್ತೀರ್ಣವನ್ನು ಕೂಡ ಸೇರಿಸಬೇಕೆಂದು ತಿಳಿಸಿರುತ್ತಾರೆ. ಆದರೆ ಈ ಡೀಮ್ಡ್ ಅರಣ್ಯ ವಿಸ್ತೀರ್ಣದ (ಖಾಸಗಿ ಆಕ್ರಮಿತ) 5.798 ಹೆಕ್ಟೇರ್ ಪ್ರದೇಶದ ಪೂರಕವಾದ ಯಾವುದೇ ನಕ್ಷೆಯನ್ನು ಒದಗಿಸಿರುವುದಿಲ್ಲ. ಪ್ರಸ್ತುತ 5.798 ಹೆಕ್ಟೇರ್ ಎಂದು ಹೇಳಲಾದ (ಖಾಸಗಿ ಆಕ್ರಮಿತ) ಡೀಮ್ಡ್ ಅರಣ್ಯ ಪ್ರದೇಶದ ಗ್ರಾಮವಾರು ಸರ್ವೆನಂಬರ್‌ಗಳ ಜಿಪಿಎಸ್ ದತ್ತಾಂಶ ಒಳಗೊಂಡ ನಕ್ಷೆಗಳು ಕವಿಪ್ರನಿನಿ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ಇವುಗಳ ಮಾಹಿತಿಯನ್ನು ಅರಣ್ಯ ಇಲಾಖೆಯು ಒದಗಿಸಿರುವುದಿಲ್ಲ. ಈ ಕಾರಣದಿಂದಾಗಿ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮೇಲೆ ಹೇಳಲಾದ ಡೀಮ್ಡ್ ಅರಣ್ಯ ಪ್ರದೇಶದ ಗ್ರಾಮವಾರು ಸರ್ವೆ ನಂಬರುಗಳ ವಿದ್ಯುತ್ ಪ್ರಸರಣ ಮಾರ್ಗದ 22 ಮೀ ಕಾರಿಡಾರಿನಡಿ ಬರುವ ನಕ್ಷೆಯನ್ನು ತಯಾರಿಸುವ ಅವಶ್ಯಕತೆ ಇರುತ್ತದೆ. ಸದರಿ ಸರ್ವೆಕಾರ್ಯವನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ತಯಾರಿಸಿ ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ಎರಡು ಬಾರಿ ಟೆಂಡರ್ ಕರೆಯಲಾಗಿದ್ದರೂ ಯಾವುದೇ ಏಜೆನ್ಸಿಯು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ಪುನಃ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಸಂಖ್ಯೆ: ಎನರ್ಜಿ 118 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

①

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 570
2. ಸದಸ್ಯರ ಹೆಸರು : ಶ್ರೀ ರಾಜ್‌ಕುಮಾರ್ ಪಾಟೀಲ್,
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ವಿಶ್ವ ವಿದ್ಯಾಲಯಗಳನ್ನು ಹೊರತುಪಡಿಸಿ, ಇತರೆ ಜಿಲ್ಲೆಗಳ ವಿಶ್ವವಿದ್ಯಾಲಯಗಳಲ್ಲಿ ಅನುಚ್ಛೇಧ 371ಜೆ ಪ್ರಕಾರ ಶೇಕಡ 8ರ ಮಿಸಲಾತಿಯನ್ನು ನೇಮಕಾತಿ ಹಾಗೂ ಮುಂಬಡ್ತಿಯಲ್ಲಿ ಪಾಲಿಸಲಾಗುತ್ತಿದೆಯೇ:	ಹೌದು
(ಆ)	ಹಾಗಿದ್ದಲ್ಲಿ, ಇತರೆ ಜಿಲ್ಲೆಗಳಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಶೇಕಡ 8ರ ಮೀಸಲಾತಿಯನ್ನು ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ನೀಡಿರುವ ಮಾಹಿತಿ ನೀಡುವುದು? (ವೃಂದವಾರು ಹುದ್ದೆಗಳ ವಿವರ ನೀಡುವುದು)	ಕಲ್ಯಾಣ ಕರ್ನಾಟಕ ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಶೇ 8 ರಂತೆ ಮೀಸಲಾತಿಯನ್ನು ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ನೀಡಿರುವ ಮಾಹಿತಿಯು ಈ ಕೆಳಕಂಡಂತಿರುತ್ತದೆ.

ವೃಂದ	ನೇ. ನೇ.	ಮುಂಬಡ್ತಿ	ಒಟ್ಟು
ಗ್ರೂಪ್-ಎ	399	31	430
ಗ್ರೂಪ್-ಬಿ	112	39	151
ಗ್ರೂಪ್-ಸಿ	469	191	660
ಗ್ರೂಪ್-ಡಿ	308	57	365
ಒಟ್ಟು	1288	318	1606

ವಿಶ್ವವಿದ್ಯಾನಿಲಯವಾರು ಮೀಸಲರಿಸಿರುವ ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಸಂಖ್ಯೆ: ಸಿಆಸುಇ 142 ಹೈಕಕೋ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಅನುಬಂಧ

Q. No. 570.

ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗಿರುವ ವಿಶ್ವವಿದ್ಯಾನಿಲಯಗಳಲ್ಲಿ ಭಾರತ ಸಂವಿಧಾನದ ಅನುಚ್ಛೇಧ 371(ಜೆ) ರನ್ವಯ ನೇರ ನೇಮಕಾತಿ / ಮುಂಬಡ್ತಿಯಲ್ಲಿ ಮೀಸಲಿರಿಸಿರುವ ಹುದ್ದೆಗಳ ವಿವರ

ಕ್ರ. ಸಂ.	ವಿಶ್ವ ವಿದ್ಯಾನಿಲಯಗಳು	ವೃಂದ	ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ಹುದ್ದೆಗಳು		
			ನೇ.ನೇ.	ಮುಂಬಡ್ತಿ	ಒಟ್ಟು
1	ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ, ಮೈಸೂರು	ಗ್ರೂಪ್-ಎ	3		3
		ಗ್ರೂಪ್-ಬಿ			0
		ಗ್ರೂಪ್-ಸಿ			0
		ಗ್ರೂಪ್-ಡಿ			0
		ಒಟ್ಟು	3	0	3
2	ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು	ಗ್ರೂಪ್-ಎ	7		7
		ಗ್ರೂಪ್-ಬಿ	3		3
		ಗ್ರೂಪ್-ಸಿ	6		6
		ಗ್ರೂಪ್-ಡಿ			0
		ಒಟ್ಟು	**16**	0	**16**
3	ಬೆಂಗಳೂರು ವಿಶ್ವವಿದ್ಯಾನಿಲಯ	ಗ್ರೂಪ್-ಎ			0
		ಗ್ರೂಪ್-ಬಿ	30	2	32
		ಗ್ರೂಪ್-ಸಿ	41	24	65
		ಗ್ರೂಪ್-ಡಿ	52	3	55
		ಒಟ್ಟು	**123**	**29**	**152**
4	ಮೈಸೂರು ವಿಶ್ವವಿದ್ಯಾನಿಲಯ	ಗ್ರೂಪ್-ಎ	17	1	18
		ಗ್ರೂಪ್-ಬಿ	37	4	41
		ಗ್ರೂಪ್-ಸಿ	72	20	92
		ಗ್ರೂಪ್-ಡಿ	35	5	40
		ಒಟ್ಟು	**161**	**30**	**191**
5	ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ	ಗ್ರೂಪ್-ಎ	22	1	23
		ಗ್ರೂಪ್-ಬಿ		3	3
		ಗ್ರೂಪ್-ಸಿ	32	21	53
		ಗ್ರೂಪ್-ಡಿ	35		35
		ಒಟ್ಟು	**89**	**25**	**114**
6	ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ	ಗ್ರೂಪ್-ಎ	17		17
		ಗ್ರೂಪ್-ಬಿ	2	1	3
		ಗ್ರೂಪ್-ಸಿ	20	6	26
		ಗ್ರೂಪ್-ಡಿ	7	3	10
		ಒಟ್ಟು	**46**	**10**	**56**
7	ಜಾನಪದ ವಿಶ್ವವಿದ್ಯಾನಿಲಯ, ಹಾವೇರಿ	ಗ್ರೂಪ್-ಎ	10		10
		ಗ್ರೂಪ್-ಬಿ			0
		ಗ್ರೂಪ್-ಸಿ	3		3
		ಗ್ರೂಪ್-ಡಿ	1		1
		ಒಟ್ಟು	14	0	14
		ಗ್ರೂಪ್-ಎ	22	3	25
		ಗ್ರೂಪ್-ಬಿ	1	2	3

ಕ್ರ. ಸಂ.	ವಿಶ್ವ ವಿದ್ಯಾನಿಲಯಗಳು	ವೃಂದ	ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ಹುದ್ದೆಗಳು		
			ನೇ.ನೇ.	ಮುಂಬಡ್ತಿ	ಒಟ್ಟು
8	ಮಂಗಳೂರು ವಿಶ್ವವಿದ್ಯಾನಿಲಯ	ಗ್ರೂಪ್-ಸಿ	18	5	23
		ಗ್ರೂಪ್-ಡಿ	13	5	18
		ಒಟ್ಟು	54	15	69
9	ತುಮಕೂರು ವಿಶ್ವವಿದ್ಯಾನಿಲಯ	ಗ್ರೂಪ್-ಎ	10	2	12
		ಗ್ರೂಪ್-ಬಿ		1	1
		ಗ್ರೂಪ್-ಸಿ	8	2	10
		ಗ್ರೂಪ್-ಡಿ	7	1	8
		ಒಟ್ಟು	25	6	31
10	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು	ಗ್ರೂಪ್-ಎ	11		11
		ಗ್ರೂಪ್-ಬಿ	2	4	6
		ಗ್ರೂಪ್-ಸಿ	26	10	36
		ಗ್ರೂಪ್-ಡಿ	11	2	13
		ಒಟ್ಟು	50	16	66
11	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ	ಗ್ರೂಪ್-ಎ	26	1	27
		ಗ್ರೂಪ್-ಬಿ	12	2	14
		ಗ್ರೂಪ್-ಸಿ	7	11	18
		ಗ್ರೂಪ್-ಡಿ	9		9
		ಒಟ್ಟು	54	14	68
12	ದಾವಣಗೆರೆ ವಿಶ್ವವಿದ್ಯಾನಿಲಯ	ಗ್ರೂಪ್-ಎ	12		12
		ಗ್ರೂಪ್-ಬಿ	2		2
		ಗ್ರೂಪ್-ಸಿ	6	3	9
		ಗ್ರೂಪ್-ಡಿ	2		2
		ಒಟ್ಟು	22	3	25
13	ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ	ಗ್ರೂಪ್-ಎ	7	1	8
		ಗ್ರೂಪ್-ಬಿ	2		2
		ಗ್ರೂಪ್-ಸಿ	3		3
		ಗ್ರೂಪ್-ಡಿ	6		6
		ಒಟ್ಟು	18	1	19
14	ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಬಿಜಾಪುರ	ಗ್ರೂಪ್-ಎ	1	1	2
		ಗ್ರೂಪ್-ಬಿ	5	1	6
		ಗ್ರೂಪ್-ಸಿ	5	2	7
		ಗ್ರೂಪ್-ಡಿ	4		4
		ಒಟ್ಟು	15	4	19
15	ಸಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು	ಗ್ರೂಪ್-ಎ	6	1	7
		ಗ್ರೂಪ್-ಬಿ	1	1	2
		ಗ್ರೂಪ್-ಸಿ	6	2	8
		ಗ್ರೂಪ್-ಡಿ		1	1
		ಒಟ್ಟು	13	5	18
16	ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ಡೆವಲಪ್‌ಮೆಂಟ್ ರೀಸರ್ಚ್, ಧಾರವಾಡ	ಗ್ರೂಪ್-ಎ	2		2
		ಗ್ರೂಪ್-ಬಿ	1		1
		ಗ್ರೂಪ್-ಸಿ			0
		ಗ್ರೂಪ್-ಡಿ			0
		ಒಟ್ಟು	3	0	3

Q.No. 570

ಕ್ರ. ಸಂ.	ವಿಶ್ವ ವಿದ್ಯಾನಿಲಯಗಳು	ವೃಂದ	ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ಹುದ್ದೆಗಳು		
			ನೇ.ನೇ.	ಮುಂಬಡ್ತಿ	ಒಟ್ಟು
17	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು	ಗ್ರೂಪ್-ಎ	1	2	3
		ಗ್ರೂಪ್-ಬಿ	2	2	4
		ಗ್ರೂಪ್-ಸಿ	14	9	23
		ಗ್ರೂಪ್-ಡಿ	4		4
		ಒಟ್ಟು	**21**	**13**	**34**
18	ಪಶುವೈದ್ಯಕೀಯ ವಿಶ್ವವಿದ್ಯಾನಿಲಯ	ಗ್ರೂಪ್-ಎ	53	4	57
		ಗ್ರೂಪ್-ಬಿ	5	1	6
		ಗ್ರೂಪ್-ಸಿ	45	9	54
		ಗ್ರೂಪ್-ಡಿ	50	3	53
		ಒಟ್ಟು	**153**	**17**	**170**
19	ಕೃಷಿ ವಿಶ್ವ ವಿದ್ಯಾನಿಲಯ, ಧಾರವಾಡ	ಗ್ರೂಪ್-ಎ	58	3	61
		ಗ್ರೂಪ್-ಬಿ	2	3	5
		ಗ್ರೂಪ್-ಸಿ	44	14	58
		ಗ್ರೂಪ್-ಡಿ		34	34
		ಒಟ್ಟು	**104**	**54**	**158**
20	ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯ, ಶಿವಮೊಗ್ಗ	ಗ್ರೂಪ್-ಎ	30	1	31
		ಗ್ರೂಪ್-ಬಿ		2	2
		ಗ್ರೂಪ್-ಸಿ	23	10	33
		ಗ್ರೂಪ್-ಡಿ	17		17
		ಒಟ್ಟು	**70**	**13**	**83**
21	ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು	ಗ್ರೂಪ್-ಎ	42	4	46
		ಗ್ರೂಪ್-ಬಿ		4	4
		ಗ್ರೂಪ್-ಸಿ	44	30	74
		ಗ್ರೂಪ್-ಡಿ	31		31
		ಒಟ್ಟು	**117**	**38**	**155**
22	ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ, ಗದಗ	ಗ್ರೂಪ್-ಎ	11		11
		ಗ್ರೂಪ್-ಬಿ	4		4
		ಗ್ರೂಪ್-ಸಿ	6		6
		ಗ್ರೂಪ್-ಡಿ	2		2
		ಒಟ್ಟು	**23**		**23**
23	ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ	ಗ್ರೂಪ್-ಎ	31	6	37
		ಗ್ರೂಪ್-ಬಿ	1	6	7
		ಗ್ರೂಪ್-ಸಿ	40	13	53
		ಗ್ರೂಪ್-ಡಿ	22		22
		ಒಟ್ಟು	**94**	**25**	**119**
	ಒಟ್ಟಾರೆ	ಗ್ರೂಪ್-ಎ	**399**	**31**	**430**
		ಗ್ರೂಪ್-ಬಿ	**112**	**39**	**151**
		ಗ್ರೂಪ್-ಸಿ	**469**	**191**	**660**
		ಗ್ರೂಪ್-ಡಿ	**308**	**57**	**365**
	GRAND TOTAL		**1288**	**318**	**1606**

03

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 544
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ : 22.09.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಗುತ್ತಿ ಬಸವಣ್ಣ ಕಾಲುವೆಗೆ ನೀರು ಹರಿಸುವ ಕೆಂಭಾವಿ ಜಾಕ್‌ವೆಲ್ ಬಳಿ ಏಳು ನೀರು ಪೂರೈಸುವ ಮೋಟಾರ್‌ಗಳು (ಅಲ್ಲದೆ ಹೆಚ್ಚುವರಿಯಾಗಿ ಒಂದು ಮೋಟಾರ್ ಸ್ಟ್ಯಾಂಡ್ ಬೈ) ಸೇರಿ ಒಟ್ಟು 8 ಮೋಟಾರ್‌ಗಳು ನೀರೆತ್ತಲು ಅವಕಾಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಕಳೆದ ನಾಲ್ಕೈದು ವರ್ಷಗಳಿಂದ ಕೇವಲ ಎರಡು ಮೋಟಾರ್ ಪಂಪುಗಳು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಂಡಿ ಏತ ನೀರಾವರಿ ಯೋಜನೆ ಅಡಿಯಲ್ಲಿ ಈಗಾಗಲೇ, ಅಳವಡಿಸಿದ ಪಂಪ್‌ಗಳ ಸತತ ಬಳಕೆಯಿಂದ ಪಂಪ್/ ಮೋಟಾರ್ /ಟ್ರಾನ್ಸ್‌ಫಾರಮರ್/ಎಲೆಕ್ಟ್ರೋ ಮೆಕಾನಿಕಲ್ ಉಪಕರಣಗಳು ದುರಸ್ಥಿಗೆ ಬರುತ್ತಿದ್ದು, ಇವುಗಳಲ್ಲದೇ ವಿದ್ಯುತ್ ವ್ಯತ್ಯಯದ ಸಮಸ್ಯೆಗಳಿಂದಾಗಿ ಯೋಜನೆಯಡಿಯ ಕಾಲುವೆಗಳಲ್ಲಿ ಸಮರ್ಪಕ ನೀರು ಪೂರೈಕೆಯಲ್ಲಿ ತೊಂದರೆ ಉಂಟಾಗಿರುತ್ತದೆ. 2020–21ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗಾಗಿ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯಾಗಿರುವುದರಿಂದ ಜುಲೈ ಮತ್ತು ಆಗಸ್ಟ್ 2020ರ ಮಾಹೆಗಳಲ್ಲಿ ಎರಡು ಪಂಪ್‌ಗಳನ್ನು ಚಾಲನೆಯಲ್ಲಿಡಲಾಗಿದೆ. ಸೆಪ್ಟಂಬರ್ 2020ರ ಮಾಹೆಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮೂರು ಪಂಪ್‌ಗಳನ್ನು ಚಾಲನೆಯಲ್ಲಿಡಲಾಗಿದೆ. ಮುಂದುವರೆದು, ಇನ್ನು ಎರಡು ಪಂಪ್‌ಗಳ ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆ. ಸದರಿ ಸಮಸ್ಯೆಯನ್ನು ನಿವಾರಿಸುವ ನಿಟ್ಟಿನಲ್ಲಿ KERS (ಕರ್ನಾಟಕ ಇಂಜಿನೀಯರಿಂಗ್ ಸಂಶೋಧನಾ ಕೇಂದ್ರ) ರವರಿಂದ Sump Model Study ಕೈಗೊಂಡಿದ್ದು, ಸದರಿಯವರ ಸಲಹೆಗಳನ್ನು ಅಳವಡಿಸಿ, ಯೋಜನೆಯಲ್ಲಿನ ಪಂಪ್/ಮೋಟಾರ್‌ಗಳ ದುರಸ್ತಿ ಕಾಮಗಾರಿಗಳಿಗಾಗಿ ಐದು ವರ್ಷಗಳ ಪಾಲನೆ ಮತ್ತು ಪೋಷಣೆ ಒಳಗೊಂಡಂತೆ ಟರ್ನ್ ಕೀ ಆಧಾರಿತ ಕಾಮಗಾರಿಯ ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಮುಂದುವರೆದು. ಸವಕಳಿಗೊಂಡ ಹಾಗೂ ಅಸಾಧಾರಣ ದುರಸ್ಥಿಗೆ ಬರುತ್ತಿರುವ ನಿರೀಕ್ಷಿತ ಪಂಪ್‌ಗಳನ್ನು ಕ್ರಮೇಣವಾಗಿ ಬದಲಿಸುವ ಸಲುವಾಗಿ ಹೊಸ ಪಂಪ್‌ಗಳ ಖರೀದಿಗೆ ಕೃಷ್ಣಾ ಭಾಗ್ಯ ಜಲ ನಿಗಮದ 2020–21ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೂಕ್ತ ಪ್ರಾವಿಧಾನವನ್ನು ಕಲ್ಪಿಸಲಾಗಿದೆ.
ಇ)	ಬಂದಿದ್ದಲ್ಲಿ, ಕೇವಲ ಎರಡು ಮೋಟಾರ್‌ಗಳು ಕಾರ್ಯನಿರ್ವಹಿಸಲು ಕಾರಣಗಳೇನು; (ವಿವರ ನೀಡುವುದು)	
ಈ)	ಕೇವಲ ಎರಡು ಮೋಟಾರ್‌ಗಳು ಕಾರ್ಯ ನಿರ್ವಹಿಸುತ್ತಿರುವುದರಿಂದ ನಾಲೆಯ ಕೊನೆಯ ಭಾಗದ ರೈತರುಗಳಿಗೆ ನೀರು ದೊರೆಯದೇ ಇರುವುದನ್ನು ಸರ್ಕಾರ ಗಮನಿಸಿದೆಯೇ;	
ಉ)	ನಾಲೆಯ ಕೊನೆಯ ಭಾಗದ ರೈತರುಗಳಿಗೆ ಕಾಲುವೆಯಲ್ಲಿ ನೀರು ಸಮರ್ಪಕವಾಗಿ ಹರಿಯಲು ಗರಿಷ್ಠ ಪ್ರಮಾಣದ ಎಲ್ಲಾ ಮೋಟಾರ್‌ಗಳು ಕಾರ್ಯ ನಿರ್ವಹಿಸುವಂತೆ ಮಾಡಲು ಸರ್ಕಾರ ಗಮನ ಹರಿಸುವುದೇ;	ಎಲ್ಲ ಪಂಪ್/ ಮೋಟಾರ್‌ಗಳನ್ನು ಸುಸ್ಥಿತಿಯಲ್ಲಿಡಿಸಿ ಕಾಲುವೆಯ ಕೊನೆಯ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಹರಿಸಲು ಎಲ್ಲ ಕ್ರಮ ಕೈಗೊಳ್ಳಲಾಗುವುದು..
ಊ	ಕಾಲುವೆಯ ಕೊನೆಯ ಭಾಗದ ರೈತರುಗಳಿಗೆ ನೀರು ದೊರೆಯುವಂತೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?	

ಸಂಖ್ಯೆ: ಜಸಂಇ 166 ಕೆಬಿಎನ್ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 550
2] ಮಾನ್ಯ ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)
3] ಉತ್ತರಿಸುವ ದಿನಾಂಕ : 22.09.2020.
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಜನಸಂಖ್ಯೆ 50,000 ಕ್ಕಿಂತ ಹೆಚ್ಚಿದ್ದು, ವ್ಯಾಪಾರದ ಕೇಂದ್ರವಾಗಿರುವುದರಿಂದ ಅಲ್ಲಿಗೆ ಅನೇಕ ವರ್ಷಗಳಿಂದ ಸಂಚಾರಿ ಪೊಲೀಸ್ ಠಾಣೆಯ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ಸೃಜಿಸುವ ಸಂಬಂಧ ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯ ಮಾನದಂಡಗಳನ್ನು ಪೂರೈಸಿದಲ್ಲಿ ಪರಿಶೀಲಿಸಲಾಗುವುದು.
ಆ)	ಬಂದಿದ್ದಲ್ಲಿ, ಈ ವರ್ಷ ಈ ಪಟ್ಟಣದಲ್ಲಿ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡಲು ಸರ್ಕಾರ ಕ್ರಮ ಜರುಗಿಸಲಾಗಿದೆಯೇ ?	

ಸಂಖ್ಯೆ: ಹೆಚ್‌ಡಿ 101 ಪಿಓಪಿ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

07

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 561
ಸದಸ್ಯರ ಹೆಸರು	: ಡಾ: ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸುವ ದಿನಾಂಕ	: 22.09.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿ ಸುಮಾರು 16 ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರನ್ನು ತುಂಬಿಸುವ ಯೋಜನೆಯು ಕೆಲ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ 6 ಗ್ರಾಮಗಳ ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರು ತುಂಬಿಸುವ ಯೋಜನೆಯು 2019–20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುತ್ತದೆ.
ಆ)	ಸದರಿ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ;	ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ 6 ಗ್ರಾಮಗಳ ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರನ್ನೆತ್ತಿ ತುಂಬಿಸುವ ರೂ.70.14 ಕೋಟಿಗಳ ಮಾರ್ಪಡಿತ ವಿವರವಾದ ಯೋಜನಾ ವರದಿಯನ್ನು ದಿನಾಂಕ: 09.07.2019ರಂದು ಜರುಗಿದ ಕರ್ನಾಟಕ ನೀರಾವರಿ ನಿಗಮದ ನಿರ್ದೇಶಕರ ಮಂಡಳಿಯ 88ನೇ ಸಭೆಯಲ್ಲಿ (ಭಾಗ–1 ರಲ್ಲಿ 40.00 ಕೋಟಿ ಹಾಗೂ ಭಾಗ–2ರಲ್ಲಿ 30.14 ಕೋಟಿ) ಅನುಮೋದನೆ ನೀಡಿ, ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಜಲ ಸಂಪನ್ಮೂಲ ಇಲಾಖೆಯಲ್ಲಿ ಅಧಿಕ ಕಾರ್ಯಭಾರದ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಯೋಜನೆಯನ್ನು ಪ್ರಸಕ್ತ ಕೈಬಿಡುವಂತೆ ಆರ್ಥಿಕ ಇಲಾಖೆಯು ತಿಳಿಸಿದೆ.
ಇ)	ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನವೆಷ್ಟು;	ಸದರಿ ಯೋಜನೆಗೆ 2019–20ನೇ ಸಾಲಿನಲ್ಲಿ ರೂ.2.00 ಕೋಟಿ ಅನುದಾನವನ್ನು ಕರ್ನಾಟಕ ನೀರಾವರಿ ನಿಗಮದಡಿ ಪ್ರಾವಿಧಾನತೆ ಮಾಡಿಕೊಳ್ಳಲಾಗಿರುತ್ತದೆ. ಮುಂಬರುವ ದಿನಗಳಲ್ಲಿ ಆರ್ಥಿಕ ಸಂಪನ್ಮೂಲದ ಲಭ್ಯತೆಗೆ ಅನುಗುಣವಾಗಿ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ವಹಿಸಲಾಗುವುದು.
ಈ)	ಸದರಿ ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಿದೆ?	

ಸಂಖ್ಯೆ: ಜಸಂಇ 76 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	566
ಸದಸ್ಯರ ಹೆಸರು	:	ಶ್ರೀ ಅಂಗಾರ ಎಸ್. (ಸುಳ್ಯ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಮಾಡಾವುನಿಂದ ಸುಳ್ಯಕ್ಕೆ ಬರುವ 110/33 ವಿದ್ಯುತ್ ಪ್ರಸರಣದ ಮಾರ್ಗವು 2010ನೇ ಸಾಲಿನಲ್ಲಿ ಮಂಜೂರಾತಿಗೊಂಡಿದ್ದರೂ ಇಲ್ಲಿಯವರೆಗೆ ಅರಣ್ಯ ಇಲಾಖೆಯ ಆಕ್ಷೇಪದಿಂದ ಪ್ರಗತಿ ಕಾಣದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾಡಾವುನಿಂದ ಸುಳ್ಯಕ್ಕೆ ಮಂಜೂರಾಗಿರುವ 110/33 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣದ ಕಾಮಗಾರಿಗೆ, 6.745 ಹೆಕ್ಟೇರ್ ಅರಣ್ಯ ಭೂಮಿಯ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಆನ್‌ಲೈನ್‌ನಲ್ಲಿ ದಿನಾಂಕ: 02.03.2017 ರಂದು ಸಲ್ಲಿಸಲಾಗಿತ್ತು. ಅರಣ್ಯ ಇಲಾಖೆಯ ನಿರ್ದೇಶನದಂತೆ ಹಲವಾರು ಬಾರಿ ಪ್ರಸ್ತಾವನೆಯನ್ನು ಪರಿಷ್ಕರಿಸಿ, ಪ್ರಸರಣ ಮಾರ್ಗ ಹಾದುಹೋಗುವ ಪಕ್ತೀಂಕರಣದಲ್ಲಿ ಗ್ರಾಮವಾರು ಸರ್ವೆ ನಂಬರ್‌ನ ವಿಸ್ತೀರ್ಣದೊಂದಿಗೆ ನ್ಯೂನ್ಯತೆಯನ್ನು ಸರಿಪಡಿಸಿ 8.896 ಹೆಕ್ಟೇರ್ ಅರಣ್ಯ ಭೂಮಿಯ ಬಿಡುಗಡೆಗಾಗಿ ಅರಣ್ಯ ಪ್ರಸ್ತಾವನೆಯನ್ನು ದಿನಾಂಕ: 01.04.2019 ರಂದು ಮರುಸಲ್ಲಿಸಲಾಯಿತು. ನಂತರ ಈ ಪ್ರಸ್ತಾವನೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರು ದಿನಾಂಕ: 03.06.2019 ರಂದು ವಲಯ ಅರಣ್ಯಾಧಿಕಾರಿ, ಪುತ್ತೂರು ಇವರಿಗೆ ಪರಿಶೀಲಿಸಿ ವಿಸ್ತೃತ ವರದಿ ಸಲ್ಲಿಸುವಂತೆ ತಿಳಿಸಿರುತ್ತಾರೆ. ಕವಿಪ್ರನಿನಿ ವತಿಯಿಂದ ವಲಯ ಅರಣ್ಯಾಧಿಕಾರಿ, ಪುತ್ತೂರು / ಸುಳ್ಯ ಇವರೊಂದಿಗೆ ಜಂಟಿಯಾಗಿ ಸದರಿ ಪ್ರಸ್ತಾವನೆಯ ಸ್ಥಳ ಪರಿಶೀಲನೆ ನಡೆಸಲಾಗಿರುತ್ತದೆ ಹಾಗೂ ಅರಣ್ಯ ಮರಗಳ ಎಣಿಕೆ ಪಟ್ಟಿಯನ್ನು ಕೂಡ ತಯಾರಿಸಲಾಗಿರುತ್ತದೆ. ವಲಯ ಅರಣ್ಯಾಧಿಕಾರಿ, ಪುತ್ತೂರು / ಸುಳ್ಯ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಇದರ ವಿಸ್ತೃತವಾದ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪುತ್ತೂರು ಮುಖಾಂತರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರಿಗೆ ಸಲ್ಲಿಸಿರುತ್ತಾರೆ.
ಆ)	ಅರಣ್ಯ ಇಲಾಖೆಯ ಆಕ್ಷೇಪದ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಎಷ್ಟು ಸಮಯದಲ್ಲಿ ಕೈಗೊಳ್ಳುವುದು ? (ವಿವರ ನೀಡುವುದು)	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರು ಸದರಿ ಪ್ರಸ್ತಾವನೆಯನ್ನು ದಿನಾಂಕ 13.11.2019 ರಂದು ಹಿಂತಿರುಗಿಸಿ ಪ್ರಸ್ತಾವನೆಯ ವಿಸ್ತೀರ್ಣವು 8.896 ಹೆಕ್ಟೇರ್ ಅರಣ್ಯ ಪ್ರದೇಶದ ಬದಲಾಗಿ 14.694 ಹೆಕ್ಟೇರ್ ವಿಸ್ತೀರ್ಣ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

...2

		ಈಗ ಹೇಳಲಾದ 14.694 ಹೆಕ್ಟೇರ್ ಅರಣ್ಯ ಪ್ರದೇಶದ ವಿಸ್ತೀರ್ಣವು ಡೀಮ್ಡ್ ಅರಣ್ಯ (ಖಾಸಗಿ ಆಕ್ರಮಿತ) ಪ್ರದೇಶವಾದ 5.798 ಹೆಕ್ಟೇರ್ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ. ಈ ವಿಸ್ತೀರ್ಣವನ್ನು ಕೂಡ ಸೇರಿಸಬೇಕೆಂದು ತಿಳಿಸಿರುತ್ತಾರೆ. ಆದರೆ ಈ ಡೀಮ್ಡ್ ಅರಣ್ಯ ವಿಸ್ತೀರ್ಣದ (ಖಾಸಗಿ ಆಕ್ರಮಿತ) 5.798 ಹೆಕ್ಟೇರ್ ಪ್ರದೇಶದ ಪೂರಕವಾದ ಯಾವುದೇ ನಕ್ಷೆಯನ್ನು ಒದಗಿಸಿರುವುದಿಲ್ಲ. ಪ್ರಸ್ತುತ 5.798 ಹೆಕ್ಟೇರ್ ಎಂದು ಹೇಳಲಾದ (ಖಾಸಗಿ ಆಕ್ರಮಿತ) ಡೀಮ್ಡ್ ಅರಣ್ಯ ಪ್ರದೇಶದ ಗ್ರಾಮವಾರು ಸರ್ವೆನಂಬರ್‌ಗಳ ಜಿಪಿಎಸ್ ದತ್ತಾಂಶ ಒಳಗೊಂಡ ನಕ್ಷೆಗಳು ಕವಿಪ್ರನಿನಿ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ಇವುಗಳ ಮಾಹಿತಿಯನ್ನು ಅರಣ್ಯ ಇಲಾಖೆಯು ಒದಗಿಸಿರುವುದಿಲ್ಲ. ಈ ಕಾರಣದಿಂದಾಗಿ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮೇಲೆ ಹೇಳಲಾದ ಡೀಮ್ಡ್ ಅರಣ್ಯ ಪ್ರದೇಶದ ಗ್ರಾಮವಾರು ಸರ್ವೆ ನಂಬರುಗಳ ವಿದ್ಯುತ್ ಪ್ರಸರಣ ಮಾರ್ಗದ 22 ಮೀ ಕಾರಿಡಾರಿನಡಿ ಬರುವ ನಕ್ಷೆಯನ್ನು ತಯಾರಿಸುವ ಅವಶ್ಯಕತೆ ಇರುತ್ತದೆ. ಸದರಿ ಸರ್ವೆಕಾರ್ಯವನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ತಯಾರಿಸಿ ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ಎರಡು ಬಾರಿ ಟೆಂಡರ್ ಕರೆಯಲಾಗಿದ್ದರೂ ಯಾವುದೇ ಏಜೆನ್ಸಿಯು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ಪುನಃ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಸಂಖ್ಯೆ: ಎನರ್ಜಿ 117 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	568
ಸದಸ್ಯರ ಹೆಸರು	:	ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)
ಉತ್ತರಿಸುವ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯ ಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಕೇಂದ್ರ ಸರ್ಕಾರದ ಆದೇಶದನ್ವಯ ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ವರ್ಗಕ್ಕೆ ರಾಜ್ಯ ಸರ್ಕಾರಿ ಸೇವೆ / ನೌಕರಿಯಲ್ಲಿ ಮತ್ತು ವಿದ್ಯಾಭ್ಯಾಸದಲ್ಲಿ EWS (quota) ದಡಿಯಲ್ಲಿ ಶೇಕಡ 10 ರಷ್ಟು ಮೀಸಲಾತಿಯನ್ನು ರಾಜ್ಯದಲ್ಲಿಯೂ ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ಕೇಂದ್ರ ಸರ್ಕಾರದ ಆದೇಶದನ್ವಯ ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ವರ್ಗಕ್ಕೆ ಕೇಂದ್ರ ಸರ್ಕಾರಿ ಸೇವೆ / ನೌಕರಿಯಲ್ಲಿ ಮತ್ತು ವಿದ್ಯಾಭ್ಯಾಸದಲ್ಲಿ EWS (quota) ದಡಿಯಲ್ಲಿ ಶೇಕಡ 10 ರಷ್ಟು ಮೀಸಲಾತಿಯನ್ನು ಪಡೆಯುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ: ಹಿಂವಕ 75 ಬಿಸಿಎ 2019, ದಿನಾಂಕ: 14.5.2019 ಅನ್ನು ಹೊರಡಿಸಲಾಗಿದೆ. ರಾಜ್ಯ ಸರ್ಕಾರಿ ಸೇವೆ / ನೌಕರಿಯಲ್ಲಿ ಮತ್ತು ವಿದ್ಯಾಭ್ಯಾಸದಲ್ಲಿ EWS (quota) ದಡಿಯಲ್ಲಿ ಶೇಕಡ 10 ರಷ್ಟು ಮೀಸಲಾತಿಯನ್ನು ರಾಜ್ಯದಲ್ಲಿಯೂ ಜಾರಿಗೊಳಿಸುವ ಪ್ರಸ್ತಾವನೆಯು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಪರಿಶೀಲನೆಯ ಹಂತದಲ್ಲಿದೆ.
(ಆ)	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಯಾವ ದಿನಾಂಕದಿಂದ ಜಾರಿಗೊಳಿಸಲಾಗುವುದು?	

ಸಂಖ್ಯೆ: ಸಿಆಸುಇ 174 ಸೇನೆನಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 571
2. ವಿಧಾನ ಸಭೆಯ ಸದಸ್ಯರು	: ಶ್ರೀ ನಾಗೇಶ್ ಬಿ.ಸಿ. (ತಿಪಟೂರು)
3. ಉತ್ತರಿಸಬೇಕಾದ ದಿನಾಂಕ	: 22.09.2020
4. ಉತ್ತರಿಸುವ ಸಚಿವರು	: ಮಾನ್ಯ ಮುಖ್ಯ ಮಂತ್ರಿಗಳು

	ಪ್ರಶ್ನೆ	ಉತ್ತರ
ಅ)	ತಿಪಟೂರು ತಾಲ್ಲೂಕಿನ ಎಲ್ಲಾ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; (ಇಲಾಖಾವಾರು ವಿವರ ನೀಡುವುದು)	ತಿಪಟೂರು ತಾಲ್ಲೂಕಿನ ಎಲ್ಲಾ ಇಲಾಖೆಗಳಲ್ಲಿ ಒಟ್ಟು 751 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಖಾಲಿ ಇರುವ ಹುದ್ದೆಗಳ ಸಂಖ್ಯೆ 464 (ವಿವರವನ್ನು ಅನುಬಂಧದಲ್ಲಿರಿಸಿದೆ).
ಆ)	ಈ ತಾಲ್ಲೂಕಿನ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆರಳಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು? (ಇಲಾಖಾವಾರು ಮಾಹಿತಿ ನೀಡುವುದು)	ಈ ತಾಲ್ಲೂಕಿನ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆರಳಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು 24. (ಇಲಾಖಾವಾರು ಮಾಹಿತಿಯನ್ನು ಅನುಬಂಧದಲ್ಲಿರಿಸಿದೆ).

ಸಂಖ್ಯೆ: ಸಿಆಸುಇ 91 ರಾಸಾ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಗಳು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಾಗೇಶ್ ಬಿ.ಸಿ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ571ಕ್ಕೆ ಅನುಬಂಧ

ತಿಪಟೂರು ತಾಲ್ಲೂಕಿನ ವಿವಿಧ ಇಲಾಖೆಗಳ ಹುದ್ದೆಗಳ ವಿವರಗಳು

ಕ್ರ ಸಂ.	ಪದನಾಮ	ಇಲಾಖೆ	ಮಂಜೂರಿ ಹುದ್ದೆಗಳು	ಭರ್ತಿ ಹುದ್ದೆಗಳು	ಖಾಲಿ ಹುದ್ದೆಗಳು	ನಿಯೋಜನೆ ಹುದ್ದೆಗಳು
1	ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ	ಕಂದಾಯ ಇಲಾಖೆ	16	9	7	0
2	ತಹಸೀಲ್ದಾರ್ ತಾಲ್ಲೂಕು ಕಛೇರಿ	ಕಂದಾಯ ಇಲಾಖೆ	111	90	21	0
3	ಅರಣ್ಯ ಸಂರಕ್ಷಣಾಧಿಕಾರಿಗಳು ತಿಪಟೂರು ಉಪ ವಿಭಾಗ ತಿಪಟೂರು ಪ್ರಾದೇಶಿಕ	ಅರಣ್ಯ ಇಲಾಖೆ	5	4	0	1
4	ಸಹಾಯಕ ಕೃಷಿ ನಿರ್ದೇಶಕರು	ಕೃಷಿ ಇಲಾಖೆ	35	23	11	1
5	ಉಪ ನೋಂದಣಾಧಿಕಾರಿ	ನೋಂದಣಿ ಇಲಾಖೆ	6	3	3	0
6	ಭೂದಾಖಲೆಗಳ ಸಹಾಯಕ ನಿರ್ದೇಶಕರು	ಎ.ಡಿ.ಎಲ್.ಆರ್	40	30	8	2
7	ಸಹಾಯಕ ನಿರ್ದೇಶಕರು ಉಪ ಖಜಾನೆ	ಖಜಾನೆ ಇಲಾಖೆ	9	6	3	0
8	ಸಹಾಯಕ ನಿರ್ದೇಶಕರು	ಅಕ್ಷರ ದಾಸೋಹ	2	2	0	0
9	ಸಹಾಯಕ ಕಾರ್ಯಪಾಲಕ ಇಂಜಿನಿಯರ್	ಸಣ್ಣ ನೀರಾವರಿ ಇಲಾಖೆ	11	3	8	0
10	ಸಹಾಯಕ ಕಾರ್ಯಪಾಲಕ ಇಂಜಿನಿಯರ್	ಪಿ.ಆರ್.ಇ.ಡಿ.	11	5	6	0
11	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ	ಸಮಾಜ ಕಲ್ಯಾಣ ಇಲಾಖೆ	45	20	25	0
12	ಆರಕ್ಷಕ ಉಪಾಧೀಕ್ಷಕರು ತಿಪಟೂರು ಉಪವಿಭಾಗ	ಪೊಲೀಸ್ ಇಲಾಖೆ	117	93	24	0
13	ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು	ಎ.ಆರ್.ಟಿ.ಓ	17	7	5	5
14	ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು	ವಾಣಿಜ್ಯ ತೆರಿಗೆ ಇಲಾಖೆ	12	6	6	0
15	ಆಯುಕ್ತರು ನಗರಸಭೆ	ನಗರಸಭೆ ಕಾರ್ಯಾಲಯ	182	108	74	0
16	ಬಿಸಿಎಂ ವಿಸ್ತರಣಾಧಿಕಾರಿ	ಬಿ.ಸಿ.ಎಂ. ಇಲಾಖೆ	74	31	42	1
17	ಹಿರಿಯ ಸ: ತೋಟಗಾರಿಕೆ ನಿರ್ದೇಶಕರು	ತೋಟಗಾರಿಕೆ ಇಲಾಖೆ	19	9	9	1
18	ಕ್ಷೇತ್ರ ಶಿಕ್ಷಣಾಧಿಕಾರಿ	ಶಿಕ್ಷಣ ಇಲಾಖೆ	75	42	33	0
19	ಶಿಶು ಅಭಿವೃದ್ಧಿ ಯೋಜನಾಧಿಕಾರಿ	ಶಿಶು ಅಭಿವೃದ್ಧಿ ಇಲಾಖೆ	25	16	9	0
20	ಕೈಗಾರಿಕಾ ವಿಸ್ತರಣಾಧಿಕಾರಿ	ಕೈಗಾರಿಕಾ ಇಲಾಖೆ	3	1	2	0
21	ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ	ಪಂಚಾಯತ್ ರಾಜ್ ಅಭಿವೃದ್ಧಿ ಇಲಾಖೆ	88	59	29	0
22	ಸಹಾಯಕ ನಿರ್ದೇಶಕರು	ಮೀನುಗಾರಿಕೆ ಇಲಾಖೆ	4	2	2	0
23	ಸಹಾಯಕ ನಿರ್ದೇಶಕರು	ರೇಷ್ಮೆ ಇಲಾಖೆ	20	7	12	1
24	ಸಹಾಯಕ ಕಾರ್ಯಪಾಲಕ ಇಂಜಿನಿಯರ್	ಲೋಕೋಪಯೋಗಿ ಇಲಾಖೆ	16	12	3	1
25	ತಾಲ್ಲೂಕು ವೈದ್ಯಾಧಿಕಾರಿ	ಆರೋಗ್ಯ ಇಲಾಖೆ	256	159	97	0
26	ಕಾರ್ಯದರ್ಶಿ, ಎ.ಪಿ.ಎಂ.ಸಿ	ಕೃಷಿ ಉತ್ಪನ್ನ ಮಾರುಕಟ್ಟೆ	29	4	25	0
		ಒಟ್ಟು	**1228**	**751**	**464**	**13**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 572
ಸದಸ್ಯರ ಹೆಸರು : ಶ್ರೀ ನಾಗೇಶ್ ಬಿ.ಸಿ. (ತಿಪಟೂರು)
ಉತ್ತರಿಸುವ ದಿನಾಂಕ : 22.09.2020.
ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಪ್ರಶ್ನೆ	ಉತ್ತರ
ಅ) ಸರ್ಕಾರದ ವಿವಿಧ ಇಲಾಖೆಗಳಿಂದ ಹೊರಡಿಸಿರುವ ಸುತ್ತೋಲೆಗಳು ಎಷ್ಟು ಕಾಲವಧಿವರೆಗೆ ಚಾಲ್ತಿಯಲ್ಲಿರುತ್ತದೆ (ವಿವರ ನೀಡುವುದು);	ಸರ್ಕಾರದ ವಿವಿಧ ಇಲಾಖೆಗಳು ಹೊರಡಿಸುವ ಸುತ್ತೋಲೆಗಳಲ್ಲಿ ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸದ ಹೊರತು ಅವು ಸಾಮಾನ್ಯವಾಗಿ ಸುತ್ತೋಲೆಯಲ್ಲಿನ ಅಂಶಗಳನ್ನು ಮಾರ್ಪಡಿಸುವವರೆಗೆ ಚಾಲ್ತಿಯಲ್ಲಿರುತ್ತವೆ.
ಆ) ಸುತ್ತೋಲೆಯಂತೆ ಕಾರ್ಯನಿರ್ವಹಿಸಲು ಅನುವಾಗುವಂತೆ ಕಾಯ್ದೆ ರೂಪದಲ್ಲಿ ಜಾರಿಗೆ ತರಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ(ವಿವರ ನೀಡುವುದು);	ಸುತ್ತೋಲೆಯಲ್ಲಿ ನೀಡಲಾಗುವ ಸೂಚನೆಗಳು ಸಾಮಾನ್ಯವಾಗಿ ಮಾರ್ಗಸೂಚಿಯ ರೂಪದಲ್ಲಿರುತ್ತವೆ. ಸುತ್ತೋಲೆಗಳು ಕಾಯ್ದೆಗೆ ಪರ್ಯಾಯವಾಗಿ ಇರುವುದಿಲ್ಲ. ಆದಕಾರಣ, ಎಲ್ಲಾ ಸಂದರ್ಭಗಳಲ್ಲಿ ಸುತ್ತೋಲೆಯಲ್ಲಿನ ಅಂಶಗಳನ್ನು ಕಾಯ್ದೆ ರೂಪದಲ್ಲಿ ಜಾರಿಗೆ ತರುವ ಸಂದರ್ಭಗಳು ಇರುವುದಿಲ್ಲ.
ಇ) ಅನೇಕ ಸುತ್ತೋಲೆಗಳು ಕಾಯ್ದೆಯಾಗಿ ರೂಪಗೊಳ್ಳದೆ ಸುತ್ತೋಲೆಯಲ್ಲಿಯೇ ಮುಂದುವರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಈ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)?	ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಆಸುಇ 98 ಸೇನಿಡಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 574
ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)
ಉತ್ತರಿಸಬೇಕಾದ ದಿನಾಂಕ : 22.09.2020
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರಮ ಸಂ.	ಪ್ರಶ್ನೆ	ಉತ್ತರ
ಅ.	ಜಲಸಂಪನ್ಮೂಲ ಇಲಾಖೆಯ ವಿ.ಜೆ.ಎನ್.ಎಲ್. ಮಂಡಳಿಯಿಂದ ಪ್ರತಿವರ್ಷ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಲ್ಲಿ ಗ್ರಾಮಾಂತರ ಪ್ರದೇಶಗಳ ಹರಿಜನ ಗಿರಿಜನ ಕಾಲೋನಿಗಳಿಗೆ ಸಿ.ಸಿ.ರಸ್ತೆ ನಿರ್ಮಾಣ ಮಾಡಲು ಹಣ ಬಿಡುಗಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಪ್ರತಿ ವರ್ಷ ಎಸ್.ಸಿ.ಪಿ/ ಟಿ.ಎಸ್.ಪಿ ಅಡಿಯಲ್ಲಿ ವಿವಿಧ ವೈಯಕ್ತಿಕ ಫಲಾನುಭವಿ ಕಾಮಗಾರಿಗಳಿಗಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ ಸಿ.ಸಿ. ರಸ್ತೆ ನಿರ್ಮಾಣ ಮಾಡುವ ಕಾಮಗಾರಿಗಳು ಒಳಗೊಂಡಿರುತ್ತವೆ.
ಆ.	ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಗೆ ಹಣ ಬಿಡುಗಡೆ ಮಾಡದೆ ಕಾಲೋನಿಗಳ ಮೂಲಭೂತ ಸೌಲಭ್ಯಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸಕ್ತ ಸಾಲಿನಲ್ಲಿ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಎಸ್.ಸಿ.ಪಿ ಯೋಜನೆಯಡಿಯಲ್ಲಿ ರೂ. 214.20 ಕೋಟಿ ಹಾಗೂ ಟಿ.ಎಸ್.ಪಿ ಯೋಜನೆಯಡಿಯಲ್ಲಿ ರೂ.124.60 ಕೋಟಿ ಅನುದಾನ ಹಂಚಿಕೆಯಾಗಿದ್ದು, ಇದುವರೆವಿಗೂ ಎಸ್.ಸಿ.ಪಿ ಅಡಿ ರೂ.71.40 ಕೋಟಿ ಹಾಗೂ ಟಿ.ಎಸ್.ಪಿ ಅಡಿ ರೂ.41.53 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.
ಇ.	ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?	ಪ್ರಸಕ್ತ ಸಾಲಿನ ಅನುದಾನದಲ್ಲಿ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದ್ದು, ರಾಜ್ಯ ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಹಾಗೂ ಆರ್ಥಿಕ ಇಲಾಖೆಯ ನಿರ್ದೇಶನಗಳನ್ವಯ ಕ್ರಮ ಕೈಗೊಳ್ಳಲಾಗುವುದು.

ಜಸಂಇ 92 ಎಂಎಲ್ಎ 2020

(ರಮೇಶ್ ಲ ಜಾರಕಿಹೊಳಿ),
ಜಲಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	575
ಸದಸ್ಯರ ಹೆಸರು	:	ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ರೈತರು ತಮ್ಮ ಸ್ವಂತ ಜಮೀನಿನಲ್ಲಿ ಕೊಳವೆಬಾವಿಗಳನ್ನು ಕೊರೆದು ವಿದ್ಯುತ್ ಸಂಪರ್ಕ ಪಡೆಯಲು ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ರೈತರು ತಮ್ಮ ಸ್ವಂತ ಜಮೀನಿನಲ್ಲಿ ಕೊರೆಸಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇ.ಎನ್.41 ಪಿ.ಎಸ್.ಸಿ 2014/ಬಿ1, ದಿನಾಂಕ: 14.07.2014 ರ ಆದೇಶದನ್ವಯ ದಿನಾಂಕ: 31.07.2012ರ ನಂತರ ಅನಧಿಕೃತವಾಗಿ ಸೇರ್ಪಡೆಗೊಂಡು ನೊಂದಾಯಿಸಿರುವ ಮತ್ತು ಹೊಸದಾಗಿ ನೊಂದಾಯಿಸಲ್ಪಡುವ ಪಂಪ್ ಸೆಟ್ ಅರ್ಜಿದಾರರು ಮೂಲ ಸೌಕರ್ಯ ರಚನಾ ಶುಲ್ಕ ರೂ.10,000/- ಮತ್ತು ಇತರೆ ಅವಶ್ಯಕ ಠೇವಣಿ ಶುಲ್ಕ ಗಳನ್ನು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಿದ ನಂತರ ಜೇಷ್ಠತೆಯ ಆಧಾರದಲ್ಲಿ ಮೂಲಭೂತ ಸೌಕರ್ಯ ರಚಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಮೂಲಭೂತ ಸೌಕರ್ಯ ಅವಶ್ಯಕತೆ ಇಲ್ಲದಿದ್ದಲ್ಲಿ ಸರ್ವಿಸ್ ಮೈನ್ಸ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.
ಆ)	ರೈತರು ವಿದ್ಯುತ್ ಸಂಪರ್ಕ ಪಡೆಯಲು ಸ್ವಂತ ಹಣ ಕಟ್ಟಿದ್ದರೂ ಇಲಾಖೆಯವರು ಆಯವ್ಯಯದಲ್ಲಿ ಹಣ ಒದಗಿಸದೇ ಇರುವುದರಿಂದ ಟ್ರಾನ್ಸ್‌ಫಾರಂಗಳನ್ನು ಸಕಾಲದಲ್ಲಿ ನೀಡಲು ಸಾಧ್ಯವಾಗದೇ ರೈತರು ವ್ಯವಸಾಯ ಮಾಡಲು ತೊಂದರೆಯಾಗುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ ;	
ಇ)	ರೈತರೇ ಸ್ವಂತ ಹಣ ಕಟ್ಟಿ ವರ್ಷಗಳ ಕಳೆದರು ವಿದ್ಯುತ್ ಸಂಪರ್ಕ ಇಲ್ಲದೆ ಹಾಕಿರುವ ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರದಲ್ಲಿ ಮೇಲ್ಕಂಡ ಕರ್ನಾಟಕ ಸರ್ಕಾರದ ಆದೇಶದಂತೆ ಸ್ವಂತ ಜಮೀನಿನಲ್ಲಿ ಕೊಳವೆಬಾವಿಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯಲಾದ ರೈತರು ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ನೋಂದಣಿ ಮಾಡಿ ಸಕ್ರಮಗೊಂಡ ಕೊಳವೆ ಬಾವಿಗಳಿಗೆ ಅವಶ್ಯವಿರುವ ಕಡೆ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿ ಜೇಷ್ಠತೆಯ ಆಧಾರದ ಮೇಲೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದ್ದು, ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಈ)	ಹಾಗಿದ್ದಲ್ಲಿ, ರೈತರು ಹಣ ಕಟ್ಟಿದ ಎಷ್ಟು ದಿನಗಳಲ್ಲಿ ಟ್ರಾನ್ಸ್‌ಫಾರಂಗಳು ಹಾಗೂ ಸಾಮಾಗ್ರಿಗಳನ್ನು ನೀಡಲು ಇರುವ ಮಾನದಂಡಗಳೇನು ; ಇದರ ಬಗ್ಗೆ ಸರ್ಕಾರ ಜರೂರು ಕ್ರಮ ಕೈಗೊಂಡು ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಲು ಕ್ರಮ ಕೈಗೊಳ್ಳುವುದೇ ?	ಕರ್ನಾಟಕ ಸರ್ಕಾರದ ಆದೇಶ ಇಎನ್ 41 ವಿಎಸ್‌ಸಿ 2014/ಪಿ1 ದಿನಾಂಕ:14.7.2014 ಮತ್ತು 23.07.2014 ರಂತೆ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅನಧಿಕೃತ ಹಾಗೂ ಹೊಸದಾಗಿ ನೊಂದಾಯಿಸಲ್ಪಡುವ ಪಂಪ್‌ಸೆಟ್‌ಗಳು ಎಂಬ ಬೇದವಿಲ್ಲದೇ ನೋಂದಾಯಿಸಲ್ಪಡುವ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳ ಅರ್ಜಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡಂತೆ ಸೂಚಿಸಲಾಗಿದೆ: 1. ದಿನಾಂಕ:31.07.2012ರೊಳಗೆ ನೊಂದಣಿಗೊಂಡಿರುವ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಅರ್ಜಿದಾರರು ರೂ.10.000/- ಸಕ್ರಮ ಶುಲ್ಕ ಮತ್ತು ಠೇವಣಿ ಹಣವನ್ನು ಪಾವತಿಸದಿದ್ದಲ್ಲಿ ಅಂತಹ ಅರ್ಜಿದಾರರಿಗೆ ನೋಟಿಸ್ ನೀಡಿ ಶುಲ್ಕವನ್ನು ಪಡೆದು ಜೇಷ್ಠತೆ ಅಧಾರದ ಮೇಲೆ ಹಂತ ಹಂತವಾಗಿ ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು. 2. ದಿನಾಂಕ:31.07.2012ರ ನಂತರ ಅನಧಿಕೃತವಾಗಿ ಸೇರ್ಪಡೆಗೊಂಡು ನೋಂದಾಯಿಸಿರುವ ಮತ್ತು ಹೊಸದಾಗಿ ನೊಂದಾಯಿಸಲ್ಪಡುವ ಪಂಪ್‌ಸೆಟ್‌ಗಳ ಅರ್ಜಿದಾರರು ಠೇವಣಿ ಶುಲ್ಕ ಮತ್ತು ರೂ.10.000/- ಗಳನ್ನು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಿದ ನಂತರ ಜೇಷ್ಠತೆಯ ಆಧಾರದಲ್ಲಿ ಮೂಲ ಸೌಕರ್ಯ ರಚಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಮೂಲ ಸೌಕರ್ಯ ರಚನೆಯ ಅಗತ್ಯತೆ ಇಲ್ಲದಿದ್ದಲ್ಲಿ ಸರ್ವೀಸ್ ಮೈನ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. 3. ಶೀಘ್ರ ಸಂಪರ್ಕ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವಾಗ ಈ ಕೆಳಕಂಡ ನಿಯಮಗಳನ್ನು ಅನುಸರಿಸುವುದು. • ಹೊಸದಾಗಿ ಅರ್ಜಿ ನೊಂದಾಯಿಸುವ ರೈತರು ರೂ.10.000/- ಮತ್ತು ಠೇವಣಿ ಹಣವನ್ನು ಪಾವತಿಸುವುದು. • ರೈತರು ಇಚ್ಛಿಸಿದಲ್ಲಿ ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿಯಲ್ಲಿ ಮೂಲ ಸೌಕರ್ಯ ರಚಿಸಿಕೊಳ್ಳುವುದು. • ಪರಿವರ್ತಕ ಅಗತ್ಯವಿದ್ದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ 25 ಪರಿವರ್ತಕವನ್ನು ಒದಗಿಸಲಾಗುವುದು. • ಮೂಲ ಸೌಕರ್ಯ ರಚನೆಯ ಮಾರ್ಗ ವಿಸ್ತರಣೆ ಕಾಮಗಾರಿಗಳಿಗೆ ಮೇಲ್ವಿಚಾರಣಾ ಶುಲ್ಕವನ್ನು ಮನ್ನಾ ಮಾಡಲಾಗುವುದು.

		4. ಎಚ್.ಟಿ ಮಾರ್ಗದಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಬಯಸುವ ರೈತರು ವಿದ್ಯುತ್ ಸಂಪರ್ಕಕ್ಕೆ ಬೇಕಾಗುವ 11 ಕೆ.ವಿ ಎಚ್.ಟಿ ಮಾರ್ಗ ಹಾಗೂ ಇತರೆ ಉಪಕರಣಗಳ ಒಟ್ಟಾರೆ ಅಂದಾಜು ಮೊತ್ತದ ಶೇಕಡ 25ರಷ್ಟನ್ನು ರೈತರು ಭರಿಸಬೇಕಾಗುವುದು. ಉಳಿದ ಶೇಕಡ 75 ರಷ್ಟು ಅಂದಾಜು ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸುವುದು. ನೀರಾವರಿ ಪಂಪ್‌ಸೆಟ್‌ಗಳು ಬಳಸುವ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್‌ಗೆ ಕೆ.ಇ.ಆರ್.ಸಿ. ರವರು ನಿಗದಿಗೊಳಿಸುವ ವಿದ್ಯುತ್ ದರವನ್ನು ಪಾವತಿಸುವುದು. 11 ಕೆ.ವಿ. ಎಚ್.ಟಿ. ಮಾರ್ಗವನ್ನು ಉಪ ಕೇಂದ್ರದಿಂದ ಪ್ರತ್ಯೇಕ ಫೀಡರ್ ರಚಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ನೀರಾವರಿ ಪಂಪ್‌ಸೆಟ್‌ಗಳ ಸ್ಥಾವರಗಳಿಗೆ ಮಾಪಕ ಅಳವಡಸಲಾಗುವುದು ಹಾಗೂ 24 ಗಂಟೆಗಳ ವಿದ್ಯುತ್ ಪೂರೈಕೆಗೆ ಕ್ರಮವಹಿಸಲಾಗುವುದು. 5. ಮಾಪಕ ಅಳವಡಿಸಿಕೊಂಡು ಕೆ.ಇ.ಆರ್.ಸಿ. ರವರು ನಿಗದಿಪಡಿಸುವ ಜಕಾತಿ ದರದಂತೆ ವಿದ್ಯುತ್ ಶುಲ್ಕ ಪಾವತಿಸುವ ನೀರಾವರಿ ಪಂಪ್‌ಸೆಟ್‌ಗಳ ರೈತರಿಗೆ ಹೆಚ್ ವಿಡಿಎಸ್ ವ್ಯವಸ್ಥೆಯಡಿಯಲ್ಲಿ ಉಪಕೇಂದ್ರದಿಂದ ಪ್ರತ್ಯೇಕ 11 ಕೆ.ವಿ ಎಬಿಸಿ (ಏರಿಯಲ್ ಬಂಚ್ಡ್ ಕೇಬಲ್ ಕವರ್ಡ್ ಕಂಡಕ್ಟರ್) ವಾಹಕವನ್ನು ರಚಿಸಲಾಗುವುದು. ಈ ಫೀಡರ್ ರಚನೆಯ ಸಂಪೂರ್ಣ ವೆಚ್ಚವನ್ನು ವಿದ್ಯುತ್ ಕಂಪನಿಗಳು ಭರಿಸುತ್ತವೆ. ಈ ವಿಧಾನದಲ್ಲಿ ವಿದ್ಯುತ್ ಸಂಪರ್ಕ ಪಡೆಯಬಯಸುವ ರೈತರು ಠೇವಣಿ ಶುಲ್ಕ ಹಾಗೂ ಪರಿವರ್ತಕದ ವೆಚ್ಚವನ್ನೂ ಭರಿಸಬೇಕಾಗುವುದು. ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ 2017–18ನೇ ಸಾಲಿನಿಂದ 2020–21ನೇ ಸಾಲಿನ ಆಗಸ್ಟ್ 2020ರ ಅಂತ್ಯದವರೆಗೆ ಒಟ್ಟು 1288 ಸಂಖ್ಯೆಯ ಅರ್ಜಿಗಳು ನೋಂದಣಿಗೊಂಡಿದ್ದು, 851 ಸಂಖ್ಯೆಯ ಅರ್ಜಿಗಳ ಕೃಷಿ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಿ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿದೆ. ಬಾಕಿ ಉಳಿದಿರುವ 437 ಸಂಖ್ಯೆಯ ಕಾಮಗಾರಿಗಳನ್ನು ಜೇಷ್ಠತೆಯ ಮೇರೆಗೆ ಕೈಗೆತ್ತಿಕೊಳ್ಳಲಾಗಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಪೂರ್ಣಗೊಳಿಸಲಾಗುವುದು.

ಸಂಖ್ಯೆ: ಎನರ್ಜಿ 119 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 576

2) ಸದಸ್ಯರ ಹೆಸರು : ಶ್ರೀ ವಿ. ಮುನಿಯಪ್ಪ

3) ಉತ್ತರಿಸಬೇಕಾದ ದಿನಾಂಕ : 22.09.2020

4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಹೆಚ್.ಎನ್.ವ್ಯಾಲಿ ಯೋಜನೆಯ ಮೂಲ ಉದ್ದೇಶದಂತೆ ಮೇಲಿನ ಕೆರೆಯಲ್ಲಿ ಶೇಕಡಾ ಎಷ್ಟು ಪ್ರಮಾಣದ ನೀರು ತುಂಬಿದ ನಂತರ ಕೆಳಗಿನ ಕೆರೆಗೆ ನೀರನ್ನು ಹರಿಸಲಾಗುತ್ತದೆ.	ಹೆಚ್.ಎನ್.ವ್ಯಾಲಿ ಯೋಜನೆಯ ಮೂಲ ಉದ್ದೇಶದಂತೆ ಮೇಲಿನ ಕೆರೆಯ ಸಾಮರ್ಥ್ಯದ ಶೇಕಡಾ 50 ರಷ್ಟು ಪ್ರಮಾಣದ ನೀರು ತುಂಬಿದ ನಂತರ ಕೆಳಗಿನ ಕೆರೆಗೆ ನೀರನ್ನು ಹರಿಸಲಾಗುವುದು ಹಾಗೂ ಸರಣಿಯ ಎಲ್ಲಾ ಕೆರೆಗಳು ಶೇಕಡಾ 50% ತುಂಬಿದ ನಂತರ ಕೊನೆಯ ಕೆರೆಯಿಂದ ಪೂರ್ಣ ಪ್ರಮಾಣದಲ್ಲಿ ತುಂಬುತ್ತಾ, ತುಂಬಿದ ಕೆರೆಗೆ ಹರಿಸಲಾಗುವ ಗೇಟ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಬಂದ್ ಮಾಡುವ ಮೂಲಕ ಮೇಲಿನ ಕೆರೆಯವರಗೆ ಪೂರ್ಣ ಪ್ರಮಾಣದಲ್ಲಿ ತುಂಬಲು ಉದ್ದೇಶಿಸಿ ಯೋಜನೆಯನ್ನು ರೂಪಿಸಲಾಗಿರುತ್ತದೆ.
ಆ	ಯೋಜನೆಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಗಳಲ್ಲಿ ಶೇಕಡ 50% ನೀರು ತುಂಬಿದ ನಂತರ ಸರಣಿಯಲ್ಲಿನ ಮುಂದಿನ ಕೆರೆಗೆ ನೀರನ್ನು ಹರಿಸಲಾಗುತ್ತಿರುವುದಾಗಿ ತಿಳಿಸಿದ್ದು ಈ ಬಗ್ಗೆ ಇಲಾಖಾ ಮುಖ್ಯಸ್ಥರಿಂದ ಪಡೆದ ಅನುಮೋದನೆ ಪತ್ರವನ್ನು ನೀಡುವುದು;	ಹೆಚ್.ಎನ್.ವ್ಯಾಲಿ ಯೋಜನೆಯ ಮೂಲ ಉದ್ದೇಶದಂತೆ ಮೇಲಿನ ಕೆರೆಯ ಸಾಮರ್ಥ್ಯದ ಅರ್ಧದಷ್ಟು ನೀರು ತುಂಬಿದ ನಂತರ ಕೆಳಗಿನ ಕೆರೆಗೆ ನೀರು ಹರಿಸುವುದು ಅನುಮೋದಿತ ಡಿಪಿಆರ್‌ನಲ್ಲಿ ಒಳಗೊಂಡಿರುವುದರಿಂದ ಇಲಾಖಾ ಮುಖ್ಯಸ್ಥರಿಂದ ಪ್ರತ್ಯೇಕವಾಗಿ ಅನುಮೋದನೆ ಪಡೆಯುವ ಸಂಭವ ಉದ್ಭವಿಸುವುದಿಲ್ಲ.
ಇ	ಚಿಕ್ಕಬಳ್ಳಾಪುರ ಕಂದವಾರ ಕೆರೆ ಮತ್ತು ದಿಬ್ಬೂರು ಕೆರೆಗೆ ಅಳವಡಿಸಿರುವ ಗೇಟ್‌ಗಳ ಮಟ್ಟವನ್ನು ಕೆರೆಯ ಸಾಮರ್ಥ್ಯದ ಶೇಕಡ ಎಷ್ಟು ಪ್ರಮಾಣಕ್ಕೆ ಅಳವಡಿಸಲಾಗಿದೆ;	ಕಂದವಾರ ಕೆರೆ ಮತ್ತು ದಿಬ್ಬೂರು ಕೆರೆಗಳಿಗೆ, ಕೆರೆಗಳ ಸಾಮರ್ಥ್ಯದ ಶೇಕಡ ಅರ್ಧದಷ್ಟು ಮಟ್ಟಕ್ಕೆ ಗೇಟ್‌ಗಳನ್ನು ಅಳವಡಿಸಲಾಗಿದೆ.
ಈ	ಶೇಕಡಾ 50% ಕೆರೆಯ ಗೇಟ್‌ಗಳನ್ನು ಅಳವಡಿಸದಿರುವುದು ಶಿಡ್ಲಘಟ್ಟ ತಾಲ್ಲೂಕಿನ ಕೆರೆಗಳಿಗೆ ನೀರನ್ನು ಹರಿಸುವಲ್ಲಿ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಮನಸೋಇಚ್ಛೆ	ಹೆಚ್ ಎನ್ ವ್ಯಾಲಿ ಯೋಜನೆಯ ಅನುಮೋದಿತ ಡಿಪಿಆರ್‌ನಂತೆ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದ್ದು, ಶೇಕಡಾ 50% ನೀರನ್ನು ಮೇಲಿನ ಕೆರೆಗೆ ಹರಿಸಿದ ನಂತರ ಕೆಳಗಿನ ಕೆರೆಗೆ ನೀರನ್ನು

	ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;	ಹರಿಸಬೇಕಿರುತ್ತದೆ. ಇದರಂತೆ ಶೇಕಡಾ 50% ತುಂಬಿದ ನಂತರ ಕೆಳಗಿನ ಕೆರೆಗೆ ನೀರನ್ನು ಹರಿಸುವ ವ್ಯವಸ್ಥೆಯಿರುತ್ತದೆ. ಯೋಜನೆಯಲ್ಲಿ ಸರಣಿವಾರು ಕೆರೆಗಳಿಗೆ ಅನುಮೋದನೆಯಾಗಿರುವ ಪರಿಮಾಣಗಳಿಗೆ ಅನುಗುಣವಾಗಿ ಗೇಟ್‌ಗಳನ್ನು ಅಳವಡಿಸಲಾಗಿದ್ದು, ಅಧಿಕಾರಿಗಳು ಮತ್ತು ಗುತ್ತಿಗೆದಾರರು ಮನಸೋಇಚ್ಛೆ ಕೆಲಸ ನಿರ್ವಹಿಸುತ್ತಿರುವುದಿಲ್ಲ. ಪ್ರಸ್ತುತ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಯೋಜನೆಗೆ ನೀಡಬೇಕಿದ್ದ 210 ಎಂ.ಎಲ್.ಡಿ ನೀರಿನ ಪೈಕಿ 70 ಎಂ.ಎಲ್.ಡಿ.ನೀರನ್ನು ಮಾತ್ರ ನೀಡುತ್ತಿದ್ದು, ಉಳಿದ 140 ಎಂ.ಎಲ್.ಡಿ ನೀರನ್ನು ಡಿಸೆಂಬರ್ 2020ರ ಅಂತ್ಯಕ್ಕೆ ನೀಡುವುದಾಗಿ ತಿಳಿಸಿರುತ್ತಾರೆ. ಇದರಿಂದಾಗಿ ಹಾಲಿ ದೊರೆಯುತ್ತಿರುವ ನೀರಿನ ಪ್ರಮಾಣ ಕಡಿಮೆಯಿರುವುದರಿಂದ ಹಾಗೂ ಶಿಡ್ಲಘಟ್ಟ ತಾಲ್ಲೂಕಿನ ಕೆರೆಗಳು ಕ್ಲಸ್ಟರ್‌ನ ಕೊನೆಯ ಭಾಗದಲ್ಲಿರುವುದರಿಂದ ನೀರು ಹರಿಸಲು ವಿಳಂಬವಾಗುತ್ತದೆ.
ಉ	ಹೆಚ್.ಎನ್.ವ್ಯಾಲಿ ಯೋಜನೆಯನ್ನು ಪೂರ್ಣ ಗೊಳಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು ಮತ್ತು ಎಲ್ಲಾ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು)	ಗುತ್ತಿಗೆ ಕರಾರಿನಂತೆ ದಿ:30.09.2018 ಕ್ಕೆ ಕಾಮಗಾರಿ ಪೂರ್ಣಗೊಳಿಸಬೇಕಾಗಿರುತ್ತದೆ. ವಿವಿಧ ಇಲಾಖೆಗಳಾದ ರಾಷ್ಟ್ರೀಯ ಹೆದ್ದಾರಿ, ಬೆಸ್ಕಾಂ, ಅರಣ್ಯ ಇಲಾಖೆಯವರಿಂದ ಅನುಮತಿ ಪಡೆದು ನಂತರ ಕಾಮಗಾರಿ ನಿರ್ವಹಿಸಬೇಕಿದ್ದರಿಂದ ವಿಳಂಬವಾಗಿರುತ್ತದೆ. ಪ್ರಸ್ತುತ ಶೇ.85ರಷ್ಟು ಕಾಮಗಾರಿಗಳು ಪೂರ್ಣಗೊಳಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಸಂಖ್ಯೆ: ಸನೀಇ 169 ವಿಸವಿ 2020.

(ಜೆ.ಸಿ ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	582
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವವರು	ಅಬಕಾರಿ ಸಚಿವರು
ಉತ್ತರದ ದಿನಾಂಕ	22-09-2020

ಕ್ರಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೊಸದಾಗಿ ಎಂ.ಎಸ್.ಐ.ಎಲ್ ವತಿಯಿಂದ ಮದ್ಯ ಮಾರಾಟ ಮಳಿಗೆಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;	ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ 463 ಸನ್ನದುಗಳನ್ನು ಹಾಗೂ ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ 900 ಸನ್ನದುಗಳನ್ನು ಹೆಚ್ಚುವರಿಯಾಗಿ ಎಂ.ಎಸ್.ಐ.ಎಲ್ ವತಿಯಿಂದ ರಾಜ್ಯದಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.
ಆ)	ಹಾಗಿದ್ದಲ್ಲಿ, ಎಷ್ಟು ಹೊಸ ಮದ್ಯ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುವುದು;	ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. ಈ ಪೈಕಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 428 ಸನ್ನದುಗಳನ್ನು ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗಿದ್ದು, ಇನ್ನೂ 35 ಸನ್ನದುಗಳನ್ನು ಮಂಜೂರು ಮಾಡಲು ಬಾಕಿ ಇರುತ್ತದೆ. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 4 ರಂತೆ ಒಟ್ಟು 880, ಯಾದಗಿರಿ ಜಿಲ್ಲೆಯ 04 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11-ಸಿ ಸನ್ನದುಗಳನ್ನು ಹೆಚ್ಚುವರಿಯಾಗಿ ಎಂ.ಎಸ್.ಐ.ಎಲ್ ಸಂಸ್ಥೆಗೆ ಮಂಜೂರು ಮಾಡಲಾಗಿದೆ. ಈ ಪೈಕಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟಾರೆ 491 ಸನ್ನದುಗಳನ್ನು ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗಿದ್ದು, ಇನ್ನೂ 409 ಸನ್ನದುಗಳು ಮಂಜೂರು ಮಾಡಲು ಬಾಕಿ ಇರುತ್ತದೆ. ಹೀಗೆ ಒಟ್ಟಾರೆಯಾಗಿ, 444 ಸಿಎಲ್ 11-ಸಿ ಸನ್ನದುಗಳನ್ನು ಮಂಜೂರು ಮಾಡಲು ಬಾಕಿ ಇರುತ್ತದೆ.

ಇ)	ಪ್ರತಿ ವಿಧಾನಸಭಾ ಮತಕ್ಷೇತ್ರಕ್ಕೆ ಎಷ್ಟು ಮದ್ಯ ಮಾರಾಟ ಮಳಿಗೆಗಳನ್ನು ತೆರೆಯಲು ಗುರಿ ಹೊಂದಲಾಗಿದೆ;	ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 4 ರಂತೆ ಒಟ್ಟು 880, ಯಾದಗಿರಿ ಜಿಲ್ಲೆಯ 04 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11–ಸಿ ಸನ್ನದುಗಳನ್ನು ತೆರೆಯಲು ಅನುಮತಿ ನೀಡಿದೆ.
ಈ)	ಯಾವ ವರ್ಷ ಈ ಹೊಸ ಮಳಿಗೆಗಳನ್ನು ತೆರೆಯಲಾಗುವುದು?	ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟಾರೆ 491 ಸನ್ನದುಗಳನ್ನು ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗಿದ್ದು, ಇನ್ನೂ 409 ಸನ್ನದುಗಳು ಮಂಜೂರು ಮಾಡಲು ಬಾಕಿ ಇರುತ್ತದೆ. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಪ್ರಸ್ತಾವನೆಯು ಸ್ವೀಕೃತವಾಗುವ ಸ್ಥಳಗಳಿಗೆ ನಿಯಮಾನುಸಾರ ಪರಿಶೀಲಿಸಿ ಸನ್ನದುಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಇ 57 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 585
ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ)
ಉತ್ತರಿಸುವ ದಿನಾಂಕ : 22.09.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಮುಳವಾಡ ಏತ ನೀರಾವರಿ ಯೋಜನೆಯ ವೃತ್ತ ಕಛೇರಿಯನ್ನು ಬಸವನಬಾಗೇವಾಡಿಯಲ್ಲಿ ನಿರ್ಮಿಸುವುದಕ್ಕೆ ಕೃಷ್ಣಾ ಭಾಗ್ಯ ಜಲ ನಿಗಮದಿಂದ ಎಷ್ಟು ಅನುದಾನವನ್ನು ಯಾವ ವರ್ಷ ಒದಗಿಸಲಾಗಿದೆ;	ಮುಳವಾಡ ಏತ ನೀರಾವರಿ ಯೋಜನೆಯ ವೃತ್ತ ಕಛೇರಿಯನ್ನು ಬಸವನ ಬಾಗೇವಾಡಿಯಲ್ಲಿ ನಿರ್ಮಿಸಲು ರೂ.21.00 ಕೋಟಿ ಮೊತ್ತಕ್ಕೆ ಅಂದಾಜು ಪತ್ರಿಕೆ ತಯಾರಿಸಲಾಗಿದೆ. 2020-21 ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ರೂ.6.40 ಕೋಟಿ ಅನುದಾನ ಕಲ್ಪಿಸಲಾಗಿದೆ.
ಆ)	ಹಾಗಿದ್ದಲ್ಲಿ, ವೃತ್ತ ಕಛೇರಿ ನಿರ್ಮಾಣದ ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು;	ದಿನಾಂಕ:16/03/2020ರಂದು ಕೃಷ್ಣಾ ಭಾಗ್ಯ ಜಲ ನಿಗಮದ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಸದರಿ ವೃತ್ತ ಕಛೇರಿಯ ಅಂದಾಜು ಪತ್ರಿಕೆ ಮತ್ತು ಡಿಟಿಪಿಗಳಿಗೆ ತಿರುವಳಿ ಪಡೆಯಲಾಗಿರುತ್ತದೆ. ಕಟ್ಟಡದ ನಕ್ಷೆಯನ್ನು ಮುಖ್ಯ ವಾಸ್ತುಶಿಲ್ಪಿ ಇವರಿಂದ ಅನುಮೋದನೆ ಪಡೆದುಕೊಳ್ಳಲು ದಿನಾಂಕ:16/03/2020 ರಲ್ಲಿ ಕೋರಲಾಗಿತ್ತು, ಕೋವಿಡ್-19 ಮತ್ತು ಲಾಕ್‌ಡೌನ್ ನಿಮಿತ್ತ ಮುಖ್ಯ ವಾಸುಶಿಲ್ಪಿ ರವರು ದಿನಾಂಕ:28/08/2020ರಲ್ಲಿ ಕಟ್ಟಡದ ನಕ್ಷೆಗಳನ್ನು ತಯಾರಿಸಿ ನೀಡಿರುತ್ತಾರೆ.
ಇ)	ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಸದರಿ ವೃತ್ತ ಕಛೇರಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು?	ಈಗಾಗಲೇ ದಿನಾಂಕ:20/03/2020ರಲ್ಲಿ ಕಾಮಗಾರಿಗೆ ಟೆಂಡರ್ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಕಾಮಗಾರಿ ನಿರ್ಮಾಣಕ್ಕಾಗಿ 11 ತಿಂಗಳ ಕಾಲಾವಧಿ ನಿಗದಿಪಡಿಸಲಾಗಿರುತ್ತದೆ. ಪ್ರಸ್ತಾಪಿತ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಕೈಗೊಂಡು ಆರ್ಥಿಕ ಇಲಾಖೆಯ ಸುತ್ತೋಲೆ ರನ್ವಯ ಅಗತ್ಯ ಅನುಮತಿ ಪಡೆದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಸಂಖ್ಯೆ: ಜಸಂಇ 80 ಡಬ್ಲ್ಯೂಬಿಎಂ 2020

(ರಮೇಶ್ ಎಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 586
2. ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ
3. ಉತ್ತರಿಸಬೇಕಾದ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆಯಲ್ಲಿರುವ ಕೆರೆಗಳು ಎಷ್ಟು?	ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ನಿಯಂತ್ರಕ ಪ್ರಾಧಿಕಾರವಾಗಿರುವುದರಿಂದ (Regulatory Authority) ಪ್ರಾಧಿಕಾರದ ನಿರ್ವಹಣೆಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದನ್ವಯ ಕೆರೆಗಳ ಉಸ್ತುವಾರಿಯನ್ನು ಹೊಂದಿರುವ ಇಲಾಖೆಯಿಂದಲೇ ನಿರ್ವಹಣೆಯನ್ನು ಕೈಗೊಳ್ಳಬೇಕಾಗಿರುತ್ತದೆ.
ಆ	ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆಯಲ್ಲಿರುವ ಕೆರೆಗಳು ಯಾವುವು?	ಉದ್ಭವಿಸುವುದಿಲ್ಲ.
ಇ	ಕೆರೆ ಅಭಿವೃದ್ಧಿ ಪ್ರಾಧಿಕಾರ ಸದರಿ ಕೆರೆಗಳನ್ನು ನಿರ್ವಹಿಸದೇ ಇರುವುದರಿಂದ ಕೆರೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಉದ್ಭವಿಸುವುದಿಲ್ಲ.
ಈ	ಹಾಗಿದ್ದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರ ನಿರ್ವಹಣೆಯಲ್ಲಿರುವ ಕೆರೆಗಳನ್ನು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಿಕೊಂಡು ಅವುಗಳನ್ನು ಅಭಿವೃದ್ಧಿಪಡಿಸಲು ಮತ್ತು ಸಂರಕ್ಷಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?	ಉದ್ಭವಿಸುವುದಿಲ್ಲ.

ಸಂಖ್ಯೆ: ಸನೀಇ 141 ಎಲ್‌ಎಕ್ಯೂ 2020

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	587
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)
ಉತ್ತರಿಸುವವರು	ಅಬಕಾರಿ ಸಚಿವರು
ಉತ್ತರದ ದಿನಾಂಕ	22-09-2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಗೌರಿಬಿದನೂರು ತಾಲ್ಲೂಕಿನಲ್ಲಿ ಕುದುರೆಬ್ಯಾಲ್ಯ ಗ್ರಾಮದಲ್ಲಿ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆ ಸ್ಥಾಪಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;	ಗೌರಿಬಿದನೂರು ತಾಲ್ಲೂಕಿನ ಕುದುರೆಬ್ಯಾಲ್ಯ ಗ್ರಾಮದಲ್ಲಿ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆ ಸ್ಥಾಪಿಸಲು ನೀಡಲಾಗಿದ್ದ ಪ್ರಸ್ತಾವನೆಯನ್ನು ಎಂ.ಎಸ್.ಐ.ಎಲ್ ಸಂಸ್ಥೆಯವರು ಹಿಂಪಡೆದ ಕಾರಣ ಪ್ರಸ್ತುತ ಈ ವಿಷಯಕ್ಕೆ ಸಂಬಂಧಿಸಿದ ಯಾವ ಪ್ರಸ್ತಾವನೆಯು ಸರ್ಕಾರದ ಮುಂದೆ ಬಾಕಿ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಅನುಮತಿ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;	ಉದ್ಭವಿಸುವುದಿಲ್ಲ.
ಇ)	ಈ ಪ್ರಸ್ತಾವನೆಯಲ್ಲಿ ಮಂಜೂರಾತಿ ಅರ್ಹತೆಗೆ ಏನಾದರೂ ತೊಡಕುಗಳು ಇದೆಯೇ; ಇಲ್ಲವಾದಲ್ಲಿ ಕೂಡಲೇ ಅನುಮತಿ ನೀಡದಿರಲು ಕಾರಣವೇನು; (ವಿವರ ನೀಡುವುದು)	ಸದರಿ ಮದ್ಯ ಮಾರಾಟ ಮಳಿಗೆಯನ್ನು ತೆರೆಯದಿರಲು ಗ್ರಾಮಸ್ಥರು, ಮಹಿಳಾ ಸ್ವ-ಸಹಾಯ ಸಂಘಗಳು, ಪದ್ಮರಾಜ್ ಜೈನ್, ಕೆ.ಪಿ.ಸಿ.ಸಿ ಸದಸ್ಯರು, ರಾಜ್ಯ ಕಾರ್ಯದರ್ಶಿ, ಇಂಟೆಕ್ ರವರು, ಕುದುರೆಬ್ಯಾಲ್ಯ ಗ್ರಾಮ ಪಂಚಾಯ್ತಿ ಸದಸ್ಯರು ಮತ್ತು ಮಹಿಳಾ ಸಂಘಗಳ ಸದಸ್ಯರುಗಳಿಂದ ಪದೇ ಪದೇ ಹಲವಾರು ದೂರುಗಳು ಸ್ವೀಕೃತಗೊಂಡ ಹಿನ್ನೆಲೆಯಲ್ಲಿ ಎಂ.ಎಸ್.ಐ.ಎಲ್ ಸಂಸ್ಥೆಯವರು ಈ ಪ್ರಸ್ತಾವನೆಯನ್ನು ಹಿಂಪಡೆದಿರುತ್ತಾರೆ.
ಈ)	2020-21 ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಎಷ್ಟು ಎಂ.ಎಸ್.ಐ.ಎಲ್ ಘಟಕಗಳನ್ನು ಸ್ಥಾಪಿಸಲು ಕ್ರಮ ಜರುಗಿಸಲಾಗಿರುವುದು? (ವಿವರ ನೀಡುವುದು)	2020-21ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನ ಕಾಮಗಾನಹಳ್ಳಿಯಲ್ಲಿ 01 ಎಂ.ಎಸ್.ಐ.ಎಲ್ ಘಟಕವನ್ನು ಸ್ಥಾಪಿಸಲು ಅಬಕಾರಿ ಇಲಾಖೆಯಿಂದ ಪೂರ್ವಾನುಮತಿ ನೀಡಲಾಗಿದ್ದು, ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಪ್ರಸ್ತಾವನೆಯು ಸ್ವೀಕೃತವಾಗುವ ಸ್ಥಳಗಳಿಗೆ ನಿಯಮಾನುಸಾರ ಪರಿಶೀಲಿಸಿ ಸನ್ನದುಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಇ 59 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 588
2. ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಕೊರಟಗೆರೆ ತಾಲ್ಲೂಕು ಬೈರಗೊಂಡ್ಲು ಗ್ರಾಮದ ಹತ್ತಿರ ಜಲಾಶಯದ ನಿರ್ಮಾಣ ಪ್ರಾರಂಭ ಆಗಿದೆಯೇ;	ಬೈರಗೊಂಡ್ಲು ಜಲಾಶಯದ ನಿರ್ಮಾಣ ಕಾಮಗಾರಿಯನ್ನು ರೂ.592.34 ಕೋಟಿ ಮೊತ್ತದಲ್ಲಿ ಫೆಬ್ರವರಿ–2018ರಲ್ಲಿ ಗುತ್ತಿಗೆ ವಹಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಪೂರ್ವ ಸಿದ್ಧತಾ ಕೆಲಸ ಕಾರ್ಯಗಳನ್ನು ಕೈಗೊಂಡಾಗ ಕೊರಟಗೆರೆ ತಾಲ್ಲೂಕಿನ ರೈತರು ಏಕರೂಪ ಭೂಪರಿಹಾರ ನೀಡಲು ಒತ್ತಾಯಿಸಿ ಅಡ್ಡಿಪಡಿಸಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.
ಆ)	ಇಲ್ಲದಿದ್ದಲ್ಲಿ, ಕಾರಣಗಳೇನು;	
ಇ)	ಭೂಮಿ ಸ್ವಾಧೀನ ಪಡಿಸಿಕೊಳ್ಳಲು ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು ಕೊರಟಗೆರೆ ತಾಲ್ಲೂಕಿನ ಜಮೀನು ಖರೀದಿ ದರ ನಿಗದಿಯಲ್ಲಿ ವ್ಯತ್ಯಾಸ ಇರುವುದು ಮತ್ತು ಇತ್ಯರ್ಥಪಡಿಸಲು ಸಮಸ್ಯೆ ಆಗಿರುವುದು ನಿಜವೇ;	ಹೌದು.
ಈ)	ಹಾಗಾದಲ್ಲಿ, ಈ ಸಮಸ್ಯೆ ಬಗೆಹರಿಸಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿರುವುದು ನಿಜವಲ್ಲವೇ;	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಭೂಸ್ವಾಧೀನಕೊಳ್ಳಪಡುವ ಜಮೀನಿಗೆ 'ಏಕರೂಪ ಭೂಪರಿಹಾರ' ನಿಗದಿ ಪಡಿಸಬೇಕಾಗಿರುತ್ತದೆ. ಸದರಿ ಯೋಜನೆಯ ತೀವ್ರ ಅನುಷ್ಠಾನಕ್ಕಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ "ಉನ್ನತ ಅಧಿಕಾರಿ ಸಮಿತಿ" (High Power Committee) ರಚಿಸಲಾಗಿದ್ದು, ಸದರಿ ಸಮಿತಿಯಲ್ಲಿ 'ಏಕರೂಪ ಭೂಪರಿಹಾರ' (Uniform Rate of Land Compensation) ಕುರಿತಾಗಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದಾಗಿರುತ್ತದೆ. ಸದರಿ ಸಮಿತಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಬೈರಗೊಂಡ್ಲು ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುವ ಜಮೀನುಗಳಿಗೆ ಏಕರೂಪ ಪರಿಹಾರ ದ್ಥರ ಕುರಿತಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿರುತ್ತದೆ.
ಉ)	ಹಾಗಾದಲ್ಲಿ, ಈ ವರದಿಯ ಶಿಫಾರಸ್ಸುಗಳೇನು;	
ಊ)	ಶಿಫಾರಸ್ಸುಗಳನ್ನು ಅಂಗೀಕರಿಸಿ ಕೂಡಲೇ ಭೂಮಿ ಖರೀದಿಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗಲಿದೆಯೇ; ಹಾಗೂ ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?	

ಸಂಖ್ಯೆ: ಜಸಂಇ 77 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	589
2	ಸದಸ್ಯರ ಹೆಸರು	:	ಶ್ರೀ ನಂಜೇಗೌಡ
3	ಉತ್ತರಿಸಬೇಕಾದ ದಿನಾಂಕ	:	22.09.2020
4	ಉತ್ತರಿಸುವವರು	:	ಸಣ್ಣ ನೀರಾವರಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಾಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆಯೇ;	ಹೌದು. ಕೆರೆ ಸಂಜೀವಿನಿ ಯೋಜನೆಯಡಿಯಲ್ಲಿ ಮಾಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 8 ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ. 8 ಕೆರೆಗಳ ಪೈಕಿ 1 ಸಣ್ಣ ನೀರಾವರಿ ಕೆರೆ ಹಾಗೂ 7 ಜಿಲ್ಲಾ ಪಂಚಾಯತ್ ಕೆರೆಗಳಾಗಿರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ)	ಹಾಗಿದ್ದಲ್ಲಿ, ಎಷ್ಟು ಕೆರೆಗಳಲ್ಲಿ ಹೂಳೆತ್ತಲಾಗಿದೆ; (ಕೆರೆಗಳ ವಿವರ ಒದಗಿಸುವುದು)	ಕೆರೆ ಸಂಜೀವಿನಿ ಯೋಜನೆಯಡಿ 8 ಕೆರೆಗಳ ಪೈಕಿ 2 ಕೆರೆಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ ಹಾಗೂ 1 ಕೆರೆಯ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 5 ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ. 2018-19ನೇ ಸಾಲಿನಲ್ಲಿ 1 ಕೆರೆಯ ಹೂಳೆತ್ತುವ ಹಾಗೂ ಅಭಿವೃದ್ಧಿ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ಮೊತ್ತಕ್ಕೆ ಕೈಗೊಳ್ಳಲಾಗುತ್ತಿದೆ ಹಾಗೂ 20019-20ನೇ ಸಾಲಿನಲ್ಲಿ 2 ಕೆರೆಗಳ ಹೂಳೆತ್ತುವ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ರೂ.125.00ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕೆರೆಯ ಹೂಳೆತ್ತುವ ಹಾಗೂ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಇ)	ಉಳಿದ ಕೆರೆಗಳಲ್ಲಿ ಯಾವಾಗ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು; (ವಿವರ ಒದಗಿಸುವುದು)	ಉಳಿದ 8 ಕೆರೆಗಳಲ್ಲಿ ಹೂಳೆತ್ತಲು ಅನುದಾನದ ಲಭ್ಯತೆಗೆ ಅನುಗುಣವಾಗಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.
ಈ)	ಈ ಕೆರೆಗಳಲ್ಲಿ ನೀರು ಸಂಗ್ರಹವಾಗುವ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ನೀರು ಸಂಗ್ರಹ ಮಾಡಲು 3 ಕೆರೆಗಳ ಪೈಕಿ 1 ಕೆರೆಯ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದ್ದು, ಉಳಿದ 2 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: MID 156 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ವಿಧಾನ ಸಭಾ ಸದಸ್ಯರು ಶ್ರೀ ನಂಜೇಗೌಡ ಕೆ.ವೈ, ರವರು ಮಂಡಿಸಿರುವ ಪ್ರಶ್ನೆ ಸಂಖ್ಯೆ 589ಕ್ಕೆ

ಅನುಬಂಧ – 1

ಕೆರೆ ಸಂಜೀವಿನಿ ಯೋಜನೆ – 2019–20 (ಸಾಮನ್ಯ)

ಕ್ರ.ಸಂ	ತಾಲ್ಲೂಕು	ಗ್ರಾಮ	ಕೆರೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಲಾಖೆ	ಷರಾ
1	ಮಾಲೂರು	ದೊಡ್ಡಮಲ್ಲೆ	ಮಾವಿನಕೆರೆ	4.00	ಜಿ.ಪಂ	ಪ್ರಾರಂಭಿಸಬೇಕಾಗಿದೆ
2	ಮಾಲೂರು	ಮೂತಂಗಪುರ	ರಾಯಸಿಂಗನಕೆರೆ	4.00	ಜಿ.ಪಂ	ಪ್ರಾರಂಭಿಸಬೇಕಾಗಿದೆ
3	ಮಾಲೂರು	ನಲ್ಲಾಂಡಹಳ್ಳಿ	ಹುಚ್ಚನಕೆರೆ	4.00	ಜಿ.ಪಂ	ಪ್ರಾರಂಭಿಸಬೇಕಾಗಿದೆ
4	ಮಾಲೂರು	ದೊಡ್ಡಿಗ್ಗಲೂರು	ಕೆರೆ	4.00	ಜಿ.ಪಂ	ಪೂರ್ಣಗೊಂಡಿದೆ
5	ಮಾಲೂರು	ಕಣಗಲ	ಈರಣ್ಣಕೆರೆ	4.00	ಜಿ.ಪಂ	ಪ್ರಾರಂಭಿಸಬೇಕಾಗಿದೆ
6	ಮಾಲೂರು	ಕೊಮ್ಮನಹಳ್ಳಿ	ಕೆರೆ	4.00	ಜಿ.ಪಂ	ಪ್ರಗತಿಯಲ್ಲಿದೆ

ಕೆರೆ ಸಂಜೀವಿನಿ ಯೋಜನೆ – 2019–20 (ಎಸ್. ಸಿ.ಪಿ)

ಕ್ರ.ಸಂ	ತಾಲ್ಲೂಕು	ಗ್ರಾಮ	ಕೆರೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಲಾಖೆ	ಷರಾ
1	ಮಾಲೂರು	ತೊಳಕನಹಳ್ಳಿ	ಊರಮುಂದಿನಕೆರೆ	4.00	ಜಿ.ಪಂ.	ಪೂರ್ಣಗೊಂಡಿದೆ
2	ಮಾಲೂರು	ಮಾಸ್ತಿ	ಕೃಷ್ಣರಾಜಸಾಗರಕೆರೆ	4.00	ಸ.ನೀ	ಪ್ರಾರಂಭಿಸಬೇಕಾಗಿದೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	591
ಮಾನ್ಯ ಸದಸ್ಯರ ಹೆಸರು	ಶ್ರೀ ನಂಜೇಗೌಡ ಕೆ. ವೈ (ಮಾಲೂರು)
ಉತ್ತರಿಸಬೇಕಾದವರು	ಅಬಕಾರಿ ಸಚಿವರು
ಉತ್ತರಿಸಬೇಕಾದ ದಿನಾಂಕ:	22-09-2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಗೆ ಮಂಜೂರಾಗಿರುವ ಎಂ.ಎಸ್.ಐ.ಎಲ್ ಸಗಟು ಮದ್ಯದಂಗಡಿ ಸನ್ನದುಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಹೊಸದಾಗಿ 09 ಎಂ.ಎಸ್.ಐ.ಎಲ್ ಮದ್ಯದಂಗಡಿಗಳನ್ನು ಮಂಜೂರು ಮಾಡಲಾಗಿದ್ದು, ವಿವರ ಕೆಳಕಂಡಂತಿದೆ;
<table>
<tr><th>ಕ್ರಸಂ</th><th>ತಾಲ್ಲೂಕು</th><th colspan="3">ಸಿಎಲ್-11ಸಿ ಸನ್ನದುಗಳ ಸಂಖ್ಯೆ</th></tr>
<tr><th></th><th></th><th>2017-18</th><th>2018-19</th><th>2019-20</th></tr>
<tr><td>1</td><td>ಕೋಲಾರ</td><td>01</td><td>01</td><td>-</td></tr>
<tr><td>2</td><td>ಮಾಲೂರು</td><td>00</td><td>01</td><td>-</td></tr>
<tr><td>3</td><td>ಮುಳಬಾಗಿಲು</td><td>02</td><td>01</td><td>-</td></tr>
<tr><td>4</td><td>ಬಂಗಾರಪೇಟೆ</td><td>02</td><td>00</td><td>01</td></tr>
<tr><td></td><td>ಒಟ್ಟು</td><td>05</td><td>03</td><td>01</td></tr>
</table></td></tr>
<tr><td>ಆ)</td><td>ಮಾಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಪರವಾನಗಿ ಪಡೆದಿರುವ ಎಂ.ಎಸ್.ಐ.ಎಲ್ ಮದ್ಯದಂಗಡಿಗಳ ಪೂರ್ಣ ಮಾಹಿತಿ ನೀಡುವುದು;</td><td>ಮಾಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಸ್ತುತ 03 ಎಂ.ಎಸ್.ಐ.ಎಲ್ ಮದ್ಯದಂಗಡಿಗಳು ಮಂಜೂರಾಗಿದ್ದು, ವಿವರಗಳು ಈ ಕೆಳಕಂಡಂತಿದೆ:
1. ನಂ. 3982/3758, ಆದರ್ಶ ಹೋಟೆಲ್ ಹಿಂಭಾಗ, ಕಾರಂಜಿ ಬಡಾವಣೆ, ಮಾಲೂರು ಟೌನ್.
2. ಸರ್ವೇ ನಂ-147/5, ಟೇಕಲ್ ಗ್ರಾಮ, ಮಾಲೂರು ತಾಲ್ಲೂಕು,
3. ಸರ್ವೇ ನಂ-54/5, ಯಟ್ಟಕೋಡಿ ಗ್ರಾಮ, ಮಾಲೂರು ತಾಲ್ಲೂಕು</td></tr>
<tr><td>ಇ)</td><td>ಈ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳೇನು;</td><td>ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ:
i. ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು.
ii. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ರಂತೆ 352 ಸನ್ನದುಗಳು, ಜಿಲ್ಲಾ</td></tr>
</table>

		ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. iii. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ. • ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು. • ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು. • ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.
ಈ)	ಸನ್ನದುಗಳನ್ನು ಪಡೆಯಲು ಅರ್ಜಿದಾರರಿಗೆ ಇರಬೇಕಾದ ಮೂಲ ಅರ್ಹತೆಗಳೇನು?	1. ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 3 (11–ಸಿ) ರನ್ವಯ Only to such companies owned or controlled by the State Govt. and specified by the Govt. ರಂತೆ ಇಂತಹ ಸನ್ನದುಗಳನ್ನು ಸ್ವತ: ನಿರ್ವಹಿಸುವ ಹಾಗೂ ಇತರರಿಗೆ ಯಾವುದೇ ಕಾರಣಕ್ಕೂ ಬಾಡಿಗೆ ಅಥವಾ ವರ್ಗಾವಣೆ ಮಾಡದಿರುವ ಷರತ್ತಿಗೊಳಪಟ್ಟು ಸರ್ಕಾರದಿಂದ ಎಂ.ಎಸ್.ಐ.ಎಲ್ ಸಂಸ್ಥೆಗೆ ಸನ್ನದುಗಳನ್ನು ನೀಡಲು ಅವಕಾಶವಿರುತ್ತದೆ. 2. ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4–ಬಿ ಪ್ರಕಾರ ಅರ್ಜಿ ಸಲ್ಲಿಸಲು ಅನರ್ಹತೆ ಹೊಂದಿರಬಾರದು.

ಆಇ 60 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 597
2. ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ
3. ಉತ್ತರಿಸಬೇಕಾದ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಜಮಖಂಡಿ ಮತ ಕ್ಷೇತ್ರದ ಕಂಕನವಾಡಿ ಗ್ರಾಮದ ಗುಹೇಶ್ವರ ದೇವಸ್ಥಾನದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ.ಬ್ಯಾರೇಜ್ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಜಮಖಂಡಿ ಮತ ಕ್ಷೇತ್ರದ ಕಂಕಣವಾಡಿ ಗ್ರಾಮದ ಗುಹೇಶ್ವರ ದೇವಸ್ಥಾನದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ರೂ.11.00 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ ಪ್ರಸ್ತಾವನೆ ಇರುತ್ತದೆ.
ಆ	ಸದರಿ ಗ್ರಾಮದ ಸಾರ್ವಜನಿಕರು ಮಳೆಗಾಲದಲ್ಲಿ ಆ ಗ್ರಾಮಗಳಿಂದ ಬೇರೆ ಗ್ರಾಮಗಳಿಗೆ ಹೋಗುವುದಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ	ಸದರಿ ಪ್ರಸ್ತಾವನೆಗೆ ರೂ.11.00 ಕೋಟಿ ಸಲ್ಲಿಸಿದ್ದರೂ ಇದುವರೆಗೂ ಮಂಜೂರಾಗದೇ ಇರಲು ಕಾರಣವೇನು?	ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಸಂಖ್ಯೆ:ಸನೀಇ 140 ಎಲ್‌ಎಕ್ಯೂ 2020

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 600
ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ದಿನಾಂಕ : 22.09.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಿಂದ ಕೆ.ಬಿ.ಜೆ.ಎನ್.ಎಲ್. ಮತ್ತು ಕೆ.ಎನ್.ಎನ್.ಎಲ್. ನಿಗಮಗಳಿಂದ ಜಮಖಂಡಿ ಮತ ಕ್ಷೇತ್ರದಲ್ಲಿ ಬರುವ ಕೆನಾಲ್ ಪಕ್ಕದ ರಸ್ತೆಗಳ ಕಾಮಗಾರಿ / ದುರಸ್ಥಿಗೆ ಬಿಡುಗಡೆಯಾದ ಅನುದಾನವೆಷ್ಟು;	**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ:** ನಿಗಮದಡಿ ಕಳೆದ 3 ವರ್ಷಗಳಲ್ಲಿ ಜಮಖಂಡಿ ಮತಕ್ಷೇತ್ರದ ವ್ಯಾಪ್ತಿಯಡಿ ಬರುವ ಮುಳವಾಡ ಏತ ನೀರಾವರಿ ಯೋಜನೆ ಹಂತ-1 & 2ರ ವ್ಯಾಪ್ತಿಯಲ್ಲಿನ ಪಶ್ಚಿಮ ಕಾಲುವೆಯ ಕಿ.ಮೀ.65.00 ರಿಂದ 78.06 ರ ಕಾಲುವೆ ಪಕ್ಕದ ರಸ್ತೆಗಳ ಕಾಮಗಾರಿ/ ದುರಸ್ಥಿ ಕಾಮಗಾರಿಗಳನ್ನು 2017-18 ರಿಂದ 2019-20ನೇ ಸಾಲುಗಳಡಿ ಒಟ್ಟು ರೂ.114.19 ಲಕ್ಷ ಮೊತ್ತದಲ್ಲಿ ವಿಶೇಷ ದುರಸ್ಥಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ **ಕರ್ನಾಟಕ ನೀರಾವರಿ ನಿಗಮ ನಿಯಮಿತ:** ಜಮಖಂಡಿ ಮತ ಕ್ಷೇತ್ರದಲ್ಲಿ 2018-19ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ Construction of Jamkhandi City Bypass road (Aurad Sadashivagad to Hunnur-Hipparagi road) on GLBC Canal Service road – ಕಾಮಗಾರಿಯನ್ನು ರೂ.395.36 ಲಕ್ಷ ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು ಪ್ರಸ್ತುತ ಕಾಮಗಾರಿ ಮುಕ್ತಾಯಗೊಂಡಿರುತ್ತದೆ.
ಆ)	ಸದರಿ ಮತ ಕ್ಷೇತ್ರಕ್ಕೆ ಕೆನಾಲ್ ಪಕ್ಕದ ರಸ್ತೆಗಳ ಅಭಿವೃದ್ಧಿಗೆ ಅನುದಾನ ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?	**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ:** ಜಮಖಂಡಿ ಮತಕ್ಷೇತ್ರದ ವ್ಯಾಪ್ತಿಯಡಿ ಬರುವ ಕಾಲುವೆಗಳ ಪಕ್ಕದ ರಸ್ತೆಗಳ ಕಾಮಗಾರಿ/ದುರಸ್ಥಿ ಕಾರ್ಯವನ್ನು 2020-21ನೇ ಸಾಲಿನ ಕ್ಲೋಜರ್ ಮತ್ತು ವಿಶೇಷ ದುರಸ್ಥಿ ಅನುದಾನದಡಿ ರೂ.19.81 ಲಕ್ಷ ಕಲ್ಪಿಸಿದ್ದು, ದುರಸ್ತಿ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. **ಕರ್ನಾಟಕ ನೀರಾವರಿ ನಿಗಮ ನಿಯಮಿತ:** ಜಮಖಂಡಿ ಕ್ಷೇತ್ರದ ನಿಗಮದ ವ್ಯಾಪ್ತಿಗೆ ಬರುವ ಕೆಳಕಂಡ ಕೆನಾಲ್ ಪಕ್ಕದ ರಸ್ತೆ ಕಾಮಗಾರಿಗಳ ಪ್ರಸ್ತಾವನೆಗಳು ನಿಗಮದ ಪರಿಶೀಲನೆಯಲ್ಲಿರುತ್ತದೆ. (ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿತ ಹೆಸರು	ಅಂದಾಜು ಮೊತ್ತ
1	ಗಣಿ ಶಾಖಾ ಕಾಲುವೆ ಕಿ.ಮೀ ನಂ: 1+00 ದಿಂದ 6+00 ವರೆಗೆ ರಸ್ತೆ ಅಭಿವೃದ್ಧಿಪಡಿಸುವುದು.	200.00
2	ಕೊಣ್ಣೂರ ಮಾಯಿನರ್ ಕಾಲುವೆ ಕಿ.ಮೀ ನಂ:3+00 ರಿಂದ 6+00 ವರೆಗೆ ಸರ್ವಿಸ್ ರಸ್ತೆ ನಿರ್ಮಾಣ ಮಾಡುವುದು.	130.00

ಸಂಖ್ಯೆ: ಜಸಂಇ 84 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 602

2) ಸದಸ್ಯರ ಹೆಸರು : ಶ್ರೀ ರಾಜಾ ವೆಂಕಟಪ್ಪ ನಾಯಕ್

3) ಉತ್ತರಿಸಬೇಕಾದ ದಿನಾಂಕ : 22.09.2020

4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆಗೆ ಕಳೆದ 3 ವರ್ಷಗಳ ಅವಧಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಯಾವ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಇದಕ್ಕೆ ಮಂಜೂರು ಮಾಡಲಾಗಿರುವ ಅನುದಾನವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);	ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆಯಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ನೀರಾವರಿ ಯೋಜನೆಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಸದರಿ ಯೋಜನೆಗಳಿಗೆ ಮಂಜೂರು ಮಾಡಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ	ಮಾನ್ವಿ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿಯಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ; ಯಾವ ಯಾವ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲಾಗಿದೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಕಾಮಗಾರಿಗಳ ತಾಂತ್ರಿಕ ಶಕ್ಯತೆ ಹಾಗೂ ಇಲಾಖೆಗೆ ಒದಗಿಸುವ ಅನುದಾನದ ಮೇರೆಗೆ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು. ಸದರಿ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಯೋಜನೆಗಳಡಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ 37 ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಪ್ರಸ್ತುತ ವರ್ಷ ಹೊಸ ಕಾಮಗಾರಿಗಳಿಗೆ ಇದುವರೆಗೆ ಅನುದಾನ ಒದಗಿಸಲಾಗಿರುವುದಿಲ್ಲ.
ಇ	ಈ ವಿಧಾನಸಭಾ ಕ್ಷೇತ್ರಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಅನುದಾನ ಒದಗಿಸಲಾಗುವುದು?	ಪ್ರಸ್ತುತ ಸಾಲಿನಲ್ಲಿ ಅನುದಾನದ ಲಭ್ಯತೆ ಮೇರೆಗೆ ಸದರಿ ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಒದಗಿಸಲು ಪರಿಶೀಲಿಸಲಾಗುವುದು.

ಸಂಖ್ಯೆ: ಸನೀಇ 167 ವಿಸವಿ 2020.

(ಜೆ.ಸಿ ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	604
ಸದಸ್ಯರ ಹೆಸರು	:	ಶ್ರೀ ಶರಣಬಸಪ್ಪ ಗೌಡ ದರ್ಶನಾಪುರ್ (ಶಹಾಪುರ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಯಾದಗಿರಿ ಜಿಲ್ಲೆ ಶಹಾಪುರ ಮತಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	**ಯಾದಗಿರಿ ಜಿಲ್ಲೆ ಶಹಾಪುರ ಮತಕ್ಷೇತ್ರದ** ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸ್ವಲ್ಪಮಟ್ಟಿನ ತೊಂದರೆಗಳಿದ್ದು, **ಸಮರ್ಪಕ ವಿದ್ಯುತ್ ಸರಬರಾಜು ಮಾಡಲು** ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತವೆ. **ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ವತಿಯಿಂದ:-** 1. 110 ಕೆ.ವಿ. ವಿದ್ಯುತ್ ಉಪಕೇಂದ್ರ ಶಹಾಪೂರದಲ್ಲಿ 10 ಎಂ.ವಿ.ಎ. 110/33 ಕೆ.ವಿ. ಪರಿವರ್ತಕವನ್ನು ಹೆಚ್ಚಿನ ಸಾಮರ್ಥ್ಯದ 20 ಎಂ.ವಿ.ಎ 110/33 ಕೆ.ವಿ.ಗೆ ಬದಲಾಯಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. 2. ನಗುನೂರ ಗ್ರಾಮದಲ್ಲಿ 1*10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪ್ರಸ್ತುತ ಸದರಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಕಾಮಗಾರಿಯು ಟೆಂಡರ್ ಹಂತದಲ್ಲಿದೆ. 3. ಎಂ.ಕೊಲ್ಲೂರು ಗ್ರಾಮದಲ್ಲಿ 1*10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪ್ರಸ್ತುತ ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಕಾಮಗಾರಿಯು ಟೆಂಡರ್ ಹಂತದಲ್ಲಿದೆ.
ಆ)	ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?	

			4. ಭೀಮರಾಯ ಗುಡಿಯಲ್ಲಿ 1*10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪ್ರಸ್ತುತ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ. 5. ಶಿರವಾಳ ಗ್ರಾಮದಲ್ಲಿ 2*10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪ್ರಸ್ತುತ ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿದೆ. 6. ಗುತ್ತಿ ಬಸವಣ್ಣ ಗ್ರಾಮದಲ್ಲಿ 1*10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪ್ರಸ್ತುತ ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿದೆ. **<u>ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವತಿಯಿಂದ:</u>** 1. ಶಹಾಪೂರ ಮತಕ್ಷೇತ್ರದ ಸಗರ ಗ್ರಾಮದ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹೆಚ್ಚುವರಿಯಾಗಿ 1*5 MVA ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗಿದೆ. ಶಹಾಪೂರ ಮತಕ್ಷೇತ್ರದ ಗೋಗಿ ಗ್ರಾಮದಲ್ಲಿರುವ 33/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿನ ಹೊಸಕೇರಾ ಫೀಡರ್ ಲೋಡ್ ಬೇರ್ಪಡಿಸುವ ಕಾಮಗಾರಿಗೆ ಅಂದಾಜು ರೂ.30.38 ಲಕ್ಷಗಳ ಅನುಮೋದನೆ ನೀಡಲಾಗಿದ್ದು, ಕಾಮಗಾರಿಯು ಟೆಂಡರ್ ಹಂತದಲ್ಲಿರುತ್ತದೆ.

ಸಂಖ್ಯೆ: ಎನರ್ಜಿ 120 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 607
ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ರಾಜೇಶ್ ನಾಯಕ್ ಯು.(ಬಂಟ್ವಾಳ)
ಉತ್ತರಿಸುವ ದಿನಾಂಕ: : ದಿನಾಂಕ: 22.09.2020
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು
ವಿಷಯ : ತುರ್ತು ಪರಿಸ್ಥಿತಿಯ ಹೋರಾಟಗಾರರಿಗೆ ಪಿಂಚಣಿ ನೀಡುವುದು.

	ಪ್ರಶ್ನೆ	ಉತ್ತರ
ಅ)	1975-76 ತುರ್ತು ಪರಿಸ್ಥಿತಿಯ ಹೋರಾಟಗಾರರಿಗೆ ಮಾಸಿಕ ಪಿಂಚಣಿ ಸಹಿತ ಇತರೆ ಸರ್ಕಾರಿ ಸೌಲಭ್ಯಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ)	ಈ ಬಗ್ಗೆ ಇದೂವರೆಗೂ ಸರ್ಕಾರವು ಯಾವುದಾದರೂ ಕ್ರಮ ಕೈಗೊಂಡಿದ್ದಲ್ಲಿ ಅದರ ಮಾಹಿತಿ ನೀಡುವುದು	ಈ ಹಂತದಲ್ಲಿ ಅಗತ್ಯವಿಲ್ಲದ ಕಾರಣ ಸೌಲಭ್ಯ ನೀಡುವ ಪ್ರಸ್ತಾವನೆಯನ್ನು ಸರ್ಕಾರ ಕೈ ಬಿಟ್ಟಿದೆ.
ಇ)	ಇದುವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದಿದ್ದಲ್ಲಿ ಮುಂದೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು.	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: ಸಿಆಸುಇ 58 ಪಿಎಫ್ ಜಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿಗಳು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 710
2. ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
3. ಉತ್ತರಿಸುವ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಸಾಗರ ತಾಲ್ಲೂಕಿನ ಕಾರ್ಗಲ್ ಪೋಲೀಸ್ ಠಾಣೆ ಕಟ್ಟಡ ನಿರ್ಮಾಣಕ್ಕೆ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಕಟ್ಟಡ ನಿರ್ಮಿಸಲು ಸರ್ಕಾರಕ್ಕಿರುವ ತೊಂದರೆಗಳೇನು;	ಸಾಗರ ತಾಲ್ಲೂಕಿನ ಕಾರ್ಗಲ್ ಪೋಲೀಸ್ ಠಾಣೆ ಕಟ್ಟಡವನ್ನು ನಿರ್ಮಿಸಲು ಬಿಳಿಗಲ್ಲೂರು ಗ್ರಾಮದ ಹೊಸ ಸರ್ವೆ ನಂ.125 ರಲ್ಲಿ 20 ಗುಂಟೆ ನಿವೇಶನ ಲಭ್ಯವಿದ್ದು, ಅನುದಾನ ಲಭ್ಯತೆಯ ಮೇಲೆ ಸದರಿ ಪೋಲೀಸ್ ಠಾಣೆ ಕಟ್ಟಡ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.
ಇ	ಈ ಪೋಲೀಸ್ ಠಾಣೆಯ ನೂತನ ಕಟ್ಟಡ ಕಾಮಗಾರಿಗೆ ಸರ್ಕಾರ ಅನುದಾನವನ್ನು ಒದಗಿಸುವುದೇ;	
ಈ	ಈ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	

ಸಂಖ್ಯೆ:ಹೆಚ್‌ಡಿ 76 ಪಿಬಿಎಲ್ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

(12)

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 711
2. ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್.ಹೆಚ್ (ಸಾಗರ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಇತ್ತೀಚೆಗೆ ಬಿದ್ದ ಬಾರಿ ಮಳೆಯಿಂದಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಹಲವಾರು ಹಳ್ಳಕೊಳ್ಳಗಳು ಒಡೆದು ಸಾರ್ವಜನಿಕ ಆಸ್ತಿ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ಇವುಗಳನ್ನು ದುರಸ್ಥಿಗೊಳಿಸಲು ಪ್ರಕೃತಿ ವಿಕೋಪ ನಿಧಿಯಿಂದ ಅನುದಾನ ಬಿಡುಗಡೆಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ.	2019-20ನೇ ಸಾಲಿನಲ್ಲಿ ಬಿದ್ದ ಬಾರೀ ಮಳೆಯಿಂದ ಹಾನಿಗೊಳಗಾದ ಒಟ್ಟು 22 ಕೆರೆ, ಕಾಲುವೆ, ಪಿಕಪ್ ಹಾಗೂ ಇನ್ನಿತರೆ ಭಾಗಗಳ ದುರಸ್ತಿ/ ಅಭಿವೃದ್ಧಿ ಕಾಮಗಾರಿಗಳನ್ನು ರೂ. 583.00ಲಕ್ಷಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿ ಮಂಜೂರಾದ ಅನುದಾನದಿಂದ ನಿರ್ವಹಿಸಿ ಪೂರ್ಣಗೊಳಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. 2020-2021ನೇ ಸಾಲಿನಲ್ಲಿ ಒಟ್ಟು 23 ಕಾಮಗಾರಿಗಳಿಗೆ ಒಟ್ಟಾರೆ ರೂ.895.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾವನೆ ಸಿದ್ಧಪಡಿಸಲಾಗಿದೆ, ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಇ	ಹಾಗಿದ್ದಲ್ಲಿ, ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: ವಿವರ ಒದಗಿಸುವುದು;	
4	ಹಾಳಾದ ಕೆರೆ ಮತ್ತು ಹಳ್ಳ ಕೊಳ್ಳಗಳನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	

ಕಡತ ಸಂಖ್ಯೆ: ಸನೀಇ 132 ಎಲ್ಎಕ್ಯೂ 2020

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 714
2. ಸದಸ್ಯರ ಹೆಸರು : ಶ್ರೀ. ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ)
3. ಉತ್ತರಿಸಬೇಕಾದ ದಿನಾಂಕ : 22-09-2020.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಪ್ರಶ್ನೆ	ಉತ್ತರ
ಕಲ್ಯಾಣ ಕರ್ನಾಟಕ ಭಾಗದ ಸಾರ್ವಜನಿಕರ ಹಿತದೃಷ್ಟಿಯಿಂದ ಹೈದ್ರಾಬಾದ್ ಕರ್ನಾಟಕ ವೃಂದದ ಹುದ್ದೆಗಳನ್ನು ಭರ್ತಿ ಮಾಡುವುದನ್ನು ತಡೆಹಿಡಿದಿರುವ ಆದೇಶವನ್ನು ರದ್ದುಗೊಳಿಸಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ಕೋವಿಡ್-19 ನಿಂದ ಉಂಟಾದ ಪರಿಸ್ಥಿತಿಯನ್ನು ಸುಧಾರಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿರುವುದರಿಂದ, ಸರ್ಕಾರದ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ, 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ತಡೆಹಿಡಿಯಲಾಗಿದೆ. ಆದ್ದರಿಂದ, ಸದರಿ ಸುತ್ತೋಲೆಯನ್ನು ರದ್ದುಪಡಿಸಲು ಸದ್ಯದ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯ.

ಸಂಖ್ಯೆ: ಆಇ 42 ಬಿಜಿಎಲ್ 2020

(ಸಹಿ)
(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	715
ಮಾನ್ಯ ಸದಸ್ಯರ ಹೆಸರು	ಶ್ರೀ ಪ್ರಿಯಾಂಕ್ ಎಂ.ಖರ್ಗೆ (ಚಿತ್ತಾಪುರ)
ಉತ್ತರಿಸಬೇಕಾದ ದಿನಾಂಕ	22.09.2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಕೋವಿಡ್–19 ಲಾಕ್‌ಡೌನ್ ಅವಧಿಯಲ್ಲಿ ಕೆಲವು ವೈನ್ ಶಾಪ್‌ಗಳು ಕಾನೂನು ಬಾಹಿರವಾಗಿ ಮದ್ಯವನ್ನು ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು.
ಆ)	ಸ್ಟಾಕ್ ಎಕ್ಸ್‌ಚೈಂಜ್ ರಿಜಿಸ್ಟರ್‌ನಿಂದ ಯಾವ ಯಾವ ವೈನ್ ಶಾಪ್‌ಗಳ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ; ಮತ್ತು ಅವುಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?	ಕಲಬುರಗಿ ಜಿಲ್ಲೆಯಾದ್ಯಂತ ಲಾಕ್‌ಡೌನ್ ಅವಧಿ ಮುಕ್ತಾಯವಾದ ನಂತರ ನಡೆಸಿದ ಪರಿಶೀಲನೆಯಲ್ಲಿ 45 ಮದ್ಯದ ಮಳಿಗೆಗಳಲ್ಲಿ ನಿರ್ವಹಿಸಿರುವ ಸ್ಟಾಕ್ ರಿಜಿಸ್ಟರ್‌ನಲ್ಲಿ ವ್ಯತ್ಯಾಸ ಕಂಡು ಬಂದಿದ್ದು, ಸದರಿ ಸನ್ನದುಗಳ ವಿರುದ್ಧ ಒಟ್ಟು 45 ಪ್ರಕರಣಗಳನ್ನು ದಾಖಲಿಸಲಾಗಿತ್ತು. ಸದರಿ ಮೊಕದ್ದಮೆಗಳು ಇಲಾಖೆಯಿಂದ ದಂಡ ವಿಧಿಸಿ ಇತ್ಯರ್ಥಪಡಿಸಬಹುದಾದ ಪ್ರಕರಣಗಳಾದ ಹಿನ್ನೆಲೆಯಲ್ಲಿ ಎಲ್ಲಾ 45 ಮೊಕದ್ದಮೆಗಳನ್ನು ದಂಡ ವಿಧಿಸಿ ಇತ್ಯರ್ಥ ಪಡಿಸಲಾಗಿದೆ.

ಆಇ 66 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 717
02.	ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	: ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
03.	ಉತ್ತರಿಸುವ ದಿನಾಂಕ	: 22/09/2020
04.	ಉತ್ತರಿಸುವ ಸಚಿವರು	: ಮಾನ್ಯ ಗೃಹ ಸಚಿವರು

ಪ್ರಶ್ನೆ	ಉತ್ತರ
ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?	<u>ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.</u> ➢ ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹೊಸ ಬೀಟ್ ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ. ➢ ಈ ಹೊಸ ಬೀಟ್ ಪದ್ಧತಿಯಲ್ಲಿ ಪ್ರತಿ ಪೊಲೀಸ್ ಠಾಣಾ ಸರಹದ್ದುಗಳ ಬೀಟ್ ಮತ್ತು ಉಪ-ಬೀಟ್‌ಗಳ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳನ್ನು ಮಾಡಿ ಅಪರಾಧ ತಡೆಗಟ್ಟಲು ಎಚ್ಚರ ವಹಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ➢ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಚಾರಿ ನಿರ್ವಹಣೆ ಮತ್ತು ಅಪರಾಧ ಹಿನ್ನೆಲೆಯಿರುವ ಆಸಾಮಿಗಳ ಮೇಲೆ ನಿಗಾವಹಿಸುವ ಸಲುವಾಗಿ ಸರ್ಕಾರದ ವತಿಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗುತ್ತಿದೆ. ಅಂಗಡಿಗಳು, ಮಾಲುಗಳು ಮತ್ತು ಪ್ರಮುಖ ವ್ಯಾಪಾರ ಕಟ್ಟಡಗಳ ಮಾಲೀಕರುಗಳು, ಪಬ್ಲಿಕ್ ಸೇಫ್ಟಿ ಕಾಯ್ದೆ ರೀತ್ಯಾ ಸಿ.ಸಿ.ಟಿ.ವಿ. ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ. ➢ ಸರಗಳ್ಳತನ ಮಾಡುವ ಎಮ್.ಓ.ಬಿ ಗಳ ಪರಿಶೀಲನೆ ತೀವ್ರಗೊಳಿಸಲಾಗಿದೆ. ಸರಗಳ್ಳತನ ನಡೆಯುವ ಅವಧಿ ಮತ್ತು ಪ್ರದೇಶಗಳನ್ನು ಗುರ್ತಿಸಿ ವಿಶೇಷ ಗಸ್ತು ಹಾಗೂ ನಾಕಾಬಂಧಿ ಏರ್ಪಡಿಸಲಾಗುತ್ತಿದೆ. ➢ ಎಂ.ಒ.ಬಿ. ಆಸಾಮಿಗಳು, ಪೂರ್ವಸಜಾ ಆಸಾಮಿಗಳು, ರೌಡಿ ಆಸಾಮಿಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿ ಈ ಆಸಾಮಿಗಳ ವಿರುದ್ಧ ಕಲಂ 107, 109, 110 ಸಿಆರ್‌ಪಿಸಿ ರೀತ್ಯಾ ಭದ್ರತಾ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

	➢ ಅಪರಾಧ ತಡೆಗಟ್ಟಲು ಹಾಗೂ ಕಮ್ಯೂನಿಟಿ ಪೊಲೀಸಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ. ➢ ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಕರಪತ್ರಗಳನ್ನು ಪ್ರಕಟಿಸಿ ವಿತರಿಸಲಾಗುತ್ತಿದೆ. ➢ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆದು ಕಳ್ಳತನ ಮಾಡುವುದು. ಬಸ್‌ಗಳಲ್ಲಿ ಸೂಟ್‌ಕೇಸ್ ಕಳ್ಳತನ ಮಾಡುವವರ ಮೇಲೆ ಸೂಕ್ತ ಗಮನ ಹರಿಸುವಂತೆ ಸಾರ್ವಜನಿಕರಲ್ಲಿ ಹಾಗೂ ಪ್ರಯಾಣಿಕರಲ್ಲಿ ಮನವಿ ಮಾಡಲಾಗುತ್ತಿದೆ. ➢ ನೊಂದ ವ್ಯಕ್ತಿಗಳು ದೂರವಾಣಿ ಮೂಲಕ ನಿಸ್ತಂತು ಕೇಂದ್ರಕ್ಕೆ ಮಾಹಿತಿ ನೀಡುವ ಸಲುವಾಗಿ ಡಯಲ್–100 ದೂರವಾಣಿ ಸಂಪರ್ಕ, ಮಹಿಳೆಯರು ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳಾಗಿ ದೂರವಾಣಿ ನಂಬರ್–1092 ಹಾಗೂ 1098 ಚಾಲನೆಯಲ್ಲಿರುತ್ತದೆ. ➢ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ಜನರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅಪರಾಧಿಗಳ ಮೇಲೆ ಎಮ್‌ಓಬಿ ಹಾಗೂ ರೌಡಿ ಶೀಟ್ ತೆಗೆಯಲಾಗುವುದು ಹಾಗೂ ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಗಡಿಪಾರು ಮಾಡಲಾಗುವುದು. ➢ ದಿನದ 24 ಗಂಟೆ ಅಧಿಕಾರಿ ಸಿಬ್ಬಂದಿಯವರು ಗಸ್ತು ಕರ್ತವ್ಯವನ್ನು ಸರದಿ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ. ➢ ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ. ➢ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್/ಎಟಿಎಂ/ಅಂಚೆ ಕಛೇರಿಗಳಲ್ಲಿ ಅಲಾರಂ ಸಿಸ್ಟಂ ಅಳವಡಿಸಿ ಹಾಗೂ ಕಡ್ಡಾಯವಾಗಿ ಸೆಕ್ಯೂರಿಟಿ ಗಾರ್ಡ್ ನೇಮಕ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ಪೊಲೀಸ್ ನೋಟೀಸ್ ನೀಡಿ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

	➢ ದೇವಸ್ಥಾನ/ಮಸೀದಿ/ಚರ್ಚ್/ಬ್ಯಾಂಕ್/ಎಟಿಎಂ/ಜ್ಯುಯಲರಿ ಶಾಪ್ ಮತ್ತು ಸೈಬರ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಕ್ಯಾಮೆರಾ ಅಳವಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಹಾಗೂ ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಕೂಡ ಜಾರಿ ಮಾಡಲಾಗಿರುತ್ತದೆ. ಮತ್ತು ಸಂಬಂಧಪಟ್ಟ ಮಾಲೀಕರುಗಳಿಗೆ Burglary Alarm ಅಳವಡಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ. ➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಂ, ಪೊಲೀಸ್ ವೆಬ್‌ಸೈಟ್‌ಗಳನ್ನು ಬಳಸಿ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಬಗ್ಗೆ, ಅಪರಾಧಿಕ ಕೃತ್ಯಗಳ ಬಗ್ಗೆ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ➢ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಮಾಲೀಕರುಗಳು ತಮ್ಮ ಮನೆಯನ್ನು ಬಾಡಿಗೆಗೆ ಕೊಡುವಾಗ ಬಾಡಿಗೆದಾರರ ಪೂರ್ವಪರಗಳನ್ನು ವಿಚಾರ ಮಾಡಿ ನೈಜ ದಾಖಲಾತಿಗಳೊಂದಿಗೆ ಮನೆ ಬಾಡಿಗೆಗೆ ಕೊಡುವುದು ಹಾಗೂ ಬಾಡಿಗೆದಾರರ ಮನೆಗೆ ಬಂದು-ಹೋಗುವರ ಮೇಲೆ ನಿಗಾ ಇಡಲು ನಾಗರೀಕ ಸದಸ್ಯರ ಸಭೆಯಲ್ಲಿ ಕೋರಲಾಗಿರುತ್ತದೆ. ➢ ಸೈಬರ್ ವಂಚನೆ ಮತ್ತು ದುರುಪಯೋಗ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಪರಿಹರಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ರಾಜ್ಯದ ಪ್ರತಿ ಘಟಕದಲ್ಲಿ ಒಂದರಂತೆ ಹಾಗೂ ಬೆಂಗಳೂರು ನಗರದ ಎಲ್ಲಾ 8-ವಿಭಾಗಗಳಲ್ಲಿ ಪ್ರತ್ಯೇಕವಾಗಿ ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ.

- ಸೈಬರ್ ಪ್ರಕರಣಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅವಶ್ಯಕ ಸಿಬ್ಬಂದಿ ಮತ್ತು ಸಮರ್ಥ ತಂತ್ರಜ್ಞಾನಗಳನ್ನು ಮತ್ತು ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯನ್ನು ನೀಡಲಾಗಿರುತ್ತದೆ.
- ಸೈಬರ್ ಅಪರಾಧ/ವಂಚನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಈಗಾಗಲೇ ಚುಟುಕು ವಿಡಿಯೋಗಳನ್ನು ಫೇಸ್‌ಬುಕ್ ಹಾಗು ಜಾಲತಾಣಗಳಲ್ಲಿ ಅಳವಡಿಸಲಾಗಿದೆ.
- ಮಹಿಳೆಯ ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಸಹಾಯವಾಣಿ, ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ, ಮತ್ತು ಸ್ಪಂದನ ಸಹಾಯವಾಣಿಗಳನ್ನು ಸ್ಥಾಪಿಸಲಾಗಿರುತ್ತದೆ.
- ಸಾರ್ವಜನಿಕ ಸಹಾಯಕ್ಕಾಗಿ "ಸುರಕ್ಷಾ" ಎಂಬ ಮೊಬೈಲ್ ಅಪ್ಲಿಕೇಷನ್ ಅನ್ನು ಪರಿಚಯಿಸಲಾಗಿದೆ.
- ರಾಜ್ಯದ ಪ್ರತಿ ಪೊಲೀಸ್ ಠಾಣೆಗಳಲ್ಲಿ ಮಹಿಳೆಯರ ದೂರು ವಿಚಾರಣೆ ಬಗ್ಗೆ ಪ್ರತ್ಯೇಕವಾಗಿ ಮಹಿಳಾ ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗಿದೆ.
- ಬೆಂಗಳೂರು ನಗರದಲ್ಲಿ ದಿನದ 24 ಗಂಟೆಯೂ ಸಹ ಮಹಿಳೆಯರ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಎಂಬ ಗಸ್ತುವಾಹನ ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ಅದೇ ರೀತಿಯಾಗಿ ರಾಜ್ಯದ ಇತರೆ ಘಟಕಗಳಲ್ಲಿ ಸಹ ಗಸ್ತು ಪಡೆಗಳು ಕಾರ್ಯನಿರ್ವಹಿಸುತ್ತಿದೆ.
- ವಯೋವೃದ್ದರು, ಒಂಟಿ ಮಹಿಳೆಯರು ನೆಲೆಸಿರುವ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಸರ್ವೆ ನಡೆಸಿ ಠಾಣಾ ಸರಹದ್ದಿನಲ್ಲಿರುವ ಒಂಟಿ ಮಹಿಳೆಯರನ್ನು ಗುರುತಿಸಿ ಇವರುಗಳ ಬಗ್ಗೆ ಸೂಕ್ತ ಗಮನ ನೀಡುವಂತೆ

ಸೂಚನೆಗಳನ್ನು ನೀಡಲಾಗಿದ್ದು, ಇಂತಹ ಮನೆಗಳಿಗೆ ಸೈರನ್ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

- ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ & ಮಾರಾಟ ತಡೆಗಟ್ಟಲು ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಹರಿವು ಮೂಡಿಸಲು ಮಾದಕ ವಸ್ತುಗಳ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ರಹಸ್ಯ ಮಾಹಿತಿಯನ್ನು 1908 (ಟೋಲ್ ಫ್ರೀ) ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಲಾಗಿರುತ್ತದೆ.
- ಪೊಲೀಸ್ ಠಾಣೆಯ ಅಪರಾಧ ಸಿಬ್ಬಂಗಳಿಗೆ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಹಳೆ ಎಂ.ಓ.ಬಿ ಆಸಾಮಿಗಳು, ರೌಡಿ ಆಸಾಮಿಗಳ ಬಗ್ಗೆ ಮಾಹಿತಿ ಪಡೆದುಕೊಂಡು ಅವರುಗಳ ಮೇಲೆ ಸೂಕ್ತ ನಿಗಾ ಇಡಲಾಗುತ್ತಿರುತ್ತದೆ.
- ಪೊಲೀಸ್ ಅಧಿಕಾರಿಗಳು ಸಾರ್ವಜನಿಕರೊಂದಿಗೆ ಜನಸಂಪರ್ಕ ಸಭೆ, ಶಾಂತಿ ಸಭೆಗಳನ್ನು ನಡೆಸುತ್ತಿದ್ದು, ಸಾರ್ವಜನಿಕರೊಂದಿಗೆ ಮಾಹಿತಿ ವಿನಿಮಯ ಮಾಡಿಕೊಂಡು ಅಪರಾಧಗಳು ಜರುಗದಂತೆ ಕ್ರಮಕೈಗೊಳ್ಳಲಾಗಿರುತ್ತದೆ.
- ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹಾಗೂ ಅಪರಾಧಗಳ ಬಗ್ಗೆ ಅರಿವು ಮೂಡಿಸಲು ಪ್ರತೀ ವರ್ಷ ಡಿಸೆಂಬರ್ ಮಾಹೆಯಲ್ಲಿ ಅಪರಾಧ ತಡೆ ಮಾಸಾಚರಣೆಯನ್ನು ಮಾಡುವ ಮೂಲಕ ಸಾರ್ವಜನಿಕರಿಗೆ, ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ.

	➤ ಪ್ರತೀ ವರ್ಷ ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಗಳನ್ನು ಪ್ರತೀ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಹಾಗೂ ಸುಗಮ ಸಂಚಾರಕ್ಕೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಸಾರ್ವಜನಿಕರಿಗೆ, ಚಾಲಕರುಗಳಿಗೆ, ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ. ವೈಜ್ಞಾನಿಕ ಹಾಗೂ ತಾಂತ್ರಿಕ ಕಂಪ್ಯೂಟರ್ ಅಪ್ಲಿಕೇಷನ್‌ಗಳನ್ನು ತನಿಖೆಯಲ್ಲಿ ಹಾಗೂ ಅಪರಾಧಗಳನ್ನು ತಡೆಗಟ್ಟಲು ಬಳಸಿಕೊಳ್ಳಲಾಗುತ್ತಿದೆ.

(ಬಸವರಾಜ ಬೊಮ್ಮಾಯಿ)
ಮಾನ್ಯ ಗೃಹ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	720
ಸದಸ್ಯರ ಹೆಸರು	:	ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರಮ ಸಂ.	ಪ್ರಶ್ನೆ	ಉತ್ತರ
1	ಬಿ.ಎಂ.ಆರ್.ಡಿ.ಎ. ವ್ಯಾಪ್ತಿಯ ಪ್ರದೇಶಗಳು ಯಾವುವು;	ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳನ್ನು ಒಳಗೊಂಡಂತೆ 8005ಚ.ಕಿ.ಮೀ. ವಿಸ್ತೀರ್ಣವಿರುತ್ತದೆ. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ, ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ, ಆನೇಕಲ್, ಹೊಸಕೋಟೆ, ನೆಲಮಂಗಲ, ಕನಕಪುರ, ಮಾಗಡಿ, ಚನ್ನಪಟ್ಟಣ, ದೊಡ್ಡಬಳ್ಳಾಪುರ ಒಟ್ಟು 10 ಯೋಜನಾ ಪ್ರಾಧಿಕಾರಗಳು ಮತ್ತು ಒಂದು ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಇರುತ್ತದೆ.
2	ಈ ಪ್ರದೇಶಗಳಲ್ಲಿ ವಿವಿಧ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸಲು ಬಿ.ಎಂ.ಆರ್.ಡಿ.ಎ. ವತಿಯಿಂದ ಯೋಜನೆ ರೂಪಿಸಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ಯೋಜನೆಯ ಅಂದಾಜು ವೆಚ್ಚವೆಷ್ಟು;	ಇಲ್ಲ.
3	ಬಿ.ಎಂ.ಆರ್.ಡಿ.ಎ. ವತಿಯಿಂದ ಅನುಮೋದನೆಯಾಗಿರುವ ಬಡಾವಣೆಗಳಲ್ಲಿ ಕಸ ನಿರ್ವಹಣೆಗೆ ಪ್ರತ್ಯೇಕ ನಿವೇಶನಗಳನ್ನು ಕಾಯ್ದಿರಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ನಿವೇಶನಗಳನ್ನು ಕಾಯ್ದಿರಿಸಲಾಗಿದೆ?	ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅನುಮೋದಿಸಿರುವ ವಸತಿ ವಿನ್ಯಾಸಗಳಲ್ಲಿ ವಲಯನಿಯಮಾವಳಿಯ ರೀತ್ಯಾ ನಾಗರೀಕ ಸೌಲಭ್ಯ ನಿವೇಶನಗಳನ್ನು ಕಾಯ್ದಿರಿಸಲಾಗುತ್ತಿದ್ದು, ಕರ್ನಾಟಕ ಯೋಜನಾ ಪ್ರಾಧಿಕಾರಗಳ(ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು 2016ರ ನಿಯಮ 2(ಸಿ)(ಎ)(iv)ರ ರೀತ್ಯಾ ನಾಗರೀಕ ಸೌಲಭ್ಯ ನಿವೇಶನಗಳಲ್ಲಿ **"Garbage Collection, Segregation and Recycle Centres"**ಗಳನ್ನು ನಿರ್ಮಿಸಲು ಅವಕಾಶವಿರುತ್ತದೆ. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಯೋಜನಾ ಪ್ರಾಧಿಕಾರಗಳು/ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾಯ್ದಿರಿಸಲಾಗಿರುವ ನಾಗರೀಕ ಸೌಲಭ್ಯ ನಿವೇಶನದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ.ಸಂ	ಯೋಜನಾ/ನಗರಾಭಿವೃದ್ಧಿ ಪ್ರಾಧಿಕಾರ	ಕಾಯ್ದಿರಿಸಲಾಗಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ
1.	ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ	282
2.	ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ	34
3.	ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ	110
4.	ಆನೇಕಲ್ ಯೋಜನಾ ಪ್ರಾಧಿಕಾರ	474
5.	ಹೊಸಕೋಟೆ ಯೋಜನಾ ಪ್ರಾಧಿಕಾರ	117
6.	ನೆಲಮಂಗಲ ಯೋಜನಾ ಪ್ರಾಧಿಕಾರ	254
7.	ಕನಕಪುರ ಯೋಜನಾ ಪ್ರಾಧಿಕಾರ	72
8.	ಮಾಗಡಿ ಯೋಜನಾ ಪ್ರಾಧಿಕಾರ	199
9.	ಚನ್ನಪಟ್ಟಣ ಯೋಜನಾ ಪ್ರಾಧಿಕಾರ	05
10.	ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ	18
11.	ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ	37
	ಒಟ್ಟು	1,602 ನಿವೇಶನಗಳು

ಸಂಖ್ಯೆ: ನಅಇ 177 ಬಿಎಂಆರ್ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	721
2	ಸದಸ್ಯರ ಹೆಸರು	:	ಶ್ರೀ ಮಂಜುನಾಥ.ಎ. (ಮಾಗಡಿ)
3	ಉತ್ತರಿಸುವ ದಿನಾಂಕ	:	22.09.2020
4	ಉತ್ತರಿಸುವ ಸಚಿವರು	:	ಸನ್ಮಾನ್ಯ ಮುಖ್ಯಮಂತ್ರಿಯವರು

	ಪ್ರಶ್ನೆ	ಉತ್ತರ
ಅ	2019-20 ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಒಳಪಡುವ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾವುದೇ ಅನುದಾನವನ್ನು ತಡೆಹಿಡಿದಿರುವುದಿಲ್ಲ. 2019-20ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ. (ತಾಲಿಕೆ ಕೆಳಗೆ)

(ರೂ.ಲಕ್ಷಗಳಲ್ಲಿ)

ಕ್ರ ಸಂ	ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆವಾರು ಒದಗಿಸಿದ ಅನುದಾನ		ಸರ್ಕಾರದಿಂದ ಬಿಡುಗಡೆಯಾದ ಅನುದಾನ
1	ಸಹಾಯಾನುದಾನ	73.38	73.38
2	ಬಂಡವಾಳ ವೆಚ್ಚ	16720.00	1672.00
3	ಎಸ್.ಸಿ.ಪಿ ಉಪಯೋಜನೆ	383.00	383.00
4	ಟಿ.ಎಸ್.ಪಿ.ಉಪಯೋಜನೆ	156.00	156.00
	ಒಟ್ಟು	**2284.38**	**2284.38**

	ಪ್ರಶ್ನೆ	ಉತ್ತರ
ಆ	ಬಿಡುಗಡೆಯಾದ ಅನುದಾನವನ್ನು ತಡೆಹಿಡಿಯಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	- ಅನ್ವಯಿಸುವುದಿಲ್ಲ -
ಇ	ಸರ್ಕಾರದ ಆದೇಶದಂತೆ ಬಿಡುಗಡೆ ಮಾಡಲಾದ ಅನುದಾನಕ್ಕೆ ಪ್ರಸ್ತಾಪಿತ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಈಗಾಗಲೇ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಸಲ್ಲಿಸಿದ್ದರೂ ಸಹ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. 2019-20ನೇ ಸಾಲಿನಲ್ಲಿ ಒಟ್ಟು 1753 ಕಾಮಗಾರಿಗಳಿಗೆ ಸರ್ಕಾರದಿಂದ ಅನುಮೋದನೆ ನೀಡಿದ್ದು, ಈ ಪೈಕಿ ಭೌತಿಕವಾಗಿ ಪ್ರಾರಂಭಿಸಿದ 728 ಕಾಮಗಾರಿಗಳಿಗೆ ಮುಂದುವರೆಸಲು ಅನುಮೋದನೆ ನೀಡಲಾಗಿದ್ದು, ಉಳಿದ 1025 ಕಾಮಗಾರಿಗಳು ಪ್ರಾರಂಭಗೊಂಡಿರುವುದಿಲ್ಲ. ದಿನಾಂಕ:11.08.2020ರ ಆರ್ಥಿಕ ಇಲಾಖೆಯ ನಿರ್ದೇಶನದಂತೆ 2020-21ನೇ ಸಾಲಿನಲ್ಲಿ ಯಾವುದೇ ಹೆಚ್ಚುವರಿ ಅನುದಾನ ಒದಗಿಸಲು ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಮುಂದುವರೆದ ಕಾಮಗಾರಿಗಳಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಮಾತ್ರ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಹಾಗು ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಕೈಗೊಳ್ಳುವಂತೆ ತಿಳಿಸಲಾಗಿದೆ.
ಈ	ಹಾಗಿದ್ದಲ್ಲಿ ಯಾವ ಕಾಲ ಮಿತಿಯೊಳಗೆ ತಡೆ ಹಿಡಿಯಲಾಗಿರುವ ಅನುದಾನವನ್ನು ಬಿಡುಗಡೆ ಮಾಡಿ ಅಂದಾಜು ಪಟ್ಟಿಯಂತೆ	ಸರ್ಕಾರದ ಪರಿಶೀಲನೆಯಲ್ಲಿ ಇದೆ.

	ಪ್ರಸ್ತಾಪಿಸಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಅವಕಾಶ ನೀಡಲಾಗುವುದು?	

ಸಂಖ್ಯೆ:ಪಿಡಿಎಸ್–ಪಿಟಿಪಿ/65/2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 722
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ.
3. ಉತ್ತರಿಸಬೇಕಾದ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	1988 - 89 ರಲ್ಲಿ ಮಾಗಡಿ ತಾಲ್ಲೂಕಿನಲ್ಲಿ ವೈ.ಜಿ.ಗುಡ್ಡ ಜಲಾಶಯ ನಿರ್ಮಾಣ ದಿಂದಾಗಿ ನಾಗಭೋವಿದೊಡ್ಡಿ ಮತ್ತು ಕಪಿನಯ್ಯನದೊಡ್ಡಿ ಗ್ರಾಮಗಳು ಸಂಪೂರ್ಣವಾಗಿ ಮುಳುಗಡೆ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರದ ಗಮನಕ್ಕೆ ಬಂದಿದೆ.
ಆ	ಈ ಜಲಾಶಯ ನಿರ್ಮಾಣದಿಂದ ಮುಳುಗಡೆಯಾದ ಗ್ರಾಮಗಳ ಗ್ರಾಮಸ್ಥರಿಗೆ ವಸತಿ ಸೌಲಭ್ಯವನ್ನು ಕಲ್ಪಿಸದೆ ಇರುವುದಕ್ಕೆ ಕಾರಣಗಳೇನು?	ಗ್ರಾಮಗಳ ಪುನರ್ ವಸತಿ ಕಾರ್ಯಕ್ಕೆ ಭೂಸ್ವಾಧೀನ ಪಡಿಸುವಾಗ ಪುನರ್ ವಸತಿ ಉದ್ದೇಶಕ್ಕಾಗಿ ಎಂದು ನಮೂದಿಸುವ ಬದಲಾಗಿ ಜಲಾಶಯಕ್ಕೆ ಭೂಸ್ವಾಧೀನ ವಾಗಿರುವುದಾಗಿ ರೆವಿನ್ಯೂ ದಾಖಲೆಗಳಲ್ಲಿ ನಮೂದಿಸಲಾಗಿದ್ದು, ಪುನರ್ವಸತಿ ಉದ್ದೇಶಕ್ಕಾಗಿ ಭೂ ಸ್ವಾಧೀನ ಪಡಿಸಲಾಗಿದೆಯೆಂದು ಬದಲಿ ಅನುಮೋದನೆಯನ್ನು ದಿನಾಂಕ: 04.09.2020 ರಲ್ಲಿ ಪಡೆಯಲಾಗಿದೆ. ಪ್ರಸ್ತುತ ನಿವೇಶನಗಳನ್ನು ಹಂಚಿಕೆ ಮಾಡುವ ಹಂತದಲ್ಲಿದೆ.
ಇ	ಸದರಿ ಜಲಾಶಯದ ನಿರ್ಮಾಣದಿಂದಾಗಿ ಮನೆಗಳನ್ನು ಕಳೆದುಕೊಂಡ ಫಲಾನುಭವಿಗಳಿಗೆ ಪುನರ್ ವಸತಿ ಕಲ್ಪಿಸುವ ನಿಟ್ಟಿನಲ್ಲಿ 2008 ರಲ್ಲಿ 3 ಎಕರೆ ಜಾಗದ ಪೈಕಿ 2.20 ಗುಂಟೆ ಜಾಗದಲ್ಲಿ ಬಡಾವಣೆಯನ್ನು ನಿರ್ಮಿಸಲು ಉದ್ದೇಶಿ ಸಿದ್ದರೂ ಸಹ ಇದುವರೆಗೂ ಹಕ್ಕು ಪತ್ರಗಳನ್ನು ಹಂಚಿಕೆ ಮಾಡಿ ಮನೆಗಳನ್ನು ನಿರ್ಮಿಸಿಕೊಡದೇ ಇರುವುದಕ್ಕೆ ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಫಲಾನುಭವಿಗಳಿಗೆ ನಿವೇಶನ ಹಂಚಲು ಬಡಾವಣೆ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಅಕ್ಟೋಬರ್ 2020ರಲ್ಲಿ ಹಂಚಿಕೆ ಮಾಡಲು ಉದ್ದೇಶಿಸಲಾಗಿರುತ್ತದೆ.

ಸಂಖ್ಯೆ: ಸನೀಇ 142 ಎಲ್ಎಕ್ಯೂ 2020

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 725
2. ಸದಸ್ಯರ ಹೆಸರು : ಶ್ರೀ. ಶ್ರೀನಿವಾಸ್ ಎಂ.
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

ಕ್ರ.ಸಂ	ಪ್ರಶ್ನೆಗಳು:	ಉತ್ತರಗಳು:
ಅ	ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಕೆರೆಗಳ ಅಭಿವೃದ್ಧಿ ಮತ್ತು ಏತ ನೀರಾವರಿ ಯೋಜನೆಗೆ 2019-20ನೇ ಸಾಲಿನಲ್ಲಿ ರೂ.35.00 ಕೋಟಿಗಳ ಕಾಮಗಾರಿಗೆ ಆದೇಶ ನೀಡಿದ್ದು, ಇದುವರೆಗೂ ಆಡಳಿತಾತ್ಮಕ ಅನುಮೋದನೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಈ ಬಗೆಗಿನ ಸರ್ಕಾರದ ಮುಂದಿನ ಕ್ರಮವೇನು;	ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆರೆಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರೂ.2000.00 ಲಕ್ಷಗಳ ಅಂದಾಜು ಮೊತ್ತದ 9 ಕಾಮಗಾರಿಗಳು ಮತ್ತು ಏತ ನೀರಾವರಿ ಯೋಜನೆ ಅಡಿಯಲ್ಲಿ ರೂ.1495.00 ಲಕ್ಷಗಳ ಅಂದಾಜು ಮೊತ್ತದ 2 ಕಾಮಗಾರಿಗಳನ್ನು 2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸುವ ಷರತ್ತಿಗೊಳಪಟ್ಟು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. 2019-20ನೇ ಸಾಲಿನ ಆರ್ಥಿಕ ವರ್ಷವು ಮುಕ್ತಾಯಗೊಂಡಿದ್ದು 2020-21ನೇ ಸಾಲಿನಲ್ಲಿ ಇಲಾಖೆಯಡಿ ಒದಗಿಸಲಾಗಿರುವ ಅನುದಾನದ ಮಿತಿಯೊಳಗೆ ಆದ್ಯತೆಗೆ ಅನುಗುಣವಾಗಿ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.
ಇ	ಈ ಕಾಮಗಾರಿಗಳಿಗೆ ಯಾವಾಗ ಆಡಳಿತಾತ್ಮಕ ಅನುಮೋದನೆ ನೀಡಲಾಗವುದು?	

ಕಡತ ಸಂಖ್ಯೆ: MID 154 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಸಂಪುಟ ರಚನೆ ಹಾಗೂ.ಸಣ್ಣ ನೀರಾವರಿ ಸಚಿವರು.

ಶ್ರೀ. ಶ್ರೀನಿವಾಸ್ ಎಂ., ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 725ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

4702–ಕೆರೆಗಳ ಆಧುನೀಕರಣ					
1	ಮಂಡ್ಯ	ಮಂಡ್ಯ	ಮಂಡ್ಯ	ಕಚ್ಚೀಗೆರೆಕೆರೆ ಅಭಿವೃದ್ಧಿ ಕಾಮಗಾರಿ	100.00
2	ಮಂಡ್ಯ	ಮಂಡ್ಯ	ಮಂಡ್ಯ	ಅನೆಕೆರೆ ಕೆರೆ ಅಭಿವೃದ್ಧಿ ಕಾಮಗಾರಿ	300.00
3	ಮಂಡ್ಯ	ಮಂಡ್ಯ	ಮಂಡ್ಯ	ಬಿ.ಗೌಡಗೆರೆ ಕೆರೆ ಅಭಿವೃದ್ಧಿ ಕಾಮಗಾರಿ	100.00
4	ಮಂಡ್ಯ	ಮಂಡ್ಯ	ಮಂಡ್ಯ	ಸಾತನೂರು ಕೆರೆ ಅಭಿವೃದ್ಧಿ ಕಾಮಗಾರಿ	300.00
5	ಮಂಡ್ಯ	ಮಂಡ್ಯ	ಮಂಡ್ಯ	ಕೀಲಾರ ಕೆರೆ ಅಭಿವೃದ್ಧಿ ಕಾಮಗಾರಿ	500.00
6	ಮಂಡ್ಯ	ಮಂಡ್ಯ	ಮಂಡ್ಯ	ಮಲ್ಲಘಟ್ಟ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	200.00
7	ಮಂಡ್ಯ	ಮಂಡ್ಯ	ಮಂಡ್ಯ	ಬಸರಾಳು ಗ್ರಾಮದ ದೊಡ್ಡ ಕೆರೆ ಅಭಿವೃದ್ಧಿ ಕಾಮಗಾರಿ	100.00
8	ಮಂಡ್ಯ	ಮಂಡ್ಯ	ಮಂಡ್ಯ	ಚಿಕ್ಕಬಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	200.00
9	ಮಂಡ್ಯ	ಮಂಡ್ಯ	ಮಂಡ್ಯ	ಬೇಬಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	200.00
				ಒಟ್ಟು	**2000.00**
4702–ಏತ ನೀರಾವರಿ ಯೋಜನೆ					
10	ಮಂಡ್ಯ	ಮಂಡ್ಯ	ಮಂಡ್ಯ	ಬಸರಾಳು ಹೋಬಳಿ ಬೇಬಿ ಕೆರೆ ಮತ್ತು ಬಿದರ ಕಟ್ಟೆ ಕೆರೆಗಳಿಗೆ ನೀರುತುಂಬಿಸುವ ಯೋಜನೆ	995.00
11	ಮಂಡ್ಯ	ಮಂಡ್ಯ	ಮಂಡ್ಯ	ಬಸರಾಳು ಹೋಬಳಿ ರಾಯಶೆಟ್ಟಿಪುರ ಮೊಳೆ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ	500.00
				ಒಟ್ಟು	**1495.00**
				ಒಟ್ಟು ಮೊತ್ತ	**3495.00**

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 729
2. ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ (K.A.S) ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ಪ್ರತಿಗಳನ್ನು ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಕೆ.ಪಿ.ಎಸ್.ಸಿ.ಗೆ ಸಲ್ಲಿಸುತ್ತಿರುವ ಅರ್ಜಿಗಳನ್ನು ಮಾಹಿತಿ ನೀಡದೇ ತಿರಸ್ಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8676/2020, ದಿನಾಂಕ: 26.08.2020ರಲ್ಲಿ ನೀಡಿರುವ ತೀರ್ಪಿನ ಪ್ರಕಾರ ಅಭ್ಯರ್ಥಿಗಳಿಗೆ ಅವರ ಉತ್ತರ ಪತ್ರಿಕೆಗಳ ಪ್ರತಿಗಳನ್ನು ಅವರು ಉತ್ತರವಾರು ಗಳಿಸಿರುವ ಅಂಕಗಳೊಂದಿಗೆ ನೀಡಲು ಇರುವ ತೊಂದರೆಗಳು ಏನು; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಕರ್ನಾಟಕ ಲೋಕಸೇವಾ ಆಯೋಗದ ವರದಿಯಂತೆ ರಿಟ್ ಅರ್ಜಿ ಸಂಖ್ಯೆ: 8676/2020ರಲ್ಲಿ ನೀಡಿರುವ ದಿನಾಂಕ: 26.08.2020ರ ತೀರ್ಪಿನ ವಿರುದ್ಧ ಆಯೋಗವು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಪ್ರಕರಣವು ವಿಚಾರಣೆಗೆ ಬಾಕಿ ಇರುತ್ತದೆ.

ಸಂಖ್ಯೆ: ಸಿಆಸುಇ 67 ಎಸ್‌ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

<u>ಕರ್ನಾಟಕ ವಿಧಾನಸಭೆ</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 730
2. ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ನದಿಗಳನ್ನು ಸಂಪರ್ಕಿಸುವ ಕಾಲುವೆಗಳಲ್ಲಿ ಹೂಳು ತುಂಬಿರುವುದನ್ನು ತೆಗೆಯಲು ಸರ್ಕಾರ ಯಾವುದಾದರು ಯೋಜನೆಯನ್ನು ರೂಪಿಸಿದೆಯೇ;	ಯಾವುದೇ ಯೋಜನೆಗಳನ್ನು ರೂಪಿಸಿರುವುದಿಲ್ಲ.
ಆ	ಹಾಗಿದ್ದಲ್ಲಿ, ಕಾಲುವೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಸರ್ಕಾರ ಎಷ್ಟು ಹಣವನ್ನು ಮಂಜೂರು ಮಾಡಿದೆ; ಇದುವರೆವಿಗೂ ಖರ್ಚು ಮಾಡಿರುವ ಹಣವೆಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)	ಪ್ರಶ್ನೆ ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: MID 139 LAQ 2020

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 732
ಸದಸ್ಯರ ಹೆಸರು : ಶ್ರೀ. ಖಾದರ್ ಯು.ಟಿ (ಮಂಗಳೂರು)
ಉತ್ತರಿಸುವ ದಿನಾಂಕ : 22-09-2020
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವ್ಯಾಪ್ತಿಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಸೇರಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಈ ಇಲಾಖೆಯ ವ್ಯಾಪ್ತಿಗೆ ಸೇರಿಸದಿರಲು ಕಾರಣಗಳೇನು; (ವಿವರ ಒದಗಿಸುವುದು)	ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಯು ಸಂಪೂರ್ಣ ರಾಜ್ಯಕ್ಕೆ ಅನ್ವಯಿಸುತ್ತದೆ.
ಆ)	ಇದರಿಂದಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನದಿ ಸಂರಕ್ಷಣೆ ಯೋಜನೆ ಕಾಮಗಾರಿ, ತಡೆಗೋಡೆ ನಿರ್ಮಾಣ, ಹೂಳೆತ್ತುವ ಕಾಮಗಾರಿ ಹಾಗೂ ನದಿಗಳಿಗೆ "ಅಣೆಕಟ್ಟು" ಕಟ್ಟುವಂತಹ ಯೋಜನೆಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?	ನೀರಾವರಿ ಅವಶ್ಯಕತೆ ಪರಿಗಣಿಸಿ ನದಿ ನೀರಿನ ಲಭ್ಯತೆ ಹಾಗೂ ಭೌಗೋಳಿಕ ಪರಿಸ್ಥಿತಿಗನುಗುಣವಾಗಿ ಕಾರ್ಯಸಾಧ್ಯವಾಗುವ ಯೋಜನೆಗಳಿಗೆ ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಡಿ ಉಡುಪಿ ಜಿಲ್ಲೆಯಲ್ಲಿ ಸೌಪರ್ಣಿಕ ಏತ ನೀರಾರಿ ಯೋಜನೆಯನ್ನು ಕೈಗೆತ್ತಿಕೊಂಡು ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ವಾರಾಹಿ ನೀರಾವರಿ ಯೋಜನೆ, ಎಣ್ಣೆಹೊಳೆ ಏತ ನೀರಾವರಿ ಯೋಜನೆ ಮತ್ತು ಸೌಕೂರು ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಬಂಟ್ವಾಳ ಏತ ನೀರಾವರಿ ಯೋಜನೆ ಕುರಿತಂತೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗಿದ್ದು, ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ತಾಂತ್ರಿಕವಾಗಿ ಸಾಧಕ-ಭಾದಕಗಳ ಕುರಿತು ಕರ್ನಾಟಕ ನೀರಾವರಿ ನಿಗಮದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ನೀರಾವರಿ ಯೋಜನೆಗಳನ್ನು ಅವಶ್ಯಕತೆ ಆಧಾರದ ಮೇರೆಗೆ ಆಯಾ ಪ್ರದೇಶದಲ್ಲಿನ ಮಳೆ ಪ್ರಮಾಣ ಹಾಗೂ ನೀರಿನ ಕೊರತೆ ಪರಿಗಣಿಸಿ, ನದಿಗಳಲ್ಲಿನ ನೀರಿನ ಲಭ್ಯತೆಯ ಆಧಾರದ ಮೇಲೆ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಸಂಖ್ಯೆ:ಜಸಂಇ 96 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 738
ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)
ಉತ್ತರಿಸಬೇಕಾದ ದಿನಾಂಕ : 22.09.2020
ಉತ್ತರಿಸುವವರು : ಮುಖ್ಯಮಂತ್ರಿಗಳು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೊಸದುರ್ಗ ನಗರದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕೈಗಾರಿಕೆ ವಸಾಹತು ನಿರ್ಮಿಸಲಾಗಿದೆ; ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧಿನದಿಂದ ಹೊರತು ಪಡಿಸಲಾಗಿದೆ; ಎಷ್ಟು ಶೆಡ್ ನಿರ್ಮಿಸಲಾಗಿದೆ; ಯಾವ ಯಾವ ಫಲಾನುಭವಿಗಳಿಗೆ ಹಂಚಲಾಗಿದೆ; ಖಾಲಿ ಇರುವ ಶೆಡ್‌ಗಳ ಸಂಖ್ಯೆ ಎಷ್ಟು; ಎಷ್ಟು ಜನಕ್ಕೆ ಇದರಿಂದ ಉದ್ಯೋಗ ಸೃಷ್ಟಿಸಲಾಗಿದೆ;	1985 ರಲ್ಲಿ ಕೆ.ಐ.ಎ.ಡಿ.ಬಿ. ಮೂಲಕ ನಿಗಮಕ್ಕೆ ಅಗತ್ಯವಿರುವ 9.36 ಎಕರೆ ಜಮೀನನ್ನು ಹೊಸದುರ್ಗ ತಾಲ್ಲೂಕು ಬೋಕಿಕೆರೆ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಹೊಸದುರ್ಗ ಕೈಗಾರಿಕಾ ವಸಾಹತುವಿನಲ್ಲಿ ಸಿ ಮಾದರಿಯ 8 ಸಂಖ್ಯೆ ಮತ್ತು ಡಿ ಮಾದರಿಯ 8 ಸಂಖ್ಯೆ ಒಟ್ಟು 16 ಸಂಖ್ಯೆ ಮಳಿಗೆಗಳನ್ನು ನಿರ್ಮಿಸಲಾಗಿದ್ದು, ಕೆಳಕಂಡ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. 1) ಮಳಿಗೆ ಸಿ–1 ಮೆ: ಶ್ರೀದೇವಿ ಫುಡ್ ಪ್ರಾಡಕ್ಟ್ 2) ಮಳಿಗೆ ಸಿ–2 ಮೆ: ಸಂತೋಷಿ ಇಂಡಸ್ಟ್ರೀಸ್ 3) ಮಳಿಗೆ ಸಿ–3 ಮೆ: ಬೆಳ್ಳುಡಿ ಇಂಡಸ್ಟ್ರೀಸ್ 4) ಮಳಿಗೆ ಸಿ–4 ಮೆ: ಜನತಾ ಕಾಫಿ ವರ್ಕ್ಸ್ 5) ಮಳಿಗೆ ಸಿ–5 ಮೆ: ವೆಂಕಟೇಶ್ವರ ಜನರಲ್ ಇಂಜಿನಿಯರಿಂಗ್ 6) ಮಳಿಗೆ ಸಿ–6 ಮೆ: ತ್ರಿವೇಣಿ ಇಂಡಸ್ಟ್ರೀಸ್ 7) ಮಳಿಗೆ ಸಿ–7 ಮೆ: ಮಂಜುನಾಥ ಆಯಿಲ್ ಇಂಡಸ್ಟ್ರೀಸ್ 8) ಮಳಿಗೆ ಸಿ–8 ಮೆ: ಪದ್ಮಾವತಿ ರಾಗಿ ಕ್ಲಿನಿಂಗ್ & ಪಾಲಿಷಿಂಗ್ ಯುನಿಟ್ 9) ಮಳಿಗೆ ಡಿ–9 ಮೆ: ಇಸ್ಮಾಯಿಲ್ ಇಂಜಿನಿಯರಿಂಗ್ ವರ್ಕ್ಸ್ 10) ಮಳಿಗೆ ಡಿ–10 ಮೆ: ಮಂಜುನಾಥ ಇಂಡಸ್ಟ್ರೀಸ್ 11) ಮಳಿಗೆ ಡಿ–11 ಮೆ: ಭವ್ಯ ಕಾಯರ್ ಇಂಡಸ್ಟ್ರೀಸ್ 12) ಮಳಿಗೆ ಡಿ–12 ಮೆ: ದೀಪಕ ಇಂಡಸ್ಟ್ರೀಸ್ 13) ಮಳಿಗೆ ಡಿ–13 ಮೆ: ಚಂದನ ಇಂಡಸ್ಟ್ರೀಸ್ 14) ಮಳಿಗೆ ಡಿ–14 ಮೆ: ಮಂಗಳಾ ಅಗ್ರೋ ಟ್ರೇಡಿಂಗ್ ಕಂಪನಿ 15) ಮಳಿಗೆ ಡಿ–15 ಮೆ: ಕಲ್ಲೇಶ್ವರ ಇಂಡಸ್ಟ್ರೀಸ್ 16) ಮಳಿಗೆ ಡಿ–16 ಮೆ: ಕಲ್ಲೇಶ್ವರ ಇಂಡಸ್ಟ್ರೀಸ್ ಹೊಸದುರ್ಗ ಕೈಗಾರಿಕಾ ವಸಾಹತುವಿನಲ್ಲಿ ಯಾವುದೇ ಶೆಡ್‌ಗಳು ಖಾಲಿ ಇರುವುದಿಲ್ಲ. ಅಂದಾಜು 70 ರಿಂದ 80 ಮಂದಿಗೆ ಉದ್ಯೋಗ ಸೃಷ್ಟಿಸಲಾಗಿದೆ.
ಆ)	ಈ ಕೈಗಾರಿಕಾ ಪ್ರದೇಶದಲ್ಲಿ ಖಾಲಿ ಇರುವ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ;	ಹೊಸದುರ್ಗ ಕೈಗಾರಿಕಾ ವಸಾಹತುವಿನಲ್ಲಿ ಒಟ್ಟು 60 ಸಂಖ್ಯೆ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಎಲ್ಲಾ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ವಿವರಗಳು ಈ ಕೆಳಗಿನಂತೆ ಇರುತ್ತದೆ. 1) ಎಸ್. ಮಾದರಿ : 20 ಸಂಖ್ಯೆ 2) ಡಿ.ಎಸ್ ಮಾದರಿ : 12 ಸಂಖ್ಯೆ 3) ಅರ್ ಮಾದರಿ : 12 ಸಂಖ್ಯೆ 4) ಕ್ಯೂ ಮಾದರಿ : 06 ಸಂಖ್ಯೆ 5) ವಿ.ನಿ. ಮಾದರಿ : 09 ಸಂಖ್ಯೆ (ವಿಶೇಷ ನಿವೇಶನ–7) : ಪಂಪ್ ಹೌಸ್ ಇದ್ದು, ಇದರ ನಿರ್ವಹಣೆಗಾಗಿ ಪುರಸಭೆ ಹೊಸದುರ್ಗಕ್ಕೆ ಹಸ್ತಾಂತರಿಸಲಾಗಿದೆ.

ಇ)	ಈ ಕೈಗಾರಿಕೆ ಪ್ರದೇಶದಲ್ಲಿ ಕೈಗಾರಿಕೆ ಶೆಡ್ ಖಾಲಿ ಜಾಗ ನೀಡಿಕೆಯಲ್ಲಿ ಸರ್ಕಾರದ ಮಾನದಂಡ ಏನು?	ಖಾಲಿ ಮಳಿಗೆ/ ನಿವೇಶನ ಹಂಚಿಕೆಯಲ್ಲಿ ಕೆಳಕಂಡ ಪ್ರಕ್ರಿಯೆ ಅನುಸರಿಸಲಾಗುತ್ತದೆ. 1. ಕೈಗಾರಿಕಾ ವಸಾಹತುವಿನಲ್ಲಿ ಖಾಲಿ ಇರುವ ಮಳಿಗೆ / ನಿವೇಶನಗಳ ಹಂಚಿಕೆಗಾಗಿ ಪತ್ರಿಕಾ ಪ್ರಕಟಣೆ ಜಾರಿಗೊಳಿಸಿ ಅದಕ್ಕೆ ಎದುರಾಗಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. 2. ಸರ್ಕಾರದ ಆದೇಶ ಸಂಖ್ಯೆ ಸಿ.ಐ. 28 ಸಿ.ಎಸ್.ಸಿ 80 ದಿನಾಂಕ: 18-09-1981 ಹಾಗೂ ನಿಗಮದ ಆಡಳಿತ ಮಂಡಳಿಯ ಆದೇಶದಂತೆ ಅಳವಡಿಸಿಕೊಂಡಿರುವ ಮಾನದಂಡಗಳ ಆಧಾರದ ಮೇಲೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಅಧ್ಯಕ್ಷತೆಯ ಉಪ ಸಮಿತಿ ಸಭೆಯು ಅರ್ಜಿಗಳನ್ನು ಪರಿಶೀಲಿಸುತ್ತದೆ. 3. ಸದರಿ ಉಪ ಸಮಿತಿಯು ವಿದ್ಯಾರ್ಹತೆ, ಅನುಭವ, ಇತ್ಯಾದಿ ಮಾನದಂಡ ಅನುಸರಿಸಿ ಅರ್ಜಿದಾರರ ಮೌಲ್ಯೀಕರಣ ಮಾಡಿ ಅಂಕಗಳನ್ನು ನೀಡುತ್ತದೆ. 4. ಅತಿ ಹೆಚ್ಚು ಅಂಕಗಳಿಸಿದ ಅರ್ಜಿದಾರರನ್ನು ಆಯ್ಕೆ ಮಾಡಿ, ಆಯ್ಕೆ ಮಾಡಲಾದ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಏಕಗವಾಕ್ಷಿ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರುಗುವ ಏಕಗವಾಕ್ಷಿ ಸಮಿತಿ ಸಭೆಗೆ ವಿವರಗಳನ್ನು ಮಂಡಿಸಿ, ಏಕಗವಾಕ್ಷಿ ಸಮಿತಿ ಸಭೆಯ ಅನುಮೋದನೆ ಪಡೆದ ನಂತರ ಹಂಚಿಕೆ ಮಾಡುವ ಕ್ರಮ ಜಾರಿಯಲ್ಲಿರುತ್ತದೆ. 5. ಮುಂದುವರೆದು, ಒಂದು ಮಳಿಗೆ / ನಿವೇಶನಕ್ಕೆ 6 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲ ಅರ್ಜಿದಾರರ ಸಮ್ಮುಖದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ, ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಬಹಿರಂಗ ಹರಾಜು ಮೂಲಕ ಅತಿ ಹೆಚ್ಚು ಬಿಡ್ ಕೂಗಿದ ಅರ್ಜಿದಾರನಿಗೆ ಮಳಿಗೆ / ನಿವೇಶನವನ್ನು ಹಂಚಿಕೆ ಮಾಡಲಾಗುವುದು.

ಸಿಐ 111 ಸಿಎಸ್‌ಸಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 745
2. ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆಯಲ್ಲಿ ಡಿಜಿಟಲ್ ಮೌಲ್ಯಮಾಪನದ ಪ್ರಕ್ರಿಯೆಗಾಗಿ T.C.S. ಕಂಪನಿಯ ಜೊತೆಗೆ ಕೆಪಿಎಸ್‌ಸಿ ಒಪ್ಪಂದವನ್ನು ಮಾಡಿಕೊಂಡಿರುವುದು ಮತ್ತು ಈ ಕಂಪನಿಯ ಸಾಫ್ಟ್‌ವೇರ್ ಅನ್ನು ಬಳಸಿರುವುದು ನಿಜವೇ;	ಹೌದು.
ಆ)	T.C.S. ತನ್ನ DIGITAL MARKING ಎಂಬ ಪ್ರಣಾಳಿಕೆಯಲ್ಲಿ ಫಲಿತಾಂಶ ಮತ್ತು ಅಂಕಗಳ ಬಿಡುಗಡೆಯನ್ನು ಅದರ ಆಂತರಿಕ ಸರ್ವರ್ ಮತ್ತು ಡೇಟಾಬೇಸ್ ಮೂಲಕವೇ ಮಾಡಲಾಗುತ್ತಿರುವುದಾಗಿ ಹೇಳಿಕೊಂಡಿದ್ದು ಅಭ್ಯರ್ಥಿಗಳ ವಿಷಯವಾರು ಅಂಕಗಳನ್ನು ಕೆ.ಪಿ.ಎಸ್.ಸಿ. ಮತ್ತು ಟಿ.ಸಿ.ಎಸ್. ಗೆ ಸಂಬಂಧವೇ ಪಡದ NIC (National Information Center for E-governance) ಮೂಲಕ ಬಿಡುಗಡೆ ಮಾಡಲು ಕಾರಣವೇನು;	ಟಿ.ಸಿ.ಎಸ್. ಸಂಸ್ಥೆಯ ತಂತ್ರಾಂಶವನ್ನು ಬಳಸಿ, ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ ಮಾಡಲಾಗಿದೆ. ಈ ರೀತಿ ಮೌಲ್ಯಮಾಪನ ಮಾಡಲಾದ ಉತ್ತರ ಪತ್ರಿಕೆಗಳಲ್ಲಿನ ಅಭ್ಯರ್ಥಿಗಳ ವಿವರಗಳಾದ ನೋಂದಣಿ ಸಂಖ್ಯೆ, ಸಹಿ, ಇತ್ಯಾದಿಗಳನ್ನು ಗೌಪ್ಯವಾಗಿ ಸಂರಕ್ಷಿಸಲಾಗಿರುತ್ತದೆ. ಇದರಿಂದ ಯಾವುದೇ ಅಭ್ಯರ್ಥಿಯ ಮಾಹಿತಿಯು ಟಿ.ಸಿ.ಎಸ್. ಸಂಸ್ಥೆಗೆ ಲಭ್ಯವಿರುವುದಿಲ್ಲ. ಇವರೊಂದಿಗಿನ ಒಪ್ಪಂದ ಕೇವಲ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಉಳಿದ ಪ್ರಕ್ರಿಯೆಗಳಾದ ಅಭ್ಯರ್ಥಿಗಳಾದ ಅರ್ಹತಾ ಪಟ್ಟಿ ತಯಾರಿಸುವುದು, ಸಂದರ್ಶನ ಮತ್ತು ಅಂತಿಮ ಆಯ್ಕೆಪಟ್ಟಿ ತಯಾರಿಸುವುದು ಇವುಗಳನ್ನು ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರನ್ವಯ ಕರ್ನಾಟಕ ಲೋಕಸೇವಾ ಆಯೋಗದಿಂದ ಮಾಡಲಾಗಿರುತ್ತದೆ. ನಿಯಮಗಳಲ್ಲಿ ಎಲ್ಲಿಯೂ ಅಭ್ಯರ್ಥಿಗಳ ವಿಷಯವಾರು ಅಂಕಗಳನ್ನು ನೀಡಲು ಉಲ್ಲೇಖಿಸಿರುವುದಿಲ್ಲ. ಆದಾಗ್ಯೂ ಆಯೋಗವು ಆಯ್ಕೆ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ಕಾಪಾಡಲು ಪ್ರತಿ ಅಭ್ಯರ್ಥಿಯ ವಿಷಯವಾರು ಅಂಕಗಳನ್ನು ನೀಡಲು Query Based Front End Application

		ಅನ್ನು NIC ವತಿಯಿಂದ ಅಭಿವೃದ್ಧಿಪಡಿಸಿ ಅಭ್ಯರ್ಥಿಗಳಿಗೆ ಅಂತಿಮ ಆಯ್ಕೆಪಟ್ಟಿ ಪ್ರಕಟಿಸಿದ ನಂತರ ನೀಡಲು ಕ್ರಮಕೈಗೊಳ್ಳಲಾಗಿರುತ್ತದೆ.
ಇ)	T.C.S. ಕಂಪನಿಯು ಅದರದೇ ಸರ್ವರ್ ಮತ್ತು ಡೇಟಾಬೇಸ್ ಮೂಲಕ 2015ನೇ ಸಾಲಿನ ಮುಖ್ಯ ಪರೀಕ್ಷೆಯ ವಿಷಯವಾರು ಅಂಕಗಳನ್ನು ಏಕೆ ಬಿಡುಗಡೆ ಮಾಡಿರುವುದಿಲ್ಲ;	ಟಿ.ಸಿ.ಎಸ್. ಸಂಸ್ಥೆಯೊಂದಿಗಿನ ಒಪ್ಪಂದ ಕೇವಲ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ವಿಧಾನದಲ್ಲಿ ಮೌಲ್ಯಮಾಪನ ಮಾಡಲು ತಂತ್ರಾಂಶವನ್ನು ಒದಗಿಸುವುದಕ್ಕೆ ಸೀಮಿತವಾಗಿರುತ್ತದೆ.
ಈ)	ಅಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಟಿ.ಸಿ.ಎಸ್. ನಿಂದ NIC (National Information Center for E-governance) ಆಯ್ಕೆ ಪ್ರಕ್ರಿಯೆಯೂ ಸಂಪೂರ್ಣವಾಗಿ ಮುಕ್ತಾಯಗೊಳ್ಳುವ ಪೂರ್ವದಲ್ಲಿಯೇ ವರ್ಗಾವಣೆ ಮಾಡಲು ಕಾರಣವೇನು?	1997ರ ಗೆಜೆಟೆಡ್ ಪ್ರೊಬೇಷನರ್ಸ್ ನಿಯಮಗಳನ್ವಯ 1:5ರ ಅನುಪಾತದಲ್ಲಿ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಸಂದರ್ಶನ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಅಂತಿಮ ಆಯ್ಕೆಯನ್ನು ದಿನಾಂಕ:10.01.2020ರಂದು ಪ್ರಕಟಿಸಲಾಗಿರುತ್ತದೆ. ದಿನಾಂಕ: 30.01.2020ರ ಆಯೋಗದ ನಿರ್ಣಯದಂತೆ ಅಭ್ಯರ್ಥಿಗಳಿಗೆ ವಿಷಯವಾರು ಅಂಕಗಳನ್ನು ನೀಡಲು NIC ವತಿಯಿಂದ Query Based Front End Application ಅನ್ನು ಅಭಿವೃದ್ಧಿಪಡಿಸಿ ದಿನಾಂಕ: 27.02.2020 ರಂದು ವಿಷಯವಾರು ಅಂಕಗಳನ್ನು ಪ್ರಕಟಿಸಲಾಗಿರುತ್ತದೆ.

ಸಂಖ್ಯೆ: ಸಿಆಸುಇ 66 ಎಸ್ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 746
2) ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ. (ಸಂಡೂರ್)
3) ಉತ್ತರಿಸುವ ದಿನಾಂಕ: : 22/09/2020
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯದಿಂದ ಸಂಗ್ರಹವಾದ ಒಟ್ಟು ಜಿ.ಎಸ್.ಟಿ. ಮೊತ್ತವೆಷ್ಟು; ಸಿ.ಜಿ.ಎಸ್.ಟಿ. ಮತ್ತು ಎಸ್.ಜಿ.ಎಸ್.ಟಿ. ಮೊತ್ತವೆಷ್ಟು;</td><td>(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಜಿ.ಎಸ್.ಟಿ.</th><th>ಸಿ.ಜಿ.ಎಸ್.ಟಿ.</th><th>ಎಸ್.ಜಿ.ಎಸ್.ಟಿ.</th></tr>
<tr><td>1</td><td>2017–18</td><td>48139.76</td><td>10225.60</td><td>14695.70</td></tr>
<tr><td>2</td><td>2018–19</td><td>78713.67</td><td>27940.00</td><td>17302.51</td></tr>
<tr><td>3</td><td>2019–20</td><td>83409.83</td><td>19818.76</td><td>26480.43</td></tr>
</table></td></tr>
<tr><td>ಆ)</td><td>ಸೆಸ್ಸುಗಳು ಮತ್ತಿತರ ರೂಪದಲ್ಲಿ ಎಷ್ಟು ಮೊತ್ತ ಸಂಗ್ರಹವಾಗಿದೆ? (ಕಳೆದ ಮೂರು ವರ್ಷಗಳ ವಿವರ ನೀಡುವುದು)</td><td>(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಸೆಸ್ಸು ಸಂಗ್ರಹಣೆ</th></tr>
<tr><td>1</td><td>2017–18</td><td>6619.12</td></tr>
<tr><td>2</td><td>2018–19</td><td>10073.83</td></tr>
<tr><td>3</td><td>2019–20</td><td>9445.67</td></tr>
</table></td></tr>
</table>

ಸಂಖ್ಯೆ: ಆಇ 55 ಸಿಎಸ್ಎಲ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	749
2	ಸದಸ್ಯರ ಹೆಸರು	:	ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್. (ಚಾಮರಾಜಪೇಟೆ)
3	ಉತ್ತರಿಸುವ ದಿನಾಂಕ	:	22-09-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ	ಪಾದರಾಯನಪುರ ಮುಖ್ಯರಸ್ತೆಯ ಬಿನ್ನಿಮಿಲ್ ಟ್ಯಾಂಕ್‌ಬಂಡ್ ರಸ್ತೆಯಿಂದ ವಿಜಯನಗರ ಪೈಪ್‌ಲೈನ್ ರಸ್ತೆಯವರೆಗೆ ರಸ್ತೆ ಅಗಲೀಕರಣದ ಕಾಮಗಾರಿಗೆ ಬಿಡುಗಡೆಯಾದ ಅನುದಾನವನ್ನು ಹಿಂಪಡೆಯಲು ಕಾರಣವೇನು; (ವಿವರವಾದ ಮಾಹಿತಿಯನ್ನು ನೀಡುವುದು)	ಪಾದರಾಯನಪುರ ಮುಖ್ಯ ರಸ್ತೆಯನ್ನು ಬಿನ್ನಿಮಿಲ್ (ಟ್ಯಾಂಕ್‌ಬಂಡ್ ರಸ್ತೆ) ರಸ್ತೆಯಿಂದ ವಿಜಯನಗರ ಪೈಪ್‌ಲೈನ್ ರಸ್ತೆಯವರೆಗೆ ಪರಿಷ್ಕೃತ ಮಹಾನಕ್ಷೆ-2015ರನ್ವಯ 30.00 ಮೀಟರ್‌ಗೆ ರಸ್ತೆ ಅಗಲೀಕರಣಗೊಳಿಸಲು 2017-18ನೇ ಸಾಲಿನ **"ವಿಶೇಷ ಬಂಡವಾಳ ಯೋಜನೆ"** ಅನುದಾನದ ಸರ್ಕಾರದ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ: 26.12.2017ರ ಅನುಬಂಧ-7ರ ಕ್ರಮ ಸಂಖ್ಯೆ: 10ರಲ್ಲಿ ರೂ. 10.00 ಕೋಟಿಗಳ ಅನುದಾನವನ್ನು ಹಾಗೂ 2018-19ನೇ ಸಾಲಿನ **"ಮುಖ್ಯ ಮಂತ್ರಿಗಳ ನವ ಬೆಂಗಳೂರು"** ಯೋಜನೆಯ ಅನುದಾನದ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01.02.2019ರ ಅನುಬಂಧ-3ರ ಕ್ರಮ ಸಂಖ್ಯೆ: 81ರಲ್ಲಿ ರೂ. 50.00 ಕೋಟಿಗಳ ಅನುದಾನ ಸೇರಿ ಒಟ್ಟು ರೂ. 60.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿರುತ್ತದೆ. ಆದರೆ, ಪಾದರಾಯನಪುರ ಮುಖ್ಯರಸ್ತೆಯನ್ನು ಬಿನ್ನಿಮಿಲ್ (ಟ್ಯಾಂಕ್‌ಬಂಡ್ ರಸ್ತೆ) ರಸ್ತೆಯಿಂದ ವಿಜಯನಗರ ಪೈಪ್‌ಲೈನ್ ರಸ್ತೆಯವರೆಗೆ ಅಗಲೀಕರಣಗೊಳಿಸುವ ಯೋಜನೆಗೆ ಅವಶ್ಯವಿರುವ ಒಟ್ಟು 222 ಖಾಸಗಿ ಸ್ವತ್ತುಗಳನ್ನು ನೂತನ ಟಿ.ಡಿ.ಆರ್ ನಿಯಮಾವಳಿಯನ್ವಯ ಭೂಸ್ವಾಧೀನ ಕೈಗೊಳ್ಳಲು ನಮೂನೆ-1 ಅಧಿಸೂಚನೆಯನ್ನು ದಿನಾಂಕ:23.02.2019 ರಂದು ಪ್ರಕಟಿಸಿದ್ದು ಟಿಡಿಆರ್ ಅನ್ವಯ ಭೂಸ್ವಾಧೀನಕ್ಕೆ ಖಾಸಗಿ ಸ್ವತ್ತಿನ ಮಾಲೀಕರು ವಿರೋಧ ವ್ಯಕ್ತಪಡಿಸಿ, ಇತರೆ ಪ್ರಕರಣಗಳಲ್ಲಿ ಮತ್ತು ಮೆಟ್ರೋ ಯೋಜನೆಯಲ್ಲಿ ನೀಡಲಾಗುತ್ತಿರುವಂತೆ ಧನ ರೂಪದಲ್ಲಿ ಭೂಪರಿಹಾರ ನೀಡಲು ಬೇಡಿಕೆ

		ಇಟ್ಟ ಹಿನ್ನಲೆಯಲ್ಲಿ ಮತ್ತು ಭೂಸ್ವಾಧೀನ ಪ್ರಕ್ರಿಯೆಯು ವಿಳಂಬವಾಗುತ್ತಿದ್ದ ಕಾರಣದಿಂದಾಗಿ ಸದರಿ ಪಾದರಾಯನಪುರ ಮುಖ್ಯರಸ್ತೆಗೆ ಮೀಸಲಿಟ್ಟ ರೂ.10.00 ಕೋಟಿಗಳನ್ನು ಉಳಿಸಿಕೊಂಡು ಉಳಿಕೆ ರೂ.50.00 ಕೋಟಿಗಳನ್ನು ಹಿಂಪಡೆದು ಸದರಿ ರೂ.50.00 ಕೋಟಿಗಳನ್ನು ಇತರೆ ಆದ್ಯತಾ ಕಾಮಗಾರಿಗಳಿಗೆ (Other Priority Works) ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯ ಸರ್ಕಾರಿ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20.09.2019ರಲ್ಲಿ ಉಪಯೋಗಿಸಿ ಕೊಳ್ಳಲಾಗಿರುತ್ತದೆ. ಪ್ರಸ್ತುತ ರಸ್ತೆ ಅಗಲೀಕರಣ ಯೋಜನೆಯನ್ನು ಮುಂದುವರೆಸಿದ್ದು, ಟಿ.ಡಿ.ಆರ್ ಯೋಜನೆಯಡಿಯಲ್ಲಿ ಭೂ-ಮಾಲೀಕರಿಂದ ರಸ್ತೆ ಅಗಲೀಕರಣಕ್ಕೆ ಭೂಮಿ ಪಡೆದುಕೊಳ್ಳುವ ಪ್ರಯತ್ನವು ಮುಂದುವರೆದಿರುತ್ತದೆ.
ಆ	ಸದರಿ ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೈಗೊಳ್ಳಲು ಅಗತ್ಯ ಅನುದಾನ ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಪಾದರಾಯನಪುರ ಮುಖ್ಯರಸ್ತೆಯನ್ನು ಬಿನ್ನಿಮಿಲ್ (ಟ್ಯಾಂಕ್‌ಬಂಡ್ ರಸ್ತೆ) ರಸ್ತೆಯಿಂದ ವಿಜಯನಗರ ಪೈಪ್‌ಲೈನ್ ರಸ್ತೆಯವರೆಗೆ ಪರಿಷ್ಕೃತ ಮಹಾನಕ್ಷೆ-2015ರನ್ವಯ 30.00 ಮೀಟರ್‌ಗೆ ರಸ್ತೆ ಅಗಲೀಕರಣಗೊಳಿಸುವ ಪ್ರಸ್ತಾವನೆಯನ್ನು ಬಿಬಿಎಂಪಿ ಆಯುಕ್ತರು ಸರ್ಕಾರಕ್ಕೆ ಸಲ್ಲಿಸಿದ್ದು, ಕೆಲವು ಅಂಶಗಳಿಗೆ ಆಯುಕ್ತರಿಂದ ಮಾಹಿತಿ ಕೋರಲಾಗಿರುತ್ತದೆ. ಹಾಲಿ ಕಾಮಗಾರಿ ಪ್ರಾರಂಭಿಸಲು ರೂ. 10.00 ಕೋಟಿಗಳ ಅನುದಾನ ಲಭ್ಯವಿದ್ದು, ಭೂ-ಸ್ವಾಧೀನ ಪ್ರಕ್ರಿಯೆಯನ್ನು ಹಂತ ಹಂತವಾಗಿ ಖಾಸಗಿ ಭೂ-ಮಾಲೀಕರಿಂದ ಪಡೆದು ಕಾಮಗಾರಿಯ ವೆಚ್ಚದ ಅನುಗುಣವಾಗಿ ನಿರ್ವಹಿಸಲು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ನಅಇ 182 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 750
2. ಸದಸ್ಯರ ಹೆಸರು : ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್ (ಚಾಮರಾಜಪೇಟೆ)
3. ಉತ್ತರಿಸುವ ದಿನಾಂಕ : 22-09-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮೈಸೂರು ರಸ್ತೆಯಲ್ಲಿನ ಕಾಂಕ್ರೀಟ್ ರಸ್ತೆಯ ನಿರ್ಮಾಣ ಕಾಮಗಾರಿ ಸುಮಾರು ಎರಡು ವರ್ಷಗಳಿಂದ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು)	2016-17ನೇ ಸಾಲಿನಲ್ಲಿ ಮೈಸೂರು ರಸ್ತೆಯಲ್ಲಿ ಕೆ.ಆರ್.ಮಾರುಕಟ್ಟೆಯಿಂದ ಬಿ.ಹೆಚ್.ಇ.ಎಲ್. ವೃತ್ತದವರೆಗೆ ಒಟ್ಟು 4.8 ಕಿ.ಮೀ. ರಸ್ತೆಗೆ ವೈಟ್ ಟಾಪಿಂಗ್ ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಂತೆ ಬಲಭಾಗದಲ್ಲಿ ಬ್ರಿಯಾಂಡ್ ಸರ್ಕಲ್‌ನಿಂದ ಬಿ.ಹೆಚ್.ಇ.ಎಲ್. ಸರ್ಕಲ್ ವರೆಗೆ ಒಟ್ಟು 3.8ಕಿ.ಮೀ. ಹಾಗೂ ಎಡಭಾಗದಲ್ಲಿ ಗೋರಿಪಾಳ್ಯ ಜಂಕ್ಷನ್‌ನಿಂದ ಬಿ.ಹೆಚ್.ಇ.ಎಲ್. ಸರ್ಕಲ್‌ವರೆಗೆ 2.9ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದ್ದು ಪ್ರಸ್ತುತ ಫುಟ್‌ಪಾತ್ ಹಾಗೂ ಇತರೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಬಲಭಾಗದಲ್ಲಿ ಕೆ.ಆರ್.ಮಾರುಕಟ್ಟೆಯಿಂದ ಬ್ರಿಯಾಂಡ್ ಸರ್ಕಲ್‌ವರೆಗೆ 1.0ಕಿ.ಮೀ. ಹಾಗೂ ಎಡಭಾಗದಲ್ಲಿ ಕೆ.ಆರ್.ಮಾರುಕಟ್ಟೆಯಿಂದ ಸಿರ್ಸಿ ಸರ್ಕಲ್‌ವರೆಗೆ 1.9ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿ ಬಾಕಿ ಉಳಿದಿರುತ್ತದೆ. **ಈ ಕೆಳಕಂಡ ಅಂಶಗಳಿಂದಾಗಿ ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ವಿಳಂಬ ಉಂಟಾಗಿರುತ್ತದೆ.** 1) ಈ ರಸ್ತೆಯ ಎಡಭಾಗದಲ್ಲಿ ಅಂದರೆ ಮೈಸೂರು ರಸ್ತೆ, ಕೆ.ಆರ್.ಮಾರುಕಟ್ಟೆಯಿಂದ ಸಿರ್ಸಿ ಸರ್ಕಲ್‌ವರೆಗೆ ನೀರು ಸರಬರಾಜು ಮತ್ತು ಒಳಚರಂಡಿ ಎರಡೂ ಕೊಳವೆಗಳಿದ್ದು, ಸದರಿ ರಸ್ತೆಗೆ ಹೊಂದಿಕೊಂಡು ಹಲವಾರು ಅಡ್ಡರಸ್ತೆಗಳೂ ಹಾದು ಹೋಗುವುದರಿಂದ ಅಡ್ಡರಸ್ತೆಗಳಲ್ಲಿ ಸಂಪರ್ಕ ಕಲ್ಪಿಸಿರುವ ಜಾಗಗಳಲ್ಲಿ ಆಗಾಗ್ಗೆ ಕೊಳವೆಗಳ ನಿರ್ವಹಣೆ ಮಾಡುವ ಅವಶ್ಯಕತೆ ಇರುತ್ತದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ ಹಿನ್ನೆಲೆಯಲ್ಲಿ, ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಸಭೆ ನಡೆಸಿ, ವಿವರವಾಗಿ ಚರ್ಚಿಸಿ, ಸದರಿ ರಸ್ತೆಯಲ್ಲಿ ವೈಟ್ ಟಾಪಿಂಗ್ ನಿರ್ಮಿಸುವುದರಿಂದ ಆಗಾಗ್ಗೆ ರಸ್ತೆಯನ್ನು ಅಗೆಯಬೇಕಾಗಿರುವುದರಿಂದ ಹಾಲಿ ಇರುವಂತೆಯೇ ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ಉಳಿತಾಯವಾಗುವ ಮೊತ್ತದಲ್ಲಿ ಡಾಂಬರು ರಸ್ತೆ ಹಾಗೂ ಫುಟ್‌ಪಾತ್

		ಅಭಿವೃದ್ಧಿಪಡಿಸುವ ಅಂಶಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ನಿರ್ವಹಿಸುವುದು ಸೂಕ್ತ ಎಂದು ಸಭೆಯಲ್ಲಿ ತೀರ್ಮಾನಿಸಿದ್ದು, ಈ ಹಿನ್ನೆಲೆಯಲ್ಲಿ ಈ ರಸ್ತೆಯ ವೈಟ್ ಟಾಪಿಂಗ್‌ಅನ್ನು ಸ್ಥಳಕ್ಕೆ ಅನುಗುಣವಾಗಿ ಪುನರ್ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು ಎಂದು ಬಿಬಿಎಂಪಿ ಆಯುಕ್ತರು ವರದಿಸಿರುತ್ತಾರೆ. 2) ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಕಾರ್ಮಿಕರ ಸಮಸ್ಯೆ ಮತ್ತು ಅಗತ್ಯವಿರುವ ಸಾಮಗ್ರಿಗಳ ಕೊರತೆಯಿಂದಾಗಿ ದಿನಾಂಕ: 24-03-2020 ರಿಂದ ದಿನಾಂಕ: 31-07-2020 ರವರೆಗೆ ಕಾಮಗಾರಿ ವಿಳಂಬವಾಗಿರುತ್ತದೆ. 3) ಕೆ.ಆರ್. ಮಾರುಕಟ್ಟೆಯಿಂದ ಸಿರ್ಸಿ ಸರ್ಕಲ್‌ವರೆಗಿನ ಮೇಲುಸೇತುವೆಯಲ್ಲಿ ದುರಸ್ತಿ ಕಾರ್ಯ ನಿರ್ವಹಿಸುತ್ತಿದ್ದರಿಂದ, ಎಲ್ಲಾ ವಾಹನಗಳನ್ನು ಮೇಲುಸೇತುವೆ ಕೆಳಗೆ ಸಂಚರಿಸಲು ಸಂಚಾರ ಪೊಲೀಸ್ ರವರು ಸೂಚಿಸಿದ್ದ ಹಿನ್ನೆಲೆಯಲ್ಲಿ ದಿನಾಂಕ: 01-11-2019 ರಿಂದ ದಿನಾಂಕ: 31-01-2020 ರವರೆಗೆ ವೈಟ್ ಟಾಪಿಂಗ್ ಕಾಮಗಾರಿ ನಿರ್ವಹಿಸಲು ವಿಳಂಬವಾಗಿರುತ್ತದೆ. ಮೇಲ್ಕಂಡ ಅಂಶಗಳಿಂದಾಗಿ ಮೈಸೂರು ರಸ್ತೆಯಲ್ಲಿನ ಕಾಂಕ್ರೀಟ್ ರಸ್ತೆ ಕಾಮಗಾರಿ ನಿರ್ವಹಿಸುವಲ್ಲಿ ವಿಳಂಬವಾಗಿದ್ದು, ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ.
ಆ	ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಮೇಲೆ ತಿಳಿಸಿರುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದ ನೀರಿನ ಕೊಳವೆ ಹಾಗೂ ಒಳಚರಂಡಿ ಕೊಳವೆಗಳನ್ನು ಅಳವಡಿಸಲು ನಿಯಮ ಪ್ರಕಾರ ಹಣ ಸಂದಾಯ ಮಾಡಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸಲಾಗುತ್ತದೆ.

ಸಂಖ್ಯೆ: ನಅಇ 183 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 751

2) ಸದಸ್ಯರ ಹೆಸರು : ಶ್ರೀ ಪಾಟೀಲ್ ಎಂ.ವೈ

3) ಉತ್ತರಿಸಬೇಕಾದ ದಿನಾಂಕ : 22.09.2020

4) ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಅಫಜಲಪೂರ ತಾಲ್ಲೂಕಿನ, ಅಫಜಲಪೂರ ಪಟ್ಟಣದ ಎ.ಪಿ.ಎಂ.ಸಿ. ಇಂದ ದಿಕ್ಸಂಗಾ ಗ್ರಾಮಕ್ಕೆ ಕೂಡುವ ರಸ್ತೆಯು ಕೆರೆಯ ಹಿನ್ನೀರಿನಿಂದ ಮುಳುಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಹಾಗಿದ್ದಲ್ಲಿ, ಸುಗಮ ಸಂಚಾರಕ್ಕೆ ಯಾವಾಗ ಅನುವು ಮಾಡಿ ಕೊಡಲಾಗುವುದು;	ಕೆರೆಯ ಹಿನ್ನೀರಿನಿಂದ ರಸ್ತೆ ಮುಳುಗಡೆಯಾಗುತ್ತಿರುವುದನ್ನು ತಪ್ಪಿಸಲು ಬಾಕ್ಸ್ ಕಲ್ವರ್ಟ್ ನಿರ್ಮಿಸಲು ರೂ.225.00 ಲಕ್ಷ ಅಂದಾಜು ಮೊತ್ತದಲ್ಲಿ ಅಂದಾಜು ತಯಾರಿಸಲಾಗಿದೆ. ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆಮೇರೆಗೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.
ಇ	ಈ ಕೆರೆಯ ಹಿನ್ನೀರಿನಿಂದ ಸುಗಮ ಸಂಚಾರಕ್ಕೆ ಜನರಿಗೆ ತೊಂದರೆಯಾಗುತ್ತಿರುವುದರಿಂದ ಈ ಕುರಿತು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಯಾವ ಕಾಲಮಿತಿಯೊಳಗೆ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಲಾಗುವುದು?	

ಸಂಖ್ಯೆ: ಸನೀಇ 151 ವಿಸವಿ 2020.

(ಜೆ.ಸಿ ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 754
ಸದಸ್ಯರ ಹೆಸರು	: ಶ್ರೀ ಪಾಟೀಲ್. ಎಂ.ವೈ (ಅಫ್ಜಲ್‌ಪುರ್)
ಉತ್ತರಿಸುವ ದಿನಾಂಕ	: 22.09.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಅಫಜಲಪುರ ಮತಕ್ಷೇತ್ರದ ಕಲಬುರಗಿ ತಾಲ್ಲೂಕಿನ ಭೀಮಾ ನದಿಗೆ ಅಡ್ಡಲಾಗಿ ಬೆಳಗುಂಪಾ ಮತ್ತು ಹರವಾಳ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಅಫಜಲಪುರ ಮತಕ್ಷೇತ್ರದ ಕಲಬುರಗಿ ತಾಲ್ಲೂಕಿನ ಭೀಮಾ ನದಿಗೆ ಅಡ್ಡಲಾಗಿ ಬೆಳಗುಂಪಾ ಮತ್ತು ಹರವಾಳ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಸ್ತಾವಿತ ಬ್ಯಾರೇಜಿನಲ್ಲಿ ಸಂಗ್ರಹಿಸಲು ಉದ್ದೇಶಿಸಿರುವ ನೀರಿನ ಪ್ರಮಾಣ, ನೀರಿನ ಹಂಚಿಕೆ, ಅಚ್ಚುಕಟ್ಟು ಕ್ಷೇತ್ರ, ನೀರಾವರಿ/ಕುಡಿಯುವ ನೀರು/ಕೈಗಾರಿಕಾ ಉದ್ದೇಶಕ್ಕಾಗಿ ನೀರಿನ ಬಳಕೆ ವಿವರಗಳು ಮತ್ತು ಪ್ರಸ್ತುತ ಹರವಾಳ ಮತ್ತು ಬೆಳಗುಂಪ (ಕೆ) ಹಳ್ಳಿಗಳ ಮಧ್ಯೆ ಸಂಪರ್ಕದ ವಿವರಗಳನ್ನೊಳಗೊಂಡ Pre Feasibility Report (PFR) ಅನ್ನು ತಯಾರಿಸಿ, KBJNL ನಿಗಮದ ತಾಂತ್ರಿಕ ಉಪ ಸಮಿತಿ ಮುಂದೆ ಮಂಡಿಸಲು ಕ್ರಮ ಜರುಗಿಸಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಈ ಯೋಜನೆಯಿಂದ ಕಲಬುರಗಿ ತಾಲ್ಲೂಕಿನ ಹಳ್ಳಿಗಳು ಹಾಗೂ ಜೇವರ್ಗಿ ತಾಲ್ಲೂಕಿನ ಹಳ್ಳಿಗಳ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರಿನ ಸಮಸ್ಯೆಗಳು ಬಗೆಹರಿಯುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಈ ಯೋಜನೆಯನ್ನು (KBJNL) ನಿಗಮದಿಂದ ಕೈಗೆತ್ತಿಕೊಳ್ಳಲು ಯಾವಾಗ ಮಂಜೂರಾತಿ ನೀಡಲಾಗುವುದು; ಹಾಗೂ ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪ್ರಾರಂಭ ಮಾಡಲು ಕಾರ್ಯಾದೇಶ ನೀಡಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಜಸಂಇ 88 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	758
ಸದಸ್ಯರ ಹೆಸರು	:	ಶ್ರೀ ದೇಶಪಾಂಡೆ ಆರ್.ವಿ (ಹಳಿಯಾಳ)
ಉತ್ತರಿಸಬೇಕಾದ ದಿನಾಂಕ	:	22.09.2020.
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	15ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಪ್ರಕಾರ ಮುಂದಿನ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಪ್ರತಿ ವರ್ಷ ಸಂಭವಿಸುವ ಆರ್ಥಿಕ ನಷ್ಟವೆಷ್ಟು?	ರಾಜ್ಯದ ಮಧ್ಯಮಾವಧಿ ವಿತ್ತೀಯ ಯೋಜನೆಯ ಪರಿಕಲ್ಪನೆಗಳನ್ವಯ ಕೇಂದ್ರ ಸರ್ಕಾರದಿಂದ ಮುಂದಿನ ಮೂರು ವರ್ಷಗಳಲ್ಲಿ ತೆರಿಗೆ ಪಾಲು ರಾಜ್ಯಕ್ಕೆ ಈ ಕೆಳಕಂಡಂತೆ ಸ್ವೀಕೃತಿಯಾಗುವ ನಿರೀಕ್ಷೆಯ ಮುನ್ನಾಂದಾಜು ಮಾಡಲಾಗಿರುತ್ತದೆ. (ಕೋಟಿ ರೂ.ಗಳಲ್ಲಿ) ವರ್ಷ — ಅಂದಾಜು ಸ್ವೀಕೃತಿ 2021-22 — 31164 2022-23 — 33969 2023-24 — 37026 15ನೇ ಹಣಕಾಸು ಆಯೋಗವು 2020-21 ನೇ ಸಾಲಿಗೆ ಅನ್ವಯಿಸುವಂತೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲಗಳ ಹಂಚಿಕೆಯ ಕುರಿತು ಮಧ್ಯಂತರ ವರದಿ ನೀಡಿದ್ದು, ಶಿಫಾರಸ್ಸು ಮಾಡಿದ್ದ ಹಂಚಿಕೆಯು ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಆಯೋಗದ ವರದಿಯಂತೆ ರಾಜ್ಯದ ಪಾಲು 14ನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಶೇಕಡ 4.71 ರಿಂದ 3.65ಕ್ಕೆ ಇಳಿದಿದೆ. 15ನೇ ಹಣಕಾಸು ಆಯೋಗವು ಈಗ ನೀಡಿರುವ ವರದಿಯಿಂದ ರಾಜ್ಯದ ಪಾಲಿನಲ್ಲಿ ಶೇಕಡಾ 23 ರಷ್ಟು ಕಡಿಮೆಯಾಗಿದೆ.
ಆ)	ಸದರಿ ನಷ್ಟ ತುಂಬಿಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.	15ನೇ ಹಣಕಾಸಿನ ಆಯೋಗವು ಶಿಫಾರಸ್ಸು ಮಾಡಿದ ಹಂಚಿಕೆಯು ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿದ್ದು, 2021-22 ರಿಂದ 2025-26ರವರೆಗಿನ ಅವಧಿಗೆ ಸಂಬಂಧಿಸಿದ ಹಂಚಿಕೆಯ ಪೂರ್ಣ ವರದಿಯನ್ನು ಅಕ್ಟೋಬರ್-2020ರ ಅಂತ್ಯದಲ್ಲಿ ಆಯೋಗವು ಸಲ್ಲಿಸುವ ನಿರೀಕ್ಷೆ ಇದೆ. ಸರ್ಕಾರವು 2020-21ನೇ ವರ್ಷದ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ನಷ್ಟವನ್ನು ಸರಿಪಡಿಸುವಂತೆ ಹಾಗೂ 2021-22 ರಿಂದ 2025-26ರ ಅವಧಿಗೆ ರಾಜ್ಯಕ್ಕೆ ಹೆಚ್ಚಿನ ಹಂಚಿಕೆಯನ್ನು ಶಿಫಾರಸ್ಸು ಮಾಡುವಂತೆ ಕೋರಿ ಆಯೋಗಕ್ಕೆ ಹೆಚ್ಚುವರಿ ಜ್ಞಾಪನಾ ಪತ್ರವನ್ನು ಮಾರ್ಚ್-2020ರಲ್ಲಿ ಸಲ್ಲಿಸಿದೆ.

ಸಂಖ್ಯೆ: ಆಇ 16 ಆಆಕೋ-2 / 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 760
2) ಸದಸ್ಯರ ಹೆಸರು : ಶ್ರೀ ದೇಶಪಾಂಡೆ ಆರ್.ವಿ. (ಹಳಿಯಾಳ)
3) ಉತ್ತರಿಸುವ ದಿನಾಂಕ: : 22/09/2020
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2022ರ ಏಪ್ರಿಲ್‌ನಿಂದ ಜಿ.ಎಸ್.ಟಿ. ಪರಿಹಾರ ನಿಂತು ಹೋದಲ್ಲಿ ಆರ್ಥಿಕ ಸಂಕಷ್ಟಗಳನ್ನು ರಾಜ್ಯವು ಹೇಗೆ ನಿಭಾಯಿಸಲಾಗುತ್ತಿದೆ;	ಸರಕು ಮತ್ತು ಸೇವಾ ತೆರಿಗೆ (ನಷ್ಟ ಪರಿಹಾರ) ಕಾಯ್ದೆ, 2017ರಂತೆ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಉಂಟಾದ ನಷ್ಟಕ್ಕೆ ಪರಿಹಾರವನ್ನು ಪಡೆಯಲು ರಾಜ್ಯಗಳು 2022ರ ಜುಲೈ ತಿಂಗಳವರೆಗೆ ಅರ್ಹವಾಗಿರುತ್ತವೆ. ನಷ್ಟ ಪರಿಹಾರ ಒದಗಿಸುವಿಕೆಯನ್ನು 2022ರ ನಂತರವೂ ಮುಂದುವರೆಸುವುದರ ಕುರಿತು ಸರಕು ಮತ್ತು ಸೇವಾ ತೆರಿಗೆ ಪರಿಷತ್ತಿನಲ್ಲಿ ನಿರ್ಧರಿಸಬೇಕಾಗಿರುತ್ತದೆ. ಒಂದು ವೇಳೆ ನಷ್ಟ ಪರಿಹಾರದ ಅವಧಿಯನ್ನು 2022ರ ಜುಲೈ ನಂತರದ ಅವಧಿಗೆ ವಿಸ್ತರಿಸದಿದ್ದಲ್ಲಿ, ರಾಜ್ಯ ಸರ್ಕಾರವು ತನ್ನ ಸ್ವಂತ ಎಸ್.ಜಿ.ಎಸ್.ಟಿ. ಸಂಗ್ರಹದ ಮೇಲೆಯೇ ಅವಲಂಬಿತವಾಗಿರಬೇಕಾಗಿರುತ್ತದೆ.
ಆ)	ಈ ಸಂಕಷ್ಟದಿಂದ ಹೊರಬರಲು ಆರ್ಥಿಕ ಇಲಾಖೆಯ ಮುಂದೆ ಯಾವ ಮಾರ್ಗಗಳಿವೆ?	ಜಿ.ಎಸ್.ಟಿ. ನಷ್ಟ ಪರಿಹಾರದ ಅವಧಿಯನ್ನು 2022ರ ಜುಲೈ ನಂತರದ ಅವಧಿಗೆ ವಿಸ್ತರಿಸದಿದ್ದಲ್ಲಿ, ರಾಜ್ಯ ಸರ್ಕಾರವು ತನ್ನ ಎಸ್.ಜಿ.ಎಸ್.ಟಿ. ಸಂಗ್ರಹಣೆ, ಇದಲ್ಲದೇ ಅಬಕಾರಿ, ಸಾರಿಗೆ, ನೋಂದಣಿ ಮತ್ತು ಮುದ್ರಾಂಕ ಹಾಗೂ ತೆರಿಗೆಯೇತರ ರಾಜಸ್ವವನ್ನು ಹೆಚ್ಚಿಸುವ ಮೂಲಕ ಆರ್ಥಿಕತೆಯನ್ನು ಸರಿದೂಗಿಸಲಾಗುವುದು.

ಸಂಖ್ಯೆ: ಆಇ 53 ಸಿಎಸ್‌ಎಲ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 766
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ರಾಜೀವ್.ಪಿ. (ಕುಡಚಿ)
3. ಉತ್ತರಿಸುವ ದಿನಾಂಕ : 22-09-2020
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಗೃಹ ರಕ್ಷಕ ಇಲಾಖೆಯು ಸ್ವಯಂ ಸೇವಕ ಪ್ಯಾರಾಮಿಲಿಟರಿ ಪೊಲೀಸ್ ಫೋರ್ಸ್ ಆಗಿ ದೇಶಕ್ಕೆ ಸೇವೆ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗೃಹರಕ್ಷಕ ಇಲಾಖೆಯು ಪೊಲೀಸ್ ಇಲಾಖೆಯ ಸಹಾಯಕ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ.
ಆ)	ಬಂದಿದ್ದಲ್ಲಿ, ಮತ್ತಷ್ಟು ಸುವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ಹಾಗೂ ತುರ್ತಾಗಿ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗಿ ಆಡಳಿತ ದೃಷ್ಟಿಯಿಂದ ವಿಕೇಂದ್ರಿಕರಣ ಮಾಡಲು ಇರುವ ತೊಂದರೆ ಏನು;	ಗೃಹರಕ್ಷಕ ಇಲಾಖೆಯು ಪೊಲೀಸ್ ಇಲಾಖೆಯ ಸಹಾಯಕ ಇಲಾಖೆಯಾಗಿ ಸುವ್ಯವಸ್ಥಿತವಾಗಿ ಕರ್ತವ್ಯ ನಿರ್ವಹಿಸುತ್ತಿದೆ.
ಇ)	ಗೃಹ ರಕ್ಷಕ ನಿಯಮಾವಳಿ ಮತ್ತು ಕೈಪಿಡಿಯಲ್ಲಿ ರೀಜಿನಲ್ ಕಮಾಂಡೆಂಟ್ ಹುದ್ದೆ ಸೃಜಿಸಲು ಅವಕಾಶ ಇದೆಯೇ;	ಗೃಹರಕ್ಷಕ ನಿಯಮಾವಳಿ ಮತ್ತು ಕೈಪಿಡಿಯಲ್ಲಿ ರೀಜಿನಲ್ ಕಮಾಂಡೆಂಟ್ ಹುದ್ದೆ ಸೃಜಿಸಲು ಅವಕಾಶ ಕಲ್ಪಿಸಿರುವುದಿಲ್ಲ.
ಈ)	ಈ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇರುವುದಿಲ್ಲ.
ಉ)	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಹುದ್ದೆಯನ್ನು ಸೃಜಿಸುವುದು ?	ಅನ್ವಯಿಸುವುದಿಲ್ಲ.

ಸಂಖ್ಯೆ: ಒಇ 64 ಕಗೃಸೇ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	775
ಸದಸ್ಯರ ಹೆಸರು	:	ಶ್ರೀ ಅಶ್ವಿನ್ ಕುಮಾರ್ ಎಂ. (ಟಿ.ನರಸೀಪುರ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನಲ್ಲಿ ವಿದ್ಯುತ್ ಪರಿವರ್ತಕ ದುರಸ್ಥಿ ಕೇಂದ್ರ ಇಲ್ಲದಿರುವುದರಿಂದ, ಪರಿವರ್ತಕಗಳು ವಿಫಲಗೊಂಡಾಗ, ದೂರದ ನಂಜನಗೂಡು ವಿಭಾಗೀಯ ಕಛೇರಿಯಿಂದ ಪರಿವರ್ತಕಗಳನ್ನು ತಂದು ಬದಲಾಯಿಸಬೇಕಾಗಿರುವ ಕಾರಣ ಹಲವು ದಿನಗಳೇ ವಿದ್ಯುತ್ ಸಂಪರ್ಕ ಕಡಿತಗೊಂಡು, ವಾರಗಟ್ಟಲೆ ಸಾರ್ವಜನಿಕರು ಕತ್ತಲೆಯಲ್ಲಿರಬೇಕಾಗಿರುವುದಲ್ಲದೆ, ಕುಡಿಯುವ ನೀರು, ವಿದ್ಯುತ್ ದೀಪ, ರೈತರುಗಳ ಪಂಪಸೆಟ್‌ಗಳಿಗೆ ವಿದ್ಯುತ್ ಸರಬರಾಜಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ:	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯಾಪ್ತಿಯ ಟಿ. ನರಸೀಪುರ ತಾಲ್ಲೂಕಿನಲ್ಲಿ ವಿವಿಧ ಸಾಮರ್ಥ್ಯದ ಒಟ್ಟು 4710 ಸಂಖ್ಯೆಯ ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿವೆ. ಕೆ.ಇ.ಆರ್.ಸಿ ನಿಯಮಾನುಸಾರ ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿನ ವಿಫಲವಾದ ಪರಿವರ್ತಕಗಳನ್ನು 24 ಗಂಟೆಯೊಳಗೆ ಬದಲಾಯಿಸಲಾಗುತ್ತಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳ ಪರಿವರ್ತಕಗಳು ವಿಫಲಗೊಂಡಲ್ಲಿ ಜೇಷ್ಠತೆ ಮತ್ತು ಲಭ್ಯತೆ ಆಧಾರದ ಮೇಲೆ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಟಿ.ನರಸೀಪುರ ತಾಲ್ಲೂಕಿನಲ್ಲಿ 2019–20 ಮತ್ತು 2020–21ನೇ ಸಾಲಿನ ಆಗಸ್ಟ್–2020ರ ಅಂತ್ಯಕ್ಕೆ ವಿಫಲಗೊಂಡಿದ್ದ ಒಟ್ಟು 619 ಸಂಖ್ಯೆಯ ಪರಿವರ್ತಕಗಳನ್ನು ಈಗಾಗಲೇ ಬದಲಾಯಿಸಲಾಗಿರುತ್ತದೆ. ರೈತರು ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪರಿವರ್ತಕಗಳನ್ನು ಶೀಘ್ರವಾಗಿ ಬದಲಾಯಿಸಲು ಕ್ರಮಕೈಗೊಳ್ಳಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಟಿ.ನರಸೀಪುರ ಪಟ್ಟಣದಲ್ಲಿ ವಿದ್ಯುತ್ ಪರಿವರ್ತಕ ದುರಸ್ಥಿ ಕೇಂದ್ರ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ (ಮಾಹಿತಿ ಒದಗಿಸುವುದು) ?	ಟಿ.ನರಸೀಪುರ ತಾಲ್ಲೂಕಿನಲ್ಲಿ ವಿದ್ಯುತ್ ಪರಿವರ್ತಕ ದುರಸ್ಥಿ ಕೇಂದ್ರ ಸ್ಥಾಪಿಸಲು ದಿನಾಂಕ: 10.10.2019 ರಂದು ದುರಸ್ಥಿದಾರರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ದುರಸ್ಥಿದಾರರು ಟಿ. ನರಸೀಪುರದಲ್ಲಿ ಪರಿವರ್ತಕಗಳ ದುರಸ್ಥಿಗೆ ಮೂಲಭೂತ ಸೌಕರ್ಯಗಳು ಇಲ್ಲದಿರುವ ಕಾರಣ ಸದರಿ ದುರಸ್ಥಿ ಕೇಂದ್ರವನ್ನು ನಂಜನಗೂಡಿನಲ್ಲಿ ಪ್ರಾರಂಭಿಸಿ, ಟಿ.ನರಸೀಪುರ ತಾಲ್ಲೂಕಿಗೆ ಸಂಬಂಧಿಸಿದ ವಿಫಲವಾದ ಪರಿವರ್ತಕಗಳನ್ನು ದುರಸ್ಥಿಗೊಳಿಸುತ್ತಿದ್ದಾರೆ.

		ಸದರಿ ಪರಿವರ್ತಕ ದುರಸ್ಥಿ ಕೇಂದ್ರವನ್ನು ಟಿ.ನರಸೀಪುರ ಪಟ್ಟಣಕ್ಕೆ ಸ್ಥಳಾಂತರಿಸಬೇಕೆಂದು 22-05-2020 ಮತ್ತು 24-07-2020 ರಂದು ದುರಸ್ಥಿದಾರರಿಗೆ ಆದೇಶಿಸಲಾಗಿರುತ್ತದೆ. ಸದರಿ ದುರಸ್ಥಿದಾರರು ದಿನಾಂಕ 31-07-2020 ರಂದು ಕೋವಿಡ್ 19ರ ಸಮಸ್ಯೆಯನ್ನು ತಿಳಿಸುತ್ತಾ, ಸದರಿ ದುರಸ್ಥಿ ಕೇಂದ್ರವನ್ನು ಸ್ಥಳಾಂತರಿಸಲು 6 ತಿಂಗಳ ಕಾಲಾವಕಾಶವನ್ನು ಕೋರಿರುತ್ತಾರೆ.

ಸಂಖ್ಯೆ: ಎನರ್ಜಿ 122 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	777
ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸಬೇಕಾದ ದಿನಾಂಕ	:	**22.09.2020**
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

******

	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ ಪೂರ್ವ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಜ್ಮೀರಿಯಾದ ನಗರದ ಬಳಿಯ ಪವರ್ ಗ್ರೀಡ್ (ಹೈಪರ್ ಟ್ರಾನ್ಸ್ ಮಿಷನ್ ಲೈನ್ಸ್ ನಗರದ ಒಳಗಡೆ ಇದ್ದು, ಅವುಗಳನ್ನು ನಗರದ ಹೊರ ಭಾಗಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಹುಬ್ಬಳ್ಳಿ ನಗರದ ವ್ಯಾಪ್ತಿಯಲ್ಲಿ 220 ಕೆ.ವಿ ಎಸ್.ಆರ್.ಎಸ್.ಹುಬ್ಬಳ್ಳಿ ಹಾಗೂ 220 ಕೆ.ವಿ ಬಿಡ್ನಾಳ ವಿದ್ಯುತ್ ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ, 220 ಕೆ.ವಿ ಎಸ್.ಆರ್.ಎಸ್.ಹುಬ್ಬಳ್ಳಿ ಹಾಗೂ 220 ಕೆ.ವಿ ಬಿಡ್ನಾಳ ವಿದ್ಯುತ್ ಉಪಕೇಂದ್ರಗಳು 2 ಸಂಖ್ಯೆಯ 110 ಕೆ.ವಿ ಪ್ರಸರಣ ಮಾರ್ಗಗಳು ಹಾಗೂ 1 ಸಂಖ್ಯೆಯ 220 ಕೆ.ವಿ ಪ್ರಸರಣ ಮಾರ್ಗದಿಂದ ಸಂಪರ್ಕಿತಗೊಂಡಿವೆ. ಹುಬ್ಬಳ್ಳಿ ಪೂರ್ವ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಜ್ಮೀರಿಯಾ ನಗರದ ವ್ಯಾಪ್ತಿಯಲ್ಲಿ, 110 ಕೆ.ವಿ ಪ್ರಸರಣ ಮಾರ್ಗಗಳು ಹಾದುಹೋಗಿದ್ದು, ಸದರಿ ಮಾರ್ಗದಲ್ಲಿನ ವಿದ್ಯುತ್ ಗೋಪುರಗಳು ಹಳೆಯದಾದ ಕಾರಣ, ಅವುಗಳನ್ನು ಬದಲಾಯಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿತ್ತು, ಆದರೆ ಸ್ಥಳದ ಅಭಾವ ಹಾಗೂ ಆರ್ಥಿಕ ವೆಚ್ಚದ ಕಾರಣ ಹಾಲಿ ಇರುವ 2 ಸಂಖ್ಯೆಯ 110 ಕೆ.ವಿ. ಮಾರ್ಗಗಳನ್ನು ಹಾಲಿ ಇರುವ 220 ಕೆ.ವಿ ಕಾರಿಡಾರ್ ನಲ್ಲಿ 220/110 ಕೆ.ವಿ ಮಲ್ಟಿ ಸರ್ಕ್ಯೂಟ್ ಮಲ್ಟಿ ವೋಲ್ಟೇಜ್ (MCMV) ಪ್ರಸರಣ ಮಾರ್ಗವನ್ನು ನಿರ್ಮಿಸುವ ಪ್ರಸ್ತಾವನೆಯ ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಪರಿಶೀಲಿಸುತ್ತಿದೆ.

ಸಂಖ್ಯೆ: ಎನರ್ಜಿ 123 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 781
2. ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ	ಉಡುಪಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ಒದಗಿಸುವುದು)	ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ, ಒಂದು ಕೆರೆ ಒಳಪಟ್ಟಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ	ಕಳೆದ ಮೂರು ವರ್ಷಗಳಿಂದ ಈ ಕೆರೆಗಳ ಅಭಿವೃದ್ಧಿಗಾಗಿ ಮಂಜೂರಾದ ಅನುದಾನವೆಷ್ಟು; ಮಂಜೂರಾದ ಅನುದಾನದಲ್ಲಿ ಯಾವ ಯಾವ ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು)	ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚಾಂತಾರು ಮದಗ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ.

ಕಡತ ಸಂಖ್ಯೆ: ಸನೀಇ 137 ಎಲ್ಎಕ್ಯೂ 2020

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಘುಪತಿ ಭಟ್.ಕೆ (ಉಡುಪಿ)ಇವರ ಪ್ರಶ್ನೆ ಸಂಖ್ಯೆ: 781ಕ್ಕೆ ಉತ್ತರ.

<u>ಅನುಬಂಧ-1</u>

ಕ್ರ.ಸಂ.	ಜಿಲ್ಲೆ	ತಾಲೂಕು	ವಿಧಾನ ಸಭಾ ಕ್ಷೇತ್ರ	ಗ್ರಾಮ	ಸಣ್ಣ ನೀರಾವರಿ 0ಯೋಜನೆಗಳ ಹೆಸರು	ನದಿಕೊಳ್ಳ/ ಉಪಕೊಳ್ಳ	ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ	ಕೆರೆ ಅಂಗಳದ ವಿಸ್ತೀರ್ಣ (water spread area) Ha	ನೀರಿನ ಶೇಖರಣಾ ಸಾಮರ್ಥ್ಯ (ಎಂ.ಸಿ.ಎಫ್ಟ್.ಟಿ)	0ಯೋಜಿತ ನೀರಿನ ಬಳಕೆ (ಎಂ.ಸಿ.ಎಫ್ಟ್.ಟಿ)	ಕೋಡಿಯ ಹರಿವು /Maximum discharge (Cumecs)	ಷರಾ
1	2	3	4	5	6	7	8	9	10	11	12	13
1	ಉಡುಪಿ	ಬ್ರಹ್ಮಾವರ	ಉಡುಪಿ	ಚಾಂತಾರು	ಚಾಂತಾರು ಮದಗ ಕೆರೆ	ಪಶ್ಚಿಮಾಭಿಮುಖಿ/ ಸೀತಾ	122.72	0.42	20.20	25.68	37.00	ಕೆರೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 782
ಸದಸ್ಯರ ಹೆಸರು	: ಶ್ರೀ ಪುಟ್ಟರಂಗಶೆಟ್ಟಿ ಸಿ (ಚಾಮರಾಜನಗರ)
ಉತ್ತರಿಸುವ ದಿನಾಂಕ	: 22.09.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಉತ್ತರ ಕರ್ನಾಟಕದ ಕಳಸ ಬಂಡೂರಿ ಯೋಜನೆಗಳು ಯಾವ ಹಂತದಲ್ಲಿವೆ; (ವಿವರ ನೀಡುವುದು)	ಕಳಸಾ ನಾಲಾ ತಿರುವು ಯೋಜನೆಯ ರೂ.885.80 ಕೋಟಿ ಮತ್ತು ಬಂಡೂರಿ ನಾಲಾ ತಿರುವು ಯೋಜನೆಯ ರೂ. 791.50 ಕೋಟಿ ಮೊತ್ತದ ಪರಿಷ್ಕೃತ ವಿವರವಾದ ಯೋಜನಾ ವರದಿಗಳಿಗೆ ಸರ್ಕಾರದಿಂದ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
ಆ)	ಈ ಯೋಜನೆಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;	ಕಳಸಾ ಹಾಗೂ ಬಂಡೂರಿ ನಾಲಾ ತಿರುವು ಯೋಜನೆಗಳ ಕಾರ್ಯಸಾಧ್ಯತಾ ವರದಿಗಳನ್ನು (Pre-Feasiblity Report) ದಿನಾಂಕ:22.05.2020 ರಂದು ಕೇಂದ್ರ ಜಲ ಆಯೋಗ, ನವದೆಹಲಿ ಇವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಅಲ್ಲದೇ, ಕೇಂದ್ರ ಸರ್ಕಾರದ e-PAMS ಪೋರ್ಟಲ್ ನಲ್ಲಿ ದಿನಾಂಕ:03.08.2020 ರಂದು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಕೇಂದ್ರ ಜಲ ಆಯೋಗದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. ಮುಂದುವರೆದು, ಸದರಿ ಎರಡು ಯೋಜನೆಗಳಿಗೆ ಅವಶ್ಯಕವಿರುವ ಅರಣ್ಯ ಭೂಮಿ ತೀರುವಳಿಗಾಗಿ ಪ್ರಸ್ತಾವನೆಗಳನ್ನು ದಿನಾಂಕ:20.05.2020 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.
ಇ)	ಈ ಯೋಜನೆಯಿಂದ ಪ್ರಯೋಜನ ಪಡೆಯುವ ಜಿಲ್ಲೆಗಳು ತಾಲ್ಲೂಕುಗಳು ಯಾವುವು?	ಈ ಯೋಜನೆಯಿಂದ ಧಾರವಾಡ ಜಿಲ್ಲೆ ಹಾಗೂ ಹುಬ್ಬಳ್ಳಿ, ಕುಂದಗೋಳ, ಧಾರವಾಡ ತಾಲ್ಲೂಕುಗಳು ಪ್ರಯೋಜನ ಪಡೆಯುತ್ತವೆ. :

ಸಂಖ್ಯೆ: ಜಸಂಇ 86 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 783
2. ಸದಸ್ಯರ ಹೆಸರು : ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 428 ಹುದ್ದೆಗಳ ಮುಖ್ಯ ಪರೀಕ್ಷೆಯ ಮೌಲ್ಯಮಾಪನವನ್ನು ಡಿಜಿಟಲ್ ರೂಪದಲ್ಲಿ ಮಾಡಿಸಲಾಗಿದೆಯೇ;	ಹೌದು, 2015 ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೊರಡಿಸಲಾದ ದಿನಾಂಕ: 12.05.2017ರ ಅಧಿಸೂಚನೆಯಲ್ಲಿ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ (Digital Valuation) ಮಾಡಲಾಗುವುದು ಎಂದು ತಿಳಿಸಲಾಗಿರುತ್ತದೆ.
ಆ)	ಇದರಿಂದ ಉತ್ತರ ಪತ್ರಿಕೆಗಳ ಅಂಕಗಳನ್ನು ತಿದ್ದಲಾಗಿದೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿಯಾಗಿರುವುದು ನಿಜವೇ;	ಇದು ಸತ್ಯಕ್ಕೆ ದೂರವಾಗಿರುತ್ತದೆ. ಯಾವುದೇ ಪುರಾವೆಗಳಿಲ್ಲದೆ ನಿರಾಧಾರವಾಗಿರುತ್ತದೆ.
ಇ)	ಹಾಗಿದ್ದಲ್ಲಿ, ಇದರ ಸತ್ಯಾಸತ್ಯತೆ ತಿಳಿಯಲು ಸದರಿ ಪ್ರಕರಣವನ್ನು ತನಿಖೆಗೆ ವಹಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಆಸುಇ 65 ಎಸ್‌ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	784
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೋಳ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ಚನ್ನರಾಯಪಟ್ಟಣ ತಾಲ್ಲೂಕು ಹಿರೀಸಾವೆ ಹೋಬಳಿ ಎಂ.ಬಿ. ಕಾವಲು ಹಾಗೂ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ವಿದ್ಯುತ್ ವೋಲ್ಟೇಜ್ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚನ್ನರಾಯಪಟ್ಟಣ ತಾಲ್ಲೂಕು ಹಿರೀಸಾವೆ ಹೋಬಳಿ ಎಂ.ಬಿ. ಕಾವಲು ಹಾಗೂ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಪ್ರಸ್ತುತ 66/11 ಕೆ.ವಿ. ಹಿರಿಸಾವೆ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ಸದರಿ ವಿದ್ಯುತ್ ಉಪಕೇಂದ್ರವು ಅಧಿಕ ವಿದ್ಯುತ್ ಭಾರ ಹೊಂದಿರುವ ಕಾರಣ ಎಂ.ಬಿ.ಕಾವಲು ಗ್ರಾಮದಲ್ಲಿ ಹೊಸದಾಗಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮುಂದೆ ಇರುತ್ತದೆ. ಎಂ.ಬಿ.ಕಾವಲು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಲೋ ವೋಲ್ಟೇಜ್ ವಿದ್ಯುತ್ ಸಮಸ್ಯೆ ಕಂಡು ಬಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ವಿದ್ಯುತ್ ವೋಲ್ಟೇಜ್ ಸುಧಾರಿಸಲು ತೆಗೆದುಕೊಂಡ ಕ್ರಮಗಳೇನು;	
ಇ)	ನೂತನ 66/11 ಕೆವಿ ಎಂ.ಬಿ. ಕಾವಲು ವಿದ್ಯುತ್ ವಿತರಣಾ ಉಪ-ಕೇಂದ್ರವನ್ನು ಸ್ಥಾಪಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ;	ಎಂ.ಬಿ.ಕಾವಲು ಗ್ರಾಮದಲ್ಲಿ ಹೊಸದಾಗಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿಯ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಅಗತ್ಯವಿರುವ ಖಾಸಗಿ ಜಮೀನು ಖರೀದಿ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.
ಈ)	ನೂತನ 66/11 ಕೆವಿ ಎಂ.ಬಿ. ಕಾವಲು ವಿದ್ಯುತ್ ವಿತರಣಾ ಉಪ-ಕೇಂದ್ರವನ್ನು ಸ್ಥಾಪಿಸುವ ಪ್ರಕ್ರಿಯೆ ವಿಳಂಬವಾಗುತ್ತಿರಲು ಇರುವ ಕಾರಣಗಳೇನು;	ಸದರಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಅವಶ್ಯವಿರುವ ಸರ್ಕಾರಿ ಜಮೀನು ಲಭ್ಯವಿಲ್ಲದ ಕಾರಣ ಖಾಸಗಿ ಜಮೀನು ಖರೀದಿ ಪ್ರಸ್ತಾವನೆಯ ದಾಖಲೆಗಳನ್ನು ಪಡೆದು ಪರಿಶೀಲಿಸಿ ಕ್ರಮಬದ್ಧಗೊಳಿಸುವ ಪ್ರಕ್ರಿಯೆಯಿಂದಾಗಿ ಉಪಕೇಂದ್ರ ಸ್ಥಾಪನೆಯ ಪ್ರಕ್ರಿಯೆಯು ವಿಳಂಬವಾಗಿರುತ್ತದೆ.
ಉ)	ಸದರಿ ಉಪಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು ?	ಜಮೀನು ಖರೀದಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ನಿಯಮಾನುಸಾರ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 106 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 791
ಸದಸ್ಯರ ಹೆಸರು	: ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸುವ ದಿನಾಂಕ	: 22.09.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಯಾದಗಿರಿ ಜಿಲ್ಲೆಯ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ Construction of Bhima Flank of SBC KM 75.30 to 98.30 ಕಾಮಗಾರಿಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮ, ಜೆಬಿಸಿ ವಿಭಾಗ ಸಂ.2, ಭೀಮರಾಯನಗುಡಿ ಕಛೇರಿ ವತಿಯಿಂದ ನಿರ್ಮಿಸಲಾಗುತ್ತಿದ್ದು, ಸದರಿ ಕಾಮಗಾರಿಯ ಉಸ್ತುವಾರಿಯನ್ನು ನಿಭಾಯಿಸಲು ಹಾಗೂ ರೈತರ ಸಮಸ್ಯೆಗಳನ್ನು ದಿನ ನಿತ್ಯ ಪರಿಹರಿಸಲು ಭೀಮರಾಯನಗುಡಿ ದೂರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	Construction of Bhima Flank of SBC KM 75.30 to 98.30 ಕಾಮಗಾರಿಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಜೆಬಿಸಿ ವಿಭಾಗ ಸಂ.2, ಭೀಮರಾಯನಗುಡಿ ಹಾಗೂ ಎಸ್.ಬಿ.ಸಿ. ಓ&ಎಂ ಉಪ ವಿಭಾಗ-1, ವಡಗೇರಾ ಕ್ಯಾಂಪ್ ಡೋರನಹಳ್ಳಿ ಕಛೇರಿ ವತಿಯಿಂದ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದ್ದು, ಕಾಮಗಾರಿಯ ಉಸ್ತುವಾರಿಯನ್ನು ಕೃಭಾಜನಿ, ಶ.ಶಾ.ಕಾ, ಓ&ಎಂ ವಿಭಾಗ, ಖಾನಾಪುರ ಇವರಿಗೆ ವರ್ಗಾಯಿಸುವ ಪ್ರಸ್ತಾವನೆ ಕೃಷ್ಣಾ ಭಾಗ್ಯ ಜಲ ನಿಗಮದ ಪರಿಶೀಲನೆ ಹಂತದಲ್ಲಿದೆ.
ಆ)	ಬಂದಿದ್ದಲ್ಲಿ, ಕಾಮಗಾರಿ ಹಾಗೂ ಸಾರ್ವಜನಿಕ ಹಿತದೃಷ್ಠಿಯಿಂದ ಸದರಿ ಕಾಮಗಾರಿಯನ್ನು ಕಾರ್ಯಪಾಲಕ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ, ಶ ಶಾ ಕಾ ವಿ ಮತ್ತು ಎಂ ವಿಭಾಗ, ಖಾನಾಪುರ ಇವರಿಗೆ ವರ್ಗಾಯಿಸಲು ಇದುವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು?	

ಸಂಖ್ಯೆ: ಜಸಂಇ 85 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	792
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಯಾದಗಿರಿ ತಾಲ್ಲೂಕಿನ ರಾಮ ಸಮುದ್ರ ಗ್ರಾಮದಲ್ಲಿ 220 ಕೆ.ವಿ ಸ್ಟೇಷನ್ ನಿರ್ಮಾಣ ಮಾಡುವ ಟೆಂಡರ್ ಪ್ರಕ್ರಿಯೆ ಮುಗಿದಿದ್ದರೂ ಇಲ್ಲಿಯವರೆಗೆ ಕಾಮಗಾರಿ ಚಾಲನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಕಾಮಗಾರಿ ಚಾಲನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;	ಯಾದಗಿರಿ ತಾಲ್ಲೂಕು ರಾಮಸಮುದ್ರ ಗ್ರಾಮದಲ್ಲಿ ಉದ್ದೇಶಿತ 220 ಕೆ.ವಿ. ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕಾಗಿ 15 ಎಕರೆ ಸರ್ಕಾರಿ ಜಮೀನು ಮಂಜೂರಾಗಿರುತ್ತದೆ. ಸದರಿ ಜಮೀನು ಹಳ್ಳ ದಿಣ್ಣೆಗಳಿಂದ ಕೂಡಿದ್ದರಿಂದ ಜಿಲ್ಲಾಧಿಕಾರಿ, ಯಾದಗಿರಿ ರವರ ಕಛೇರಿಯಿಂದ ಜಮೀನನನ್ನು ಸಮತಟ್ಟು ಮಾಡಲು ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸಿಕೊಡಲಾಗಿತ್ತು. ಆದರೆ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸದೆ ಸ್ಥಗಿತಗೊಳಿಸಿರುತ್ತಾರೆ. ಬಾಕಿ ಉಳಿದ ನೆಲ ಸಮತಟ್ಟು ಮಾಡುವ ಕಾರ್ಯವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ವತಿಯಿಂದ ಪೂರ್ಣಗೊಳಿಸಲು ಅಧಿಕ ವೆಚ್ಚವಾಗುವುದರಿಂದ, ಸದರಿ ಜಮೀನಿನ ಬದಲಿಗೆ ರಾಮಸಮುದ್ರ ಗ್ರಾಮದ ಹತ್ತಿರದ ಮುಂಡರಗಿ ಗ್ರಾಮದಲ್ಲಿ ಒಟ್ಟು 13 ಎಕರೆ 3 ಗುಂಟೆ ಖಾಸಗಿ ಜಮೀನನ್ನು ಖರೀದಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ವತಿಯಿಂದ ಅನುಮೋದನೆ ನೀಡಲಾಗಿದ್ದು, ಜಮೀನು ಖರೀದಿ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.
ಇ)	ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?	ಜಮೀನು ಖರೀದಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕರ್ನಾಟಕ ವಿದ್ಯುತ್ ಪ್ರಸರಣ ನಿಯಮ ನಿಯಮಿತ ನಿಯಮಾನುಸಾರ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 124 ಪಿಪಿಎಂ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	796
ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಮೆಸ್ಕಾಂನ ಚಿಕ್ಕಮಗಳೂರು ವೃತ್ತ, ಕೊಪ್ಪ ವಿಭಾಗ ಹಾಗೂ ಬಾಳೆಹೊನ್ನೂರು ಉಪ ವಿಭಾಗದ ಮುತ್ತಿನಕೊಪ್ಪ ಶಾಖಾ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಹಲವು ದಿನಗಳಿಂದ ವಿದ್ಯುತ್ ಲೋ-ವೋಲ್ಟೇಜ್ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ, ಚಿಕ್ಕಮಗಳೂರು ವೃತ್ತ, ಕೊಪ್ಪ ವಿಭಾಗ ಹಾಗೂ ಬಾಳೆಹೊನ್ನೂರು ಉಪ ವಿಭಾಗದ ಮುತ್ತಿನಕೊಪ್ಪ ಶಾಖಾ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಲೋ-ವೋಲ್ಟೇಜ್ ಸಮಸ್ಯೆ ಇರುವುದು ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು) ;	ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ, ಮುತ್ತಿನಕೊಪ್ಪ ಶಾಖಾ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿನ ಲೋ-ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಲು, ಮುತ್ತಿನಕೊಪ್ಪ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡುತ್ತಿರುವ ಎಫ್-7 ಮುತ್ತಿನಕೊಪ್ಪ ಫೀಡರ್ ಹಾಗೂ ಎಫ್-9 ನರಸಿಂಹರಾಜ ಪುರ ಫೀಡರ್‌ಗಳನ್ನು ವಿಭಜಿಸಿ ತಲಾ 02 ಫೀಡರ್‌ಗಳನ್ನು ಮಾಡಲು ಪ್ರಸ್ತಾವನೆ ಸಿದ್ದಪಡಿಸಲಾಗಿದೆ ಹಾಗೂ ಸದರಿ ವಿದ್ಯುತ್ ಉಪ ಕೇಂದ್ರದಲ್ಲಿ ಹೆಚ್ಚುವರಿ ಬ್ರೇಕರ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಅಲ್ಲದೇ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಮುತ್ತಿನ ಕೊಪ್ಪ 110/33/11 ಕೆ.ವಿ ವಿದ್ಯುತ್ ಉಪಕೇಂದ್ರದಲ್ಲಿ ಹಾಲಿ ಇರುವ 10 ಎಂ.ವಿ.ಎ 110/11 ಕೆ.ವಿ ವಿದ್ಯುತ್ ಪರಿವರ್ತಕವನ್ನು 20 ಎಂ.ವಿ.ಎ 110/11 ಕೆ.ವಿ ವಿದ್ಯುತ್ ಪರಿವರ್ತಕದಿಂದ ಉನ್ನತೀಕರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಪ್ರಸ್ತುತ, ಸಿವಿಲ್ ಕಾಮಗಾರಿಗಳು ಹಾಗೂ ಬ್ರೇಕರ್ ಅಳವಡಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಮುತ್ತಿನಕೊಪ್ಪ ಶಾಖಾ ವ್ಯಾಪ್ತಿಯಲ್ಲಿ ಉತ್ತಮ ವೋಲ್ಟೇಜ್ನ ಗುಣಮಟ್ಟದ ವಿದ್ಯುತ್ತನ್ನು ಸರಬರಾಜು ಮಾಡಲು ಅನುಕೂಲ ಆಗಲಿದೆ.
ಇ)	ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದೇ ?	

ಸಂಖ್ಯೆ: ಎನರ್ಜಿ 125 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 797
02.	ಸದಸ್ಯರ ಹೆಸರು	: ಶ್ರೀ ರಾಜೇಗೌಡ ಟಿ. ಡಿ. (ಶೃಂಗೇರಿ)
03.	ಉತ್ತರಿಸುವ ದಿನಾಂಕ	: 22.09.2020
04.	ಉತ್ತರಿಸುವ ಸಚಿವರು	: ಗೃಹ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ KSRP ಮತ್ತು ANF (Anti Naxal Force) ಕ್ಯಾಂಪ್‌ಗಳು ಶೃಂಗೇರಿ-ಕೆರೆಕಟ್ಟೆ-ಜೈಪುರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಏರ್ಪಡುತ್ತಿದ್ದು, ಕೋವಿಡ್-19 ದೃಷ್ಟಿಯಿಂದ ಅನ್ಯ ಜಿಲ್ಲೆಗಳಿಂದ ಈ ಕ್ಯಾಂಪ್‌ಗಳಿಗೆ ನಿಯೋಜಿಸಲ್ಪಡುವ ಸಿಬ್ಬಂದಿಗಳ ಕರ್ತವ್ಯ ನಿರ್ವಹಣಾ ಅವಧಿಯನ್ನು 15 ದಿನಗಳಿಂದ ತಾತ್ಕಾಲಿಕವಾಗಿ 90 ದಿನಗಳಿಗೆ ಹೆಚ್ಚಿಸಿ, ಇವರುಗಳ ಆರೋಗ್ಯ ಕಾಪಾಡುವ ಆಸಕ್ತಿ ಸರ್ಕಾರಕ್ಕೆ ಇದೆಯೇ;	ಹೌದು. ಪ್ರಸ್ತುತ ಕೋವಿಡ್-19 ಪರಿಸ್ಥಿತಿಗೆ ಅನುಗುಣವಾಗಿ ಎ.ಎನ್.ಎಫ್ ಕ್ಯಾಂಪ್‌ಗಳ ಅಧಿಕಾರಿ/ಸಿಬ್ಬಂದಿಗಳ ಆರೋಗ್ಯ ಹಿತದೃಷ್ಟಿಯಿಂದ ಕೆಎಸ್‌ಆರ್‌ಪಿ ತುಕಡಿಯ ಕರ್ತವ್ಯ ನಿರ್ವಹಣಾ ಅವಧಿಯನ್ನು 15 ದಿನಗಳಿಂದ 01 ತಿಂಗಳಿಗಿಂತಲೂ ಹೆಚ್ಚಿನ ಅವಧಿಗೆ ವಿಸ್ತರಿಸುವ ಬಗ್ಗೆ ಪೋಲೀಸ್ ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಆ)	ಹಾಗಿದ್ದಲ್ಲಿ ಅನ್ಯ ಜಿಲ್ಲೆಗಳಿಂದ ಇಲ್ಲಿಗೆ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಸಿಬ್ಬಂದಿಗಳನ್ನು ಕಡ್ಡಾಯವಾಗಿ ಅವರವರ ಜಿಲ್ಲೆ ಹಾಗೂ ಕ್ಯಾಂಪ್‌ನಲ್ಲಿ ಕೋವಿಡ್-19 ಪರೀಕ್ಷೆ ನಡೆಸಿದ ನಂತರವೇ ಕರ್ತವ್ಯಕ್ಕೆ ನಿಯೋಜಿಸುವುದರ ಮೂಲಕ ಸ್ಥಳೀಯ ಸಿಬ್ಬಂದಿಗಳ ಆರೋಗ್ಯವನ್ನು ಕಾಪಾಡಲು ಸಾಧ್ಯವಿಲ್ಲವೇ (ವಿವರ ನೀಡುವುದು);	ಅನ್ಯ ಜಿಲ್ಲೆಗಳಿಂದ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಅಧಿಕಾರಿ/ಸಿಬ್ಬಂದಿಗಳನ್ನು ಕ್ಯಾಂಪಿನಲ್ಲಿ ಕಡ್ಡಾಯವಾಗಿ ಕೋವಿಡ್-19 ಪರೀಕ್ಷೆ ಮಾಡಿಸಿ, ಕೋವಿಡ್-19 ನಿಯಮಗಳನ್ನು ಪಾಲಿಸಿದ ನಂತರವೇ ಕರ್ತವ್ಯಕ್ಕೆ ನಿಯೋಜಿಸುವುದರ ಮೂಲಕ ಅಧಿಕಾರಿ/ಸಿಬ್ಬಂದಿಗಳ ಆರೋಗ್ಯವನ್ನು ಕಾಪಾಡಲಾಗುತ್ತಿದೆ.
ಇ)	ಅನ್ಯ ಜಿಲ್ಲೆಗಳ ಕೋವಿಡ್-19 ಪೀಡಿತ ಸಿಬ್ಬಂದಿಗಳಿಂದ ಇಲ್ಲಿನ ಸ್ಥಳೀಯ ಸಿಬ್ಬಂದಿಗಳಿಗೆ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;	ಎ.ಎನ್.ಎಫ್ ನ ಅಧಿಕಾರಿ ಸಿಬ್ಬಂದಿಗಳು ಅನ್ಯ ಕರ್ತವ್ಯ ಮತ್ತು ರಜೆಗಳಿಂದ ಕ್ಯಾಂಪ್‌ಗಳಿಗೆ ವಾಪಸ್ ಬಂದ ತಕ್ಷಣ ಕಡ್ಡಾಯವಾಗಿ ಕೋವಿಡ್-19 ಪರೀಕ್ಷೆ ಮಾಡಿಸಿ ನೆಗೆಟಿವ್ ವರದಿ ಬಂದಲ್ಲಿ ಕರ್ತವ್ಯಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಮೇಲಿನಂತೆ ಕೋವಿಡ್-19 ಪರೀಕ್ಷೆಯಲ್ಲಿ ಪಾಸಿಟಿವ್ ವರದಿ ಬಂದ ಸಂದರ್ಭದಲ್ಲಿ ಅಂತಹವರನ್ನು ನಿಗದಿತ ಕೋವಿಡ್ ಕೇರ್ ಸೆಂಟರ್‌ಗೆ ಚಿಕಿತ್ಸೆಗೆ ದಾಖಲಿಸಿ, ಗುಣಮುಖರಾದ ನಂತರ ನಿಯಮಾನುಸಾರ ಕ್ವಾರಂಟೈನ್ ಮಾಡಿ ಕರ್ತವ್ಯಕ್ಕೆ ತೆಗೆದುಕೊಳ್ಳುವ ಮೂಲಕ ಉಳಿದ ಅಧಿಕಾರಿ ಸಿಬ್ಬಂದಿಗಳ ಆರೋಗ್ಯ ಕಾಪಾಡಲಾಗುತ್ತಿದೆ.
ಈ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	

HD/63/PPA/2020-PS_B

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	798
ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸುವ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆ, ಎನ್.ಆರ್ ಪುರ ತಾಲ್ಲೂಕು, ಬಕರಿಹಳ್ಳ-ಕಡಹಿನಬೈಲು ಏತ ನೀರಾವರಿ ಯೋಜನೆಯು ಅನುಷ್ಠಾನಗೊಳ್ಳದೇ ಜನರು ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಕ್ಕಮಗಳೂರು ಜಿಲ್ಲೆ, ಎನ್.ಆರ್‌ಪುರ ತಾಲ್ಲೂಕು, ಸೂಸಲವಾನಿ ಗ್ರಾಮದ ಹತ್ತಿರ ಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನೆತ್ತಿ 526 ಹೆಕ್ಟೇರ್ ನೀರಾವರಿ ಹಾಗೂ ಕೆರೆಗಳಿಗೆ ಸೌಲಭ್ಯ ಕಲ್ಪಿಸುವ ಬಕ್ರಿಹಳ್ಳ-ಕಡುಹಿನಬೈಲು ಏತ ನೀರಾವರಿ ಯೋಜನೆಗೆ ಕೃಷ್ಣ ಕೊಳ್ಳದ ಸ್ಕೀಂ "ಎ" ರಡಿ 0.21 ಟಿ.ಎಂ.ಸಿ ನೀರಿನ ಹಂಚಿಕೆಯಾಗಿದ್ದು, ಯೋಜನೆಯು ಪೂರ್ಣಗೊಂಡು ಚಾಲನೆಯಲ್ಲಿರುತ್ತದೆ. ಮುಂದುವರೆದು, 2019-20ನೇ ಸಾಲಿನ ಆಯವ್ಯಯದಲ್ಲಿ ಬಕರಿಹಳ್ಳ-ಕಡಹಿನಬೈಲು ಏತ ನೀರಾವರಿಯ ವಿಸ್ತೃತ ಯೋಜನೆಗೆ ರೂ.9.00 ಕೋಟಿಗಳನ್ನು ಘೋಷಿಸಲಾಗಿರುತ್ತದೆ.
ಆ)	ಪ್ರಸ್ತುತ ಆಯವ್ಯಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ;	
ಇ)	ಈ ಯೋಜನೆಯ ವ್ಯಾಪ್ತಿಗೊಳಪಡುವ ಗ್ರಾಮಗಳಾವುವು ಹಾಗೂ ಯೋಜನೆಯು ಎಷ್ಟು ಎಕರೆ ವಿಸ್ತೀರ್ಣ ಹೊಂದಿದೆ;	ಸದರಿ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ, ಸೂಸಲವಾನಿ, ಹಿರೇಬೀಸು, ಶೆಟ್ಟಿಕೊಪ್ಪ, ಮಾಕೋಡು ಹಾಗೂ ವಿಠ್ಠಲ ಗ್ರಾಮಗಳು ಒಳಗೊಂಡಿದ್ದು, ಸದರಿ ಯೋಜನೆಯು 526 ಹೆಕ್ಟೇರ್ ನೀರಾವರಿ ಪ್ರದೇಶ ಹೊಂದಿದೆ.
ಈ)	ಸದರಿ ಯೋಜನೆಗೆ ತಗಲುವ ಅಂದಾಜು ಮೊತ್ತವೆಷ್ಟು; ಮಂಜೂರಾಗಿರುವ ಹಾಗೂ ಬಿಡುಗಡೆಗೊಂಡಿರುವ ಅನುದಾನವೆಷ್ಟು (ವಿವರ ನೀಡುವುದು)	ಬಕರಿಹಳ್ಳ-ಕಡಹಿನಬೈಲು ವಿಸ್ತೃತ ಯೋಜನೆಯ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಮಟ್ಟದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಉ)	ಎಷ್ಟು ಕಾಲಮಿತಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು; ಪ್ರಸ್ತುತ ಈ ಯೋಜನೆಯು ಯಾವ ಹಂತದಲ್ಲಿದೆ?	

ಸಂಖ್ಯೆ: ಜಸಂಇ 95 ಎಂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 799

2. ಸದಸ್ಯರ ಹೆಸರು : ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್. (ಪುಲಿಕೇಶಿ ನಗರ)

3. ಉತ್ತರಿಸುವ ದಿನಾಂಕ : 22.09.2020

4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಲೋಕಸೇವಾ ಆಯೋಗವು 2015ನೇ ಸಾಲಿನ ಗೆಜಿಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆಸಿದ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪಕರಿಗೆ ಕಂಪ್ಯೂಟರ್ ತಿಳುವಳಿಕೆ (ಜ್ಞಾನ) ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ಲೋಕಸೇವಾ ಆಯೋಗವು ಡಿಜಿಟಲ್ ವಿಧಾನದ ಮೌಲ್ಯಮಾಪನದಲ್ಲಿ ಭಾಗವಹಿಸುವ ಮೌಲ್ಯಮಾಪಕರಿಗೆ ಸೂಕ್ತವಾದ ತರಬೇತಿಯನ್ನು ನೀಡಿ, ಅಣಕು (Mock) ಮೌಲ್ಯಮಾಪನ ಸಹ ಮಾಡಿಸಿ, ಅವರುಗಳಿಂದ ಡಿಜಿಟಲ್ ಮೌಲ್ಯಮಾಪನದ ಬಗ್ಗೆ ಚೆನ್ನಾಗಿ ಅರಿತುಕೊಂಡಿದ್ದು, ಯಾವುದೇ ತಪ್ಪುಗಳಿಗೆ ಆಸ್ಪದವಾಗದಂತೆ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುತ್ತೇವೆ ಎಂದು ದೃಢೀಕರಣ ಪಡೆದ ನಂತರವೇ ಮೌಲ್ಯಮಾಪನವನ್ನು ಮಾಡಿಸಲಾಗಿರುತ್ತದೆ.
ಆ)	ಅಂತಹ ಮೌಲ್ಯಮಾಪಕರಿಗೆ ಗಣಕ ಯಂತ್ರಗಳ ನಿರ್ವಹಣೆಗೆ ಸಹಾಯ ಮಾಡಲು ಎಷ್ಟು ಸಹಾಯಕರನ್ನು ನಿಯೋಜಿಸಲಾಗಿತ್ತು;	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ)	ಇನ್ನೂ ಮುಂದೆ ಗಣಕ ಯಂತ್ರದ ತಿಳುವಳಿಕೆ ಇರುವ ಮೌಲ್ಯಮಾಪಕರನ್ನು ಮೌಲ್ಯಮಾಪನಕ್ಕೆ ನಿಯೋಜಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?	ಆಯೋಗವು ಯಾವುದೇ ಮೌಲ್ಯಮಾಪಕರನ್ನು ನಿಯೋಜಿಸಿದಲ್ಲಿ, ಅವರಿಗೆ ಸೂಕ್ತ ತರಬೇತಿ ನೀಡಿ, ಅಣಕು ಮೌಲ್ಯಮಾಪನ ಮಾಡಿಸಿದ ನಂತರವೇ ಮೌಲ್ಯಮಾಪನ ಕಾರ್ಯ ಮಾಡಿಸಲಾಗುತ್ತದೆ.

ಸಂಖ್ಯೆ: ಸಿಆಸುಇ 63 ಎಸ್ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	800
ಸದಸ್ಯರ ಹೆಸರು	:	ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್. (ಪುಲಿಕೇಶಿ ನಗರ)
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರಮ ಸಂ.	ಪ್ರಶ್ನೆ	ಉತ್ತರ
ಅ)	ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ:60 ಸಗಾಯಪುರಂನಲ್ಲಿ ಜಲ ಸಂಗ್ರಹಗಾರ (GLR) ನಿರ್ಮಿಸಲು ಸ್ಥಳವನ್ನು ಗುರುತಿಸಲಾಗಿದೆಯೇ;	ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ವಾರ್ಡ್ ಸಂಖ್ಯೆ 60 ಸಗಾಯಪುರಂನಲ್ಲಿ ಜಲ ಸಂಗ್ರಹಗಾರ (GLR) ನಿರ್ಮಿಸಲು ಫುಟ್ಬಾಲ್ ಕ್ರೀಡಾಂಗಣದಲ್ಲಿನ ಜಾಗವನ್ನು ಬೆಂಗಳೂರು ಜಲಮಂಡಳಿಯಿಂದ ಗುರುತಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಸದರಿ ಸ್ಥಳವನ್ನು ಬೆಂಗಳೂರು ಜಲಮಂಡಳಿಯವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಸುಮಾರು ಎರಡು ವರ್ಷಗಳಿಂದ ಹಸ್ತಾಂತರಿಸದಿರಲು ಕಾರಣವೇನು (ವಿವರ ನೀಡುವುದು);	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 60 ಸಗಾಯಪುರಂ ವಾರ್ಡ್ ಫುಟ್‌ಬಾಲ್ ಆಟದ ಮೈದಾನದಲ್ಲಿನ ಉಳಿಕೆ ಸ್ಥಳ ಸುಮಾರು 1760 ಚದರ ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಬೆಂಗಳೂರು ನೀರು ಮತ್ತು ಒಳಚರಂಡಿ ಮಂಡಳಿಗೆ ಉಚಿತವಾಗಿ ಹಸ್ತಾಂತರಿಸುಂತೆ ಬೆಂಗಳೂರು ಜಲಮಂಡಳಿಯಿಂದ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಕೋರಲಾಗಿರುತ್ತದೆ. ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬಿ.ಬಿ.ಎಂ.ಪಿ ವ್ಯಾಪ್ತಿಗೆ ಬರುವ ಆಟದ ಮೈದಾನ ಮತ್ತು ಉದ್ಯಾನವನ ಹಾಗೂ ತೆರೆದ ಪ್ರದೇಶಗಳ (Preservation & Regulation) ಕಾಯ್ದೆ 1985 ರನ್ವಯ ಪ್ರಸ್ತಾಪಿತ ಪ್ರದೇಶವನ್ನು ನಿರ್ದಿಷ್ಟ ಉದ್ದೇಶಕ್ಕೆ ಹೊರತುಪಡಿಸಿ ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿರುವುದರಿಂದ ಬೆಂಗಳೂರು ಜಲಮಂಡಳಿಯು ಪ್ರಸ್ತಾಪಿಸಿರುವ ಉದ್ದೇಶಕ್ಕೆ ಜಾಗ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತದೆ.
ಇ)	ಸದರಿ ಸ್ಥಳವನ್ನು ಬೆಂಗಳೂರು ಜಲಮಂಡಳಿಯವರಿಗೆ ಹಸ್ತಾಂತರಿಸಿ, ಕ್ಷೇತ್ರದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ತುರ್ತಾಗಿ ಸರ್ಕಾರವು ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು) ?	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸದರಿ ಫುಟ್ಬಾಲ್ ಕ್ರೀಡಾಂಗಣದಲ್ಲಿನ ಜಾಗದ ಬದಲಿಗೆ ಪರ್ಯಾಯ ಸ್ಥಳವನ್ನು ಉಚಿತವಾಗಿ ಹಸ್ತಾಂತರಿಸಿದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ವಾರ್ಡ್ ಸಂಖ್ಯೆ 60 ಸಗಾಯಪುರಂನಲ್ಲಿ ಜಲ ಸಂಗ್ರಹಗಾರ (GLR) ನಿರ್ಮಿಸಲು ಬೆಂಗಳೂರು ಜಲಮಂಡಳಿಯಿಂದ ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 101 ಎಂಎನ್‌ಐ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1]	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	803
2]	ಮಾನ್ಯ ಸದಸ್ಯರ ಹೆಸರು	:	ಶ್ರೀ ರಾಜೇಶ್ ನಾಯಕ್ ಯು.(ಬಂಟ್ವಾಳ)
3]	ಉತ್ತರಿಸುವ ದಿನಾಂಕ	:	22.09.2020.
4]	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಗರ ಪೊಲೀಸ್ ಠಾಣೆಯನ್ನು ಪಿ.ಐ. ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ	ಸರ್ಕಾರದ ಮುಂದೆ ಅಂತಹ ಪ್ರಸ್ತಾವನೆ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಗರ ಪೊಲೀಸ್ ಠಾಣೆಯನ್ನು ಪಿ.ಐ. ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯ ಮಾನದಂಡಗಳನ್ನು ಪೂರೈಸಿದಲ್ಲಿ ಪರಿಶೀಲಿಸಲಾಗುವುದು.
ಆ)	ಹಾಗಿದ್ದಲ್ಲಿ, ಸದರಿ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಸರ್ಕಾರದ ಹಂತದಲ್ಲಿ ಏನಾದರೂ ತೊಂದರೆ ಇದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮದ ಮಾಹಿತಿ ನೀಡುವುದು ;	
ಇ)	ಈ ಬಗ್ಗೆ ಪ್ರಸ್ತಾವನೆ ಇಲ್ಲದಿದ್ದಲ್ಲಿ, ಮುಂದಿನ ದಿನಮಾನಗಳಲ್ಲಿ ಈ ಠಾಣೆಯನ್ನು ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ ?	

ಸಂಖ್ಯೆ: ಹೆಚ್‌ಡಿ 100 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 804
ಸದಸ್ಯರ ಹೆಸರು : ಶ್ರೀ ಮಹೇಶ್ ಸಾ.ರಾ. (ಕೃಷ್ಣರಾಜನಗರ)
ಉತ್ತರಿಸಬೇಕಾದ ದಿನಾಂಕ : 22.09.2020
ಉತ್ತರಿಸುವ ಸಚಿವರು : ಮಾನ್ಯ ಜಲ ಸಂಪನ್ಮೂಲ ಸಚಿವರು

<table>
<tr><th>ಕ್ರಮ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ದಿನಾಂಕ: 05.08.2019 ರಿಂದೀಚೆಗೆ ವಿವಿಧ ನೀರಾವರಿ ನಿಗಮಗಳಿಗೆ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆಯವ್ಯಯದ ಹೊರಗಡೆಯಿಂದ ಅಂದರೆ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲದ ಮತ್ತು ಇತರೆ ರೂಪದಲ್ಲಿ ಹಣ ಪಡೆಯಲು ಅನುಮತಿ ನೀಡಲಾಗಿದೆಯೇ (ನಿಗಮವಾರು ಸಂಪೂರ್ಣ ಮಾಹಿತಿ ನೀಡುವುದು):</td><td>ಹೌದು. 2019-20 ನೇ ಸಾಲಿನ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಯ 4 ನಿಗಮಗಳಿಗೆ ಐಇಬಿಆರ್ ಅಡಿಯಲ್ಲಿ ಒಟ್ಟಾರೆ ರೂ.3,500 ಕೋಟಿಗಳನ್ನು ಬಾಹ್ಯ ಸಾಲದ ಮೂಲಕ ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಂಪನ್ಮೂಲವನ್ನು ಕ್ರೋಢೀಕರಿಸಲು ಸರ್ಕಾರಿ ಖಾತರಿ ನೀಡಲಾಗಿದೆ. ನಿಗಮವಾರು ನಿಗಮವಾರು ವಿವರ ಈ ಕೆಳಕಂಡಂತಿವೆ:
(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ.</th><th>ನಿಗಮ</th><th>ಅವಧಿ ಸಾಲದ ಮೊತ್ತ</th></tr>
<tr><td>1</td><td>ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ</td><td>1,000.00</td></tr>
<tr><td>2</td><td>ಕರ್ನಾಟಕ ನೀರಾವರಿ ನಿಗಮ ನಿಯಮಿತ</td><td>1,265.00</td></tr>
<tr><td>3</td><td>ಕಾವೇರಿ ನೀರಾವರಿ ನಿಗಮ ನಿಯಮಿತ</td><td>500.00</td></tr>
<tr><td>4</td><td>ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ</td><td>735.00</td></tr>
</table></td></tr>
<tr><td>ಆ.</td><td>ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಆರ್ಥಿಕ ನೆರವಿನಿಂದ ನೀರಾವರಿ ನಿಗಮಗಳು ಯಾವ ಕಾಮಗಾರಿಗಳನ್ನು ಕೈಗೊಳ್ಳಲು ಆರ್ಥಿಕ ಇಲಾಖೆಯು ಅನುಮತಿ ನೀಡಿದೆ; ಈ ಕಾಮಗಾರಿಗಳನ್ನು ನಿರ್ವಹಿಸಲು ಯಾವ ಮಾನದಂಡಗಳನ್ನು ನಿಗದಿಪಡಿಸಿದೆ;</td><td>ಐಇಬಿಆರ್ ಅಡಿಯಲ್ಲಿ ನಿಗಮಗಳು ಸಂಗ್ರಹಿಸಿರುವ ಮೊತ್ತವನ್ನು ನಿಗಮದಡಿಯಲ್ಲಿನ ನೀರಾವರಿ ಸೌಲಭ್ಯ ಕಲ್ಪಿಸುವ, ಕೆರೆ ತುಂಬಿಸುವ ಯೋಜನೆಗಳು, ನಾಲಾ ಆಧುನೀಕರಣ ಕಾಮಗಾರಿಗಳಿಗೆ ಹಾಗೂ ಭೂಸ್ವಾಧೀನಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.</td></tr>
<tr><td>ಇ.</td><td>ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದಲ್ಲಿ ನಿಗಮವಾರು ಎಷ್ಟು ಹಣವನ್ನು ಭೂಸ್ವಾಧೀನ ಮತ್ತು ಸಾಲ ತೀರುವಳಿ ಹಾಗೂ ಬಡ್ಡಿ ಪಾವತಿಸಲು ಉಪಯೋಗಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಐಇಬಿಆರ್ ಅಡಿಯಲ್ಲಿ ನಿಗಮಗಳು ಪಡೆದಿರುವ ಸಾಲದ ಅಸಲಿನ ಮರುಪಾವತಿ ಹಾಗೂ ಬಡ್ಡಿ ಪಾವತಿಗಾಗಿ ಆಯವ್ಯಯದಲ್ಲಿ ಪ್ರತ್ಯೇಕವಾಗಿ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದ್ದು, ಸಾಲದ ಮೊತ್ತದಲ್ಲಿ ಮರುಪಾವತಿ ಮಾಡಲಾಗುತ್ತಿಲ್ಲ.
ಐಇಬಿಆರ್ ಅಡಿಯಲ್ಲಿ 2019-20 ನೇ ಸಾಲಿನಲ್ಲಿ ನಿಗಮಗಳು ಪಡೆದಿರುವ ಸಾಲದ ಮೊತ್ತದಲ್ಲಿ ಭೂಸ್ವಾಧೀನಕ್ಕೆ ಬಳಸಿರುವ ವಿವರ ಈ ಕೆಳಕಂಡಂತಿವೆ:
(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ.</th><th>ನಿಗಮ</th><th>ಭೂಸ್ವಾಧೀನ ಮೊತ್ತ</th></tr>
<tr><td>1</td><td>ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ</td><td>-</td></tr>
<tr><td>2</td><td>ಕರ್ನಾಟಕ ನೀರಾವರಿ ನಿಗಮ ನಿಯಮಿತ</td><td>127.15</td></tr>
<tr><td>3</td><td>ಕಾವೇರಿ ನೀರಾವರಿ ನಿಗಮ ನಿಯಮಿತ</td><td>5.13</td></tr>
<tr><td>4</td><td>ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ</td><td>40.00</td></tr>
</table></td></tr>
</table>

ಜಸಂಇ 109 ಎಂಎಲ್ಎ 2020

(ರಮೇಶ್ ಲ ಜಾರಕಿಹೊಳಿ),
ಜಲ ಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	806
ಸದಸ್ಯರ ಹೆಸರು	ಶ್ರೀ ಮಹೇಶ್ ಸಾ.ರಾ (ಕೃಷ್ಣರಾಜನಗರ)
ಉತ್ತರಿಸಬೇಕಾದ ದಿನಾಂಕ	22-09-2020
ಉತ್ತರಿಸುವ ಸಚಿವರು	ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಲ್ಲಿ ಸಿಬಂಧ್ಬಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಗೆ ಸೇರಿದ ಹಲವಾರು ಇಲಾಖೆಯ ಅಧಿಕಾರಿಗಳ ಮೇಲೆ ಲೋಕಾಯುಕ್ತ ಹಾಗೂ ಎ .ಸಿ.ಬಿ.ಯಿಂದ ದಾಳಿಗೊಳಗಾಗಿರುವ ಪ್ರಕರಣಗಳು ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು)	ಸಿಬಂಧ್ಬಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸೇವೆಗಳು ವಿಭಾಗದ ವ್ಯಾಪ್ತಿಯಲ್ಲಿನ ಕರ್ನಾಟಕ ಆಡಳಿತ ಸೇವೆಯ 6 ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳ (ಎ.ಸಿ.ಬಿ) ದಿಂದ ದಾಳಿ ನಡೆಸಲಾಗಿದೆ. ವಿವರ ಕೆಳಕಂಡಂತಿದೆ. 1. ಶ್ರೀ ಜಿ. ಟಿ ಕುಮಾರಸ್ವಾಮಿ, 2. ಶ್ರೀ ತಿಪ್ಪೇಸ್ವಾಮಿ ಎನ್ 3. ಶ್ರೀಮತಿ ರಾಜಶ್ರೀ ಜೈನಾಪೂರ 4. ಡಾ: ಎಸ್. ಎಸ್ ಮಧುಕೇಶ್ವರ 5. ಡಾ: ಎಂ. ದಾಸೇಗೌಡ 6. ಶ್ರೀ ಎಂ. ಎಸ್. ಎನ್ ಬಾಬು
ಆ)	ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖೆಯು ಯಾವ ಕ್ರಮ ಕೈಗೊಂಡಿದೆ (ಸಂಪೂರ್ಣ ಮಾಹಿತಿ ನೀಡುವುದು)	ಮೇಲ್ಕಾಣಿಸಿದ 6 ಅಧಿಕಾರಿಗಳಲ್ಲಿ ಈ ಕೆಳಕಂಡ 4 ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ. 1. ಶ್ರೀ ಜಿ. ಟಿ ಕುಮಾರಸ್ವಾಮಿ, 2. ಶ್ರೀಮತಿ ರಾಜಶ್ರೀ ಜೈನಾಪೂರ 3. ಡಾ: ಎಸ್. ಎಸ್ ಮಧುಕೇಶ್ವರ 4. ಡಾ: ಎಂ. ದಾಸೇಗೌಡ ಈ ಕೆಳಕಂಡ ಇಬ್ಬರು ಅಧಿಕಾರಿಗಳ ಕುರಿತು ಕ್ರಮವಹಿಸುವ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳದಿಂದ ಮಾಹಿತಿ / ಪ್ರಸ್ತಾವನೆ ಕೋರಲಾಗಿದೆ. 1. ಶ್ರೀ ತಿಪ್ಪೇಸ್ವಾಮಿ ಎನ್ 2. ಶ್ರೀ ಎಂ. ಎಸ್. ಎನ್ ಬಾಬು
ಇ)	ಹಲವಾರು ಇಲಾಖೆಯ ಅಧಿಕಾರಿಗಳು ಸರ್ಕಾರದ ಪೂರ್ವಾನುಮತಿ ಪಡೆಯದೇ ಹಲವಾರು ಬಾರಿ ವಿದೇಶ ಪ್ರವಾಸ ಮಾಡಿರುವುದು ಸರ್ಕಾರದ ಗಮನ	ಹೌದು. ಕರ್ನಾಟಕ ಆಡಳಿತ ಸೇವೆಗಳ ಇಬ್ಬರು ಅಧಿಕಾರಿಗಳು ಹಾಗೂ ಇಂಜಿನಿಯರಿಂಗ್ ಸೇವೆಗಳ ಇಬ್ಬರು ಅಧಿಕಾರಿಗಳು ಪೂರ್ವಾನುಮತಿ ಪಡೆಯದೇ ವಿದೇಶ ಪ್ರವಾಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಹಾಗೂ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರಗಳು ಕೆಳಕಂಡಂತಿದೆ

<table>
<tr>
<td></td>
<td>ಕ್ಕೆ ಬಂದಿದೆಯೇ; ಈ ಅಧಿಕಾರಿಗಳ ವಿರುದ್ಧ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸಂಪೂರ್ಣ ಮಾಹತಿ ಒದಗಿಸುವುದು)</td>
<td>
<table>
<tr><th>ಕ್ರ.ಸಂ</th><th>ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ</th><th>ಕ್ರಮದ ವಿವರ</th></tr>
<tr><td>1</td><td>ಅಭಿಜಿನ್ ಬಿ
ಕೆ.ಎ.ಎಸ್</td><td>ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲಾಗಿದೆ</td></tr>
<tr><td>2</td><td>ಶೈಲಜ ವಿ. ಆರ್
ಕೆ.ಎ.ಎಸ್</td><td>ಇವರ ವಿರುದ್ಧ ದೂರು ಸ್ವೀಕೃತವಾಗಿದ್ದು, ಜಿಲ್ಲಾಧಿಕಾರಿಗಳಿಂದ ವರದಿ ಕೋರಿದೆ</td></tr>
<tr><td>3</td><td>ಎನ್. ಲಕ್ಷ್ಮಣ್ ರಾವ್ ಪೇಶ್ವೆ
ಪ್ರಧಾನ ಇಂಜಿನಿಯರ್</td><td>ಲೋಕಾಯುಕ್ತ ವರದಿಯಿಂದ ತಿಳಿದು ಬಂದ ಪ್ರಕರಣವಾಗಿದ್ದು, ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಸದರಿ ಅಭಿಯೋಜನಾ ಮಂಜೂರಾತಿಯನ್ನು ಮಾನ್ಯ ಉಚ್ಛ ನ್ಯಾಯಾಲಯವು ರದ್ದುಗೊಳಿಸಿರುತ್ತದೆ</td></tr>
<tr><td>4</td><td>ಟಿ. ಎನ್ ಚಿಕ್ಕರಾಯಪ್ಪ
ಮುಖ್ಯ ಇಂಜಿನಿಯರ್</td><td>ಭ್ರಷ್ಟಾಚಾರ ನಿಗ್ರಹ ದಳದಿಂದ ತನಿಖೆ ನಡೆಸಲಾಗುತ್ತಿದೆ.</td></tr>
</table>
</td>
</tr>
<tr>
<td>ಈ)</td>
<td>ಕಳೆದ 03 ವರ್ಷಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಗೆ ಸೇರಿದ ಹಲವಾರು ಇಲಾಖೆಯ ಅಧಿಕಾರಿಗಳು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದೆ ಕಡತವನ್ನು ಬಾಕಿ ಇಟ್ಟಿರುವ ಪ್ರಕರಣಗಳೆಷ್ಟು (ಸಂಪೂರ್ಣ ಮಾಹಿತಿ ನೀಡುವುದು)</td>
<td>ಇಲ್ಲ. ಕರ್ನಾಟಕ ಲೋಕಾಯುಕ್ತ ಮತ್ತು ಭ್ರಷ್ಟಾಚಾರ ನಿಗ್ರಹ ದಳದಿಂದ ನಡೆಸಲಾಗಿರುವ ದಾಳಿಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ವಿರುದ್ಧ ಸಕಾಲದಲ್ಲಿ ಕ್ರಮವಹಿಸಲಾಗುತ್ತಿದೆ.</td>
</tr>
<tr>
<td>ಉ)</td>
<td>ಪ್ರತಿ ತಿಂಗಳು ನಡೆಸುತ್ತಿರುವ ಎಂ.ಎಂ.ಆರ್. ಸಭೆಗಳಲ್ಲಿ ಈ ಪ್ರಕರಣಗಳ ವಿಚಾರಣೆ, ಪ್ರಗತಿ ಮತ್ತು ವಿಲೇವಾರಿ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td>
<td>ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿನ ಪರಿಶೀಲನಾ ಸಭೆಯಲ್ಲಿ ಪ್ರತಿ ತಿಂಗಳು ಪ್ರಗತಿ ಮತ್ತು ವಿಲೇವಾರಿ ಬಗ್ಗೆ ಪರಿಶೀಲಿಸಲಾಗುತ್ತಿದೆ. ಅಂತೆಯೇ ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ ರವರ ಹಂತದಲ್ಲಿಯೂ ಸಹ ಮಾಹೆಯಾನ ಈ ಕುರಿತಂತೆ ಪ್ರಗತಿ ಮತ್ತು ವಿಲೇವಾರಿಯ ಬಗ್ಗೆ ಪರಿಶೀಲಿಸಲಾಗುತ್ತದೆ.</td>
</tr>
</table>

ಊ)	ಕೆಲವು ಪ್ರಕರಣಗಳಲ್ಲಿ ಕಾನೂನು ಇಲಾಖೆಯಿಂದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಅಭಿಪ್ರಾಯ ನೀಡಿದ್ದರೂ ಅಂತಹ ಪ್ರಕರಣಗಳಲ್ಲಿ ಯಾವುದೇ ಕ್ರಮ ಜರುಗಿಸದೆ ಇರಲು ಕಾರಣವೇನು?	ಕರ್ನಾಟಕ ಲೋಕಾಯುಕ್ತ ಮತ್ತು ಭ್ರಷ್ಟಾಚಾರ ನಿಗ್ರಹ ದಳದಿಂದ ನಡೆಸಲಾಗಿರುವ ದಾಳಿಗಳಿಗೆ ಸಂಬಂಧಿಸಿದಂತೆ ಕಾನೂನು ಇಲಾಖೆಯಿಂದ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಲು ಅಭಿಪ್ರಾಯ ನೀಡಿದ್ದರೂ ಕ್ರಮಕ್ಕೆ ಬಾಕಿಯಿರುವ ಪ್ರಕರಣಗಳು ಯಾವುದೂ ಇರುವುದಿಲ್ಲ.

ಸಂಖ್ಯೆ. ಸಿಆಸುಇ 42 ಎಸ್‌ಎಂಎಸ್ 2020

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 837
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್.
3. ಉತ್ತರಿಸಬೇಕಾದ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	2019-20ನೇ ಸಾಲಿನ ಬಜೆಟ್ ಪುಸ್ತಕ ಸಂಖ್ಯೆ 47 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ 100 ಕೋಟಿ ರೂ ಹಣ ಮೀಸಲಿರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಆಯವ್ಯಯ 2019-20, ದಿನಾಂಕ 08.02.2019 ರಂತೆ ಕಂಡಿಕೆ-94 (ಪುಟ ಸಂಖ್ಯೆ 47) ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ 100 ಕೋಟಿ ರೂ. ಹಣ ಮೀಸಲಿರಿಸಿರುವ ಘೋಷಣೆಯು ಜಲ ಸಂಪನ್ಮೂಲ ಇಲಾಖೆಯಡಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದ್ದು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಡಿ ಸೇರಿರುವುದಿಲ್ಲ.
ಆ	ಬಂದಿದ್ದಲ್ಲಿ, ಸದರಿ ಅನುದಾನದ ಮಂಜೂರಾತಿ ಪಡೆಯುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಅನ್ವಯಿಸುವುದಿಲ್ಲ.
ಇ	ಈ ಅನುದಾನಕ್ಕೆ ಕೆರೆಗಳನ್ನು ಆಯ್ಕೆ ಮಾಡಿ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ;	ಅನ್ವಯಿಸುವುದಿಲ್ಲ.
ಈ	ಆಯವ್ಯಯದಲ್ಲೂ ಘೋಷಣೆ ಮಾಡಿ 20 ತಿಂಗಳು ಕಳೆದರೂ ಕ್ರಿಯಾ ಯೋಜನೆಯನ್ನು ತಯಾರು ಮಾಡಲು ಅಧಿಕಾರಿಗಳು ನಿರ್ಲಕ್ಷ್ಯ ತೋರಲು ಕಾರಣವೇನು? (ವಿವರ ನೀಡುವುದು).	ಅನ್ವಯಿಸುವುದಿಲ್ಲ.

ಸಂಖ್ಯೆ: ಸನೀಇ 145 ಎಲ್ಎಕ್ಯೂ 2020

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 838
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	2019–20ನೇ ಸಾಲಿನ ಆಯ–ವ್ಯಯದಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಘಂಟಲಮಲ್ಲಮ್ಮ ಕಣಿವೆಯ ಬಳಿ ಬ್ಯಾರೇಜ್ ನಿರ್ಮಾಣ ಮಾಡಲು ಅನುದಾನ ಮೀಸಲಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಸದರಿ ಬ್ಯಾರೇಜ್ ಸಂಬಂಧಿತ ಕಾರ್ಯ ಯಾವ ಹಂತದಲ್ಲಿದೆ;	ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಹೋಬಳಿಯ ಬಳಿ ಘಂಟಲಮಲಮ್ಮ ಕಣಿವೆಯ ಬಳಿ ಬ್ಯಾರೇಜ್ ನಿರ್ಮಾಣ ಮಾಡಲು ಪ್ರಾಥಮಿಕ ಹಂತದ ಸರ್ವೆ, ತನಿಖಾ ಕಾರ್ಯ, ಅಗತ್ಯ ವಿನ್ಯಾಸ, ಅಂದಾಜು ಪಟ್ಟಿ, ಯೋಜನಾ ವರದಿ ಮತ್ತು ಕರಡು ಟೆಂಡರ್ ಪುಸ್ತಿಕೆಗಳನ್ನು ತಯಾರಿಸುವ ಕಾಮಗಾರಿಯನ್ನು ಫೆಬ್ರವರಿ–2020ರಲ್ಲಿ ಸಮಾಲೋಚಕರ ಸಂಸ್ಥೆಗೆ ವಹಿಸಲಾಗಿದ್ದು, ಕೋವಿಡ್–19 ಮಹಾಮಾರಿಯ ಹಿನ್ನೆಲೆಯಲ್ಲಿ ಸರ್ವೆ ಮತ್ತು ತನಿಖಾ ಕಾರ್ಯಗಳು ಕುಂಠಿತಗೊಂಡಿದ್ದು, ಪ್ರಸ್ತುತ ಪ್ರಗತಿಯಲ್ಲಿರುತ್ತವೆ. ಶೀಘ್ರದಲ್ಲಿಯೇ ಯೋಜನಾ ವರದಿಯನ್ನು ತಯಾರಿಸಿ, ತದನಂತರ ಯೋಜನೆ ಪ್ರಾರಂಭಿಸಲು ಮುಂದಿನ ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತದೆ.
ಇ)	ಬಜೆಟ್‌ನಲ್ಲಿ ಘೋಷಣೆಯಾಗಿ 20 ತಿಂಗಳು ಕಳೆದರೂ ಇದುವರೆವಿಗೂ ಡಿ.ಪಿ.ಆರ್. ಸಹ ತಯಾರು ಮಾಡದದಿರಲು ಕಾರಣಗಳೇನು; (ವಿವರ ನೀಡುವುದು)	
ಈ)	ಈ ಬ್ಯಾರೇಜ್ ನಿರ್ಮಾಣದ ಸಂಬಂಧ ಯಾವಾಗ ಟೆಂಡರ್ ಕರೆದು ಕಾಮಗಾರಿ ಪ್ರಾರಂಭ ಮಾಡಲಾಗುವುದು?	

ಸಂಖ್ಯೆ: ಜಸಂಇ 79 ಡಬ್ಲ್ಯೂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 840
2. ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
3. ಉತ್ತರಿಸುವ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಂಗಾರಪೇಟೆ ತಾಲ್ಲೂಕು ಕೇಂದ್ರದಲ್ಲಿರುವ ಪುರಾತನ ಪೊಲೀಸ್ ಠಾಣೆ ಕಟ್ಟಡವನ್ನು ತೆರವುಗೊಳಿಸಿ ನೂತನ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಬಂಗಾರಪೇಟೆ ತಾಲ್ಲೂಕು ಕೇಂದ್ರದಲ್ಲಿರುವ ಪುರಾತನ ಪೊಲೀಸ್ ಠಾಣೆ ಕಟ್ಟಡವನ್ನು ಇಲಾಖಾ ಹಂತದಲ್ಲಿ ನೆಲಸಮಗೊಳಿಸಲು ಆದೇಶಿಸಿದ್ದು, ಅನುದಾನದ ಲಭ್ಯತೆಯ ಅನುಸಾರ ನೂತನ ಕಟ್ಟಡ ನಿರ್ಮಾಣ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.
ಆ	ಕಳೆದ ಐದು ವರ್ಷಗಳಿಂದ ಈ ಬಗ್ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಉದ್ಭವಿಸುವುದಿಲ್ಲ
ಇ	ಹಾಗಿದ್ದಲ್ಲಿ, ಮಂಜೂರಾತಿ ಕುರಿತು ಆಗಿರುವ ಪ್ರಗತಿ ಏನು? (ವಿವರಗಳನ್ನು ನೀಡುವುದು);	

ಸಂಖ್ಯೆ:ಹೆಚ್‌ಡಿ 79 ಪಿಬಿಎಲ್ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 842
2. ಸದಸ್ಯರ ಹೆಸರು : ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ	Answer
ಅ)	ಕರ್ನಾಟಕ ಲೋಕಸೇವಾ ಆಯೋಗವು 2015ನೇ ಸಾಲಿನ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಕರ್ನಾಟಕ ಲೋಕಸೇವಾ ಆಯೋಗವು 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಸಂಬಂಧ ಹೊರಡಿಸಲಾದ ದಿನಾಂಕ: 12.05.2017ರ ಅಧಿಸೂಚನೆಯಲ್ಲಿ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ (Digital Valuation) ಮಾಡಲಾಗುವುದು ಎಂದು ಅಧಿಸೂಚಿಸಿದೆ. ಈ ಅಧಿಸೂಚನೆಯನ್ನು ದಿನಾಂಕ: 25.05.2017ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ.	Yes. The Karnataka Public Service Commission in its Notification dated 12.05.2017 has already mentioned that the answer scripts of 2015 Gazetted Probationers mains examination will be evaluated by Digital Evaluation. The Said Notification was published in the Gazette on 22.05.2017.
ಆ)	ಹಾಗಿದ್ದಲ್ಲಿ, ಡಿಜಿಟಲ್ ಮೌಲ್ಯಮಾಪನ ಮಾಡಲು ಮೌಲ್ಯಮಾಪಕರಿಗೆ ಪಾಸ್‌ವರ್ಡ್‌ಅನ್ನು ಆಯೋಗವು ನೇರವಾಗಿ ನೀಡಿರುವುದು ನಿಜವೇ;	ಇಲ್ಲ. ತಂತ್ರಾಂಶವು ಮೌಲ್ಯಮಾಪಕರಿಗೆ Default User Name ಮತ್ತು Password ಅನ್ನು ನೀಡಿದ ನಂತರ ಸದರಿ Password ಅನ್ನು ಮೌಲ್ಯಮಾಪಕರು ಕಡ್ಡಾಯವಾಗಿ ಬದಲಾಯಿಸಿದ ನಂತರವಷ್ಟೇ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ.	No. The software will first provide default user name and password to the evaluator and the default password has to be mandatorily changed by the concerned evaluator in order to access answer scripts.
ಇ)	ಹಾಗಿದ್ದಲ್ಲಿ, ಮೌಲ್ಯಮಾಪನ ಮಾಡಿದ ಎಲ್ಲಾ ಉತ್ತರ ಪತ್ರಿಕೆಗಳಿಗೆ ಮೌಲ್ಯಮಾಪಕರು ಡಿಜಿಟಲ್ ಸಹಿಯನ್ನು ಮಾಡಿಲ್ಲದಿರುವುದು ನಿಜವೇ;	ಮೌಲ್ಯಮಾಪಕರು ತಂತ್ರಾಂಶದಲ್ಲಿ ವಿದ್ಯುನ್ಮಾನವಾಗಿ ದೃಢೀಕರಿಸಿದ ನಂತರವಷ್ಟೇ ಮೌಲ್ಯಮಾಪಕರು ಉತ್ತರ ಪತ್ರಿಕೆಯನ್ನು ವೀಕ್ಷಿಸಿ ಮೌಲ್ಯಮಾಪನ ಮಾಡಲು ಸಾಧ್ಯವಾಗುವುದು. ಪ್ರತಿ ಉತ್ತರ ಪತ್ರಿಕೆಯ ಮೌಲ್ಯಮಾಪನದ ನಂತರ 'submit' button ಒತ್ತಿದ ಕೂಡಲೇ ಗಣಕಯಂತ್ರದಿಂದ ಉತ್ತರ ಪತ್ರಿಕೆಯ ಪೂರ್ಣ ದತ್ತಾಂಶವು Encrypt ಆಗಿ ಬೇರೊಂದು ನಗರದಲ್ಲಿರುವ Server ನಲ್ಲಿ ಸಂಗ್ರಹಿತವಾಗುತ್ತದೆ. ಸದರಿ ಪ್ರಕ್ರಿಯೆಯಲ್ಲಿ ಯಾವುದೇ ಮಾನವ	Only when the evaluator enters the system through electronic authentication the answer scripts can be accessed. After completion of evaluation, the evaluator submits the approval button and thereafter the data in the encrypted format gets stored in the Central Server of the Service Provider which is situated in a different city

		ಹಸ್ತಕ್ಷೇಪವಿರುವುದಿಲ್ಲವಾದ್ದರಿಂದ ದತ್ತಾಂಶವು ಸೋರಿಕೆಯಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.	altogether. There is no human intervention in the process, so there is no question of data leakage
ಈ)	ನಿಜವಾಗಿದ್ದಲ್ಲಿ, 2008ರ ನಂತರ ಇನ್‌ಫರ್‌ಮೇಷನ್ ಟೆಕ್ನಾಲಾಜಿ ತಿದ್ದುಪಡಿ ಕಾಯ್ದೆ ಪ್ರಕಾರ ಮೌಲ್ಯಮಾಪಕರು ಡಿಜಿಟಲ್ ಸಹಿ ಮಾಡುವುದು ಕಡ್ಡಾಯವಲ್ಲವೇ;	ಇಲ್ಲ.	No.
ಉ)	ಕರ್ನಾಟಕ ಲೋಕಸೇವಾ ಆಯೋಗದವರೇ, ಪಾಸ್‌ವರ್ಡ್‌ಅನ್ನು ಮೌಲ್ಯಮಾಪಕರಿಗೆ ಕೊಟ್ಟಿರುವುದರಿಂದ ಡಿಜಿಟಲ್ ಸಹಿ ಮಾಡಲು ಅವಕಾಶ ಕಲ್ಪಿಸದೇ ಇರುವುದರಿಂದ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ಅಂಕಗಳನ್ನು ತಿದ್ದಲು ಸಾಧ್ಯವಿಲ್ಲವೇ;	ಇಲ್ಲ, ಉದ್ಭವಿಸುವುದಿಲ್ಲ.	No Does not arise.
ಊ)	ಮೌಲ್ಯ ಮಾಪಕರುಗಳು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ ನಂತರ ಡಿಜಿಟಲ್ ಸಹಿಯನ್ನು ಎಲ್ಲಾ ಉತ್ತರ ಪತ್ರಿಕೆಗಳಿಗೆ ಮಾಡಿರುತ್ತಾರೆಯೇ;	ಮೌಲ್ಯಮಾಪಕರು ತಂತ್ರಾಂಶದಲ್ಲಿ ವಿದ್ಯುನ್ಮಾನವಾಗಿ ದೃಢೀಕರಿಸಿದ ನಂತರವಷ್ಟೇ ಮೌಲ್ಯಮಾಪಕರು ಉತ್ತರ ಪತ್ರಿಕೆಯನ್ನು ವೀಕ್ಷಿಸಿ ಮೌಲ್ಯಮಾಪನ ಮಾಡಲು ಸಾಧ್ಯವಾಗುವುದು. ಪ್ರತಿ ಉತ್ತರ ಪತ್ರಿಕೆಯ ಮೌಲ್ಯಮಾಪನದ ನಂತರ 'submit' button ಒತ್ತಿದ ಕೂಡಲೇ ಗಣಕಯಂತ್ರದಿಂದ ಉತ್ತರ ಪತ್ರಿಕೆಯ ಪೂರ್ಣ ದತ್ತಾಂಶವು Encrypt ಆಗಿ ಬೇರೊಂದು ನಗರದಲ್ಲಿರುವ Server ನಲ್ಲಿ ಸಂಗ್ರಹಿತವಾಗುತ್ತದೆ. ಸದರಿ ಪ್ರಕ್ರಿಯೆಯಲ್ಲಿ ಯಾವುದೇ ಮಾನವ ಹಸ್ತಕ್ಷೇಪವಿರುವುದಿಲ್ಲವಾದ್ದರಿಂದ ದತ್ತಾಂಶವು ಸೋರಿಕೆಯಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.	Only when the evaluator enters the system through electronic authentication the answer scripts can be accessed. After completion of evaluation, the evaluator submits the approval button and thereafter the data in the encrypted format gets stored in the Central Server of the Service Provider which is situated in a different city altogether. There is no human intervention in the process, so there is no question of data leakage
ಋ)	ಇಲ್ಲದಿದ್ದಲ್ಲಿ, ಏಕೆ ಮಾಡಿರುವುದಿಲ್ಲ? (ಪೂರ್ಣ ವಿವರ ನೀಡುವುದು)	The Information Technology Act 2000 ರಡಿ (2008 ಮತ್ತು 2009ರಲ್ಲಿ ತಿದ್ದುಪಡಿಯಾದಂತೆ) ಡಿಜಿಟಲ್ ಸಹಿ ಮಾಡುವುದು ಕಡ್ಡಾಯವಿರುವುದಿಲ್ಲ.	As per the Information Technology Act 2000 (Amended in 2008 & 2009) Digital Signature is not mandatory.

ಸಂಖ್ಯೆ: ಸಿಆಸುಇ 62 ಎಸ್‌ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತ್ತಿಲದ ಪ್ರಶ್ನೆ ಸಂಖ್ಯೆ	:	844
ಸದಸ್ಯರ ಹೆಸರು	:	ಶ್ರೀ ಗಣೇಶ್ ಜೆ.ಎನ್. (ಕಂಪ್ಲಿ)
ಉತ್ತರಿಸುವ ದಿನಾಂಕ	:	22/9/2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರ ನಾಲೆಗೆ ಸಂಬಂಧಿಸಿದಂತೆ ಹೆಚ್.ಎಲ್.ಸಿ ಮತ್ತು ಎಲ್.ಎಲ್.ಸಿ. ಕಾಲುವೆಗಳ ಆಧುನೀಕರಣವನ್ನು ಕೈಗೊಳ್ಳಲಾಗಿತ್ತಿದೆಯೇ;	ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆ ಹಾಗೂ ಎಲ್.ಎಲ್.ಸಿ. ಕಾಲುವೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಎಷ್ಟು ಕಿ.ಮೀ. ಕಾಲುವೆಯ ಆಧುನೀಕರಣ ನಡೆಯುತ್ತಿದೆ? (ಇದರ ಪೂರ್ಣ ವಿವರ ನೀಡುವುದು)	ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆ ಹಾಗೂ ಎಲ್.ಎಲ್.ಸಿ. ಕಾಲುವೆಗಳ ಆಧುನೀಕರಣ ಕಾಮಗಾರಿಗಳನ್ನು, ನಂ.1, ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್ ಮತ್ತು ನಂ.6, ಕಾಲುವೆ ವಿಭಾಗ ಬಳ್ಳಾರಿ ಅಡಿಯಲ್ಲಿ ಕೈಗೊಳ್ಳಲಾಗುತ್ತಿದ್ದು, ವಿವರ ಕೆಳಕಂಡಂತಿದೆ. **ನಂ.1, ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್:** ಈ ವಿಭಾಗದಡಿಯಲ್ಲಿ ಆರ್.ಬಿ.ಹೆಚ್.ಎಲ್.ಸಿ. ಮತ್ತು ಆರ್.ಬಿ.ಎಲ್.ಎಲ್.ಸಿ. ವಿತರಣಾ ಕಾಲುವೆ ಒಟ್ಟು ಉದ್ದ 66.11 ಕಿ.ಮೀ.ಯಿದ್ದು, ಈ ಪೈಕಿ 55.55 ಕಿ.ಮೀ. ಸಿ.ಸಿ. ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ 10.56 ಕಿ.ಮೀ. ಸಿ.ಸಿ. ಲೈನಿಂಗ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. **ನಂ.6, ಕಾಲುವೆ ವಿಭಾಗ, ಬಳ್ಳಾರಿ:** ಈ ವಿಭಾಗದಡಿಯಲ್ಲಿ ಬರುವ ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆಗಳ ಆಧುನೀಕರಣ ಕಾಮಗಾರಿಯನ್ನು 02 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ವಿವರ ಕೆಳಗಿನಂತಿದೆ: **ಪ್ಯಾಕೇಜ್-I:** ಈ ಕಾಮಗಾರಿಯಲ್ಲಿ ವಿತರಣಾ ಕಾಲುವೆ 7, 8, 9, 10, 11, 12 & 13 ರ ಒಟ್ಟು ಉದ್ದ 271.47 ಕಿ.ಮೀ. ಯಿದ್ದು, ಸಿ.ಸಿ. ಲೈನಿಂಗ್ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿದೆ. **ಪ್ಯಾಕೇಜ್-II:** ಈ ಕಾಮಗಾರಿಯಲ್ಲಿ ವಿತರಣಾ ಕಾಲುವೆ 14, 14ಎ, 15, 16 ಮತ್ತು 16ಎ ರ ಒಟ್ಟು ಉದ್ದ 273.77 ಕಿ.ಮೀ. ಯಿದ್ದು, ಸಿ.ಸಿ. ಲೈನಿಂಗ್ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿದೆ.

ಸಂಖ್ಯೆ:ಜಸಂಇ99ಎಂಎಲ್ಎ2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 845
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಗಣೇಶ್ ಜೆ.ಎನ್ (ಕಂಪ್ಲಿ)
ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸಬೇಕಾದ ದಿನಾಂಕ : 22.09.2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಂಪ್ಲಿ ಮತ್ತು ಕುರುಗೋಡು ತಾಲ್ಲೂಕಿನಲ್ಲಿ ಯಾವುದಾದರು ಕೈಗಾರಿಕಾ ಘಟಕಗಳು ಇವೆಯೇ;</td><td>ಸದರಿ ತಾಲ್ಲೂಕುಗಳಲ್ಲಿ ಎಂಎಸ್‌ಎಂಇ ನೊಂದಣಿಯಂತೆ ಕಳೆದ ಎರಡು ವರ್ಷಗಳಲ್ಲಿ ಈ ಕೆಳಗಿನಂತೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನೊಂದಣಿಯಾಗಿರುತ್ತವೆ.
<table>
<tr><th>ತಾಲ್ಲೂಕು</th><th>ನೊಂದಣಿಯಾದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು</th></tr>
<tr><td>ಕಂಪ್ಲಿ</td><td>121</td></tr>
<tr><td>ಕುರುಗೋಡು</td><td>33</td></tr>
<tr><td>ಒಟ್ಟು</td><td>154</td></tr>
</table>
</td></tr>
<tr><td>ಆ)</td><td>ಹಾಗಿದ್ದಲ್ಲಿ ಇಲ್ಲಿಯವರೆಗೆ ಈ ಎರಡು ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td><td>ಕಂಪ್ಲಿ ತಾಲೂಕು ಕಂಪ್ಲಿ ಹೋಬಳಿಯ ಅರಳಿಹಳ್ಳಿ ಗ್ರಾಮದ ಸ.ನಂ 77ಎ ಪೈಕಿ ವಿಸ್ತೀರ್ಣ 65.09 ಎಕರೆ ಪೈಕಿ ವಿಸ್ತೀರ್ಣ 20.00 ಎಕರೆ ಜಮೀನನ್ನು ಜಿಲ್ಲಾ ಕೈಗಾರಿಕಾ ಅಭಿವೃದ್ಧಿ ಪ್ರದೇಶಕ್ಕೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳು, ಬಳ್ಳಾರಿ ರವರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಕೇಂದ್ರ ಕಛೇರಿ, ರಾಜಾಜಿನಗರ, ಬೆಂಗಳೂರು ಇವರಿಗೆ ಜಮೀನಿನ ಭೂ ಬೆಲೆಯ ಶೇಕಡ 50% ರಷ್ಟು ಭೂ ಬೆಲೆಯನ್ನು ಸರ್ಕಾರಕ್ಕೆ ಪಾವತಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಿದ್ದಲ್ಲಿ ಜಮೀನು ಮಂಜೂರಾತಿ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ದಿ:06.06.2020 ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು ಕೆ.ಎಸ್.ಎಸ್.ಐ.ಡಿ.ಸಿ ಯು ಕ್ರಮ ಜರುಗಿಸಲಿದೆ.

ಮುಂದುವರೆದು, ನಿರುದ್ಯೋಗಿ ಯುವಕ ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಈ ಕೆಳಗಿನ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಟ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.

2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಹಿಳಾ ಉದ್ದಿಮೆದಾರರಿಗೆ ಶೇಕಡ 4%ರ ಬಡ್ಡಿ ದರದಲ್ಲಿ ರೂ.2.00 ಕೋಟಿಯವರೆಗೂ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

3. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6% ರಂತೆ ಬಡ್ಡಿ ಸಹಾಯಧನ ನೀಡಲಾಗುವುದು.</td></tr>
</table>

ಕ್ರ.ಸಂ.	ಪ್ರಶ್ನೆ	ಉತ್ತರ
		4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ. 75% ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು (ಗರಿಷ್ಟ 2 ಎಕರೆ) ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. 5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60% ರಷ್ಟು ಗರಿಷ್ಟ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ. 6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಟ ರೂ.2.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯು 1/3 ರಲ್ಲಿ ಶೇ.50%ರಷ್ಟು ಬಡ್ಡಿ ರಹಿತ ಗರಿಷ್ಟ ರೂ.33 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ. 7. ದಿನಾಂಕ:01-04-2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳು ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್.ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುತ್ತಿದೆ. 8. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ: 01-04-2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುತ್ತಿದೆ. 9. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕಲ್ಪಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ. 1. ಮುದ್ರಾಂಕ ಶುಲ್ಕ ವಿನಾಯಿತಿ 2. ನೋಂದಣಿ ಶುಲ್ಕ ರಿಯಾಯಿತಿ. 3. ಬಂಡವಾಳ ಹೂಡಿಕೆ ಸಹಾಯಧನ 4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ 5. ಭೂ ಪರಿವರ್ತನಾ ಶುಲ್ಕ ಮರುಪಾವತಿ. 6. ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ. 7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ. 8. ವಿದ್ಯುತ್ ತೆರಿಗೆ ವಿನಾಯಿತಿ 9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ 10. ಮಳೆ ನೀರು ಕೊಯ್ಲು / ಸಂರಕ್ಷಣೆ ಸಹಾಯಧನ 10. ಕರ್ನಾಟಕ ರಾಜ್ಯ ಕೃಷಿ ವಾಣಿಜ್ಯ ಮತ್ತು ಆಹಾರ ಸಂಸ್ಕರಣಾ ನೀತಿ 2015 ರಂತೆ ಕಲ್ಪಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ. 1. ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು

ಕ್ರ.ಸಂ.	ಪ್ರಶ್ನೆ	ಉತ್ತರ
		2. ನೋಂದಣಿ ಶುಲ್ಕ ರಿಯಾಯಿತಿ. 3. ಬಂಡವಾಳ ಹೂಡಿಕೆ ಸಹಾಯಧನ 4. ಬಡ್ಡಿ ಸಹಾಯಧನ 5. ಭೂ ಪರಿವರ್ತನಾ ಶುಲ್ಕ ಮರುಪಾವತಿ. 6. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ. 7. ತ್ಯಾಜ್ಯ ಸಂಸ್ಕರಣಾ ಯಂತ್ರ ಸ್ಥಾಪನೆಗೆ ಸಹಾಯಧನ..

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಪರಿಷತ್

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 846
2] ಮಾನ್ಯ ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
3] ಉತ್ತರಿಸುವ ದಿನಾಂಕ : 22.09.2020.
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಪೊಲೀಸ್ ಆಯುಕ್ತರ ಕಾರ್ಯವ್ಯಾಪ್ತಿ ಏನು ; (ಮಾಹಿತಿ ನೀಡುವುದು)	ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯು 1093.70 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿರುತ್ತದೆ. ಅವುಗಳಲ್ಲಿ ಮಂಗಳೂರು ತಾಲ್ಲೂಕು, ಮೂಡಬಿದ್ರೆ ತಾಲ್ಲೂಕು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕದ ವ್ಯಾಪ್ತಿಯ ಬಂಟ್ವಾಳ ತಾಲ್ಲೂಕಿನ 05 ಗ್ರಾಮಗಳ ಕಾರ್ಯವ್ಯಾಪ್ತಿಯನ್ನು (ನರಿಂಗಾಣ, ಕೈರಂಗಳ, ಬಾಳೆಪುಣಿ, ಕುರ್ನಾಡು, ಫಜೀರು) ಒಳಗೊಂಡಿರುತ್ತದೆ.
ಆ)	ಮಂಗಳೂರು ನಗರ ಪೊಲೀಸ್ ಆಯುಕ್ತರ ಕಾರ್ಯವ್ಯಾಪ್ತಿಯು ಎಷ್ಟು ವಿಧಾನಸಭಾ ಕ್ಷೇತ್ರಗಳು ಹಾಗೂ ಪ್ರದೇಶಗಳನ್ನು ಒಳಗೊಳ್ಳುತ್ತದೆ ; (ಮಾಹಿತಿ ನೀಡುವುದು)	ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯು 4 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. 1) ಮೂಡಬಿದ್ರೆ ವಿಧಾನಸಭಾ ಕ್ಷೇತ್ರ – 201 2) ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರ – 202 3) ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ – 203 4) ಮಂಗಳೂರು ವಿಧಾನಸಭಾ ಕ್ಷೇತ್ರ – 204
ಇ)	ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಅಧೀಕ್ಷಕರ ಕಾರ್ಯವ್ಯಾಪ್ತಿಯಲ್ಲಿ ಜಿಲ್ಲೆಯ ಎಷ್ಟು ತಾಲ್ಲೂಕುಗಳು ಬರುತ್ತವೆ; ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಿಂದ ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ತೆರಳಲು ಎಷ್ಟು ಗಂಟೆಗಳ ಪ್ರಯಾಣದ ಸಮಯ ಬೇಕಾಗುತ್ತದೆ; ಹಾಗೂ ಎಷ್ಟು ಕಿಲೋಮೀಟರ್ ದೂರ ಇರುತ್ತದೆ ; (ಮಾಹಿತಿ ನೀಡುವುದು)	• ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಅಧೀಕ್ಷಕರ ಕಾರ್ಯವ್ಯಾಪ್ತಿಯಲ್ಲಿ 5 ತಾಲ್ಲೂಕುಗಳಿವೆ. (ಪುತ್ತೂರು, ಸುಳ್ಯ ಬಂಟ್ವಾಳ, ಬೆಳ್ತಂಗಡಿ, ಕಡಬ) • ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಿಂದ ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ತೆರಳಲು ಒಂದು ಗಂಟೆಯ ಪ್ರಯಾಣದ ಸಮಯ ಬೇಕಾಗುತ್ತದೆ. • 53 ಕಿಲೋ ಮೀಟರ್ ದೂರ ಇರುತ್ತದೆ.
ಈ)	ಕಾನೂನು ಸುವ್ಯವಸ್ಥೆ ಹಾಗೂ ಕಾರ್ಯಕ್ಷಮತೆ ಹಿತದೃಷ್ಟಿಯಿಂದ ಪುತ್ತೂರು ನಗರ ಅಥವಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಅಧೀಕ್ಷಕರ ಕಛೇರಿಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಮಾಹಿತಿ ಒದಗಿಸುವುದು)	ಸರ್ಕಾರದ ಮುಂದೆ ಅಂತಹ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಹೆಚ್‌ಡಿ 104 ಪಿಓಪಿ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	848
ಸದಸ್ಯರ ಹೆಸರು	:	ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
ಉತ್ತರಿಸುವ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ತುಂಗಭದ್ರಾ ನದಿಯಿಂದ ಕೊಟ್ಟೂರು ಕೆರೆ ಹಾಗೂ ಇತರೆ 16 ಕೆರೆ ಸೇರಿ ಒಟ್ಟು 17 ಕೆರೆಗೆ ನೀರು ತುಂಬಿಸುವ ಯೋಜನೆಯ ಕಾಮಗಾರಿಗೆ ಸಲ್ಲಿಸಿರುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ತುಂಗಭದ್ರಾ ನದಿಯಿಂದ ಕೊಟ್ಟೂರು ಕೆರೆ ಮತ್ತು ಇತರೆ 16 ಕೆರೆ ಸೇರಿ ಒಟ್ಟು 17 ಕೆರೆಗಳನ್ನು ತುಂಬಿಸುವ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ.
ಆ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 17 ಕೆರೆಗೆ ನೀರು ತುಂಬಿಸುವ ಯೋಜನೆ ಈ ಭಾಗದ ಪ್ರಮುಖ ಯೋಜನೆಯಾಗಿದ್ದು ಯೋಜನೆ ವಿಳಂಬಗೊಳ್ಳಲು ಕಾರಣವೇನು;	
ಇ)	ಸದರಿ ಯೋಜನೆಯ ಅನುಷ್ಠಾನಕ್ಕೆ ಆಯ್ಯ-ವ್ಯಯದಲ್ಲಿ ಎಷ್ಟು ಅನುದಾನ ಮೀಸಲಿರಿಸಿದೆ;	ಸದರಿ ಯೋಜನೆಯ ಅನುಷ್ಠಾನಕ್ಕಾಗಿ, 2019-20 ನೇ ಸಾಲಿನ ಅಯವ್ಯಯದಲ್ಲಿ ರೂ.85.00 ಕೋಟಿಗಳನ್ನು ಘೋಷಿಸಲಾಗಿರುತ್ತದೆ.
ಈ)	ಈ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?	ತುಂಗಭದ್ರಾ ನದಿಯಿಂದ ಕೊಟ್ಟೂರು ಕೆರೆ ಮತ್ತು ಇತರೆ ಕೆರೆಗಳನ್ನು ತುಂಬಿಸುವ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ.

ಸಂಖ್ಯೆ:ಜಸಂಇ 98 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1]	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	849
2]	ಮಾನ್ಯ ಸದಸ್ಯರ ಹೆಸರು	:	ಶ್ರೀ ಭೀಮಾ ನಾಯ್ಕ್ ಎಸ್. (ಹಗರಿಬೊಮ್ಮನಹಳ್ಳಿ)
3]	ಉತ್ತರಿಸುವ ದಿನಾಂಕ	:	22.09.2020.
4]	ಉತ್ತರಿಸುವ ಸಚಿವರು	:	ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿಯಲ್ಲಿ ಪೊಲೀಸ್ ಉಪವಿಭಾಗ ಕಛೇರಿಯನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ ;</td><td rowspan="3">ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿಯಲ್ಲಿ ಪೊಲೀಸ್ ಉಪವಿಭಾಗ ಕಛೇರಿಯನ್ನು ಪ್ರಾರಂಭಿಸುವ ಕುರಿತು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯ ಮಾನದಂಡಗಳನ್ನು ಪೂರೈಸಿದಲ್ಲಿ ಪರಿಶೀಲಿಸಲಾಗುವುದು.</td></tr>
<tr><td>ಆ)</td><td>ಪ್ರಸ್ತುತ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 04 ಪೊಲೀಸ್ ಠಾಣೆಗಳು ಹಾಗೂ 02 ಪೊಲೀಸ್ ವೃತ್ತ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು ಆಡಳಿತಾತ್ಮಕವಾಗಿ ಹೊಸಪೇಟೆ ಮತ್ತು ಹರಪನಹಳ್ಳಿ ಪೊಲೀಸ್ ಉಪವಿಭಾಗ ವ್ಯಾಪ್ತಿಗೆ ಬರುತ್ತಿರುವ ಕಾರಣ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td></tr>
<tr><td>ಇ)</td><td>ಹಾಗಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮವೇನು ;</td></tr>
</table>

ಸಂಖ್ಯೆ: ಹೆಚ್‌ಡಿ 103 ಪಿಓಪಿ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 854
2. ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ. (ಆನೇಕಲ್)
3. ಉತ್ತರಿಸಬೇಕಾದ ದಿನಾಂಕ : 22-09-2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2018ರ ಫೆಬ್ರವರಿಯಲ್ಲಿ ಮಂಡಿಸಿದ ಆಯ-ವ್ಯಯದಲ್ಲಿ ಆನೇಕಲ್ ತಾಲ್ಲೂಕಿನ ಅತ್ತಿಬೆಲೆವರೆಗೆ ಮೆಟ್ರೋ ರೈಲು ಸೇವೆ ವಿಸ್ತರಿಸುವ ಪ್ರಸ್ತಾವನೆ ಇದ್ದದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ (ಮಾಹಿತಿ ನೀಡುವುದು);	2018ರ ಫೆಬ್ರವರಿಯಲ್ಲಿ ಮಂಡಿಸಿದ ಮುಂಗಡ ಪತ್ರದಲ್ಲಿ ಬೊಮ್ಮಸಂದ್ರದಿಂದ ಅತ್ತಿಬೆಲೆವರೆಗೆ ಮೆಟ್ರೋ ರೈಲು ವಿಸ್ತರಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿತ್ತು.
ಆ)	ಅಂದಿನ ಆಯ-ವ್ಯಯದಲ್ಲಿ ಪ್ರಸ್ತಾಪಿಸಿದ್ದ ಮೆಟ್ರೋ ರೈಲು ಸೇವೆಯನ್ನು ವಿಸ್ತರಿಸುವ ಕಾಮಗಾರಿ ಆರಂಭವಾಗದಿರಲು ಕಾರಣಗಳೇನು (ಮಾಹಿತಿ ನೀಡುವುದು);	ಮೆಟ್ರೋ ಯೋಜನೆಗಳಿಗಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ 'ಕಾರ್ಯಸಾಧ್ಯತಾ ಅಧ್ಯಯನ' ಕೈಗೊಂಡಿದ್ದು, ಅದರನ್ವಯ, ಈ ವಿಸ್ತರಣಾ ಮಾರ್ಗವು 'ಕಾರ್ಯ ಸಾಧ್ಯತೆ' ಇರುವುದಿಲ್ಲ. ಆದ್ದರಿಂದ, ಈ ಪ್ರಸ್ತಾಪವನ್ನು ಕೈಬಿಡಲಾಗಿದೆ.
ಇ)	ಆನೇಕಲ್ ತಾಲ್ಲೂಕಿನ ಚಂದಾಪುರ-ಅತ್ತಿಬೆಲೆ ಕೈಗಾರಿಕಾ ಪ್ರದೇಶಗಳಿಗೆ ಅಗತ್ಯವಾಗಿ ಮೆಟ್ರೋ ಸೇವೆ ಒದಗಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಮಾಹಿತಿ ನೀಡುವುದು)	

ಕಡತ ಸಂಖ್ಯೆ: ನಅಇ 192 ಪಿ.ಆರ್.ಜೆ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 859
2. ವಿಧಾನ ಸಭೆಯ ಸದಸ್ಯರು : ಶ್ರೀ ಸುರೇಶ ಬಿ.ಎಸ್. (ಹೆಬ್ಬಾಳ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಯಾವ ಇಲಾಖೆಗಳ ಯಾವ ವೃಂದದ ಅಧಿಕಾರಿ/ ನೌಕರರ ಸೇವಾ ವಿಷಯಗಳನ್ನು ನಿರ್ವಹಿಸುತ್ತಿದೆ;	ಕರ್ನಾಟಕ ಸರ್ಕಾರದ ಸಚಿವಾಲಯದ ಸೇವೆಗಳು (ನೇಮಕಾತಿ) ನಿಯಮಗಳು, 2019ರನ್ವಯ 1) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಸಿಬ್ಬಂದಿ/ಆಡಳಿತ) ವಿಭಾಗಗಳಲ್ಲಿ ಗ್ರೂಪ್-ಬಿ, ಸಿ, ಡಿ ವೃಂದದವರೆಗಿನ ಸೇವಾ ವಿಷಯ 2) ಸಿಆಸುಇ (ಸೇವೆಗಳು) ವಿಭಾಗದಲ್ಲಿ ಅಖಿಲ ಭಾರತೀಯ ಸೇವೆಗಳಾದ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ವೃಂದಗಳ ಸೇವಾ ವಿಷಯ 3) ಕೆ.ಎ.ಎಸ್. ವೃಂದಗಳ, ಜಿಲ್ಲಾ ನ್ಯಾಯಾಧೀಶರುಗಳ ಸೇವಾ ವಿಷಯ, ಇಲಾಖಾ ಮುಖ್ಯಸ್ಥರುಗಳು ಮತ್ತು ಮುಖ್ಯ ಇಂಜಿನಿಯರ ಗಳ ಸೇವಾ ವಿಷಯ ಹಾಗೂ 4) ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಗ್ರೂಪ್-ಎ ವೃಂದದ ಅಧಿಕಾರಿಗಳ ಸೇವಾ ವಿಷಯ 5) ಇದಲ್ಲದೆ, ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಎ ವೃಂದದ ಅಧಿಕಾರಿಗಳ ಸೇವಾ ವಿಷಯ 6) ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಮಾನ್ಯ ಸಚಿವರುಗಳ ಆಪ್ತ ಶಾಖೆಯಲ್ಲಿ ನಿಯೋಜನೆ/ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ ಎ, ಬಿ, ಸಿ ಮತ್ತು ಡಿ ವೃಂದದ ಅಧಿಕಾರಿ/ನೌಕರರುಗಳ ಸೇವಾ ವಿಷಯಗಳನ್ನು ನಿರ್ವಹಿಸಲಾಗುತ್ತಿದೆ.
ಆ)	ಈ ಇಲಾಖೆಯ ಅಧಿಕಾರಿಗಳೆಂದು ನಿರ್ದಿಷ್ಟಪಡಿಸಿ ಮಂಜೂರಾದ ಹುದ್ದೆಗಳಲ್ಲಿ ಇತರೆ ಇಲಾಖೆಗಳ ಅಧಿಕಾರಿಗಳನ್ನು ನಿಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.

ಇ)	ಬಂದಿದ್ದಲ್ಲಿ, ಅದನ್ನು ಹೇಗೆ ಸರಿಪಡಿಸಲಾಗುವುದು?	ಇತರೆ ಸೇವೆಗೆ ಸೇರಿದ ಒಟ್ಟು 22 ಅಧಿಕಾರಿಗಳನ್ನು ಐ.ಎ.ಎಸ್. ಅಧಿಕಾರಿಗಳಿಗೆ ನಿರ್ಧಿಷ್ಟಪಡಿಸಿ ಮಂಜೂರಾದ ಹುದ್ದೆಗಳಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ನೇಮಿಸಲಾಗಿದೆ. ಕೆ.ಎ.ಎಸ್. ಅಧಿಕಾರಿಗಳಿಗೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಕೆಲವೊಮ್ಮೆ ಕೆ.ಎ.ಎಸ್. ಯೇತರ ಅಧಿಕಾರಿಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ನೇಮಿಸಲಾಗಿರುತ್ತದೆ. ಕರ್ನಾಟಕ ಸರ್ಕಾರದ ಸಚಿವಾಲಯದ ಸೇವೆಗಳು (ನೇಮಕಾತಿ) ನಿಯಮಗಳು, 2019ರನ್ವಯ ಕಲ್ಪಿಸಲಾದ ಅವಕಾಶದಂತೆ ಸಿಆಸು ಇಲಾಖೆಯ ಅಧಿಕಾರಿಗಳಿಂದು ನಿರ್ಧಿಷ್ಟಪಡಿಸಿ ಮಂಜೂರಾದ ಹುದ್ದೆಗಳಲ್ಲಿ ಇತರೆ ಇಲಾಖೆಗಳ ಅಧಿಕಾರಿಗಳನ್ನು ನಿಯಮಾನುಸಾರ ನಿಯೋಜಿಸಲಾಗುತ್ತಿದೆ.

ಸಂಖ್ಯೆ: ಸಿಆಸುಇ 99 ರಾಸಾ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 861
ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ (ಕುಷ್ಟಗಿ)
ಉತ್ತರಿಸಬೇಕಾದ ದಿನಾಂಕ : 22.09.2020
ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಕುಷ್ಟಗಿ ಗ್ರಾಮದಲ್ಲಿರುವ ಸರ್ವೆ ನಂ.2 ರಲ್ಲಿನ ಒಟ್ಟು 10-07 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಮೂಲಕ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಇವರಿಗೆ ಹಂಚಿಕೆ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ಕುಷ್ಟಗಿ ಗ್ರಾಮದ ಸರ್ವೆ ನಂ.2 ರಲ್ಲಿ ಒಟ್ಟು 10.07 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ, 1987 ರಲ್ಲಿ ನಿಗಮವು ಜಮೀನಿನ ಮೌಲ್ಯ ರೂ.5,58,880/- ಅನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಪಾವತಿಸಲಾಗಿದ್ದು, ಇದುವರೆವಿಗೂ ಕೆ.ಐ.ಎ.ಡಿ.ಬಿ ಸಂಸ್ಥೆಯಿಂದ ಪೂರ್ಣ ಪ್ರಮಾಣದಲ್ಲಿ ಜಮೀನು ನಿಗಮಕ್ಕೆ ಹಸ್ತಾಂತರ ಮಾಡಿರುವುದಿಲ್ಲ ಪ್ರಸ್ತಾವಿತ ಜಮೀನು ಸ್ವಾಧೀನ ಅಧಿಸೂಚನೆ ಹೊರಡಿಸುವಾಗ, ಮೊದಲ ಅಧಿಸೂಚನೆ 28 (1) ರಲ್ಲಿ, ನಂತರ ಅಂತಿಮ ಅಧಿಸೂಚನೆ 28(4)ರಲ್ಲಿ, ಜೆ.ಎಂ.ಸಿ. ಯಲ್ಲಿ ಹಾಗೂ ಹಸ್ತಾಂತರ ಪತ್ರದಲ್ಲಿ ಸರ್ವೆ ನಂಬರುಗಳನ್ನು ಬೇರೆ ಬೇರೆಯಾಗಿ ನಮೂದಿಸಿ ಗೊಂದಲ ಉಂಟಾಗಿದ್ದು ಸರಿಯಾದ ಜಮೀನು ನಿಗಮಕ್ಕೆ ಹಸ್ತಾಂತರ ಮಾಡಿರುವುದಿಲ್ಲ.
ಆ)	ಈ ಮಂಡಳಿಯು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಸದರಿ ಜಮೀನನ್ನು ಹಸ್ತಾಂತರ ಮಾಡುವಲ್ಲಿ ಈ ರೀತಿಯ ವಿಳಂಬವಾಗುತ್ತಿರುವುದರ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಇ)	ಹಾಗಿದ್ದಲ್ಲಿ, ಸದರಿ ಜಮೀನನ್ನು ಸರಳವಾದ ರೀತಿಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಯಾವಾಗ ಹಂಚಿಕೆ ಮಾಡಲು ಇಲಾಖೆಯು ಕ್ರಮವನ್ನು ವಹಿಸುತ್ತದೆ; ಹಾಗೂ ಇದಕ್ಕಾಗಿ ನಿಗದಿಪಡಿಸಿದ ಅನುದಾನವೆಷ್ಟು;	ಕೆ.ಎಸ್.ಎಸ್.ಐ.ಡಿ.ಸಿ ನಿಗಮವು ಸದರಿ ಜಮೀನಿಗೆ ರೂ. 5,58,880/- ಅನ್ನು ಕೆ.ಐ.ಎ.ಡಿ.ಬಿ ಸಂಸ್ಥೆಗೆ ಪಾವತಿಸಿರುತ್ತದೆ. ಸದರಿ ಜಮೀನನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಯು ಸೂಕ್ತವಾಗಿ ಕೆ.ಎಸ್.ಎಸ್.ಐ.ಡಿ.ಸಿ. ನಿಗಮಕ್ಕೆ ಹಸ್ತಾಂತರಿಸುವ ಕುರಿತು ಸರ್ಕಾರದ ಮಟ್ಟದಲ್ಲಿ ಶೀಘ್ರ ಸಭೆ ಕರೆದು ಇತ್ಯರ್ಥ ಪಡಿಸಲು ಕ್ರಮ ವಹಿಸಲಾಗುವುದು.

ಈ)	ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಈ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಭೂಸ್ವಾಧೀನ ಕಾರ್ಯಕ್ಕಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ?	ಕೆ.ಎಸ್.ಎಸ್.ಐ.ಡಿ.ಸಿ ನಿಗಮವು ಸದರಿ ಜಮೀನಿಗೆ ರೂ. 5,58,880/- ಅನ್ನು ಕೆ.ಐ.ಎ.ಡಿ.ಬಿ ಸಂಸ್ಥೆಗೆ ಪಾವತಿಸಿರುತ್ತದೆ.

ಸಿಐ 110 ಸಿಎಸ್‌ಸಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 862
2. ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್(ಬೈಲಹೊಂಗಲ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿನ ಚಚಡಿ ಏತ ನೀರಾವರಿ ಯೋಜನೆಗೆ ಎಂದು ಮಂಜೂರಾತಿ ನೀಡಲಾಯಿತು; ಈ ಯೋಜನೆಗೆ ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ;	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರದ ಚಚಡಿ ಏತ ನೀರಾವರಿ ಯೋಜನೆಗೆ ದಿನಾಂಕ: 04.02.2007ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ರೂ.24.60 ಕೋಟಿಗಳಿಗೆ ನೀಡಲಾಗಿದೆ.
ಆ)	ಈ ಯೋಜನೆಯಿಂದ ಯಾವ ಗ್ರಾಮದ ಎಷ್ಟು-ಎಷ್ಟು ಎಕರೆ ಜಮೀನು ನೀರಾವರಿಗೆ ಒಳಪಡುತ್ತದೆ (ವಿವರ ನೀಡುವುದು);	ಈ ಯೋಜನೆಯನ್ನು ಗೋಕಾಕ, ಸವದತ್ತಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಒಟ್ಟು 12 ಗ್ರಾಮಗಳ 2718 ಹೇ. (6716.18 ಎಕರೆ) ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ವಿವರ ಈ ಕೆಳಗಿನಂತಿದೆ;

ಕ್ರ. ಸಂ.	ಗ್ರಾಮ	ತಾಲ್ಲೂಕು	ಕ್ಷೇತ್ರ
1	ಖನಗಾಂವ (ಖನಗಾಂವ, ಮಿಡಕನಟ್ಟಿ, ಕೆಶಪನಟ್ಟಿ, ಯಳಪಟ್ಟಿ)	ಗೋಕಾಕ	386.587 ಎಕರೆ
2	ವಣ್ಣೂರ (ವಣ್ಣೂರ,ಮಾಸ್ತ ಮರಡಿ, ಸುನಕುಪ್ಪಿ)	ಬೈಲಹೊಂಗಲ	2850.232 ಎಕರೆ
3	ಗಜಮಿನಾಳ	ಬೈಲಹೊಂಗಲ	53.213 ಎಕರೆ
4	ಚಿಕ್ಕಬೂದನೂರ	ಸೌದತ್ತಿ	100.359 ಎಕರೆ
5	ಚಚಡಿ	ಸೌದತ್ತಿ	1393.738 ಎಕರೆ
6	ಕಲಕುಪ್ಪಿ	ಬೈಲಹೊಂಗಲ	173.269 ಎಕರೆ
7	ಮೇಕಲಮರಡಿ	ಬೈಲಹೊಂಗಲ	658.774 ಎಕರೆ
8	ಉಜ್ಜನಹಟ್ಟಿ	ಬೈಲಹೊಂಗಲ	162.992 ಎಕರೆ
9	ಹಣಬರಟ್ಟಿ	ಬೈಲಹೊಂಗಲ	30.099 ಎಕರೆ
10	ಹಿರೇಬೂದನೂರ	ಸೌದತ್ತಿ	203.830 ಎಕರೆ
11	ಗುಂಡ್ಲೂರ	ಸೌದತ್ತಿ	523.800 ಎಕರೆ
12	ತಡಸಲೂರು	ಸೌದತ್ತಿ	179.283 ಎಕರೆ
	ಒಟ್ಟು		6716.18 ಎಕರೆ (2718.00 ಹೇ.)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಇ)	ಕಾಮಗಾರಿ ಪ್ರಾರಂಭಗೊಂಡು ಈಗ ಅರ್ಧಕ್ಕೆ ನಿಂತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿದೆ. ಚಚಡಿ ಏತ ನೀರಾವರಿ ಯೋಜನೆಯ ಇನಟೇಕ್ ಕಾಲುವೆ, ಹೆಡವರ್ಕ, ಪಂಪ್ ಹೌಸ, ವಿದ್ಯುದ್ದೀಕರಣ ಮತ್ತು ಕಿಮೀ 3+000 ರಿಂದ 5+000 ರವರೆಗಿನ ಮುಖ್ಯ ಕಾಲುವೆಯ ಕಾಮಗಾರಿ ಪೂರ್ಣಗೊಂಡಿರುತ್ತದೆ.
ಈ)	ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಕೂಡಲೇ ಮುಗಿಸಿ ಈ ಭಾಗದ ರೈತರಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದೇ?	ಸದರಿ ಯೋಜನೆಯಲ್ಲಿ Rising main 280m. ಮುಖ್ಯ ಕಾಲುವೆ 2.893ಕಿ.ಮೀ ಮತ್ತು Distribututary-1-340m ನಿರ್ಮಾಣ ಕಾಮಗಾರಿಯು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಪ್ರಯುಕ್ತ ಅಗತ್ಯ ತೀರುವಳಿ ಪಡೆಯುವ ಕಾರಣದಿಂದಾಗಿ ಸದ್ಯಕ್ಕೆ ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಅರಣ್ಯ ಪ್ರದೇಶದಲ್ಲಿ ಹಾಯ್ದು ಹೋಗುವ Open Canal ಬದಲು Pipelineಯನ್ನು ಅಳವಡಿಸಲು ಹೊಸದಾಗಿ Revised proposal for laying pipeline (3.92ಹೇ) ಅರಣ್ಯ ಪ್ರದೇಶದ ಭೂಸ್ವಾಧೀನ ಪ್ರಸ್ತಾವನೆಯ ತೀರುವಳಿಗಾಗಿ ದಿನಾಂಕ:31.12.2019 ರಂದು Online ನಲ್ಲಿ ಸಲ್ಲಿಸಲಾಗಿರುತ್ತದೆ. ಅರಣ್ಯ ಭವನ, ಬೆಂಗಳೂರು ಇವರ ಕಛೇರಿಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. ಅಗತ್ಯ ಅರಣ್ಯ ಪ್ರದೇಶದ ಭೂಮಿ ಬಿಡುಗಡೆಯಾದ ನಂತರ ಶೀಘ್ರವಾಗಿ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ಜಸಂಇ 69 ಡಬ್ಲ್ಯೂಎಲ್ಎ 2020

(ರಮೇಶ್ ಎಲ್. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	863
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ತುರಕರಶಿಗಿಹಳ್ಳಿ ಗ್ರಾಮದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಸಾರ್ವಜನಿಕರ ಅನುಕೂಲತೆಗಾಗಿ 110 ಕೆ.ವಿ. ಸ್ಟೇಷನ್ ಪ್ರಾರಂಭಿಸಲು ಸ್ಥಳವನ್ನು ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ;	ಹೌದು.
ಆ)	ಈ ಭಾಗದಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಆಗದಿರುವುದರಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬೈಲಹೊಂಗಲ ಮತಕ್ಷೇತ್ರದ ತುರುಕರಶಿಗಿಹಳ್ಳಿ ಹಾಗೂ ಸವದತ್ತಿ ತಾಲ್ಲೂಕಿನ ಹೊಸೂರ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಗೆ ಪ್ರಸ್ತುತ ನಿರಂತರ ಜ್ಯೋತಿ ವಿದ್ಯುತ್ ಮಾರ್ಗಗಳ ಮುಖಾಂತರ ದಿನವಹಿ 22 ರಿಂದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ನೀರಾವರಿ ಪಂಪ್ ಸೆಟ್ ಗಳಿಗೆ ಬ್ಯಾಚ್ ಗಳಲ್ಲಿ ದಿನವಹಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಇನ್ನೂ ಹೆಚ್ಚಿನ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ಹಾಗೂ ಮುಂಬರುವ ದಿನಗಳಲ್ಲಿನ ಲೋಡ್ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಕವಿಪ್ರನಿನಿ ವತಿಯಿಂದ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ: **ತುರಕರಶಿಗಿಹಳ್ಳಿ ಗ್ರಾಮ:** ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ತುರಕರಶಿಗಿಹಳ್ಳಿ ಗ್ರಾಮದಲ್ಲಿ ನೂತನವಾಗಿ 110/11 ಕೆ.ವಿ. ಉಪ-ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಅಗತ್ಯವಿರುವ ಸರ್ಕಾರಿ ಜಮೀನನ್ನು ಕವಿಪ್ರನಿನಿ
ಇ)	ಹಾಗಿದ್ದಲ್ಲಿ, ಈಗಾಗಲೇ ಸ್ಥಳವನ್ನು ನೀಡಿರುವುದರಿಂದ ರೈತರಿಗೆ ಕೂಡಲೇ ಸದರಿ ವಿದ್ಯುತ್ ಕೆ.ವಿ. ಸ್ಟೇಷನ್ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?	

		ಸುಪರ್ದಿಗೆ ಪಡೆದುಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಪ್ರಸ್ತುತ, ಬ್ಲಾಕ್ ಲೆವೆಲ್ ಸರ್ವೇ ಹಾಗೂ ಪ್ರಾಥಮಿಕ ಮಾರ್ಗಗಳ ಸರ್ವೇ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. **ಹೊಸೂರ ಗ್ರಾಮ:** ಸವದತ್ತಿ ತಾಲ್ಲೂಕಿನ ಹೊಸೂರ ಗ್ರಾಮದಲ್ಲಿ ನೂತನವಾಗಿ 110/11 ಕೆ.ವಿ. ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಅಗತ್ಯವಿರುವ ಖಾಸಗಿ ಜಮೀನನ್ನು ಖರೀದಿಸಲಾಗಿರುತ್ತದೆ. ಪ್ರಸ್ತುತ, ಬ್ಲಾಕ್ ಲೆವೆಲ್ ಸರ್ವೇ ಮತ್ತು ಪ್ರಾಥಮಿಕ ಮಾರ್ಗಗಳ ಸರ್ವೇ ಕಾಮಗಾರಿಯು ಪ್ರಗತಿಯಲ್ಲಿದೆ. ಸರ್ವೇ ಕಾರ್ಯಗಳು ಪೂರ್ಣಗೊಂಡ ನಂತರ ಕ.ವಿ.ಪ್ರ.ನಿ.ನಿ. ವತಿಯಿಂದ ಮೇಲ್ಕಂಡ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 126 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 864
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ : 22.09.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಮಲಪ್ರಭಾ ಯೋಜನೆ ಪ್ರಾರಂಭಿಸುವ ಕಾಲಕ್ಕೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನ ರೈತರು ತಮ್ಮ ಜಮೀನನ್ನು ಕಳೆದು ಕೊಂಡಿರುವುದರಿಂದ ಅವರ ಅನುಕೂಲತೆಗಾಗಿ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಿರುವ ವಿಷಯ ಸರ್ಕಾರದ ಗಮನದಲ್ಲಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಜಮೀನು ಕಳೆದುಕೊಂಡ ರೈತರ ಅನುಕೂಲತೆಗಾಗಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ; ಅವುಗಳು ಯಾವುವು;	ಜಮೀನು ಕಳೆದುಕೊಂಡ ರೈತರ ಅನುಕೂಲತೆಗಾಗಿ ಕೆಳಕಂಡ ಒಟ್ಟು 11 ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. 1) ದೇವಲಾಪೂರ ಏತ ನೀರಾವರಿ ಯೋಜನೆ 2) ಮಲ್ಲೂರ-ಮಾಟೊಳ್ಳಿ ಏತ ನೀರಾವರಿ ಯೋಜನೆ 3) ಕೆಂಗಾನೂರು ಏತ ನೀರಾವರಿ ಯೋಜನೆ 4) ಬೂದಿಹಾಳ ಏತ ನೀರಾವರಿ ಯೋಜನೆ 5) ಜಾಲಿಕೊಪ್ಪ ಏತ ನೀರಾವರಿ ಯೋಜನೆ 6) ಹೊಸೂರು-ವಕ್ಕುಂದ ಏತ ನೀರಾವರಿ ಯೋಜನೆ 7) ಶಿಂಗಾರಕೊಪ್ಪ ಏತ ನೀರಾವರಿ ಯೋಜನೆ 8) ಏಣಗಿ-ಹಿಟ್ಟನಗಿ ಏತ ನೀರಾವರಿ ಯೋಜನೆ 9) ರೇಣುಕಾ ಏತ ನೀರಾವರಿ ಯೋಜನೆ 10) ಬಡ್ಲಿ-ಕಾತ್ರಾಳ ಏತ ನೀರಾವರಿ ಯೋಜನೆ 11) ಯರಗಟ್ಟಿ ಏತ ನೀರಾವರಿ ಯೋಜನೆ
ಇ)	ಸದರಿ ಏತ ನೀರಾವರಿ ಯೋಜನೆಗಳು ದುರಸ್ಥಿಯಲ್ಲಿದ್ದು, ಸಮರ್ಪಕವಾಗಿ ನೀರು ಪೂರೈಸದಿರುವುದರಿಂದ ರೈತರ ಜಮೀನುಗಳಿಗೆ ನೀರು ತಲುಪದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ 11 ಏತ ನೀರಾವರಿ ಯೋಜನೆಗಳು ಚಾಲ್ತಿಯಲ್ಲಿದ್ದು ರೈತರಿಗೆ ನೀರಾವರಿ ಒದಗಿಸಲಾಗುತ್ತಿದೆ. ಆದರೆ ಯೋಜನೆಗಳಡಿಯ ಪಂಪಿಂಗ್ ಮಶಿನರಿ, ದುರಸ್ತಿ, ರೈಸಿಂಗ್ ಮೇನ್ ದುರಸ್ತಿ ಮತ್ತು ವಾರ್ಷಿಕ ನಿರ್ವಹಣೆ ಮಾಡುವುದು ಅವಶ್ಯವಿರುತ್ತದೆ.
ಈ)	ಹಾಗಿದ್ದಲ್ಲಿ, ಈ ಎಲ್ಲಾ ಏತ ನೀರಾವರಿ ಯೋಜನೆಗಳನ್ನು ದುರಸ್ಥಿಗೊಳಿಸಿ ರೈತರಿಗೆ ನೀರು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಸದರಿ ಏತ ನೀರಾವರಿ ಯೋಜನೆಗಳ ದುರಸ್ತಿಗಾಗಿ ಮತ್ತು ವಾರ್ಷಿಕ ನಿರ್ವಹಣೆಗಾಗಿ ಒಟ್ಟಾರೆ ರೂ.888.01 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸದರಿ ಏತ ನೀರಾವರಿ ಯೋಜನೆಗಳ ಅಗತ್ಯ ದುರಸ್ತಿ ಕಾಮಗಾರಿಗಳನ್ನು ಕೈಗೊಂಡು ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರನ್ನು ಪೂರೈಸಲಾಗುವುದು.

ಸಂಖ್ಯೆ: ಜಸಂಇ 86 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 865
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
3. ಉತ್ತರಿಸುವ ದಿನಾಂಕ : 22-09-2020
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಲಿಂಗಸುಗೂರು ತಾಲ್ಲೂಕಿನ ಮುದಗಲೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ವ್ಯಾಪ್ತಿಯಲ್ಲಿ ಅಂತರಾಷ್ಟ್ರೀಯ ಪ್ರಸಿದ್ಧ ಗ್ರಾನೇಟ್ ಶಿಲೆಗಳ ಕ್ವಾರಿಗಳಿದ್ದು ಮತ್ತು ಸುತ್ತಮುತ್ತಲಿನ ಗ್ರಾಮದ ರೈತರು ತಮ್ಮ ಜಮೀನುಗಳಲ್ಲಿ ಫಲವತ್ತಾದ ಬೆಳೆಗಳನ್ನು ಬೆಳೆಯುತ್ತಿದ್ದು ಮತ್ತು ಇನ್ಯಾವುದೇ ಮೂಲದಿಂದ ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿದ್ದಲ್ಲಿ ಅಗ್ನಿಶಾಮಕ ತುರ್ತು ಸೇವೆಗೆ ಇಲ್ಲಿ ಅಗ್ನಿಶಾಮಕ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿದ್ದಲ್ಲಿ ಸುಮಾರು 25 ಕಿ.ಮೀಟರ್ ದೂರದಲ್ಲಿರುವ ಲಿಂಗಸುಗೂರಿನಿಂದ ಅಗ್ನಿಶಾಮಕ ತುರ್ತು ವ್ಯವಸ್ಥೆ ಕಲ್ಪಿಸಲು ಸಾಧ್ಯವೇ; ಈ ಅನಾನುಕೂಲತೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;	Standing Fire Advisory Council (SFAC) ಮಾನದಂಡಗಳ ಅನುಸಾರ 40 ಕಿ.ಮೀ ವ್ಯಾಪ್ತಿಯೊಳಗೆ ಒಂದು ಅಗ್ನಿಶಾಮಕ ಠಾಣೆ ಇರಬೇಕೆಂದಿದೆ. ಮುದಗಲ್ ಪಟ್ಟಣಕ್ಕೆ 25 ಕಿ.ಮೀ ಅಂತರದಲ್ಲಿ ಲಿಂಗಸುಗೂರು ಅಗ್ನಿಶಾಮಕ ಠಾಣೆಯು ಕಾರ್ಯ ನಿರ್ವಹಿಸುತ್ತಿದ್ದು, ಸಮರ್ಥವಾಗಿ ಅಗ್ನಿ ಅನಾಹುತಗಳನ್ನು ನಂದಿಸುವ ಕಾರ್ಯ ನಿರ್ವಹಿಸುತ್ತಿರುವುದರಿಂದ ಮುದಗಲ್ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಯಾವುದೇ ಪ್ರಸ್ತಾಪವಿರುವುದಿಲ್ಲ.
ಇ)	ಬಂದಿದ್ದಲ್ಲಿ, ಮುದಗಲೆ ಪಟ್ಟಣದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಗ್ನಿಶಾಮಕ ಠಾಣೆ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ನಿಲುವೇನು (ಸಂಪೂರ್ಣ ವಿವರ ನೀಡುವುದು)?	

ಸಂಖ್ಯೆ: ಒಇ 161 ಎಸ್‌ಎಫ್‌ಬಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 866
ಸದಸ್ಯರ ಹೆಸರು	: ಶ್ರೀ ಹೂಲಗೇರಿ ಡಿ.ಎಸ್ (ಲಿಂಗಸುಗೂರು)
ಉತ್ತರಿಸುವ ದಿನಾಂಕ	: 22.09.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಲಿಂಗಸುಗೂರು ವಿಧಾನ ಸಭಾ ಕ್ಷೇತ್ರದ 7 ಕೆರೆಗಳನ್ನು ತುಂಬಿಸುವ ಯೋಜನೆಯ ಕಾಮಗಾರಿಯನ್ನು ಕೈಗೊಳ್ಳು ರೂ.110.00 ಕೋಟಿಗಳ ಅಂದಾಜು ಪಟ್ಟಿಗೆ ಕೃಷ್ಣ ಭಾಗ್ಯ ಜಲ ನಿಗಮದಿಂದ ಅನುಮೋದನೆ ನೀಡಲಾಗಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);	ಲಿಂಗಸುಗೂರು ವಿಧಾನಸಭಾ ಕ್ಷೇತ್ರದ 07 ಕೆರೆಗಳನ್ನು ತುಂಬಿಸುವ ಯೋಜನೆಯ ಕಾಮಗಾರಿಯನ್ನು ಕೈಕೊಳ್ಳಲು ರೂ.104.00 ಕೋಟಿಗಳ ಅಂದಾಜು ಪಟ್ಟಿಯ ಪ್ರಸ್ತಾವನೆಯನ್ನು ದಿನಾಂಕ 24.06.2019 ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 44ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯ ತೀರುವಳಿ ಪಡೆಯಲಾಗಿದ್ದು, ದಿನಾಂಕ 09.07.2019 ರಂದು ಜರುಗಿದ 121ನೇ ನಿಗಮ ನಿರ್ದೇಶಕರ ಮಂಡಳಿ ಸಭೆಯಲ್ಲಿ ಚರ್ಚಿಸಲ್ಪಟ್ಟು ನೀಡಲಾಗಿರುವ ತಿರುವಳಿರನ್ವಯ ಯೋಜನೆಯ ರೂ.104.00 ಕೋಟಿ ಅಂದಾಜು ಮೊತ್ತಕ್ಕೆ ಹಾಗೂ ಯೋಜನೆಗೆ ಅವಶ್ಯಕವಿರುವ ನೀರನ್ನು ಸಣ್ಣ ನೀರಾವರಿ ಕೆರೆಗಳ ನೀರಿನ ಹಂಚಿಕೆಯಡಿ ಪರಿಗಣಿಸುವ ಪ್ರಸ್ತಾವನೆ ಪರಿಶೀಲನೆ ಹಂತದಲ್ಲಿದೆ.
ಆ)	ಸದರಿ ಯೋಜನೆಯ ಕಾಮಗಾರಿಗೆ ಅನುಮೋದನೆ ನೀಡದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕಾಮಗಾರಿಗೆ ಅನುಮೋದನೆ ನೀಡಿ ಪೂರ್ಣಗೊಳಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು);	
ಇ)	ಸದರಿ ಯೋಜನೆಯ ಕಾಮಗಾರಿಗೆ ಅನುಮೋದನೆ ನೀಡುವ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿರುತ್ತದೆ ಮತ್ತು ಇಲ್ಲಿಯವರೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)?	

ಸಂಖ್ಯೆ: ಜಸಂಇ 78 ಡಬ್ಲ್ಯೂಬಿಎಂ 2020

(ರಮೇಶ್ ಎಲ್. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 867
2] ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಹೂಲಗೇರಿ (ಲಿಂಗಸುಗೂರು)
3] ಉತ್ತರಿಸುವ ದಿನಾಂಕ : 22.09.2020.
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ಹೊಸದಾಗಿ ಗ್ರಾಮೀಣ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ಇರುವುದಿಲ್ಲ. ಲಿಂಗಸುಗೂರು ಗ್ರಾಮೀಣ ಪೊಲೀಸ್ ಠಾಣೆಯು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಗಳನ್ವಯ ಮಾನದಂಡಗಳನ್ನು ಪೂರೈಸಿದಲ್ಲಿ ಪರಿಶೀಲಿಸಲಾಗುವುದು.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಉದ್ಭವಿಸುವುದಿಲ್ಲ.
ಇ)	ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿನ್ನೆಲೆಯಲ್ಲಿ ಲಿಂಗಸುಗೂರು ಗ್ರಾಮೀಣ ಪೊಲೀಸ್ ಠಾಣೆ ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು; ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಕಳೆದ ಎರಡು ವರ್ಷದಲ್ಲಿ ಎಷ್ಟು ಮೊಕದ್ದಮೆ ಹೂಡಲಾಗಿದೆ (ಪೂರ್ಣ ವಿವರ ಒದಗಿಸುವುದು) ?	ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿನ್ನೆಲೆಯಲ್ಲಿ ಲಿಂಗಸುಗೂರು ಗ್ರಾಮೀಣ ಪೊಲೀಸ್ ಠಾಣೆಯನ್ನು ಸೃಜಿಸುವ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯ ಅನ್ವಯವಿರುವ ಮಾನದಂಡಗಳನ್ನು ಪೂರೈಸಿರುವುದಿಲ್ಲ. ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ದಾಖಲಾದ ಅಪರಾಧ ಪ್ರಕರಣಗಳ ವಿವರ.

ಕ್ರ ಸ	ವರ್ಷ	ಘೋರ ಪ್ರಕರಣ ಐಪಿಸಿ	ಘೋರ ವಲ್ಲದ ಪ್ರಕರಣ ಐಪಿಸಿ	ಕೆಪಿ ಆಕ್ಟ್	ಅಬಕಾರಿ ಪ್ರಕರಣ ಗಳು	ಕಾಣೆಯಾದ ಪ್ರಕರಣಗಳು	ಒಟ್ಟು
1	2018	31	214	57	16	07	325
2	2019	26	202	54	19	12	313
3	2020	25	138	28	15	17	223

ಸಂಖ್ಯೆ: ಹೆಚ್‌ಡಿ 102 ಪಿಓಪಿ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	868
2. ಸದಸ್ಯರ ಹೆಸರು	:	ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
3. ಉತ್ತರಿಸುವ ದಿನಾಂಕ	:	22.09.2020
4. ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ (ಕೆ.ಎ.ಎಸ್) ಹುದ್ದೆಗಳ ಆಯ್ಕೆ ಸಂಬಂಧ ಸಂದರ್ಶನದ ಅಂಕಗಳನ್ನು 200 ಅಂಕಗಳಿಂದ 50 ಅಂಕಗಳಿಗೆ ಕಡಿಮೆ ಮಾಡಿರುವುದರಿಂದ ಸಾಮಾಜಿಕ ನ್ಯಾಯಕ್ಕೆ ಹೊಡೆತ ಬೀಳುವುದಿಲ್ಲವೇ;	ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಗಳ ಒಟ್ಟು ಅಂಕವು 1750ರಿಂದ 1250ಕ್ಕೆ ಇಳಿಕೆಯಾಗುವ ಕಾರಣ ಸಮಾನಾಂತರವಾಗಿ ವ್ಯಕ್ತಿತ್ವ ಪರೀಕ್ಷೆಗೆ ಹಾಲಿ ಇರುವ 200 ಅಂಕಗಳನ್ನು ಪಿ.ಸಿ. ಹೋಟಾ ಸಮಿತಿಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ (ಶೇ. 10.25ರಂತೆ) ಕಡಿಮೆ ಮಾಡುವ ಕುರಿತು ಪರಿಶೀಲಿಸುವುದು ಸೂಕ್ತವಾಗಿರುತ್ತದೆ ಎಂಬುದನ್ನು ಸರ್ಕಾರದ ಹಂತದಲ್ಲಿ ಪರಿಗಣಿಸಲಾಗಿದೆ. ವಾಸ್ತವವಾಗಿ ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸುವ ಮೌಲ್ಯವು ಶೇಕಡ 12.20ಕ್ಕಿಂತ ಕಡಿಮೆ ಇರಬೇಕೆಂಬುದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಶೋಕ್ ಕುಮಾರ್ ಯಾದವ್ ವಿರುದ್ಧ ಹರಿಯಾಣ ರಾಜ್ಯ (ಎಐಆರ್ 1987 ಎಸ್‌ಸಿ 454) ಮತ್ತು ಲೀಲಾಧರ್ ವಿರುದ್ಧ ರಾಜಾಸ್ಥಾನ ರಾಜ್ಯ (ಎಐಆರ್ 1981 ಎಸ್‌ಸಿ 1777) ಪ್ರಕರಣಗಳಲ್ಲಿ ನೀಡಿರುವ ತೀರ್ಪಿನ ತತ್ವಾಂಶವಾಗಿರುತ್ತದೆ. ಹಾಗೆಯೇ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) (58ನೇ ತಿದ್ದುಪಡಿ) ನಿಯಮಗಳು, 2001ರನ್ವಯ ಸಂದರ್ಶನಕ್ಕೆ ನಿಗದಿಪಡಿಸಲಾಗುವ ಅಂಕಗಳು ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಿರ್ದಿಷ್ಟ ಪಡಿಸಲಾದ ಗರಿಷ್ಠ ಅಂಕಗಳ ಪ್ರಮಾಣದ ಶೇಕಡ 5ನ್ನು ಮೀರಬಾರದು ಎಂಬುದನ್ನು ಗಮನದಲ್ಲಿ ಇರಿಸಿಕೊಂಡು ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರ ಪರಿಶಿಷ್ಟ– II ಸೆಕ್ಷನ್– I ರ ಭಾಗ–ಸಿ ಗೆ ತಿದ್ದುಪಡಿ ಮಾಡಿ ದಿನಾಂಕ:04.06.2020ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಆ)	ಈ ರೀತಿಯ ಆದೇಶದಿಂದ ರಾಜ್ಯದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ತೀರಾ ಹಿಂದುಳಿದ ಸಣ್ಣ ಪುಟ್ಟ ಜಾತಿಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಕುಂಬಾರ, ಅಗಸ, ಸವಿತಾ ಸಮಾಜ, ತಿಗಳ, ಬುಡ ಬುಡಕಲ, ಹೆಳವ, ಗೊಲ್ಲ ಇತ್ಯಾದಿ ಜಾತಿಗಳ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಹುದ್ದೆಗಳಿಗೆ ಆಯ್ಕೆ ಆಗಲು ತೊಂದರೆಪಡಿಸಿದಂತೆ ಆಗಿಲ್ಲವೇ;	ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಂಕಗಳನ್ನು 200 ರಿಂದ 50ಕ್ಕೆ ಇಳಿಸಿದ್ದು, ಈ ನಿಯಮಗಳು ಎಲ್ಲಾ ವರ್ಗ/ಜಾತಿ ಅಭ್ಯರ್ಥಿಗಳಿಗೆ ಸಮಾನವಾಗಿ ಅನ್ವಯವಾಗುತ್ತವೆ. ಯಾವುದೇ ವರ್ಗ/ಜಾತಿಗಳಿಗೆ ವ್ಯಕ್ತಿತ್ವ ಪರೀಕ್ಷೆಯ ಅಂಕಗಳಲ್ಲಿ ಅಂತರವಿರುವುದಿಲ್ಲ. ವ್ಯಕ್ತಿತ್ವ ಪರೀಕ್ಷೆಯ ಅಂಕಗಳಲ್ಲಿ ಬದಲಾವಣೆ ಮಾಡಲಾದ ಕಾರಣದಿಂದ ಪ್ರಶ್ನೆಯಲ್ಲಿ ಕಾಣಿಸಿರುವಂತೆ ಯಾವುದೇ ವರ್ಗದ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಹುದ್ದೆಗಳಿಗೆ ಆಯ್ಕೆ ಆಗಲು ತೊಂದರೆ ಆಗುವುದಿಲ್ಲ.
ಇ)	ಇದನ್ನು ಸರಿಪಡಿಸಲು ಯಾವ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ?	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಆಸುಇ 68 ಎಸ್‌ಎಸ್‌ಸಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	870
2	ಸದಸ್ಯರ ಹೆಸರು	:	ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
3	ಉತ್ತರಿಸುವ ದಿನಾಂಕ	:	22–09–2020
4	ಉತ್ತರಿಸುವ ಸಚಿವರು	:	ಗೃಹ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಪೊಲೀಸ್ ಇಲಾಖೆಯು ಅಧಿಸೂಚನೆ ಹೊರಡಿಸಿದ ನಂತರ ಪ್ರತಿ ನೇಮಕಾತಿಯನ್ನು ಹೈಕೋರ್ಟ್ ಆದೇಶದಂತೆ ಆರು ತಿಂಗಳೊಳಗೆ ಪೂರ್ಣಗೊಳಿಸಬೇಕಾಗಿದ್ದರೂ ಇಲಾಖೆಯು ಫಲಿತಾಂಶಗಳನ್ನು ಪ್ರಕಟಿಸಲು ವಿಳಂಬ ಮಾಡುತ್ತಿರಲು ಕಾರಣಗಳೇನು;</td><td>ಪೊಲೀಸ್ ಇಲಾಖೆಯಲ್ಲಿನ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ವೃಂದದ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕೈಗೊಳ್ಳಲಾಗುತ್ತಿದೆ. ಸದರಿ ನಿಯಮಗಳಂತೆ ನೇಮಕಾತಿ ಅಧಿಸೂಚನೆಗಳನ್ನು ಪ್ರಕಟಿಸಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಬೇಕಾಗಿರುತ್ತದೆ. ನಂತರ ಅರ್ಹ ಅಭ್ಯರ್ಥಿಗಳಿಗೆ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಸಂಬಂಧಿಸಿದಂತೆ ದೇಹದಾರ್ಢ್ಯತೆ ಪರೀಕ್ಷೆಗಳನ್ನು ನಡೆಸಿ, ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ಅದೇರೀತಿ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಿ ನಂತರ ದೇಹದಾರ್ಢ್ಯತೆ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ.
ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ನಡೆಸಿದ ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಿದ ನಂತರ ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಿ ದ್ವಿತೀಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ತದನಂತರ ಆಯ್ಕೆಯಾದ ಅಭ್ಯರ್ಥಿಗಳ ಗುಣ ಮತ್ತು ನಡತೆ ಹಾಗೂ ದಾಖಲೆಗಳ ಪರಿಶೀಲನೆ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ನೇಮಕಾತಿ ಆದೇಶಗಳನ್ನು ಹೊರಡಿಸಬೇಕಾಗಿರುತ್ತದೆ. ನೇಮಕಾತಿಯ ಪ್ರಕ್ರಿಯೆಯ ಎಲ್ಲಾ ಹಂತಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಸಮಯಕ್ಕೆ ಅನುಗುಣವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ವಿಳಂಬ ಮಾಡದೆ ಜರೂರಾಗಿ ಪೂರ್ಣಗೊಳಿಸಲಾಗುತ್ತಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗಾಗಿ ಪೊಲೀಸ್ ಸಿಬ್ಬಂದಿಗಳ ಕೊರತೆ ಇದೆಯೇ;</td><td rowspan="2">ಪೊಲೀಸ್ ಇಲಾಖೆಯಲ್ಲಿ ನಿವೃತ್ತಿ, ಮುಂಬಡ್ತಿ, ನಿಧನ, ರಾಜೀನಾಮೆ ಮುಂತಾದ ಕಾರಣಗಳಿಂದ ರಿಕ್ತಸ್ಥಾನಗಳು ಉಂಟಾಗುತ್ತಿದ್ದು, ಈ ರಿಕ್ತಸ್ಥಾನಗಳನ್ನು ಪ್ರತಿ ವರ್ಷವೂ ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ರಿಕ್ತಸ್ಥಾನ ಮತ್ತು ನೇರ ನೇಮಕಾತಿಯ ವಿವರ ಕೆಳಕಂಡಂತಿರುತ್ತದೆ.
ರಿಕ್ತಸ್ಥಾನದ ವಿವರ
<table>
<tr><th colspan="3">ಪಿ.ಎಸ್.ಐ(ಸಿವಿಲ್)</th><th colspan="3">ಪಿ.ಸಿ(ಸಿವಿಲ್)</th></tr>
<tr><th>ಹೈ–ಕ</th><th>ನಾನ್ ಹೈ–ಕ</th><th>ಒಟ್ಟು</th><th>ಹೈ–ಕ</th><th>ನಾನ್ ಹೈ–ಕ</th><th>ಒಟ್ಟು</th></tr>
<tr><td>197</td><td>1356</td><td>1553</td><td>798</td><td>5603</td><td>6401</td></tr>
</table>
ನೇರ ನೇಮಕಾತಿಗೆ ಈಗಾಗಲೇ ಸರ್ಕಾರದ ಅನುಮೋದನೆ ನೀಡಿದ ಹುದ್ದೆಗಳ ವಿವರ
<table>
<tr><th>ಕ್ರ ಸಂ.</th><th>ವರ್ಷ</th><th>ಪಿ.ಎಸ್.ಐ. (ಸಿವಿಲ್)</th><th>ಕಾನ್ಸ್‌ಟೇಬಲ್ (ಸಿವಿಲ್)</th></tr>
<tr><td>1</td><td>2019–20</td><td>512</td><td>2176</td></tr>
<tr><td>2</td><td>2020–21</td><td>556</td><td>2565</td></tr>
<tr><td>3</td><td>2021–22</td><td>406</td><td>–</td></tr>
<tr><td colspan="2">ಒಟ್ಟು</td><td>1474</td><td>4741</td></tr>
</table></td></tr>
<tr><td>ಇ)</td><td>ಹಾಗಿದ್ದಲ್ಲಿ, ಇಲಾಖೆಯು ಎಷ್ಟು ಪಿ.ಎಸ್.ಐ. (ಸಿವಿಲ್) ಹಾಗೂ ಸಿವಿಲ್ ಕಾನ್ಸ್‌ಟೇಬಲ್ ಹುದ್ದೆಗಳ ಕೊರತೆಯನ್ನು ಎದುರಿಸುತ್ತಿದೆ; (ಹೈದ್ರಾಬಾದ್–ಕರ್ನಾಟಕ ಮತ್ತು ನಾನ್ ಹೈದ್ರಾಬಾದ್–ಕರ್ನಾಟಕ ಅನುಗುಣವಾಗಿ ಮಾಹಿತಿ ನೀಡುವುದು)</td></tr>
</table>

<table>
<tr>
<td>ಈ)</td>
<td>2019ರ ಅಕ್ಟೋಬರ್‌ನಲ್ಲಿ ಹೊರಡಿಸಲಾದ 300 ಪಿ.ಎಸ್.ಐ, (ಸಿವಿಲ್) ಹುದ್ದೆಗಳ ಅಧಿಸೂಚನೆಯು ಪೂರ್ಣಗೊಳ್ಳದೇ ಇರಲು ಕಾರಣವೇನು;</td>
<td rowspan="2">ಪಿಎಸ್ಐ (ಸಿವಿಲ್)–300 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು 24.10.2019 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ನೇಮಕಾತಿ ಅಧಿಸೂಚನೆಯನ್ವಯ ಅಭ್ಯರ್ಥಿಗಳಿಂದ ದಿ:16.10.2019 ರಿಂದ 06.11.2019 ರವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ, ಸದರಿ ಅಭ್ಯರ್ಥಿಗಳಿಗೆ ದಿ:20.12.2019 ರಿಂದ 28.01.2020 ರವರೆಗೆ ದೇಹದಾರ್ಢ್ಯತೆ ಪರೀಕ್ಷೆಗಳನ್ನು ನಡೆಸಿ ಪೂರ್ಣಗೊಳಿಸಲಾಗಿರುತ್ತದೆ. ನಂತರ ಸದರಿ ಪರೀಕ್ಷೆಯ ಫಲಿತಾಂಶ ಪ್ರತಿಗಳನ್ನು ಪರಿಶೀಲನೆ ನಡೆಸಿ ಅರ್ಹ ಅಭ್ಯರ್ಥಿಗಳಿಗೆ ದಿ:08.03.2020 ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

ಲಿಖಿತ ಪರೀಕ್ಷೆಯ ಪತ್ರಿಕೆ–2ರ ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ನಂತರ ಪತ್ರಿಕೆ–1ರ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರುಗಳಿಂದ ನಡೆಸಲಾಗುತ್ತಿದ್ದು, ಅದರಂತೆ ಮೌಲ್ಯಮಾಪನ ಕರ್ತವ್ಯಕ್ಕೆ ಉಪನ್ಯಾಸಕರುಗಳನ್ನು ಕಳುಹಿಸುವಂತೆ ಸದರಿ ಇಲಾಖೆಗೆ ಕೋರಲಾಗಿರುತ್ತದೆ. ಆದರೆ ಆ ಸಂದರ್ಭದಲ್ಲಿ ಪಿಯು ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆ ನಡೆಯುತ್ತಿದ್ದ ಕಾರಣ ಶಿಕ್ಷಣ ಇಲಾಖೆಯು ಉಪನ್ಯಾಸಕರುಗಳನ್ನು ಮೌಲ್ಯಮಾಪನ ಕರ್ತವ್ಯಕ್ಕೆ ನಿಯೋಜಿಸಿರುವುದಿಲ್ಲ. ನಂತರ ಕೋವಿಡ್–19 ಕಾರಣದಿಂದ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಾಗಿದ್ದು, ಇದರಿಂದಾಗಿ ಸದರಿ ಸಂದರ್ಭದಲ್ಲಿ ಮೌಲ್ಯಮಾಪನ ಕಾರ್ಯವನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ತದನಂತರವೂ ಪಿಯು ಉಪನ್ಯಾಸಕರು ಮೌಲ್ಯಮಾಪನ ಕರ್ತವ್ಯಕ್ಕೆ ಲಭ್ಯವಾಗದ ಕಾರಣ ಕಾಲೇಜು ಶಿಕ್ಷಣ ಇಲಾಖೆಯ ಪ್ರಾಧ್ಯಾಪಕರುಗಳಿಂದ ಮೌಲ್ಯಮಾಪನ ಕಾರ್ಯವನ್ನು ದಿ: 27.07.2020 ರಿಂದ 09.09.2020 ರವರೆಗೆ ನಡೆಸಿ ಪೂರ್ಣಗೊಳಿಸಿ, ನಂತರ ದಿ:11.09.2020 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ನಿಯಮಾನುಸಾರ ಆಯ್ಕೆಯಾದ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಿ ನಂತರ ದಾಖಲೆಗಳ ಪರಿಶೀಲನೆ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು.</td>
</tr>
<tr>
<td>ಊ)</td>
<td>ಈ ನೇಮಕಾತಿಯ ಫಲಿತಾಂಶವು ಪ್ರಕಟಗೊಳ್ಳುವುದು ಯಾವಾಗ?</td>
</tr>
</table>

ಸಂಖ್ಯೆ: ಒಇ 93 ಪಿಇಐ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 875
2) ಸದಸ್ಯರ ಹೆಸರು : ಶ್ರೀ ಅನ್ನದಾನಿ ಕೆ.ಡಾ: (ಮಳವಳ್ಳಿ)
3) ಉತ್ತರಿಸಬೇಕಾದ ದಿನಾಂಕ : 22.09.2020
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಶೇಕಡಾ 50:50ರ ಅನುಪಾತದ ಸಹಭಾಗಿತ್ವದಲ್ಲಿ ಯಾವ ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಶೇಕಡಾ 50:50ರ ಅನುಪಾತದ ಸಹಬಾಗಿತ್ವದಲ್ಲಿ ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರ ನೂತನ ರೈಲು ಮಾರ್ಗವನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ. ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ರೈಲ್ವೆ ಮಾರ್ಗ ನಿರ್ಮಾಣ ಯೋಜನೆಗಳನ್ನು ಯೋಜನಾವರು - ಕೈಗೆತ್ತಿಕೊಳ್ಳಲಾಗುತ್ತಿದ್ದು, ವಿಧಾನಸಭಾ ಕ್ಷೇತ್ರವಾರು ಕೈಗೆತ್ತಿಕೊಂಡಿರುವುದಿಲ್ಲ.
ಆ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಶೇಕಡಾ 50:50ರ ಅನುಪಾತದ ಸಹಭಾಗಿತ್ವದಲ್ಲಿ ಕೈಗೊಂಡಿರುವ ಹೊಸ ರೈಲು ಮಾರ್ಗಗಳು ಯಾವ ಹಂತದಲ್ಲಿದೆ; ಹೊಸ ರೈಲು ಮಾರ್ಗಗಳ ನಿರ್ಮಾಣದ ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಶೇಕಡಾ 50:50ರ ಅನುಪಾತದ ಸಹಬಾಗಿತ್ವದಲ್ಲಿ ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರ ಹೊಸ ರೈಲು ಮಾರ್ಗವನ್ನು ನಿರ್ಮಿಸಲು ಕೈಗೊಂಡಿದ್ದು, ಸದರಿ ಯೋಜನೆಗಾಗಿ ಕೆ.ಐ.ಎ.ಡಿ.ಬಿ. ಮೂಲಕ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ.

ಸಂಖ್ಯೆ:ಮೂಲಅಇ 117 ರಾರಾಹೆ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 877

2) ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ)

3) ಉತ್ತರಿಸಬೇಕಾದ ದಿನಾಂಕ : 22/09/2020

4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
(ಅ)	ಬೆಂಗಳೂರು ನಗರದ ಕೆಲವು ಭಾಗಗಳ ಸಂಸ್ಕರಿಸಿದ ನೀರಿನಿಂದ ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ನೆಲಮಂಗಲ ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಬೆಂಗಳೂರು ನಗರದ ವೃಷಭಾವತಿ ವ್ಯಾಲಿಯಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯವರು ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ 308 ಎಂ.ಎಲ್.ಡಿ ನೀರನ್ನು ನೀಡಲು ಒಪ್ಪಿದ್ದು ಈ ನೀರನ್ನು ತುಮಕೂರು, ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಗೌರಿಬಿದನೂರು ತಾಲ್ಲೂಕಿನ ಕೆರೆಗಳಿಗೆ ತುಂಬಿಸಲು ವಿವರವಾದ ಯೋಜನಾ ವರದಿಯು (ಡಿ.ಪಿ.ಆರ್) ತಯಾರಿಕೆ ಹಂತದಲ್ಲಿರುತ್ತದೆ. ತಾಲ್ಲೂಕುವಾರು ತುಂಬಿಸುವ ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
(ಆ)	ಹಾಗಿದ್ದಲ್ಲಿ, ಈ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಪ್ರಸ್ತುತ ಡಿ.ಪಿ.ಆರ್ ತಯಾರಿಕೆ ಹಂತದಲ್ಲಿರುತ್ತದೆ.
(ಇ)	ಈ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?	ಡಿ.ಪಿ.ಆರ್ ತಯಾರಿಸಿದ ನಂತರ ಅನುದಾನದ ಲಭ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಪರಿಶೀಲಿಸಲಾಗುವುದು.

ಸಂಖ್ಯೆ: ಸನೀಇ 161 ಎಲ್ ಎ ಕ್ಯೂ 2020 (ಇ)

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 880
2. ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
3. ಉತ್ತರಿಸುವ ದಿನಾಂಕ : 22/09/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಗಾಂಧಿನಗರ ವಿಧಾನಸಭಾ ಕ್ಷೇತ್ರದ ಜಕ್ಕರಾಯನಕೆರೆ ಆಟದ ಮೈದಾನ (ಈ ಹಿಂದಿನ ಹೆಸರು ಪ್ರತಿಭಾ ಆಟದ ಮೈದಾನ) ವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಯಾವ ಕಾರಣಕ್ಕಾಗಿ ಈ ಆಟದ ಮೈದಾನವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿದೆ; (ವಿವರ ನೀಡುವುದು)	ಬೆಂಗಳೂರು ನಗರದಲ್ಲಿ ಮೆಟ್ರೋರೈಲ್ ಸಂಪರ್ಕ ಕಲ್ಪಿಸುವ ಸಲುವಾಗಿ ಬಿ.ಆರ್.ವಿ. ಪೊಲೀಸ್ ಕವಾಯತು ಮೈದಾನವನ್ನು ಬೆಂಗಳೂರು ಮೆಟ್ರೋ ನಿಗಮಕ್ಕೆ ಹಸ್ತಾಂತರಿಸಲಾಗಿದ್ದು, ಈ ಮೈದಾನದ ಬದಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಜಕ್ಕರಾಯನಕೆರೆ ಜಾಗವನ್ನು ಸರ್ಕಾರಿ ಆದೇಶ ಸಂಖ್ಯೆ:ಐಡಿಡಿ/40/ಡಿಐಎ/2002, ದಿನಾಂಕ:26-12-2007 ರಂದು ಪೊಲೀಸ್ ಇಲಾಖೆಗೆ ಹಂಚಿಕೆ ಮಾಡಿರುತ್ತಾರೆ. ಸದರಿ ಸರ್ಕಾರಿ ಆದೇಶದಂತೆ ಕಂದಾಯ ಅಧಿಕಾರಿ, ಗಾಂಧಿನಗರ ವಲಯ, ಬಿ.ಬಿ.ಎಂ.ಪಿ. ಬೆಂಗಳೂರು ರವರು ದಿನಾಂಕ:11-06-2008 ರಂದು ಬೆಂಗಳೂರು ಸಿಟಿ ಹನುಮಂತಪುರ ಗ್ರಾಮದ ಸರ್ವೆ ನಂ.56 ಜಕ್ಕರಾಯನಕೆರೆಯ ಖಾಲಿ ಜಾಗದ ಒಟ್ಟು ಅಳತೆ 21,065 ಚದರ ಮೀಟರ್ ಜಾಗವನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಹಸ್ತಾಂತರಿಸಿರುತ್ತಾರೆ.
ಇ	ಪ್ರಸ್ತುತ ಈ ಆಟದ ಮೈದಾನವು ಯಾರ ವಶದಲ್ಲಿರುತ್ತದೆ; ಮತ್ತು ಯಾವುದಕ್ಕಾಗಿ ಯಾರು ಬಳಕೆ ಮಾಡುತ್ತಿದ್ದಾರೆ? (ವಿವರ ನೀಡುವುದು)	ಪ್ರಸ್ತುತ ಕವಾಯತು ಮೈದಾನವು ಇಲಾಖಾ ವಶದಲ್ಲಿರುತ್ತದೆ. ಪೊಲೀಸ್ ಆಯುಕ್ತರ ಆದೇಶದಂತೆ ಜಕ್ಕರಾಯನಕೆರೆ ಮೈದಾನದಲ್ಲಿ ನಿರುಪಯುಕ್ತ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿರುತ್ತದೆ. ಮಲ್ಲಸಂದ್ರ ಗ್ರಾಮದಲ್ಲಿ 03 ಎಕರೆ ಜಾಗವನ್ನು ನಿರುಪಯುಕ್ತ ವಾಹನಗಳನ್ನು ನಿಲುಗಡೆ ಮಾಡಲು ಮಂಜೂರು ಮಾಡಿದ್ದು, ಅಲ್ಲಿ ಮೂಲಭೂತ ಸೌಕರ್ಯ ಪೂರ್ಣಗೊಂಡ ನಂತರ ಸದರಿ ವಾಹನಗಳನ್ನು ಸ್ಥಳಾಂತರಿಸಿ ಜಕ್ಕರಾಯನಕೆರೆ ಮೈದಾನವನ್ನು ಕವಾಯತಿಗಾಗಿ ಉಪಯೋಗಿಸಿಕೊಳ್ಳಲಾಗುವುದು.

ಸಂಖ್ಯೆ:ಹೆಚ್‌ಡಿ 78 ಪಿಐಎಲ್ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	881
02. ಸದಸ್ಯರ ಹೆಸರು	:	ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ)
03. ಉತ್ತರಿಸುವ ದಿನಾಂಕ	:	22.09.2020
04. ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಗೃಹ ಇಲಾಖೆಯ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಮಾದಕ ದ್ರವ್ಯ ನಿಗ್ರಹ ದಳದಲ್ಲಿರುವ ಒಟ್ಟು ಸಿಬ್ಬಂದಿ ಸಂಖ್ಯೆ ಎಷ್ಟು; ಬೃಹತ್ ಬೆಂಗಳೂರು ನಗರಕ್ಕೆ ಈಗಿರುವ ಅಧಿಕಾರಿ ಮತ್ತು ಸಿಬ್ಬಂದಿ ಸಂಖ್ಯೆ ಕಾರ್ಯಗತಗೊಳಿಸುವಷ್ಟು ಹಾಗೂ ಅವಶ್ಯಕತೆಗೆ ಅನುಗುಣವಾಗಿದೆಯೇ; (ವಿವರಗಳನ್ನು ನೀಡುವುದು)	ಬೆಂಗಳೂರು ನಗರದ ಅಪರಾಧ ವಿಭಾಗದ ಸಿಸಿಬಿ ವಿಭಾಗದಲ್ಲಿರುವ ಮಾದಕ ದ್ರವ್ಯ ನಿಗ್ರಹ ದಳದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಬಲಾಬಲ (ಓಓಡಿ ಸಿಬ್ಬಂದಿ ಸೇರಿದಂತೆ) ಕೆಳಕಂಡಂತಿದೆ. (see table below) ಇತ್ತೀಚೆಗೆ ಸಿಸಿಬಿ ವಿಭಾಗದಡಿಯಲ್ಲಿ ಪತ್ತೆ ಹಚ್ಚುವ ಪ್ರಕರಣಗಳು ಹೆಚ್ಚುತ್ತಿದ್ದು, ಸಿಸಿಬಿ ವಿಭಾಗದಲ್ಲಿರುವ ಸಿಬ್ಬಂದಿ ಬಲವನ್ನು ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.
ಆ)	ಡಾರ್ಕ್‌ವೆಬ್/ಡಾರ್ಕ್‌ನೆಟ್ ಮೂಲಕ ಮಾದಕ ದ್ರವ್ಯ ಖರೀದಿಸುವವರ ಮೇಲೆ ನಿಗಾ ಇಡುವ ನುರಿತ ಐ.ಟಿ. ತಜ್ಞರ ಸೇವೆಯನ್ನು ಪೊಲೀಸ್ ಇಲಾಖೆ ಪಡೆದುಕೊಂಡಿದೆಯೇ? (ವಿವರಗಳನ್ನು ನೀಡುವುದು)	ಡಾರ್ಕ್‌ವೆಬ್/ಡಾರ್ಕ್‌ನೆಟ್ ಮೂಲಕ ಮಾದಕ ದ್ರವ್ಯ ಖರೀದಿಸುವವರ ಮೇಲೆ ನಿಗಾ ಇಡಲು ಪೊಲೀಸ್ ಅಧಿಕಾರಿ/ಸಿಬ್ಬಂದಿಯವರಿಗೆ ಉನ್ನತ ಮಟ್ಟದ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ.

ಹುದ್ದೆ	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ / ಸಿಬ್ಬಂದಿ	ಓಓಡಿ ಅಧಿಕಾರಿ/ಸಿಬ್ಬಂದಿ	ಒಟ್ಟು
ಎಸಿಪಿ	01	-	01
ಪಿಐ	04	-	04
ಪಿಎಸ್‌ಐ	01	-	01
ಎಎಸ್‌ಐ	01	-	01
ಹೆಚ್‌ಸಿ	07	05	12
ಪಿಸಿ	02	03	05
ಒಟ್ಟು	16	08	24

HD/62/PPS/2020-PS_B

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1253
2) ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
3) ಉತ್ತರಿಸಬೇಕಾದ ದಿನಾಂಕ : 22/09/2020
4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	2020-21ನೇ ಸಾಲಿನ ಲೆಕ್ಕಶೀರ್ಷಿಕೆ 4702 ನಬಾರ್ಡ್ ಆರ್.ಐ.ಡಿ.ಎಫ್ 26ರ ಅಡಿಯಲ್ಲಿ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕಾಮಗಾರಿಗಳ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇನ್ನೂ ಮಂಜೂರಾಗದಿರಲು ಕಾರಣವೇನು;	2020-21ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್ 26ರ ಟ್ರ್ಯಾಂಚ್‌ರಡಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಲಾಗಿರುವ ಅನುದಾನದ ಮಿತಿಯೊಳಗೆ ರಾಜ್ಯದ ವಿವಿಧ ಭಾಗಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಗಳ ಪ್ರಸ್ತಾವನೆಯನ್ನು ಸಚಿವ ಸಂಪುಟ ಉಪಸಮಿತಿಯ ಅನುಮೋದನೆಯೊಂದಿಗೆ ನಬಾರ್ಡ್ ಸಂಸ್ಥೆಯ ಸಾಲಸೌಲಭ್ಯ ಮಂಜೂರಾತಿಗಾಗಿ ಕಳುಹಿಸಲಾಗಿರುತ್ತದೆ. ನಬಾರ್ಡ್ ಸಂಸ್ಥೆಯು ಹಂತ ಹಂತವಾಗಿ ಕಾಮಗಾರಿಗಳಿಗೆ ಅನುಮೋದನೆ ನೀಡುತ್ತಿದ್ದು, ಈಗಾಗಲೇ ಮೊದಲ ಹಂತದಲ್ಲಿ ರೂ. 9081.05 ಲಕ್ಷಗಳಲ್ಲಿ ಅಂದಾಜು ಮೊತ್ತದ 75 ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ಹಗರಿ ಬೊಮ್ಮನಹಳ್ಳಿಯು ಸೇರಿದಂತೆ ಸಣ್ಣ ನೀರಾವರಿ ಇಲಾಖೆಯ ಬಾಕಿ ಇರುವ ಇತರೆ ಪ್ರಸ್ತಾವನೆಗಳಿಗೆ ಮುಂದಿನ ಹಂತದಲ್ಲಿ ನಬಾರ್ಡ್ ಸಾಲ ಸೌಲಭ್ಯ ಮಂಜೂರಾತಿ ನಿರೀಕ್ಷಿಸಲಾಗಿದೆ.
ಆ	ಸದರಿ ಕಾಮಗಾರಿಯು ಅತ್ಯಂತ ಅವಶ್ಯಕವಾಗಿದ್ದು ಯಾವಾಗ ಮಂಜೂರು ಮಾಡಲಾಗುವುದು;	ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.
ಇ	ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕು ಮರಬ್ಬಿಹಾಳು ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮರಬ್ಬಿಹಾಳ್ ಏತ ನೀರಾವರಿ ಯೋಜನೆಯು ತುಂಗಭದ್ರಾ ಮಂಡಳಿ ವ್ಯಾಪ್ತಿಯಡಿ ಬರುವುದರಿಂದ ಸದರಿ ಯೋಜನೆಗೆ ಅವಶ್ಯಕವಾಗಿರುವ 0.40 ಟಿ.ಎಂ.ಸಿ. ನೀರನ್ನು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬಳ್ಳಾರಿ ವಿಭಾಗ ವ್ಯಾಪ್ತಿಯಲ್ಲಿ ಶಾಶ್ವತವಾಗಿ ನಿಷ್ಕ್ರಿಯಗೊಂಡಿರುವ 4 ಏತ ನೀರಾವರಿ ಯೋಜನೆಗಳಡಿ ಉಳಿತಾಯವಾಗುತ್ತಿರುವ ನೀರಿನ ಪ್ರಮಾಣದಲ್ಲಿ ಬಳಸಿಕೊಳ್ಳಲು ತುಂಗಭದ್ರಾ ಮಂಡಳಿಯಿಂದ ಅನುಮತಿ ದೊರಕಿಸಿಕೊಡುವಂತೆ ಮುಖ್ಯ ಇಂಜಿನೀಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇವರನ್ನು ಕೋರಲಾಗಿತ್ತು. ಅದರಂತೆ, ಮುಖ್ಯ ಇಂಜಿನೀಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇವರು ದಿನಾಂಕ:21.03.2020 ರಂದು ಸದರಿ ಪ್ರಸ್ತಾವನೆಯನ್ನು ತುಂಗಭದಾ ಮಂಡಳಿಯ ಮುಂದೆ

		ಮಂಡಿಸಲು ವಿಷಯ ಸೂಚಿಯನ್ನು ತಯಾರಿಸಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ಈ ಮಧ್ಯೆ ಸರ್ಕಾರದ ಪತ್ರ ಸಂಖ್ಯೆ:MID/539/MISU/2020, ದಿನಾಂಕ:29.08.2020ರನ್ವಯ ಸದರಿ ಯೋಜನೆಗೆ ಅವಶ್ಯಕವಾಗಿರುವ 0.40 ಟಿ.ಎಂ.ಸಿ. ನೀರನ್ನು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬಳ್ಳಾರಿ ವಿಭಾಗ ವ್ಯಾಪ್ತಿಯಲ್ಲಿ ಶಾಶ್ವತವಾಗಿ ನಿಷ್ಕ್ರಿಯಗೊಂಡಿರುವ 4 ಏತ ನೀರಾವರಿ ಯೋಜನೆಗಳಡಿ ಉಳಿತಾಯವಾಗುತ್ತಿರುವ ನೀರಿನ ಪ್ರಮಾಣದಲ್ಲಿ ಬಳಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ರವರು ಸದರಿ ಮಾಹಿತಿಯನ್ನು ಮುಖ್ಯ ಇಂಜಿನೀಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇವರಿಗೆ ಒದಗಿಸಿ, ತುಂಗಭದ್ರಾ ಮಂಡಳಿಯ ಅನುಮೋದನೆ ದೊರಕಿಸಿಕೊಡುವಂತೆ ಕೋರಿರುತ್ತಾರೆ.
ಈ	ಈ ಯೋಜನೆಯ ಅನುಷ್ಠಾನದಿಂದ ಅಂದಾಜು 2100 ಎಕರೆ ಜಮೀನು ನೀರಾವರಿಯಾಗಿ ಪರಿವರ್ತನೆ ಆಗುತ್ತಿದ್ದು, ಈ ವಿಳಂಬತೆಗೆ ಕಾರಣವೇನು;	ತುಂಗಭದ್ರಾ ಮಂಡಳಿಯಿಂದ ನೀರಿನ ಅನುಮತಿ ದೊರೆತ ನಂತರ ಯೋಜನೆಯನ್ನು ಕೈಗೊಳ್ಳಲು ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.
ಉ	ತುಂಗಭದ್ರಾ ನದಿಯಿಂದ ನೀರು ಪಡೆಯಲು ಅನುಮತಿ ದೊರಕಿದೆಯೇ; ದೊರಕಿದ್ದಲ್ಲಿ, ಸಮಗ್ರ ಯೋಜನಾ ವರದಿ ಯೋಜನೆಯನ್ನು ಯಾವಾಗ ಜಾರಿಗೊಳಿಸಲಾಗುವುದು;	ತುಂಗಭದ್ರಾ ಮಂಡಳಿಯಿಂದ ನೀರಿನ ಅನುಮತಿ ದೊರೆತಿರುವುದಿಲ್ಲ.
ಊ	ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ತಂಬ್ರಹಳ್ಳಿ ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಏತ ನೀರಾವರಿ ಯೋಜನೆ ನಿರ್ಮಾಣಕ್ಕಾಗಿ ರೂ.2450.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆ ಮೇರೆಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಸನೀಇ 162 ಎಲ್ ಎ ಕ್ಯೂ 2020(ಇ)

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 154
2. ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ
3. ಉತ್ತರಿಸಬೇಕಾದ ದಿನಾಂಕ : 22-09-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ	2018 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಉಂಟಾದ ಜಲಪ್ರಳಯದಿಂದ ಹಾರಂಗಿ ಹಿನ್ನೀರಿನಲ್ಲಿ ಮತ್ತು ಮಾದಾಪುರ ಹಟ್ಟಿಹೊಳೆ ಹಾಗೂ ಕಾವೇರಿ ಹೊಳೆಯಲ್ಲಿ ತುಂಬಿರುವ ಹೂಳನ್ನು ತೆಗೆಯಲು ಅನುದಾನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	2018 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಉಂಟಾದ ಜಲಪ್ರಳಯದಿಂದ ಹಾರಂಗಿ ಹಿನ್ನೀರಿನಲ್ಲಿ ಮತ್ತು ಮಾದಾಪುರ ಹಟ್ಟಿಹೊಳೆ ಹಾಗೂ ಕಾವೇರಿ ಹೊಳೆಯಲ್ಲಿ ತುಂಬಿರುವ ಹೂಳನ್ನು ತೆಗೆಯಲು ಮತ್ತು ಹಾರಂಗಿ ಜಲಾಶಯಕ್ಕೆ ಹೂಳು ತುಂಬುವುದನ್ನು ತಡೆಗಟ್ಟುವ ಸಲುವಾಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾತ್ಮಕ ಕಾಮಗಾರಿಯ ರೂ.130.00 ಕೋಟಿ ಮೊತ್ತದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ. ಕಾವೇರಿ ಹೊಳೆಯಲ್ಲಿ ತುಂಬಿರುವ ಹೂಳನ್ನು ತೆಗೆಯಲು 2019-20 ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರು ದಿನಾಂಕ:30-4-2020 ಲ್ಲಿ NDRF ಲೆಕ್ಕ ಶೀರ್ಷಿಕೆಯಡಿ Weeds clearance along river Cauvery near Koppa bridge and Thapovana in Kodagu Dist ಕಾಮಗಾರಿಗೆ ರೂ.88.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ನದಿಯಲ್ಲಿ ಪ್ರವಾಹ ಇರುವ ಕಾರಣ ಮಳೆಗಾಲ ಮುಗಿದ ಕೂಡಲೇ ಕಾಮಗಾರಿ ಪೂರ್ಣಗೊಳಿಸಲಾಗುವುದು.
ಆ	ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕೊಡ್ಲಿಪೇಟೆ ಹೋಬಳಿಯಲ್ಲಿ ಹೇಮಾವತಿ ಹಿನ್ನೀರಿನಿಂದ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರದ ಅನುದಾನವನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು(ವಿವರ ನೀಡುವುದು)	ಹೇಮಾವತಿ ಯೋಜನಾ ವಲಯ ಗೊರೂರು, ವ್ಯಾಪ್ತಿಯಡಿ ಬರುವ ಸೋಮವಾರಪೇಟೆ ತಾಲ್ಲೂಕಿನ ಕೊಡ್ಲಿಪೇಟೆ ಹೋಬಳಿಯ ವ್ಯಾಪ್ತಿಗೆ ಬರುವ 25 ಗ್ರಾಮಗಳ ರೈತರ ಸುಮಾರು 1865 ಎಕರೆ ಪ್ರದೇಶದ ಜಮೀನು ಹೇಮಾವತಿ ಹಿನ್ನೀರಿನಿಂದ ಮುಳುಗಡೆಗೊಂಡ ಕಾರಣ ಅ ರೈತರಿಗೆ ಪರಿಹಾರವಾಗಿ ಬದಲಿ ಜಮೀನನ್ನು ನೀಡಲಾಗಿರುತ್ತದೆ. ಹಾಗೆಯೇ ಆ 25 ಗ್ರಾಮಗಳ ನಾಗರೀಕರಿಗೆ ಗ್ರಾಮಗಳಲ್ಲಿನ ಅವಶ್ಯಕ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಚರಂಡಿ ನಿರ್ಮಾಣ, ಸಮುದಾಯ ಭವನ, ದಾರ್ಮಿಕ ಪೂಜಾ ಕೇಂದ್ರಗಳ ನಿರ್ಮಾಣ ಹಾಗೂ ಇನ್ನಿತರೆ ಅವಶ್ಯಕ ಕಾಮಗಾರಿಗಳನ್ನು 2010-11ನೇ ಸಾಲಿನಿಂದಲೇ

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
		ಕಲ್ಪಿಸಲಾಗುತ್ತಿದ್ದು 2018-19ನೇ ಸಾಲಿನ ವರೆಗೆ ಒಟ್ಟು ರೂ.83.45 ಕೋಟಿಗಳ ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. 2019-20 ನೇ ಸಾಲಿನಲ್ಲಿ ಕೊಡ್ಲಿಪೇಟೆ ಹೋಬಳಿಯಲ್ಲಿನ 25 ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕಾಮಗಾರಿಗಳಿಗಾಗಿ ಒಟ್ಟಾರೆಯಾಗಿ ರೂ.34.53 ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು, ಅದರಲ್ಲಿ ರೂ.16.53 ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಉಳಿದ ರೂ.18.00 ಕೋಟಿ ಮೊತ್ತದ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ:ಜಸಂಇ 104 ಎನ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	365
ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	22-09-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಬಾರ್/ಪಬ್ ಮತ್ತು ಮದ್ಯ ಮಾರಾಟ ವ್ಯವಸ್ಥೆಗಳ ಮೂಲಕ ಕಳೆದ ಎರಡು ವರ್ಷಗಳಲ್ಲಿ ಸರ್ಕಾರಕ್ಕೆ ಸಂದಾಯವಾಗಿರುವ ಹಣದ ಮೊತ್ತವೆಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು)	ಅಬಕಾರಿ ಇಲಾಖೆಯು 2018-19ನೇ ಸಾಲಿನಲ್ಲಿ ಒಟ್ಟು ರೂ.19,943.93 ಕೋಟಿಗಳು ಮತ್ತು 2019-20ನೇ ಸಾಲಿನಲ್ಲಿ ರೂ.21,583.95 ಕೋಟಿಗಳ ಅಬಕಾರಿ ರಾಜಸ್ವವನ್ನು ಎಲ್ಲಾ ಮೂಲಗಳಿಂದ ಸಂಗ್ರಹಿಸಲಾಗಿರುತ್ತದೆ. ಜಿಲ್ಲಾವಾರು ಸಂಗ್ರಹವಾದ ಅಬಕಾರಿ ರಾಜಸ್ವದ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.
ಆ	ಬೆಂಗಳೂರು ಮಹಾನಗರ ಪ್ರದೇಶಗಳಲ್ಲಿರುವ ಬಾರ್/ಪಬ್‌ಗಳು ಹಾಗೂ ಮದ್ಯ ಮಾರಾಟ ಪರವಾನಿಗೆಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ನೂತನವಾಗಿ ಎಷ್ಟು ಪರವಾನಿಗೆಗಳನ್ನು ಈ ಅವಧಿಯಲ್ಲಿ ನೀಡಲಾಗಿದೆ. (ವಿವರ ನೀಡುವುದು)	ಬೆಂಗಳೂರು ಮಹಾನಗರ ಪ್ರದೇಶಗಳಲ್ಲಿರುವ ಬಾರ್/ ಪಬ್‌ಗಳು ಹಾಗೂ ಮದ್ಯ ಮಾರಾಟ ಪರವಾನಿಗೆಗಳ ವಿವರ ಕೆಳಕಂಡಂತಿದೆ; **ವರ್ಷ** | **ಬಾರ್/ಪಬ್‌ಗಳು ಹಾಗೂ ಮದ್ಯ ಮಾರಾಟ ಪರವಾನಿಗೆಗಳ ಒಟ್ಟು ಸಂಖ್ಯೆ** | **ನೂತನವಾಗಿ ನೀಡಿರುವ ಪರವಾನಿಗೆಗಳ ಸಂಖ್ಯೆ** 2018-19 | 2767 | 69 2019-20 | 2844 | 75 ಮಾಹಿತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.
ಇ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮತ್ತು ನಿಯಮ ಬಾಹಿರವಾಗಿ ನಡೆಯುತ್ತಿರುವ ಎಷ್ಟು ಬಾರ್ ಮತ್ತು ಪಬ್‌ಗಳು ಹಾಗೂ ಮದ್ಯದಂಗಡಿಗಳನ್ನು ಗುರುತಿಸಲಾಗಿದೆ. ಅಂತಹವರ ವಿರುದ್ಧ ಸರ್ಕಾರಕ್ಕೆ ಕೈಗೊಂಡ ಕಾನೂನು ಕ್ರಮಗಳೇನು?	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮತ್ತು ನಿಯಮಬಾಹಿರವಾಗಿ ಯಾವುದೇ ಬಾರ್ ಮತ್ತು ಪಬ್‌ಗಳು ಹಾಗೂ ಮದ್ಯದಂಗಡಿಗಳು ಕಾರ್ಯನಿರ್ವಹಿಸುತ್ತಿಲ್ಲ.

ಆಇ 64 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು

ಅನುಬಂಧ –1

2018–19 ಮತ್ತು 2019–20ನೇ ಸಾಲುಗಳಲ್ಲಿ ಸಂಗ್ರಹವಾಗಿರುವ ಜಿಲ್ಲಾವಾರು ಅಬಕಾರಿ ರಾಜಸ್ವದ ವಿವರ

ಕ್ರ. ಸಂ	ಜಿಲ್ಲೆಗಳು	2018-19	2019-20
ಬೆಂಗಳೂರು ವಿಭಾಗ			
1	ಬೆಂಗಳೂರು ನಗರ ಜಿಲ್ಲೆ	8787.14	7339.27
2	ಬೆಂಗಳೂರು ಗ್ರಾಮಾಂತರ	4328.72	4722.15
3	ಚಿಕ್ಕಬಳ್ಳಾಪುರ	12.44	12.60
4	ಕೋಲಾರ	15.82	16.97
5	ರಾಮನಗರ	17.64	378.92
6	ತುಮಕೂರು	253.22	367.45
ಒಟ್ಟು		**13414.98**	**12837.35**
ಬೆಳಗಾವಿ ವಿಭಾಗ			
1	ಬಾಗಲಕೋಟೆ	20.14	21.26
2	ಬೆಳಗಾವಿ	238.48	222.74
3	ವಿಜಯಪುರ	21.47	21.01
4	ಧಾರವಾಡ	1187.17	1132.46
5	ಹಾವೇರಿ	9.48	10.72
ಒಟ್ಟು		**1476.74**	**1408.20**
ಕಲಬುರಗಿ ವಿಭಾಗ			
1	ಬೀದರ್	17.36	16.14
2	ಕಲಬುರಗಿ	1265.43	1184.30
3	ರಾಯಚೂರು	11.36	12.55
4	ಯಾದಗಿರಿ	5.77	5.94
ಒಟ್ಟು		**1299.92**	**1218.92**
ಹೊಸಪೇಟೆ ವಿಭಾಗ			
1	ಬಳ್ಳಾರಿ	18.23	1173.38
2	ಚಿತ್ರದುರ್ಗ	14.37	15.90
3	ದಾವಣಗೆರೆ	946.45	15.97
4	ಗದಗ	8.75	8.37
5	ಕೊಪ್ಪಳ	7.78	9.69
ಒಟ್ಟು		**995.58**	**1223.32**

ಮಂಗಳೂರು ವಿಭಾಗ			
1	ದಕ್ಷಿಣ ಕನ್ನಡ	290.05	337.98
2	ಕೊಡಗು	11.59	14.17
3	ಶಿವಮೊಗ್ಗ	17.77	24.14
4	ಉಡುಪಿ	239.29	218.24
5	ಉತ್ತರ ಕನ್ನಡ	9.50	9.94
ಒಟ್ಟು		**568.20**	**604.47**
ಮೈಸೂರು ವಿಭಾಗ			
1	ಚಾಮರಾಜನಗರ	8.32	6.97
2	ಚಿಕ್ಕಮಗಳೂರು	12.55	13.52
3	ಹಾಸನ	14.48	1768.98
4	ಮಂಡ್ಯ	14.62	15.06
5	ಮೈಸೂರು	2138.54	2487.16
ಒಟ್ಟು		**2188.51**	**4291.68**
ರಾಜ್ಯದ ಒಟ್ಟು		**19943.93**	**21583.95**

ಅನುಬಂಧ–2

ಕ್ರ.ಸಂ.	ವರ್ಷಗಳು	ಬಿ.ಬಿ.ಎಂ.ಪಿ.ವ್ಯಾಪ್ತಿಯಲ್ಲಿರುವ ಬಾರ್/ಪಬ್‌ಗಳು ಮತ್ತು ಮದ್ಯ ಮಾರಾಟ ಪರವಾನಿಗೆಗಳ ಒಟ್ಟು ಸಂಖ್ಯೆ		ನೂತನವಾಗಿ ನೀಡಿರುವ ಪರವಾನಗಿಗಳ ಸಂಖ್ಯೆ	
1.	2018–19	ಸಿ.ಎಲ್.–2	731	ಸಿ.ಎಲ್.–4	0
		ಸಿ.ಎಲ್.–4	68	ಸಿ.ಎಲ್.–6(ಎ)	1
		ಸಿ.ಎಲ್.–6(ಎ)	50	ಸಿ.ಎಲ್.–7	17
		ಸಿ.ಎಲ್.–7	168	ಸಿ.ಎಲ್.–7(ಎ)	0
		ಸಿ.ಎಲ್. 7(ಎ)	0	ಸಿ.ಎಲ್.–7(©)	0
		ಸಿ.ಎಲ್.–7(ಬಿ)	0	ಸಿ.ಎಲ್.–11 (ಸಿ)	5
		ಸಿ.ಎಲ್.–8	10	ಸಿ.ಎಲ್.–8	0
		ಸಿ.ಎಲ್.–8(ಎ)	1	ಸಿ.ಎಲ್.–8(ಎ)	0
		ಸಿ.ಎಲ್.–9	1204	ಇತರೆ ಸನ್ನದಿಗೆ ಹೊಂದಿಕೊಂಡಂತೆ ಇರುವ ಆರ್.ವಿ.ಬಿ.	46
		ಸಿ.ಎಲ್.–11 (ಸಿ)	36	ಒಟ್ಟು	**69**
		ಇತರೆ ಸನ್ನದಿಗೆ ಹೊಂದಿಕೊಂಡಂತೆ ಇರುವ ಆರ್.ವಿ.ಬಿ.	385		
		ಸ್ವತಂತ್ರ ಆರ್.ವಿ.ಬಿ	114		
		ಒಟ್ಟು	**2767**		

2.	2019–20	ಸಿ.ಎಲ್.–2	748	ಸಿ.ಎಲ್.–4	1
		ಸಿ.ಎಲ್.–4	71	ಸಿ.ಎಲ್.–6(ಎ)	2
		ಸಿ.ಎಲ್.–6(ಎ)	58	ಸಿ.ಎಲ್.–7	53
		ಸಿ.ಎಲ್.–7	216	ಸಿ.ಎಲ್.–7(ಎ)	0
		ಸಿ.ಎಲ್.–7(ಎ)	0	ಸಿ.ಎಲ್.–7(ಬಿ)	0
		ಸಿ.ಎಲ್.–7(ಬಿ)	0	ಸಿ.ಎಲ್.–11 (ಸಿ)	3
		ಸಿ.ಎಲ್.–8	10	ಸಿ.ಎಲ್.–8	0
		ಸಿ.ಎಲ್.–8(ಎ)	1	ಸಿ.ಎಲ್.–8(ಎ)	0
		ಸಿ.ಎಲ್.–9	1232	ಇತರೆ ಸನ್ನದಿಗೆ ಹೊಂದಿಕೊಂಡಂತೆ ಇರುವ ಆರ್.ವಿ.ಬಿ.	16
		ಸಿ.ಎಲ್.–11 (ಸಿ)	42	ಒಟ್ಟು	75
		ಇತರೆ ಸನ್ನದಿಗೆ ಹೊಂದಿಕೊಂಡಂತೆ ಇರುವ ಆರ್.ವಿ.ಬಿ.	411		
		ಸ್ವತಂತ್ರ ಆರ್.ವಿ.ಬಿ	55		
		ಒಟ್ಟು	2844		

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	365
ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	22-09-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಬಾರ್/ಪಬ್ ಮತ್ತು ಮದ್ಯ ಮಾರಾಟ ವ್ಯವಸ್ಥೆಗಳ ಮೂಲಕ ಕಳೆದ ಎರಡು ವರ್ಷಗಳಲ್ಲಿ ಸರ್ಕಾರಕ್ಕೆ ಸಂದಾಯವಾಗಿರುವ ಹಣದ ಮೊತ್ತವೆಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು)	ಅಬಕಾರಿ ಇಲಾಖೆಯು 2018-19ನೇ ಸಾಲಿನಲ್ಲಿ ಒಟ್ಟು ರೂ.19,943.93 ಕೋಟಿಗಳು ಮತ್ತು 2019-20ನೇ ಸಾಲಿನಲ್ಲಿ ರೂ.21,583.95 ಕೋಟಿಗಳ ಅಬಕಾರಿ ರಾಜಸ್ವವನ್ನು ಎಲ್ಲಾ ಮೂಲಗಳಿಂದ ಸಂಗ್ರಹಿಸಲಾಗಿರುತ್ತದೆ. ಜಿಲ್ಲಾವಾರು ಸಂಗ್ರಹವಾದ ಅಬಕಾರಿ ರಾಜಸ್ವದ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.
ಆ	ಬೆಂಗಳೂರು ಮಹಾನಗರ ಪ್ರದೇಶಗಳಲ್ಲಿರುವ ಬಾರ್/ಪಬ್‌ಗಳು ಹಾಗೂ ಮದ್ಯ ಮಾರಾಟ ಪರವಾನಿಗೆಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ನೂತನವಾಗಿ ಎಷ್ಟು ಪರವಾನಿಗೆಗಳನ್ನು ಈ ಅವಧಿಯಲ್ಲಿ ನೀಡಲಾಗಿದೆ. (ವಿವರ ನೀಡುವುದು)	ಬೆಂಗಳೂರು ಮಹಾನಗರ ಪ್ರದೇಶಗಳಲ್ಲಿರುವ ಬಾರ್/ ಪಬ್‌ಗಳು ಹಾಗೂ ಮದ್ಯ ಮಾರಾಟ ಪರವಾನಿಗೆಗಳ ವಿವರ ಕೆಳಕಂಡಂತಿದೆ; **ವರ್ಷ** | **ಬಾರ್/ಪಬ್‌ಗಳು ಹಾಗೂ ಮದ್ಯ ಮಾರಾಟ ಪರವಾನಿಗೆಗಳ ಒಟ್ಟು ಸಂಖ್ಯೆ** | **ನೂತನವಾಗಿ ನೀಡಿರುವ ಪರವಾನಿಗೆಗಳ ಸಂಖ್ಯೆ** 2018-19 | 2767 | 69 2019-20 | 2844 | 75 ಮಾಹಿತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.
ಇ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮತ್ತು ನಿಯಮ ಬಾಹಿರವಾಗಿ ನಡೆಯುತ್ತಿರುವ ಎಷ್ಟು ಬಾರ್ ಮತ್ತು ಪಬ್‌ಗಳು ಹಾಗೂ ಮದ್ಯದಂಗಡಿಗಳನ್ನು ಗುರುತಿಸಲಾಗಿದೆ. ಅಂತಹವರ ವಿರುದ್ಧ ಸರ್ಕಾರಕ್ಕೆ ಕೈಗೊಂಡ ಕಾನೂನು ಕ್ರಮಗಳೇನು?	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮತ್ತು ನಿಯಮಬಾಹಿರವಾಗಿ ಯಾವುದೇ ಬಾರ್ ಮತ್ತು ಪಬ್‌ಗಳು ಹಾಗೂ ಮದ್ಯದಂಗಡಿಗಳು ಕಾರ್ಯನಿರ್ವಹಿಸುತ್ತಿಲ್ಲ.

ಆಇ 64 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು

ಅನುಬಂಧ –1

2018–19 ಮತ್ತು 2019–20ನೇ ಸಾಲುಗಳಲ್ಲಿ ಸಂಗ್ರಹವಾಗಿರುವ ಜಿಲ್ಲಾವಾರು ಅಬಕಾರಿ ರಾಜಸ್ವದ ವಿವರ

ಕ್ರ. ಸಂ	ಜಿಲ್ಲೆಗಳು	2018-19	2019-20
ಬೆಂಗಳೂರು ವಿಭಾಗ			
1	ಬೆಂಗಳೂರು ನಗರ ಜಿಲ್ಲೆ	8787.14	7339.27
2	ಬೆಂಗಳೂರು ಗ್ರಾಮಾಂತರ	4328.72	4722.15
3	ಚಿಕ್ಕಬಳ್ಳಾಪುರ	12.44	12.60
4	ಕೋಲಾರ	15.82	16.97
5	ರಾಮನಗರ	17.64	378.92
6	ತುಮಕೂರು	253.22	367.45
ಒಟ್ಟು		**13414.98**	**12837.35**
ಬೆಳಗಾವಿ ವಿಭಾಗ			
1	ಬಾಗಲಕೋಟೆ	20.14	21.26
2	ಬೆಳಗಾವಿ	238.48	222.74
3	ವಿಜಯಪುರ	21.47	21.01
4	ಧಾರವಾಡ	1187.17	1132.46
5	ಹಾವೇರಿ	9.48	10.72
ಒಟ್ಟು		**1476.74**	**1408.20**
ಕಲಬುರಗಿ ವಿಭಾಗ			
1	ಬೀದರ್	17.36	16.14
2	ಕಲಬುರಗಿ	1265.43	1184.30
3	ರಾಯಚೂರು	11.36	12.55
4	ಯಾದಗಿರಿ	5.77	5.94
ಒಟ್ಟು		**1299.92**	**1218.92**
ಹೊಸಪೇಟೆ ವಿಭಾಗ			
1	ಬಳ್ಳಾರಿ	18.23	1173.38
2	ಚಿತ್ರದುರ್ಗ	14.37	15.90
3	ದಾವಣಗೆರೆ	946.45	15.97
4	ಗದಗ	8.75	8.37
5	ಕೊಪ್ಪಳ	7.78	9.69
ಒಟ್ಟು		**995.58**	**1223.32**

ಮಂಗಳೂರು ವಿಭಾಗ			
1	ದಕ್ಷಿಣ ಕನ್ನಡ	290.05	337.98
2	ಕೊಡಗು	11.59	14.17
3	ಶಿವಮೊಗ್ಗ	17.77	24.14
4	ಉಡುಪಿ	239.29	218.24
5	ಉತ್ತರ ಕನ್ನಡ	9.50	9.94
ಒಟ್ಟು		**568.20**	**604.47**
ಮೈಸೂರು ವಿಭಾಗ			
1	ಚಾಮರಾಜನಗರ	8.32	6.97
2	ಚಿಕ್ಕಮಗಳೂರು	12.55	13.52
3	ಹಾಸನ	14.48	1768.98
4	ಮಂಡ್ಯ	14.62	15.06
5	ಮೈಸೂರು	2138.54	2487.16
ಒಟ್ಟು		**2188.51**	**4291.68**
ರಾಜ್ಯದ ಒಟ್ಟು		**19943.93**	**21583.95**

ಅನುಬಂಧ-2

ಕ್ರ.ಸಂ.	ವರ್ಷಗಳು	ಬಿ.ಬಿ.ಎಂ.ಪಿ.ವ್ಯಾಪ್ತಿಯಲ್ಲಿರುವ ಬಾರ್/ಪಬ್‌ಗಳು ಮತ್ತು ಮದ್ಯ ಮಾರಾಟ ಪರವಾನಿಗೆಗಳ ಒಟ್ಟು ಸಂಖ್ಯೆ		ನೂತನವಾಗಿ ನೀಡಿರುವ ಪರವಾನಗಿಗಳ ಸಂಖ್ಯೆ	
1.	2018–19	ಸಿ.ಎಲ್.–2	731	ಸಿ.ಎಲ್.–4	0
		ಸಿ.ಎಲ್.–4	68	ಸಿ.ಎಲ್.–6(ಎ)	1
		ಸಿ.ಎಲ್.–6(ಎ)	50	ಸಿ.ಎಲ್.–7	17
		ಸಿ.ಎಲ್.–7	168	ಸಿ.ಎಲ್.–7(ಎ)	0
		ಸಿ.ಎಲ್. 7(ಎ)	0	ಸಿ.ಎಲ್.–7(©)	0
		ಸಿ.ಎಲ್.–7(ಬಿ)	0	ಸಿ.ಎಲ್.–11 (ಸಿ)	5
		ಸಿ.ಎಲ್.–8	10	ಸಿ.ಎಲ್.–8	0
		ಸಿ.ಎಲ್.–8(ಎ)	1	ಸಿ.ಎಲ್.–8(ಎ)	0
		ಸಿ.ಎಲ್.–9	1204	ಇತರೆ ಸನ್ನದಿಗೆ ಹೊಂದಿಕೊಂಡಂತೆ ಇರುವ ಆರ್.ವಿ.ಬಿ.	46
(ಅ)	ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿ ಸಂಘವನ್ನು ರಚಿಸಲಾಗಿದ್ದು, ಸರ್ಕಾರವು ಸಂಘ ರಚಿಸುವ ಮುನ್ನ ಸದರಿ ಪ್ರದೇಶದ ಜನಪ್ರತಿನಿಧಿಗಳ ಜೊತೆ ಚರ್ಚೆ ನಡೆಸಿದೆಯೇ, ನಡೆಸದಿದ್ದಲ್ಲಿ ಕಾರಣ ತಿಳಿಸುವುದು.	ಕಲ್ಯಾಣ ಕರ್ನಾಟಕ ವಿಭಾಗದ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಯೋಜನೆ ರೂಪಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿ ಸಂಘವನ್ನು ರಚಿಸಲಾಗಿರುತ್ತದೆ.
(ಆ)	ಸದರಿ ಸಂಘದ ಉದ್ದೇಶವೇನು, ಸಂಘದಲ್ಲಿ ಜನಪ್ರತಿ ನಿಧಿಗಳ ಪಾತ್ರವೇನು.	ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿ ಸಂಘದ ಉದ್ದೇಶಗಳು ಈ ಕೆಳಕಂಡಂತಿರುತ್ತದೆ. ಕೃಷಿ:- 1. 50 ಸಮಗ್ರ ಸಾವಯವ ಕೃಷಿ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಜರುಗಿಸಿ ರೈತರನ್ನು ಆರ್ಥಿಕವಾಗಿ ಬಲಪಡಿಸಿ ಸ್ವಾವಲಂಬಿ ಗ್ರಾಮಗಳನ್ನು ರೂಪಿಸುವುದು. 2. 5000 ಸಾವಯವ ಕೃಷಿಯಲ್ಲಿ ತೊಡಗಿರುವ ರೈತರನ್ನು ಗುರುತಿಸಿ ಕೃಷಿ ವಿಶ್ವವಿದ್ಯಾಲಯ ಬೆಂಬಲ ಸಹಯೋಗದೊಂದಿಗೆ ಅವರಿಗೆ ತರಬೇತಿ ಮತ್ತು ಮಾರುಕಟ್ಟೆ ಬೆಂಬಲ ಒದಗಿಸಲು ಕ್ರಮ ಜರುಗಿಸುವುದು. 3. ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ರೂ.1.00 ಕೋಟಿ ವೃಕ್ಷಗಳನ್ನು ರೈತರ ಹೊಲಗಳಲ್ಲಿ ನೆಟ್ಟು ಸಂರಕ್ಷಿಸಲು ಪ್ರೋತ್ಸಾಹಿಸುವುದು. 4. ರೂ.10.00 ಲಕ್ಷ ವಿವಿಧ ಹಣ್ಣು ನೀಡುವ ತೋಟಗಾರಿಕೆ ಸಸಿಗಳನ್ನು ರೈತರ ಹೊಲಗಳಲ್ಲಿ ನೆಟ್ಟು ಸಂರಕ್ಷಿಸಲು ಪ್ರೋತ್ಸಾಹಿಸುವುದು. 5. ಒಬ್ಬ ವ್ಯಕ್ತಿಗೆ ಒಂದು ವೃಕ್ಷ ಯೋಜನೆ ಜಾರಿಗೆಗೊಳಿಸುವುದು. 6. ದೇಸಿ ಹಸುಗಳ ತಳಿ ಸಂವರ್ಧನೆಯನ್ನು ಪಶು ವಿಶ್ವವಿದ್ಯಾಲಯ ಸಹಯೋಗದಲ್ಲಿ ಕೈಗೊಳ್ಳುವುದು.

ಶಿಕ್ಷಣ ಮತ್ತು ಸಾಹಿತ್ಯ

1. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲಾ ಕೇಂದ್ರವಾರು ನೀಡಲು ಕ್ರಮ ಜರುಗಿಸುವುದು.
2. UPSC ಪರೀಕ್ಷೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಗೆ ತರಬೇತಿಯನ್ನು ವಿಭಾಗದ ಮಟ್ಟದಲ್ಲಿ ನೀಡಲು ಕ್ರಮ ಜರುಗಿಸುವುದು.
3. ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಮೇಲೆ ತರಬೇತಿ ಆಯೋಜಿಸುವುದು.
4. ಕಲ್ಯಾಣ ಕರ್ನಾಟಕ ವಿಭಾಗಕ್ಕೆ ಸಂಬಂಧಿಸಿದ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಹಾಗೂ ವಿವಿಧ ಮಹನಿಯರ ಹೋರಾಟಗಾರರ ಮತ್ತು ಸಾಧಕರ ಬಗ್ಗೆ ಮಾಹಿತಿ ನೀಡುವ ಪುಸ್ತಕಗಳನ್ನು ಪ್ರಕಟಿಸಿ ಪ್ರಚಾರ ಮಾಡುವುದು.

ಸ್ವಯಂ ಉದ್ಯೋಗ

1. ಕಲ್ಯಾಣ ಕರ್ನಾಟಕ ವಿಭಾಗದ ಕನಿಷ್ಠ 10,000 ಜನರಿಗೆ ಸ್ವಯಂ ಉದ್ಯೋಗ ಪ್ರಾರಂಭಿಸಲು ವಿವಿಧ ವಿಷಯಗಳ ತರಬೇತಿ ನೀಡಲು ಕ್ರಮ ಜರುಗಿಸುವುದು.
2. ಕಲ್ಯಾಣ ಕರ್ನಾಟಕ ವಿಭಾಗ ವ್ಯಾಪ್ತಿಯಲ್ಲಿ ಕನಿಷ್ಠ 1,000 ಹೊಲಿಗೆ ಮತ್ತು ಕಸೂತಿ ತರಬೇತಿ ಕೇಂದ್ರ ಪ್ರಾರಂಭಿಸಲು ಕ್ರಮ ಜರುಗಿಸುವುದು.
3. ವಿವಿಧ ರೀತಿಯ ಗೃಹ ಉತ್ಪನ್ನ ತಯ್ಯಾರಿಸುವ, ವಿವಿಧ ರೀತಿಯ ತಾಂತ್ರಿಕ ತರಬೇತಿ ನೀಡುವ ಮುಖಾಂತರ ಕಲ್ಯಾಣ ಕರ್ನಾಟಕ ವಿಭಾಗದ ಕನಿಷ್ಠ ರೂ.5.00 ಲಕ್ಷ ಜನರನ್ನು ಸ್ವಾವಲಂಬಿಯಾಗಿಸಲು ಕ್ರಮ ಜರುಗಿಸುವುದು.
4. ವಿವಿಧ ಉದ್ಯೋಗ ಮೇಳಗಳನ್ನು ಆಯೋಜಿಸಿ ಸ್ಥಳಿಯ ಉದ್ಯೋಗಗಳ ಲಭ್ಯತೆ ಹಾಗೂ ಮಾರುಕಟ್ಟೆ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ಕ್ರಮ ಜರುಗಿಸುವುದು.

ಆರೋಗ್ಯ

1. ವಿವಿಧ ರೀತಿಯ ಅಲೋಪತಿ, ಹೋಮಿಯೊಪತಿ ಮತ್ತು ಆಯುರ್ವೇದಿಕ್ ತರಬೇತಿ ಶಿಭಿರಗಳನ್ನು ಆಯೋಜಿಸಿ ಕಲ್ಯಾಣ ಕರ್ನಾಟಕ ವಿಭಾಗದ ಜನರಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು.
2. ಕಲ್ಯಾಣ ವಿಭಾಗದಲ್ಲಿ ಕನಿಷ್ಠ 100 ಯೋಗ ತರಬೇತಿ ಶಿಭಿರಗಳನ್ನು ಆಯೋಜಿಸುವುದು.
3. ಸಾಂಪ್ರದಾಯಿಕ ವೈದ್ಯ ಪದ್ಧತಿಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು.
4. ಉತ್ತಮ ಆಹಾರ ಪದ್ಧತಿಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವು ಕಾರ್ಯಕ್ರಮಗಳನ್ನು ಆಯೋಜಿಸುವುದು.

ಯುವಜನ ಸಬಲೀಕರಣ

1. ಯುವ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು.
2. ಯುವಜನರ ವ್ಯಕ್ತಿತ್ವವನ್ನು ಸಬಲಗೊಳಿಸುವ ತರಬೇತಿ ಶಿಭಿರಗಳನ್ನು ಆಯೋಜಿಸುವುದು.
3. ವಿವಿಧ ವಿಷಯಗಳ ತಜ್ಞರಿಂದ, ಸಾಧಕರಿಂದ ಯುವಜನರಿಗೆ ಸ್ಫೂರ್ತಿ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸುವುದು.
4. ವಿವಿಧ ರಂಗಗಳಲ್ಲಿ ಈಗಾಗಲೇ ಉತ್ತಮ ಸಾಧನೆಗೈದಿರುವ ರಾಜ್ಯ ಮತ್ತು ರಾಷ್ಟ್ರಮಟ್ಟದ ಸಾಧಕರಿಂದ ಯುವ ಜನರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಮಹಿಳಾ ಸಬಲೀಕರಣ:

1. ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಮತ್ತು ಮಹಿಳೆಯನ್ನು ಸಶಕ್ತಗೊಳಿಸುವ ಕಾರ್ಯಕ್ರಮಗಳನ್ನು

			ಆಯೋಜಿಸುವುದು. 2. ಸ್ತ್ರೀ ಶಕ್ತಿ ಕೇಂದ್ರಗಳ ಮತ್ತು ಗ್ರಾಮೀಣ ಭಾಗದ ಮಹಿಳೆಯರಿಗೆ ಗೃಹ ಉದ್ಯೋಗಗಳ ಬಗ್ಗೆ ಹಾಗೂ ವಿವಿಧ ಯೋಜನೆಗಳ ಆರ್ಥಿಕ ಸಹಾಯದ ಬಗ್ಗೆ ಅರಿವು ಮೂಡಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಪೂರಕವಾದ ಕಾರ್ಯಕ್ರಮಗಳನ್ನು ಆಯೋಜಿಸುವುದು. 3. ಸಾಂಸ್ಕೃತಿಕ ಶಿಬಿರಗಳನ್ನು ಆಯೋಜಿಸುವುದು 4. ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರವಾಸ ಆಯೋಜಿಸಿ ಗ್ರಾಮೀಣ ಭಾಗದ ಮಹಿಳೆಯರಿಗೆ ರಾಜ್ಯದ ಮತ್ತು ರಾಷ್ಟ್ರದ ಪ್ರಮುಖ ಸ್ಥಳಗಳ ಬಗ್ಗೆ ಮಾಹಿತಿ ಒದಗಿಸುವ ಕಾರ್ಯಕ್ರಮ ಆಯೋಜಿಸುವುದು. 2. ವಿವಿಧ ಪ್ರಕಾರಗಳ ಆರೋಗ್ಯ ಶಿಬಿರಗಳನ್ನು ಆಯೋಜಿಸುವುದು. 3. ಸ್ವದೇಶಿ ವಸ್ತುಗಳ ಬಳಕೆ ಮತ್ತು ನಿರ್ಮಾಣದ ಬಗ್ಗೆ ಮಾಹಿತಿ ಮತ್ತು ತರಬೇತಿ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸುವುದು. **ಜೀವನ ಮೌಲ್ಯಗಳು:** 1. ಕಲ್ಯಾಣ ಕರ್ನಾಟಕ ವಿಭಾಗದ ಪ್ರತಿ ಗ್ರಾಮದಲ್ಲಿ ಗ್ರಾಮಸ್ಥರಿಗೆ ದೈನಂದಿನ ಜೀವನದಲ್ಲಿ ಅವಶ್ಯಕವಿರುವ ಜೀವನ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವ, ಪರಸ್ಪರ ಸಹಕಾರ ಮೂಡಿಸುವ, ದುಶ್ಚಟಗಳ ಬಗ್ಗೆ ಅರಿವು ಮೂಡಿಸುವ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡುವ ಅರಿವು ಕೇಂದ್ರಗಳನ್ನು ಕನಿಷ್ಠ ನಿರ್ವಹಣೆ ವೆಚ್ಚದಲ್ಲಿ ವೇತನ ರಹಿತವಾಗಿ ಸ್ಥಾಪಿಸಲು ಕ್ರಮ ಜರುಗಿಸುವುದು. 2. ಕಾಯಕ ದಾಸೋಹದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸುವ ಕಾರ್ಯಕ್ರಮಗಳನ್ನು

		ಆಯೋಜಿಸುವುದು. 2. ಗ್ರಾಮೀಣ ಭಾಗದ ಕಲೆ ಮತ್ತು ಸಾಹಿತ್ಯವನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು. 3. ಕಲ್ಯಾಣ ಕರ್ನಾಟಕ ವಿಭಾಗದ ಕಲೆ, ಸಾಹಿತ್ಯ, ವಿಜ್ಞಾನ, ಸಂಸ್ಕೃತಿ ಮತ್ತು ಕ್ರೀಡೆಗಳ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸುವುದು. **ಇತರೆ:** 1. ಕಲ್ಯಾಣ ಕರ್ನಾಟಕ ವಿಭಾಗದ ವಿವಿಧ ಜನ ಪ್ರತಿನಿಧಿಗಳು ನೀಡುವ ಸಲಹೆ ಸೂಚನೆಗಳನ್ನು ಆಧರಿಸಿ ಸಂಘದ ಆಡಳಿತ ಮಂಡಳಿಯಲ್ಲಿ ಚರ್ಚಿಸಿ, ವಿವಿಧ ವಿಷಯಗಳ ತಜ್ಞರ ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡು ಸಂಘದ ಅಧ್ಯಕ್ಷರ ನಿರ್ದೇಶನದಲ್ಲಿ ಸಂಘದ ಕ್ರಿಯಾ ಯೋಜನೆ ರೂಪಿಸಿ ಸರ್ಕಾರದ ಅನುಮೋದನೆ ಪಡೆದು ಕಾರ್ಯಗತಗೊಳಿಸಲು ಕ್ರಮ ಜರುಗಿಸುವುದು. 2. ಕಾಲಕಾಲಕ್ಕೆ ಸರ್ಕಾರವು ನೀಡುವ ಆದೇಶ ಮತ್ತು ಮಾರ್ಗದರ್ಶನಗಳನ್ವಯ ಸಾಮಾಜಿಕ ನ್ಯಾಯತತ್ವವನ್ನು ಪರಿಪಾಲಿಸಿ ಸಂಘದ ಉದ್ದೇಶಗಳನ್ನು ಜಾರಿಗೊಳಿಸಲು ಕ್ರಮಜರುಗಿಸುವುದು.
(ಇ)	ಈ ಸಂಘದ ಉದ್ದೇಶವನ್ನು ಕೆ.ಕೆ.ಆರ್.ಡಿ.ಬಿ. ಬೋರ್ಡ್ ಮುಖಾಂತರ ಈಡೇರಿಸ ಬಹುದಾಗಿದ್ದರು ಕೂಡ ಸಂಘ ರಚಿಸಲು ಕಾರಣವೇನು (ವಿವರ ನೀಡುವುದು)	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ವಿಶೇಷವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮಜರುಗಿಸಲಾಗುತ್ತಿದೆ. ಪ್ರಸ್ತುತ ನೂತನವಾಗಿ ರಚಿಸಲಾದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದಿಂದ ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ, ಸಾವಯವ ಕೃಷಿ, ತೋಟಗಾರಿಕೆ, ಶಿಕ್ಷಣ, ಆರೋಗ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಿ ಕಲ್ಯಾಣ ಕರ್ನಾಟಕ ವಿಭಾಗದ ಜನರನ್ನು ಸ್ವಾವಲಂಬಿಯಾಗಿಸುವ ಉದ್ದೇಶ ಒಳಗೊಂಡಿರುತ್ತದೆ. ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಕ್ಷಿಪ್ರಗತಿಯಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವ ಉದ್ದೇಶದಿಂದ ಪ್ರಸ್ತುತ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘವನ್ನು ರಚಿಸಲಾಗಿರುತ್ತದೆ. ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದಿಂದ ವಿಶೇಷವಾಗಿ ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ, ಸಾವಯವ

		ಕೃಷಿ, ತೋಟಗಾರಿಕೆ, ಶಿಕ್ಷಣ, ಆರೋಗ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಿ ಕಲ್ಯಾಣ ಕರ್ನಾಟಕ ವಿಭಾಗದ ಜನರನ್ನು ಸ್ವಾವಲಂಬಿಯಾಗಿಸುವ ಉದ್ದೇಶ ಒಳಗೊಂಡಿರುತ್ತದೆ.
ಈ	ಸದರಿ ಸಂಘದ ಉದ್ದೇಶ ಮತ್ತು ಈ ಸಂಘಕ್ಕೆ ಅನುದಾನವನ್ನು ಯಾವ ಮೂಲಗಳಿಂದ ಭರಿಸಲಾಗುತ್ತದೆ?(ಪೂರ್ಣ ವಿವರ ನೀಡುವುದು)	ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಕ್ಷಿಪ್ರಗತಿಯಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವ ಉದ್ದೇಶದಿಂದ ಪ್ರಸ್ತುತ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘವನ್ನು ರಚಿಸಲಾಗಿರುತ್ತದೆ. ಈ ಸಂಘಕ್ಕೆ ಅನುದಾನವನ್ನು ಸರ್ಕಾರದ ಮೂಲಗಳಿಂದ ಭರಿಸಲಾಗುವುದು.

ಸಂಖ್ಯೆ:ಪಿಡಿಎಸ್–ಹೆಚ್.ಕೆ.ಡಿ./39/2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 718
2. ಸದಸ್ಯರ ಹೆಸರು : ಶ್ರೀಮತಿ. ಸೌಮ್ಯರೆಡ್ಡಿ (ಜಯನಗರ)
3. ಉತ್ತರಿಸಬೇಕಾದ ದಿನಾಂಕ : 22–09–2020.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರವು ಪಡೆದಿರುವ ಸಾಲದ ಮೊತ್ತವೆಷ್ಟು; (ವರ್ಷವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರವು ಪಡೆದಿರುವ ಸಾರ್ವಜನಿಕ ಸಾಲದ ಮೊತ್ತ ಈ ಕೆಳಕಂಡಂತಿರುತ್ತದೆ:
<table>
<tr><th>ವರ್ಷ
(ಮಾರ್ಚ್ 31ರ ಅಂತ್ಯಕ್ಕೆ ಮಹಾಲೇಖಪಾಲರ ಲೆಕ್ಕದಂತೆ)</th><th>ಸಾರ್ವಜನಿಕ ಸಾಲದ ಮೊತ್ತ (ರೂ. ಕೋಟಿಗಳಲ್ಲಿ)</th></tr>
<tr><td>2017–18</td><td>25121.86</td></tr>
<tr><td>2018–19(*)</td><td>41914.06</td></tr>
<tr><td>2019–20 (*)</td><td>50459.01</td></tr>
</table>
(*)– ಪೂರ್ವ ವಾಸ್ತವಿಕ ಲೆಕ್ಕ</td></tr>
<tr><td>ಆ</td><td>ಪ್ರಸ್ತುತ 2020ರ ಸೆಪ್ಟೆಂಬರ್ ಅಂತ್ಯಕ್ಕೆ ಜಿ.ಎಸ್.ಡಿ.ಪಿ.ಯ ಶೇಕಡವಾರು ದರ ಎಷ್ಟಾಗಬಹುದು;</td><td>ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು (ಜಿ.ಎಸ್.ಡಿ.ಪಿ) ಮಾಹೆವಾರು ಅಂದಾಜಿಸಲಾಗುವುದಿಲ್ಲ. ಜಿ.ಎಸ್.ಡಿ.ಪಿಯನ್ನು ವಾರ್ಷಿಕವಾರು ಅಂದಾಜಿಸಲಾಗುವುದು. 2020–21ನೇ ಸಾಲಿಗೆ ರೂ. 18,03,609 ಕೋಟಿ ಎಂದು ಕೇಂದ್ರ ಸರ್ಕಾರವು ಅಂದಾಜಿಸಿದೆ.</td></tr>
<tr><td>ಇ</td><td>ಜಿ.ಎಸ್.ಡಿ.ಪಿ. ದರ ಕಡಿಮೆಯಾದರೆ ಒಟ್ಟು ಎಷ್ಟು ಸಾಲ ಪಡೆಯಲು ರಾಜ್ಯ ಸರ್ಕಾರ ಅರ್ಹವಾಗಿದೆ?</td><td>ಪ್ರಸ್ತುತ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ–2002ರನ್ವಯ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿ.ಎಸ್.ಡಿ.ಪಿ.) ವಿತ್ತೀಯ ಕೊರತೆಯ ಶೇ.3.0 ಮಿತಿಯೊಳಗೆ ಸಾಲವನ್ನು ಪಡೆಯಲು ಅವಕಾಶವಿರುತ್ತದೆ.</td></tr>
</table>

ಸಂಖ್ಯೆ: ಆಇ 39 ಬಿಜಿಎಲ್ 2020

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	724
ಮಾನ್ಯ ಸದಸ್ಯರ ಹೆಸರು	ಶ್ರೀ ಶ್ರೀನಿವಾಸ್ ಎಂ (ಮಂಡ್ಯ)
ಉತ್ತರಿಸಬೇಕಾದ ದಿನಾಂಕ	22.09.2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
1)	ರಾಜ್ಯದ ವಿವಿಧ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟದ ಬಗ್ಗೆ ಅನೇಕ ಮಹಿಳಾ ಸಂಘಟನೆಗಳು ಧರಣಿಗಳ ಮುಖಾಂತರ ಈಗಾಗಲೇ ಸರ್ಕಾರದ ಗಮನ ಸೆಳೆದಿದ್ದರೂ, ಇದುವರೆಗೂ ಯಾವುದೇ ಕ್ರಮಕೈಗೊಳ್ಳದಿರಲು ಕಾರಣವೇನು;	ರಾಜ್ಯದ ವಿವಿಧ ಗ್ರಾಮಗಳಲ್ಲಿ ಅನಧಿಕೃತವಾಗಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 02 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದ್ದು, ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿ ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮವಾಗಿ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ನಿರ್ದೇಶಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವವರ ವಿರುದ್ಧ ಇಲಾಖೆಯು ದಾಖಲಿಸಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ. **ಅಬಕಾರಿ ಸಾಲು (ಜುಲೈನಿಂದ ಜೂನ್ ವರೆಗೆ)** — **ದಾಖಲಿಸಿದ ಪ್ರಕರಣಗಳ ಸಂಖ್ಯೆ** 2018–19 — 27615 2019–20 — 18377
2)	MSIL ಮದ್ಯದಂಗಡಿ ತೆರೆಯಲು ಇರುವ ಸರ್ಕಾರದ ನೀತಿ ನಿಯಮಗಳೇನು;	ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ: i. ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ–3(11–ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ–5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು. ii. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ರಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58

		ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. iii. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ. • ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು. • ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು. • ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು. iv. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020 ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. • ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

		• ಸಿಎಲ್–11(ಸಿ) ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು.
3)	ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿರುವ MSIL ಮದ್ಯದಂಗಡಿಗಳ ಸಂಪೂರ್ಣ ಮಾಹಿತಿ ನೀಡುವುದು?	ರಾಜ್ಯದಲ್ಲಿ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಒಟ್ಟು 863 MSIL ಮದ್ಯದಂಗಡಿಗಳಿದ್ದು, ಅದರ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆಇ 67 ಇಎಲ್ ಕ್ಯೂ 2020

24/9/20

(ಹೆಚ್. ನಾಗೇಶ್)

ಅಬಕಾರಿ ಸಚಿವರು

ಅನುಬಂಧ

ಎಂ.ಎಸ್.ಐ.ಎಲ್ ಕೇಂದ್ರಗಳ ವಿವರ		
ಕ್ರಸಂ	ಜಿಲ್ಲೆ/ತಾಲ್ಲೂಕು	ಎಂ.ಎಸ್.ಐ.ಎಲ್ ಮದ್ಯದಂಗಡಿಗಳ ಸಂಖ್ಯೆ
1	ಬೆಂಗಳೂರು ನಗರ ಜಿಲ್ಲೆ – 1	13
2	ಬೆಂಗಳೂರು ನಗರ ಜಿಲ್ಲೆ – 2	10
3	ಬೆಂಗಳೂರು ನಗರ ಜಿಲ್ಲೆ – 3	11
4	ಬೆಂಗಳೂರು ನಗರ ಜಿಲ್ಲೆ – 4	4
5	ಬೆಂಗಳೂರು ನಗರ ಜಿಲ್ಲೆ – 5	4
6	ಬೆಂಗಳೂರು ನಗರ ಜಿಲ್ಲೆ – 6	9
7	ಬೆಂಗಳೂರು ನಗರ ಜಿಲ್ಲೆ – 7	4
8	ಬೆಂಗಳೂರು ನಗರ ಜಿಲ್ಲೆ – 8	5
	ಒಟ್ಟು	60
	ಬೆಂಗಳೂರು ಗ್ರಾಮಾಂತರ	
1	ಹೊಸಕೋಟೆ	3
2	ದೇವನಹಳ್ಳಿ	2
3	ದೊಡ್ಡಬಳ್ಳಾಪುರ	4
4	ನೆಲಮಂಗಲ	1
	ಒಟ್ಟು	10
	ಚಿಕ್ಕಬಳ್ಳಾಪುರ	
1	ಚಿಕ್ಕಬಳ್ಳಾಪುರ	7
2	ಗೌರಿಬಿದನೂರು	4
3	ಚಿಂತಾಮಣಿ	3
4	ಬಾಗೇಪಲ್ಲಿ	4
5	ಶಿಡ್ಲಘಟ್ಟ	5
6	ಗುಡಿಬಂಡೆ	2
	ಒಟ್ಟು	25
	ಕೋಲಾರ	
1	ಕೋಲಾರ	6
2	ಮಾಲೂರು	3
3	ಶ್ರೀನಿವಾಸಪುರ	2
4	ಬಂಗಾರಪೇಟೆ	4
5	ಮುಳಬಾಗಿಲು	5
6	ಕೆ.ಜಿ.ಎಫ್	1
	ಒಟ್ಟು	21

ರಾಮನಗರ		
1	ಚನ್ನಪಟ್ಟಣ	5
2	ಕನಕಪುರ	2
3	ರಾಮನಗರ	7
4	ಮಾಗಡಿ	2
ಒಟ್ಟು		16
ತುಮಕೂರು		
1	ತುಮಕೂರು	7
2	ಕುಣಿಗಲ್	5
3	ಗುಬ್ಬಿ	4
4	ಕೊರಟಗೆರೆ	3
5	ಮಧುಗಿರಿ	6
6	ಪಾವಗಡ	5
7	ಸಿರಾ	7
8	ಚಿ.ನಾ.ಹಳ್ಳಿ	5
9	ತಿಪಟೂರು	5
10	ತುರುವೇಕೆರೆ	6
ಒಟ್ಟು		53
ಬಾಗಲಕೋಟೆ		
1	ಬದಾಮಿ	5
2	ಬಾಗಲಕೋಟೆ	5
3	ಬೀಳಗಿ	3
4	ಹುನಗುಂದ	7
5	ಜಮಖಂಡಿ	10
6	ಮುಧೋಳ	7
ಒಟ್ಟು		37
ಬೆಳಗಾವಿ ಉತ್ತರ		
1	ಚಿಕ್ಕೋಡಿ	7
2	ಗೋಕಾಕ	8
3	ಹುಕ್ಕೇರಿ	3
4	ಅಥಣಿ	10
5	ರಾಯಭಾಗ	10
ಒಟ್ಟು		38
ಬೆಳಗಾವಿ ದಕ್ಷಿಣ		
1	ಬೆಳಗಾವಿ ವಲಯ – 1	5
2	ಬೆಳಗಾವಿ ವಲಯ – 2	3
3	ಬೆಳಗಾವಿ ವಲಯ – 3	2
4	ಖಾನಾಪುರ	3

5	ರಾಮದುರ್ಗ	3
6	ಸವದತ್ತಿ	8
7	ಬೈಲಹೊಂಗಲ	6
	ಒಟ್ಟು	30
	ವಿಜಯಪುರ	
1	ಬ.ಬಾಗೇವಾಡಿ	9
2	ವಿಜಯಪುರ	10
3	ಇಂಡಿ	9
4	ಮುದ್ದೇಬಿಹಾಳ	5
5	ಸಿಂದಗಿ	7
	ಒಟ್ಟು	40
	ಧಾರವಾಡ	
1	ಧಾರವಾಡ	5
3	ಕಲಘಟಗಿ	3
4	ಕುಂದಗೋಳ	5
5	ನವಲಗುಂದ	5
6	ಹುಬ್ಬಳ್ಳಿ	8
	ಒಟ್ಟು	26
	ಹಾವೇರಿ	
1	ರಾಣೇಬೆನ್ನೂರು	5
2	ಬ್ಯಾಡಗಿ	1
3	ಹಿರೇಕೆರೂರು	3
4	ಹಾನಗಲ್	2
5	ಹಾವೇರಿ	5
6	ಸವಣೂರ	3
7	ಶಿಗ್ಗಾವಿ	6
	ಒಟ್ಟು	25
	ಬೀದರ್	
1	ಔರಾದ	5
2	ಬಸವಕಲ್ಯಾಣ	8
3	ಭಾಲ್ಕಿ	3
4	ಬೀದರ್	11
5	ಹುಮನಾಬಾದ	2
	ಒಟ್ಟು	29
	ಕಲಬುರಗಿ	
1	ಸೇಡಂ	2
2	ಚಿಂಚೋಳಿ	5

3	ಚಿತ್ತಾಪೂರ	5
4	ಕಲಬುರಗಿ	10
6	ಆಳಂದ	9
7	ಜೇವರ್ಗಿ	5
8	ಅಫಜಲಪುರ	2
	ಒಟ್ಟು	38
	ರಾಯಚೂರು	
1	ರಾಯಚೂರು	10
2	ಮಾನವಿ	4
3	ದೇವದುರ್ಗ	6
4	ಸಿಂಧನೂರು	6
5	ಲಿಂಗಸುಗೂರು	7
	ಒಟ್ಟು	33
	ಯಾದಗಿರಿ	
1	ಶಹಾಪೂರ	5
2	ಸುರಪೂರ	4
3	ಯಾದಗಿರಿ	8
	ಒಟ್ಟು	17
	ಬಳ್ಳಾರಿ	
1	ಬಳ್ಳಾರಿ	8
2	ಕುರುಗೋಡು	1
3	ಸಂಡೂರು	3
4	ಸಿರುಗುಪ್ಪ	5
5	ಹೆಚ್.ಬಿ.ಹಳ್ಳಿ	3
6	ಹಡಗಲಿ	5
7	ಹೊಸಪೇಟೆ	4
9	ಹರಪನಹಳ್ಳಿ	3
10	ಕೂಡ್ಲಿಗಿ	4
11	ಕೊಟ್ಟೂರು	2
12	ಕಂಪ್ಲಿ	4
	ಒಟ್ಟು	42
	ಚಿತ್ರದುರ್ಗ	
1	ಚಿತ್ರದುರ್ಗ	5
2	ಹೊಸದುರ್ಗ	4
3	ಹೊಳಲ್ಕೆರೆ	3
4	ಚಳ್ಳಕೆರೆ	4
5	ಹಿರಿಯೂರು	3
6	ಮೊಳಕಾಲ್ಮೂರು	4

ಒಟ್ಟು		23
ದಾವಣಗೆರೆ		
1	ದಾವಣಗೆರೆ	11
2	ಚನ್ನಗಿರಿ	3
3	ಹರಿಹರ	6
4	ಜಗಳೂರು	4
5	ಹೊನ್ನಾಳಿ	4
6	ನ್ಯಾಮತ್ತಿ	1
ಒಟ್ಟು		29
ಗದಗ		
1	ಗದಗ	5
2	ಮುಂಡರಗಿ	2
3	ನರಗುಂದ	2
4	ರೋಣ	1
5	ಗಜೇಂದ್ರಗಡ	3
6	ಶಿರಹಟ್ಟಿ	1
7	ಲಕ್ಷೇಷ್ವರ	1
ಒಟ್ಟು		15
ಕೊಪ್ಪಳ		
1	ಕೊಪ್ಪಳ	7
2	ಗಂಗಾವತಿ	1
3	ಕಾರಟಗಿ	1
4	ಕನಕಗಿರಿ	3
5	ಕುಷ್ಟಗಿ	6
6	ಕುಕನೂರ	0
7	ಯಲಬುರ್ಗಾ	3
ಒಟ್ಟು		21
ದಕ್ಷಿಣ ಕನ್ನಡ		
1	ಮಂಗಳೂರು	9
2	ಬಂಟ್ವಾಳ	7
3	ಬೆಳ್ತಂಗಡಿ	0
4	ಪುತ್ತೂರು	4
5	ಸುಳ್ಯ	2
ಒಟ್ಟು		22
ಕೊಡಗು		
1	ಸೋಮವಾರಪೇಟೆ	2
2	ಮಡಿಕೇರಿ	4
3	ವಿರಾಜಪೇಟೆ	3
ಒಟ್ಟು		9

ಶಿವಮೊಗ್ಗ		
1	ಹೊಸನಗರ	3
2	ತೀರ್ಥಹಳ್ಳಿ	3
3	ಶಿಕಾರಿಪುರ	5
4	ಸಾಗರ	4
5	ಸೊರಬ	4
6	ಭದ್ರಾವತಿ	8
7	ಶಿವಮೊಗ್ಗ	7
ಒಟ್ಟು		34
ಉಡುಪಿ		
1	ಉಡುಪಿ	5
2	ಕಾಪು	0
3	ಬ್ರಹ್ಮಾವರ	3
4	ಕುಂದಾಪುರ	2
5	ಬೈಂದೂರು	1
6	ಕಾರ್ಕಳ	3
7	ಹೆಬ್ರಿ	0
ಒಟ್ಟು		14
ಉತ್ತರ ಕನ್ನಡ		
1	ಅಂಕೋಲಾ	2
2	ಕಾರವಾರ	2
3	ಭಟ್ಕಳ	2
4	ಹೊನ್ನಾವರ	2
5	ಕುಮಟಾ	2
6	ಯಲ್ಲಾಪುರ	1
7	ಶಿರಸಿ	1
8	ಸಿದ್ದಾಪುರ	1
9	ಮುಂಡಗೋಡ	1
10	ಜೋಯಿಡಾ	1
ಒಟ್ಟು		15
ಚಾಮರಾಜನಗರ		
1	ಚಾಮರಾಜನಗರ	4
2	ಗುಂಡ್ಲುಪೇಟೆ	5
3	ಕೊಳ್ಳೇಗಾಲ	5
ಚಾಮರಾಜನಗರ ಒಟ್ಟು		14
ಚಿಕ್ಕಮಗಳೂರು		
1	ಚಿಕ್ಕಮಗಳೂರು	7
2	ಕಡೂರು	2

3	ತರೀಕೆರೆ	3
4	ಕೊಪ್ಪ	3
5	ಮೂಡಿಗೆರೆ	3
6	ಎನ್.ಆರ್.ಪುರ	4
ಒಟ್ಟು		25
ಹಾಸನ		
1	ಆಲೂರು	2
2	ಹಾಸನ	4
3	ಬೇಲೂರು	2
4	ಚನ್ನರಾಯಪಟ್ಟಣ	7
5	ಅರಸೀಕೆರೆ	7
6	ಸಕಲೇಶಪುರ	5
7	ಅರಕಲಗೂಡು	4
8	ಹೊಳೆನರಸೀಪುರ	2
ಒಟ್ಟು		33
ಮಂಡ್ಯ		
1	ಮಂಡ್ಯ	7
2	ಮದ್ದೂರು	7
3	ಮಳವಳ್ಳಿ	4
4	ಶ್ರೀರಂಗಪಟ್ಟಣ	5
5	ಪಂಡವಪುರ	4
6	ನಾಗಮಂಗಲ	5
7	ಕೆ.ಆರ್.ಪೇಟೆ	2
ಒಟ್ಟು		34
ಮೈಸೂರು ಗ್ರಾಮಾಂತರ		
1	ನಂಜನಗೂಡು	2
2	ಟಿ.ನರಸೀಪುರ	5
3	ಹೆಚ್.ಡಿ.ಕೋಟೆ	5
4	ಹುಣಸೂರು	6
5	ಕೆ.ಆರ್.ನಗರ	4
6	ಪಿರಿಯಾಪಟ್ಟಣ	5
ಒಟ್ಟು		27
ಮೈಸೂರು ನಗರ		
1	ಮೈಸೂರು	8
ಒಟ್ಟು		8
ರಾಜ್ಯದ ಒಟ್ಟು		863

6

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	727
ಮಾನ್ಯ ಸದಸ್ಯರ ಹೆಸರು	ಶ್ರೀ ಪಾಟೀಲ್ ಹೆಚ್.ಕೆ. (ಗದಗ)
ಉತ್ತರಿಸುವವರು	ಅಬಕಾರಿ ಸಚಿವರು
ಉತ್ತರದ ದಿನಾಂಕ	22-09-2020

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೊರೋನಾ ನಿಯಂತ್ರಣಕ್ಕಾಗಿ ಮಾಡಿದ್ದ ಲಾಕ್‌ಡೌನ್ ತೆರವುಗೊಳಿಸಿದ ನಂತರ ಮದ್ಯದಂಗಡಿಗಳನ್ನು ಯಾವ ದಿನಾಂಕದಿಂದ ಪ್ರಾರಂಭಿಸಲಾಯಿತು;	ರಾಜ್ಯದಲ್ಲಿ ಕೊರೋನಾ ನಿಯಂತ್ರಣಕ್ಕಾಗಿ ಮಾಡಿದ್ದ ಲಾಕ್‌ಡೌನ್ ತೆರವುಗೊಳಿಸಿದ ನಂತರ ದಿನಾಂಕ: 04-05-2020 ರಿಂದ ಜಾರಿಗೆ ಬರುವಂತೆ ಸಿಎಲ್-2 ಮತ್ತು ಸಿಎಲ್-11ಸಿ (ಎಂ.ಎಸ್.ಐ.ಎಲ್) ಸನ್ನದುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.
ಆ)	ಅಂದಿನಿಂದ ಇಲ್ಲಿಯವರೆಗೆ ಎಷ್ಟು ಪ್ರಮಾಣದ ಮದ್ಯದ ವ್ಯಾಪಾರ ಆಗಿದೆ;(ಲೀಟರ್ ಗಳಲ್ಲಿ ಮತ್ತು ರೂಪಾಯಿಗಳಲ್ಲಿ ಮಾಸಿಕವಾರು ದೈನಂದಿನ ವಿವರ ಒದಗಿಸುವುದು)	ದಿನಾಂಕ: 04-05-2020 ರಿಂದ 31-08-2020 ರವರೆಗೆ ಭಾರತೀಯ ತಯಾರಿಕಾ ಮದ್ಯ 198.88 ಲಕ್ಷ ಪೆಟ್ಟಿಗೆಗಳು (1,718.32 ಲಕ್ಷ ಲೀಟರ್) ಮತ್ತು ಬಿಯರ್ 63.00 ಲಕ್ಷ ಪೆಟ್ಟಿಗೆಗಳು (491.40 ಲಕ್ಷ ಲೀಟರ್) ಮಾರಾಟವಾಗಿರುತ್ತದೆ. ಮಾರಾಟವಾದ ಮಾಸಿಕವಾರು ದೈನಂದಿನ ವಿವರವನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.
ಇ)	ಸದರಿ ಮದ್ಯದ ವ್ಯಾಪಾರದಿಂದ ರಾಜ್ಯ ಸರ್ಕಾರದ ಖಜಾನೆಗೆ ಸಂಗ್ರಹವಾಗಿರುವ ತೆರಿಗೆ ಎಷ್ಟು; ಈ ತೆರಿಗೆ ಸಂಗ್ರಹ ಕಳೆದ ವರ್ಷಕ್ಕೆ ಹೋಲಿಸಿದರೆ, ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ; ತುಲನಾತ್ಮಕ ವಿವರ ಒದಗಿಸುವುದು? (ಕಳೆದ ಮೂರು ವರ್ಷದ ಅಂಕಿ ಸಂಖ್ಯೆಗಳನ್ನು ಮಾಸಿಕವಾರು ಒದಗಿಸುವುದು)	ದಿನಾಂಕ: 04-05-2020 ರಿಂದ 31-08-2020 ರವರೆಗೆ ಮಾರಾಟವಾದ ಮದ್ಯದಿಂದ ರಾಜ್ಯ ಸರ್ಕಾರದ ಖಜಾನೆಗೆ ರೂ.7,581.80 ಕೋಟಿಗಳಷ್ಟು ಅಬಕಾರಿ ರಾಜಸ್ವ ಸಂಗ್ರಹವಾಗಿರುತ್ತದೆ. ಕಳೆದ 2019-20ನೇ ಸಾಲಿನಲ್ಲಿ ಇದೇ ಅವಧಿಗೆ ಒಟ್ಟು ರೂ.9,131.60 ಕೋಟಿಗಳಷ್ಟು ಸಂಗ್ರಹವಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ರೂ.1,549.80 ಕೋಟಿಗಳಷ್ಟು ಕಡಿಮೆ ಸಾಧನೆಯಾಗಿದ್ದು, ಶೇ.16.97 ಋಣಾತ್ಮಕ ಸಾಧನೆ ಸಾಧಿಸಲಾಗಿದೆ. ಕಳೆದ ಮೂರು ವರ್ಷದ ಮಾಸಿಕವಾರು ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಆಇ 56 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

Q.No. 727

ANNEXURE - 1

Daily Sales & Excise Revenue APRIL - 2020 (COVID 19 - LOCK DOWN)

Sl. No.	Date	Liquor Sales (Qnty in lakh CBs)		Excise Revenue (Rs. In Crs.)
		IML	Beer	
1	1.4.2020	-	-	-
2	2.4.2020	-	-	-
3	3.4.2020	-	-	-
4	4.4.2020	-	-	-
5	5.4.2020 (Sunday)	-	-	-
6	6.4.2020 (Mahaveera Jayanthi)	-	-	-
7	7.4.2020	-	-	-
8	8.4.2020	-	-	-
9	9.4.2020	-	-	-
10	10.4.2020 (Good Friday)	-	-	-
11	11.4.2020 (2nd Saturday)	-	-	-
12	12.4.2020 (Sunday)	-	-	-
13	13.4.2020	-	-	-
14	14.4.2020 (Ambedkar Jayanthi)	-	-	-
15	15.4.2020	-	-	-
16	16.4.2020	-	-	-
17	17.4.2020	-	-	-
18	18.4.2020	-	-	-
19	19.4.2020 (Sunday)	-	-	-
20	20.4.2020	-	-	-
21	21.4.2020	-	-	-
22	22.4.2020	-	-	-
23	23.4.2020	-	-	-
24	24.4.2020	-	-	-
25	25.4.2020 (4th Saturday)	-	-	-
26	26.4.2020 (Basavehwara Jayanthi-Sunday)	-	-	-
27	27.4.2020	-	-	-
28	28.4.2020	-	-	-
29	29.4.2020	-	-	-
30	30.4.2020	-	-	-
		-	-	-
		-	-	-
	TOTAL	0.00	0.00	0.00

1 CB of IML = 8.64 litre IML and 1 CB of BEER = 7.80 litre BEER

Q. No. 727

Daily Sales & Excise Revenue from 04-05-2020 - MAY 2020

Sl. No.	Date	Liquor Sales (Qnty in lakh CBs)		Excise Revenue (Rs. In Crs.)
		IML	Beer	
1	1.5.2020 (May Day Sunday)	-	-	-
2	2.5.2020	-	-	-
3	3.5.2020	-	-	-
4	4.5.2020	0.05	0.01	0.00
5	5.5.2020	4.40	0.89	12.51
6	6.5.2020	4.60	0.90	13.55
7	7.5.2020	3.26	0.77	73.38
8	8.5.2020	3.04	0.96	143.03
9	9.5.2020 (2nd Saturday)	-	-	-
10	10.5.2020 (Sunday)	-	-	-
11	11.5.2020	3.49	0.91	98.09
12	12.5.2020	1.91	0.46	112.20
13	13.5.2020	1.72	0.37	57.39
14	14.5.2020	1.32	0.32	71.05
15	15.5.2020	1.30	0.30	83.54
16	16.5.2020	1.74	0.43	67.49
17	17.5.2020 (Sunday)	-	-	-
18	18.5.2020	1.78	0.60	41.00
19	19.5.2020	1.49	0.42	63.89
20	20.5.2020	1.44	0.42	88.04
21	21.5.2020	1.29	0.36	56.85
22	22.5.2020	2.38	0.81	137.87
23	23.4.2020 (4th Saturday)	-	-	-
24	24.5.2020 (Sunday)	-	-	-
25	25.5.2020 (Ramzan)	-	-	-
26	26.5.2020	3.17	1.10	55.75
27	27.5.2020	1.59	0.51	66.14
28	28.5.2020	1.30	0.47	36.35
29	29.5.2020	1.50	0.61	91.01
30	30.5.2020	1.69	0.67	18.07
31	31.5.2020 (Sunday)	-	-	-
	TOTAL	**44.46**	**12.29**	**1387.20**
	APRIL TO THIS DATE	**44.46**	**12.29**	**1387.20**

1 CB of IML = 8.64 litre IML and 1 CB of BEER = 7.80 litre BEER

Q. No. 727

Daily Sales & Excise Revenue JUNE - 2020

Sl. No.	Date	Liquor Sales (Qnty in lakh CBs)		Excise Revenue (Rs. In Crs.)
		IML	Beer	
1	1.6.2020	2.01	0.83	115.27
2	2.6.2020	1.75	0.64	71.61
3	3.6.2020	3.65	1.29	126.22
4	4.6.2020	1.86	0.68	60.82
5	5.6.2020	1.82	0.68	92.84
6	6.6.2020	2.24	0.89	69.81
7	7.6.2020 (Sunday)	-	-	-
8	8.6.2020	2.32	1.11	84.69
9	9.6.2020	1.77	0.74	64.88
10	10.6.2020	1.68	0.67	102.67
11	11.6.2020	1.75	0.64	68.16
12	12.6.2020	2.93	1.16	153.09
13	13.6.2020 (2nd Saturday)	-	-	-
14	14.6.2020 (Sunday)	-	-	-
15	15.6.2020	3.66	1.38	96.37
16	16.6.2020	2.19	0.73	127.14
17	17.6.2020	1.80	0.61	88.43
18	18.6.2020	1.61	0.55	108.09
19	19.6.2020	1.83	0.67	131.31
20	20.6.2020	2.34	0.91	77.41
21	21.6.2020 (Sunday)	-	-	-
22	22.6.2020	2.28	0.88	90.53
23	23.6.2020	1.90	0.70	91.69
24	24.6.2020	2.03	0.66	110.54
25	25.6.2020	1.91	0.62	98.87
26	26.6.2020	3.25	1.24	123.43
27	27.6.2020 (4th Saturday)	-	-	-
28	28.6.2020 (Sunday)	-	-	-
29	29.6.2020	3.83	1.63	97.27
30	30.6.2020	3.89	1.63	208.42
		-	-	-
	TOTAL	**56.30**	**21.54**	**2459.56**
APRIL TO THIS DATE		**100.76**	**33.83**	**3846.76**

1 CB of IML = 8.64 litre IML and 1 CB of BEER = 7.80 litre BEER

Q. No. 727

Daily Sales & Excise Revenue JULY - 2020

Sl. No.	Date	Liquor Sales (Qnty in lakh CBs)		Excise Revenue (Rs. In Crs.)
		IML	Beer	
1	1.7.2020	0.42	0.08	44.28
2	2.7.2020	1.42	0.35	95.55
3	3.7.2020	2.16	0.57	136.61
4	4.7.2020	2.10	0.49	63.47
5	5.7.2020 (Sunday)	0.00	0.00	0.00
6	6.7.2020	2.08	0.58	91.39
7	7.7.2020	2.25	0.63	86.47
8	8.7.2020	1.53	0.41	88.02
9	9.7.2020	1.67	0.43	73.93
10	10.7.2020	2.58	0.75	121.88
11	11.7.2020 (2nd Saturday)	-	-	-
12	12.7.2020 (Sunday)	-	-	-
13	13.7.2020	4.96	0.85	89.40
14	14.7.2020	3.92	0.69	29.50
15	15.7.2020	1.74	0.29	35.86
16	16.7.2020	1.01	0.20	28.62
17	17.7.2020	1.36	0.33	39.08
18	18.7.2020 (Saturday - Holiday)	-	-	-
19	19.7.2020 (Sunday)	-	-	-
20	20.7.2020	1.54	0.38	108.52
21	21.7.2020	1.32	0.31	57.11
22	22.7.2020	1.79	0.56	86.50
23	23.7.2020	1.89	0.63	96.61
24	24.7.2020	2.54	0.88	148.37
25	25.7.2020 (4th Saturday)	-	-	-
26	26.7.2020 (Sunday)	-	-	-
27	27.7.2020	2.39	0.73	101.68
28	28.7.2020	2.21	0.64	59.19
29	29.7.2020	1.76	0.49	80.49
30	30.7.2020	1.87	0.53	77.06
30	31.7.2020	2.42	0.82	65.14
	TOTAL	**48.93**	**12.62**	**1904.73**
	UP TO MONTH END	**149.69**	**46.45**	**5751.49**

1 CB of IML = 8.64 litre IML and 1 CB of BEER = 7.80 litre BEER

Q. No. 721

Daily Sales & Excise Revenue AUGUST - 2020

Sl. No.	Date	Liquor Sales (Qnty in lakh CBs)		Excise Revenue (Rs. In Crs.)
		IML	Beer	
1	1.8.2020 (Bakrid)	-	-	-
2	2.8.2020 (Sunday)	-	-	-
3	3.8.2020	2.86	1.04	155.32
4	4.8.2020	1.92	0.62	101.46
5	5.8.2020	0.48	0.18	59.54
6	6.8.2020	1.95	0.53	76.19
7	7.8.2020	3.13	0.98	123.43
8	8.8.2020 (2nd Saturday)	-	-	-
9	9.8.2020 (Sunday)	-	-	-
10	10.8.2020	2.79	0.94	123.59
11	11.8.2020	1.91	0.59	87.47
12	12.8.2020	1.70	0.49	78.59
13	13.8.2020	1.74	0.52	112.16
14	14.8.2020	3.07	0.99	68.06
15	15.8.2020 (Indipendence Day)	-	-	-
16	16.8.2020 (Sunday)	-	-	-
17	17.8.2020	2.80	0.96	84.82
18	18.8.2020	2.05	0.65	77.34
19	19.8.2020	1.78	0.51	74.65
20	20.8.2020	1.91	0.56	94.22
21	21.8.2020	3.23	1.06	46.54
22	22.8.2020 (Ganesha Chaturthi)	-	-	-
23	23.8.2020 (Sunday)	-	-	-
24	24.8.2020	2.76	0.98	59.26
25	25.8.2020	2.25	0.77	97.83
26	26.8.2020	1.69	0.54	105.93
27	27.8.2020	2.07	0.71	47.32
28	28.8.2020	1.86	0.75	84.38
29	29.8.2020	2.23	0.92	27.14
30	30.8.2020 (Sunday)	-	-	-
31	31.8.2020	3.01	1.26	45.07
	MONTH TOTAL	**49.19**	**16.55**	**1830.31**
APRIL TO TILL DATE		**198.88**	**63.00**	**7581.80**

1 CB of IML = 8.64 litre IML and 1 CB of BEER = 7.80 litre BEER

Q.No. 729

ANNEXURE - 2

Excise Revenue for the Last 3 years

(Rupees in Crores)

MONTH	2017-18	2018-19	2019-20	2020-21*
APRIL	997.55	1134.47	1302.84	-
MAY	1470.53	1703.46	2052.54	1387.20
JUNE	1829.28	2089.76	2404.76	2459.56
JULY	1360.79	1570.81	1686.90	1904.73
AUGUST	1495.57	1694.16	1684.55	1830.31
SEPTEMBER	1384.95	1643.16	1749.13	
OCTOBER	1590.68	1710.52	1750.06	
NOVEMBER	1455.87	1682.60	1759.61	
DECEMBER	1534.51	1784.67	1827.81	
JANUARY	1498.88	1636.09	1860.72	
FEBRUARY	1549.47	1758.30	1807.37	
MARCH	1780.43	1535.93	1697.66	
TOTAL EXCISE REVENUE	17948.51	19943.93	21583.95	7581.80 (Upto August)

* 2020-21 Subject to Reconciliation

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	728
ಸದಸ್ಯರ ಹೆಸರು	:	ಶ್ರೀ ಪಾಟೀಲ್ ಹೆಚ್.ಕೆ(ಗದಗ)
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಗೃಹ ಸಚಿವರು

<table>
<tr><th>ಕ್ರಸ</th><th>ವಿಷಯ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದ ಕೋಮು ಗಲಭೆಗಳು ಎಷ್ಟು? ಇದಕ್ಕೆ ಕಾರಣಗಳೇನು;</td><td>ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಒಟ್ಟು 09 ಕೋಮು ಗಲಭೆ ಘಟನೆಗಳು ದಾಖಲಾಗಿರುತ್ತದೆ. ಅದರಲ್ಲಿ 11 ಪ್ರಕರಣಗಳು ದಾಖಲಾಗಿರುತ್ತದೆ. ಜಿಲ್ಲಾವಾರು ವಿವರ ಕೆಳಗಿನಂತಿದೆ.
<table>
<tr><th>ಕ್ರಸ</th><th>ಜಿಲ್ಲೆ</th><th>ಕೋಮು ಗಲಭೆಗಳ ಸಂಖ್ಯೆ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಬೆಂಗಳೂರು ಜಿಲ್ಲೆ</td><td>01</td><td>01</td></tr>
<tr><td>2</td><td>ಶಿವಮೊಗ್ಗ</td><td>02</td><td>02</td></tr>
<tr><td>3</td><td>ಬೆಳಗಾವಿ ಜಿಲ್ಲೆ</td><td>01</td><td>01</td></tr>
<tr><td>4</td><td>ದಕ್ಷಿಣ ಕನ್ನಡ</td><td>02</td><td>04</td></tr>
<tr><td>5</td><td>ಬಾಗಲಕೋಟೆ</td><td>01</td><td>01</td></tr>
<tr><td>6</td><td>ರಾಯಚೂರು</td><td>02</td><td>02</td></tr>
<tr><td></td><td>ಒಟ್ಟು</td><td>09</td><td>11</td></tr>
</table>
ವಿವರವನ್ನು ಅನುಬಂಧ–ಅ ದಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಸದರಿ ಗಲಭೆಗಳಲ್ಲಿ ಸತ್ತವರ ಸಂಖ್ಯೆ ಹಾಗೂ ಗಾಯಾಳುಗಳ ಸಂಖ್ಯೆ ಎಷ್ಟು;</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಕೋಮುಗಲಭೆಯಲ್ಲಿ ಇಬ್ಬರಿಗೆ ಗಾಯವಾಗಿರುತ್ತದೆ.</td></tr>
<tr><td>ಇ</td><td>ರಾಜ್ಯದಲ್ಲಿ ಕೋಮು ಸೌಹಾರ್ದತೆ ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ರಾಜ್ಯದಲ್ಲಿ ಕೋಮು ಸೌಹಾರ್ದತೆ ಮೂಡಿಸಲು ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ.

ಪ್ರತಿ ತಿಂಗಳು ಪೊಲೀಸ್ ಠಾಣಾವಾರು, ಮೊಹಲ್ಲಾಗಳಲ್ಲಿ ಮತ್ತು ಶಾಂತಿ ಸಭೆಗಳನ್ನು ಮಾಡಲಾಗುತ್ತಿದೆ. ಅದೇ ರೀತಿ ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಶಾಂತಿ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ಮಹತ್ವದ ಹಬ್ಬ ಮತ್ತು ಜಾತ್ರೆಗಳ ಸಂದರ್ಭದಲ್ಲಿ ಬೇರೆ ಬೇರೆ ಸಮಾಜದ ಮುಖಂಡರ ಸಮ್ಮುಖದಲ್ಲಿ ಶಾಂತಿ ಸಭೆಗಳನ್ನು ಏರ್ಪಡಿಸಲಾಗುತ್ತಿದೆ.

ಹಿರಿಯ ಪೊಲೀಸ್ ಅಧಿಕಾರಿಗಳಿಂದ ಮತೀಯ ಗಲಭೆಗೆ ಸಂಬಂಧಿಸಿದ ಜಮೀನು, ದೇವಸ್ಥಾನ, ಸ್ಥಾವರ, ಕಟ್ಟಡಗಳಿಗೆ ಭೇಟಿ ನೀಡಿ, ಅಲ್ಲಿನ ಧಾರ್ಮಿಕ ಮುಖಂಡರನ್ನು ಸಂಪರ್ಕದಲ್ಲಿರಿಸಿಕೊಂಡು ಶಾಂತಿ ಕಾಪಾಡಲಾಗುತ್ತಿದೆ.</td></tr>
</table>

		ಪೊಲೀಸ್ ಠಾಣಾವಾರು ಹಾಗೂ ಜಿಲ್ಲಾ ಮಟ್ಟದಲ್ಲಿ ಮತೀಯ ಗಲಭೆಗಳಿಗೆ ಸಂಭಂದಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಆಯುಧಗಳು, ಮದ್ದುಗರುಡುಗಳು ಹಾಗೂ ಸ್ಪೋಟಕಗಳ ಸಾಗಾಣಿಕೆ ಬಗ್ಗೆ ಕಟ್ಟುನಿಟ್ಟಿನ ನಿಗಾವಹಿಸಲಾಗುತ್ತಿದೆ. ಧಾರ್ಮಿಕ ಮೆರವಣಿಗೆ ಆಯೋಜಿಸುವ ಸಂದರ್ಭದಲ್ಲಿ ಪೊಲೀಸರು ಮುಂಗಡವಾಗಿ ನಿಗದಿತ ಮಾರ್ಗಗಳನ್ನು ಪತ್ತೆ ಹಚ್ಚಿ ನಂತರ ಮೆರವಣಿಗೆಗೆ ಅನುಮತಿ ನೀಡಲಾಗುತ್ತಿದೆ ಹಾಗೂ ಮತೀಯ ಶಕ್ತಿಗಳು/ಸಂಘ ಸಂಸ್ಥೆಗಳು ಮತೀಯ ಗಲಭೆಗೆ ಕಾರಣವಾಗುವ ಅಂಶಗಳ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರೆ ಅವುಗಳನ್ನು ಪತ್ತೆ ಹಚ್ಚಿ ಅವುಗಳ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪೊಲೀಸ್ ಠಾಣಾವಾರು ಸಿಬ್ಬಂದಿಗಳಿಗೆ ಬೀಟ್ ಕರ್ತವ್ಯಕ್ಕೆ ನಿಯೋಜಿಸುತ್ತಿದ್ದು, ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ ಹಾಗೂ ಇತರೆ ಅನೈತಿಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಮುಂಗಡವಾಗಿ ಸಂಗ್ರಹಿಸಿ ಕ್ರಮಕೈಗೊಳ್ಳಲಾಗುತ್ತಿದೆ. ಮುನ್ನೆಚ್ಚರಿಕೆಗಾಗಿ ಕಲಂ 107, 108, 109, 110ರ ಅಡಿಯಲ್ಲಿ ಮುಚ್ಚಳಿಕೆಗಳನ್ನು ತೆಗೆದುಕೊಳ್ಳುತ್ತಿದ್ದು, ದೂರುಗಳನ್ನು ದಾಖಲಿಸಿದ ನಂತರವೂ ಕೋಮುಗಲಭೆಗಳು ಸಂಭವಿಸಿದಲ್ಲಿ ಪ್ರಕರಣಗಳನ್ನು ದಾಖಲಿಸಿ ಆರೋಪಿಗಳನ್ನು ದಸ್ತಗಿರಿ ಮಾಡಿ, ನ್ಯಾಯಾಲಯದ ಮುಂದೆ ಆರೋಪಿಗಳನ್ನು ಹಾಜರುಪಡಿಸುವುದಲ್ಲದೇ ಪದೇ ಪದೇ ಇಂತಹ ಗಲಭೆಗಳಲ್ಲಿ ಭಾಗಿಯಾಗುವ ಆರೋಪಿಗಳ ವಿರುದ್ಧ Communal Goonda Act ಅಡಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ ಮತ್ತು ಅವರುಗಳನ್ನು ಜಿಲ್ಲೆಯಿಂದ ಗಡಿಪಾರು (Externment Proceedings) ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಅಕ್ರಮ ಚಟುವಟಿಕೆ (ನಿಯಂತ್ರಣ) ಕಾಯ್ದೆ 1967ರ ಅಡಿಯಲ್ಲಿ ನಿಷೇಧಿಸಲ್ಪಟ್ಟ ಧಾರ್ಮಿಕ ಸಂಘಟನೆಗಳು ಹಾಗೂ ಸಮಾಜ ವಿರೋಧಿ ಚಟುವಟಿಕೆಗಳ ಬಗ್ಗೆ ಕಟ್ಟುನಿಟ್ಟಿನ ಗಮನ ಇಟ್ಟು, ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗಿದೆ. ಮುಂಜಾಗ್ರತೆಯಾಗಿ ಕೋಮು ಗಲಭೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕಲೆ ಹಾಕಿ, ಸದರಿ ಮಾಹಿತಿಯನ್ನು ಜಿಲ್ಲಾಧಿಕಾರಿ/ಪೊಲೀಸ್ ಆಯುಕ್ತರಿಗೆ ತಿಳಿಸಿ, ಸಾರ್ವಜನಿಕ ಹಿತಾಸಕ್ತಿ ಹಾಗೂ ಆಸ್ತಿಪಾಸ್ತಿಗಳಿಗೆ ಧಕ್ಕೆಯಾಗದಂತೆ ಕಲಂ 144 ಸಿ.ಆರ್.ಪಿ.ಸಿ. ಪ್ರಕಾರ ಕ್ರಮಕೈಗೊಳ್ಳಲಾಗುತ್ತಿದೆ.

ಹೆಚ್‌ಡಿ 274 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಅನುಬಂಧ–ಅ

COMMUNAL INCIDENTS/RIOTS DURING THE YEAR - 2019

SHIVAMOGGA

SL No	Police Station Crime No and Section of Law	Name of the complainant	Name of the accused persons	Brief facts of the case	Present status
1	Doddapete PS Crime No. 178/2019 U/s 143, 295(a) r/w 149 IPC	Nand Kumar Singh, R/o L.B. S. Nagar, Shivamogga	20 miscreants	On 4-5-2019 ata video was posted in face book and wateapp in which some miscreants holding PFI flag shouted slogans as 'GO MAMSAVANNA THINNUTHEVE, RSS NAYIGALE, NAAVU SHIVAMOGGADA GALLI GALLIGALALLI GO MAMSA THINNUTHEVE, THAKKATHIDDARE THADEYIRI"	Case is under investigation to trace the accused.
2	Doddapete PS Crime No. 279/2019 U/s 143, 153(a), 295(a) r/w 149 IPC	Mujimil S/o Abdul Rahman R/o 7th cross, Ashok Nagar, Shivamogga.	1) Sumana 2) Mohana 3) Yogesha and 25-30 others	On 12-09-2019 while the Hindu Maha Sabha Ganesha idol procession was passing in front of Jamia Mosque, Gandhi Bazar the accused persons abused the muslim community and muslim women in filthy language.	Case is under investigation.

BELGAVI DIST

SL No	Police Station Crime No and Section of Law	Name of the complainant	Name of the accused persons	Brief facts of the case	Present status
1	RAMDURG P.S Cr.no- 36/2019 U/S 143.147.153(A) 295(A) R/W 149 IPC	-	MOHAMODA SHAFFI BENNE	ಇದರಲ್ಲಿ ನಮೂದ ಮಾಡಿದ ಹಿಂದೂ ಪರ ಸಂಘಟನೆಯ ಜನರು ಕೂಡಿಕೊಂಡು ದಿನಾಂಕ: 02/03/2019 ರಂದು ಮೊಹಮ್ಮದ ಶಫಿ ಬೆಣ್ಣಿ ಅನ್ನುವ ಹೆಸರಿನಿಂದ ಪಾಕಿಸ್ತಾನ ಪರವಾದ ಸಂದೇಶವನ್ನು ಫೇಸಬುಕ್ಕ ದಲ್ಲಿ ಸಾಮಾಜಿಕ ಜಾಲತಾನದಲ್ಲಿ ಅಪಲೋಡ ಮಾಡಿದ್ದನ್ನು ವಿರೋಧಿಸಿ ಪ್ರತಿಭಟನೆ ಮಾಡುವ ಕಾಲಕ್ಕೆ ಎಲ್ಲರೂ ಸಂಗನಮತ ಮಾಡಿಕೊಂಡು ವಿಕೋದ್ದೇಶದಿಂದ ರಾಮದುರ್ಗ ಪಟ್ಟಣದ ಚಿಮನಪಾವಲಿ ದರ್ಗಾ ಹತ್ತಿರ ಬಂದು ದರ್ಗಾದ ಮುಂದುಗಡೆ ರಸ್ತೆಯ ಡಿವೈಡರ್ ಕಂಬಕ್ಕೆ ಉರುಸ್ ನಿಮಿತ್ಯವಾಗಿ ಈ ಮೊದಲೇ ಕಟ್ಟಿದ್ದ ಮುಸ್ಲಿಂ ಧರ್ಮದ ಧಾರ್ಮಿಕ ಧ್ವಜವನ್ನು ಕಿತ್ತು ಕೆಳಗೆ ಕೆಡವಿ ಅದನ್ನು ಕಾಲಿನಿಂದ ಒದ್ದು ಬೆಂಕಿ ಹಚ್ಚಿ ಸುಟ್ಟಿದ್ದು ಧಾರ್ಮಿಕ ಭಾವನೆಗೆ ಧಕ್ಕೆ ಉಂಟು ಮಾಡಿರುತ್ತಾರೆ ಅಂತಾ ಪಗ್ಯೆರೆ ನಮೂದ ಅದೆ.	under investigation

DAKSHIN KANNADA DIST

SL No	Police Station Crime No and Section of Law	Name of the complainant	Name of the accused persons	Brief facts of the case	Present status
1	VittalPS Cr No. 13/19 u/s 143, 147, 148,341, 353,324, 307 r/w 149 IPC	Prathap Reddy, PC 2389 Vittal P.S.	24	On 25-01-2019 at 21.00 hrs, the Complainant and PC Manjunatha were on duty at Bantwal taluk Vitla Padnur village.A group of 20 people obstructed the duty and requested not to engaged any clash etc. Mean time the accused persons obstructing duty, holding hands with deadly weapons, soda bottles and stones, saying, "Don't let these cops come to life." etc.	Charge Sheet submitted awaiting C.C.
	VittalPS Cr.No. 14/2019 u/s 143, 147, 148, 324, 350, 506,307 r/w 149 IPC	Mohammed Ansar (23) S/o Hasainar r/o Kadambu House, Vittal Padnoor Village, Bantwal Taluk	13	That on 25-01-2019 at 21.30 hrs when the Complainant and Iqbal left their friend Riyaz on his motorcycle at his home in Bantwal Taluk, Vital Padnur village. Mean time the accused persons unlawfully assembly with deadly weapons with the intention of murder. Due to the assault by iron road, wooden stick they injured etc.	Charge Sheet submitted awaiting C.C
2	Uppinangady PS Cr.No. 12/2019 u/s 341, 323, 324 r/w 34 IPC	Mohammed Askar Askar (23) S/O Abdul r/o Kolambe House, Kolpe Konalu Village, Puttur Tq.	2	That on 20-01-2019 the Complainant was engaged on publicity the Daff Rathif function in KA 19 AC-357 pickup vehicle at Periyashanthi, Kokkada Road, mean time the accused persons threw a beer bottle into the complainants vehicle and stop the complainants pick-up vehicle, he grabbed the collar of the complainant and inquired as to why he had thrown it.Ajitkumar then fell out of the vehicle, hitting the leg with a hand and hitting the pickup driver, Jaffar, with his hands and running away. The reason for this incident is that the car was hit and run over by a car owner who tried to make fun of what was being advertised in the Pickoff vehicle. The victim and Jafar were admitted in Puttur government hospital for treatment etc.	PT
	Uppinangady PS Cr.No. 13/2019 u/s 143, 147, 148, 323, 324 r/w 149 IPC	Ramakrishna.B. (35) S/o Chennappa Gowda, r/o Baramele House, Kowkradi Village, Puttur Taluk	6	That on 20-01-2019 the complainant and his friend after visiting the Kukke Subramanya temple in a Car bearing Reg. No. KA-2-MD- 2468 and arrived at Periyashanti Road, Potladka and stopped the car roadside for eating fruit. Mean time a Pick-up vehicle came to Periyashanti and a man sitting next to the pickup driver came down and asked why you were joking to us. Pick-up driver arrives and pushes driver and assaulted due to the assault they injured etc. The reason for this incident that the accused misunderstanding about the joking etc.	PT

BAGALKOTE

SL No	Police Station Crime No and Section of Law	Name of the complainant	Name of the accused persons	Brief facts of the case	Present status
1	KALADAGI PS 16/2019. u/s 143.147..283.341. r/w 149 IPC	-	1)Suresh arsikere 2)goudappa patil and 27 others	ಸಮೂದಿಸಿದ ಆರೋಪಿತರು ಹಾಗೂ ಇನ್ನೂ ಇತರರು ಕೂಡಿಕೊಂಡು ಗೈರ ಕಾಯ್ದೇಶೀರ್ ಮಂಡಳಿಯಾಗಿ ಸಂಗನಮತರಾಗಿ ಕೂಡಿಕೊಂಡು ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಗೆ ನೀರು ಬಿಡುವಂತೆ ಒತ್ತಾಯಿಸಿ ಕಲಾದಗಿ ಐಬಿ ಕ್ರಾಸದಲ್ಲಿ ಬಾಗಲಕೋಟ ಲೋಕಾಪೂರ ಎಸ್ ಎಚ್-20 ರಸ್ತೆಯ ಹಾಗೂ ಕಲಾದಗಿ ಕೈನಕಟ್ಟಿ ರಸ್ತೆಯ ಎಲ್ಲಾ ಮಾರ್ಗವನ್ನು ಸ್ಥಗಿತಗೊಳಿಸಿ ದೀರ್ಘಕಾಲದವರೆಗೆ ರಸ್ತೆಯ ತಡೆ ಮಾಡಿ ಸಾರ್ವಜನಿಕರ ವಾಹನಗಳನ್ನು ಮುಂದೆ ಹೋಗದಂತೆ ತಡೆದು ನಿಲ್ಲಿಸಿ ಸಾರ್ವಜನಿಕರ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಸರಾಗ ಜೀವನಕ್ಕೆ ಅಡ್ಡಿಪಡಿಸಿದ ಅಪರಾಧ.	PT

Bangalore Dist

SL No	Police Station Crime No and Section of Law	Name of the complainant	Name of the accused persons	Brief facts of the case	Present status
1	Doddabellapur PS 68/2019U/S143,147,148,323, 448,504,506,R/W149 IPC	Sri Murty CPC	1) Naresh reddy and 5 Other	-	cc awaiting 08/08/2019

RAICHUR

SL No	Police Station Crime No and Section of Law	Name of the complainant	Name of the accused persons	Brief facts of the case	Present status
1	Maski PS CrNo.25/2019 U/s 143, 147, 120 B, 124 A, 153 A, 504, R/w 149 IPC.	MANJUNATH	KAJASAB AND 5 OTHER	ದಿನಾಂಕ: 15.10.2019 ರಂದು ರಾತ್ರಿ 11.30 ಗಂಟೆಯಲ್ಲಿ ತಲೆಖಾನ್ ಗ್ರಾಮದ ಮಸೀದಿಯಲ್ಲಿ ಆರೋಪಿತರಾದ ಖಾಜಸಾಬ್ ಮತ್ತು ಇತರೆ 05 ಜನರು ಸೇರಿಕೊಂಡು 44 ಯೋಧರ ಮೇಲಿನ ದಾಳಿ ಮಾಡಿದ ಹಿನ್ನೆಲೆಯಲ್ಲಿ ಸಂಭ್ರಮಾ ಆಚರಣೆ ಮಾಡಿ ಸಿಹಿ ಹಂಚಿ ಹಸಿರು ಬಣ್ಣವನ್ನು ಮೈಮೇಲೆ ಎರಚಿಕೊಂಡು ಸಂತೋಷವನ್ನು ವ್ಯಕ್ತಪಡಿಸಿ ದೇಶದ್ರೋಹಿ ಮತ್ತು ಹುತಾತ್ಮ ಸೈನಿಕ್ಯರಿಗೆ ಅವಮಾನ ಮಾಡಿ, ಹಿಂದೂಸ್ತಾನ ಮುರ್ದಾಬಾದ್, ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿರುವುದನ್ನು ಖಂಡಿಸಿ ಶ್ರೀ ಮಂಜುನಾಥ ರವರು ನೀಡಿದ ದೂರಿನ ಮೇಲಿಂದ ಪ್ರಕರಣ ದಾಖಲಾಗಿರುತ್ತದೆ.	PT
2	Maski PS CrNo 28/2019, U/s 143, 147, 427, 435, 295, R/w 149 IPC.	-	8-10 UNKOWN	ದಿನಾಂಕ: 16.02.2019 ರಂದು ತಲೆಖಾನ್ ಗ್ರಾಮದ ಮಸೀದಿಯ ಮುಂಬಾಗದ ಅಂಗಳದಲ್ಲಿ ಸುಮಾರು 8-10 ಅಪರಿಚಿತ ಜನರು ಸೇರಿಕೊಂಡು ಮಸೀದಿಗೆ ಸೇರಿದ ಸಿಂಟೆಕ್ಸ್ ಹಾಗೂ ಇತರೆ ಸಾಮಾನುಗಳನ್ನು ಬೆಂಕಿ ಹಚ್ಚಿ ಸುಟ್ಟು ಲುಕ್ಸಾನ್ ಮಾಡಿ ಪವಿತ್ರವಾದ ಸ್ಥಳವನ್ನು ಅಪವಿತ್ರಗೊಳಿಸಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಎರಡು ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ.	PT

*****

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	735
ಮಾನ್ಯ ಸದಸ್ಯರ ಹೆಸರು	ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ)
ಉತ್ತರಿಸಬೇಕಾದವರು	ಅಬಕಾರಿ ಸಚಿವರು
ಉತ್ತರಿಸಬೇಕಾದ ದಿನಾಂಕ:	22-09-2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಕೇಂದ್ರಗಳು ಪ್ರಾರಂಭಗೊಂಡಿರುವ ವರ್ಷದಿಂದ ಜುಲೈ 2019 ರವರೆಗೆ ಅಸ್ತಿತ್ವದಲ್ಲಿರುವ ಎಂ.ಎಸ್.ಐ.ಎಲ್ ಕೇಂದ್ರಗಳ ಸಂಖ್ಯೆ ಎಷ್ಟು; (ಎಂ.ಎಸ್.ಐ.ಎಲ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲಾವಾರು/ತಾಲ್ಲೂಕುವಾರು ವಿವರ ನೀಡುವುದು) ಹಾಗೂ 2019ರ ಜುಲೈ ತಿಂಗಳ ನಂತರ ಹೊಸದಾಗಿ ಪ್ರಾರಂಭವಾಗಿರುವ ಎಂ.ಎಸ್.ಐ.ಎಲ್ ಕೇಂದ್ರಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು;	ಎಂ.ಎಸ್.ಐ.ಎಲ್ ಕೇಂದ್ರಗಳು ಪ್ರಾರಂಭಗೊಂಡಿರುವ ವರ್ಷದಿಂದ ಜುಲೈ 2019 ರವರೆಗೆ ಅಸ್ತಿತ್ವದಲ್ಲಿರುವ ಎಂ.ಎಸ್.ಐ.ಎಲ್ ಕೇಂದ್ರಗಳ ಸಂಖ್ಯೆ:778 ಹಾಗೂ 2019ರ ಜುಲೈ ತಿಂಗಳ ನಂತರ ಹೊಸದಾಗಿ ಪ್ರಾರಂಭವಾಗಿರುವ ಎಂ.ಎಸ್.ಐ.ಎಲ್ ಕೇಂದ್ರಗಳ ಸಂಖ್ಯೆ:85. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಿದೆ.
ಆ)	ರಾಜ್ಯದ ಕೆಲವೊಂದು ತಾಲ್ಲೂಕುಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸಾರ್ವಜನಿಕರು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಎಂ.ಎಸ್.ಐ.ಎಲ್ ಕೇಂದ್ರಗಳ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿದ್ದರೂ, ಅವುಗಳ ಸ್ಥಾಪನೆಗಾಗಿ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)	ಸಾರ್ವಜನಿಕರ ಹಿತದೃಷ್ಟಿಯಿಂದ ಸಾರ್ವಜನಿಕರು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಎಂ.ಎಸ್.ಐ.ಎಲ್ ಕೇಂದ್ರಗಳ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿದರೆ, ಅವುಗಳನ್ನು ಅಬಕಾರಿ ಕಾಯಿದೆ ನಿಯಮಗಳಿಗನುಸಾರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ.
ಇ)	ಸಾರ್ವಜನಿಕರ ಹಿತಾಸಕ್ತಿ ಕಡೆಗಣಿಸಿ ಎಂ.ಎಸ್.ಐ.ಎಲ್ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಹಂತದಲ್ಲಿ ಕಾನೂನು/ಕಾಯಿದೆ ರೂಪಿಸಲಾಗುತ್ತಿದೆಯೇ;	ಇಲ್ಲ.
ಈ)	ಹಾಗಿದ್ದಲ್ಲಿ, ಸಾರ್ವಜನಿಕರ/ಜನಪ್ರತಿನಿಧಿಗಳ ಕೋರಿಕೆಗೆ ಮಾನ್ಯತೆ ನೀಡದಿರಲು ಕಾರಣಗಳೇನು?	ಜನಪ್ರತಿನಿಧಿಗಳು/ಸಾರ್ವಜನಿಕರ ಕೋರಿಕೆಯನ್ನು ಗಮನದಲ್ಲಿಟ್ಟು ಕೊಂಡು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಆಇ 68 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು

ಅನುಬಂಧ			
ಎಂ.ಎಸ್.ಐ.ಎಲ್ ಕೇಂದ್ರಗಳ ವಿವರ			
ಕ್ರ.ಸಂ	ವಲಯ	ಎಂ.ಎಸ್.ಐ.ಎಲ್ ಕೇಂದ್ರಗಳು ಪ್ರಾರಂಭಗೊಂಡಿರುವ ವರ್ಷದಿಂದ ಜುಲೈ 2019 ರವರೆಗೆ ಅಸ್ತಿತ್ವದಲ್ಲಿರುವ ಎಂ.ಎಸ್.ಐ.ಎಲ್ ಕೇಂದ್ರಗಳ ಸಂಖ್ಯೆ	2019ರ ಜುಲೈ ತಿಂಗಳ ನಂತರ ಹೊಸದಾಗಿ ಪ್ರಾರಂಭವಾಗಿರುವ ಎಂ.ಎಸ್.ಐ.ಎಲ್ ಕೇಂದ್ರಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ
1	ಬೆಂಗಳೂರು ನಗರ ಜಿಲ್ಲೆ – 1	12	1
2	ಬೆಂಗಳೂರು ನಗರ ಜಿಲ್ಲೆ – 2	8	2
3	ಬೆಂಗಳೂರು ನಗರ ಜಿಲ್ಲೆ – 3	11	0
4	ಬೆಂಗಳೂರು ನಗರ ಜಿಲ್ಲೆ – 4	4	0
5	ಬೆಂಗಳೂರು ನಗರ ಜಿಲ್ಲೆ – 5	2	2
6	ಬೆಂಗಳೂರು ನಗರ ಜಿಲ್ಲೆ – 6	7	2
7	ಬೆಂಗಳೂರು ನಗರ ಜಿಲ್ಲೆ – 7	4	0
8	ಬೆಂಗಳೂರು ನಗರ ಜಿಲ್ಲೆ – 8	4	1
ಒಟ್ಟು		52	8
ಬೆಂಗಳೂರು ಗ್ರಾಮಾಂತರ			
1	ಹೊಸಕೋಟೆ	3	0
2	ದೇವನಹಳ್ಳಿ	2	0
3	ದೊಡ್ಡಬಳ್ಳಾಪುರ	4	0
4	ನೆಲಮಂಗಲ	1	0
ಒಟ್ಟು		10	0
ಚಿಕ್ಕಬಳ್ಳಾಪುರ			
1	ಚಿಕ್ಕಬಳ್ಳಾಪುರ	5	2
2	ಗೌರಿಬಿದನೂರು	4	0
3	ಚಿಂತಾಮಣಿ	3	0
4	ಬಾಗೇಪಲ್ಲಿ	3	1
5	ಶಿಡ್ಲಘಟ್ಟ	5	0
6	ಗುಡಿಬಂಡೆ	2	0
ಒಟ್ಟು		22	3
ಕೋಲಾರ			
1	ಕೋಲಾರ	6	0
2	ಮಾಲೂರು	3	0
3	ಶ್ರೀನಿವಾಸಪುರ	2	0
4	ಬಂಗಾರಪೇಟೆ	3	1
5	ಮುಳಬಾಗಿಲು	5	0
6	ಕೆ.ಜಿ.ಎಫ್	1	0

ಒಟ್ಟು		20	1
ರಾಮನಗರ			
1	ಚೆನ್ನಪಟ್ಟಣ	5	0
2	ಕನಕಪುರ	2	0
3	ರಾಮನಗರ	7	0
4	ಮಾಗಡಿ	2	0
ಒಟ್ಟು		16	0
ತುಮಕೂರು			
1	ತುಮಕೂರು	5	2
2	ಕುಣಿಗಲ್	4	1
3	ಗುಬ್ಬಿ	4	0
4	ಕೊರಟಗೆರೆ	3	0
5	ಮಧುಗಿರಿ	2	4
6	ಪಾವಗಡ	5	0
7	ಸಿರಾ	5	2
8	ಚಿ.ನಾ.ಹಳ್ಳಿ	4	1
9	ತಿಪಟೂರು	5	0
10	ತುರುವೇಕೆರೆ	4	2
ಒಟ್ಟು		41	12
ಬಾಗಲಕೋಟೆ			
1	ಬದಾಮಿ	5	0
2	ಬಾಗಲಕೋಟೆ	5	0
3	ಬೀಳಗಿ	3	0
4	ಹುನಗುಂದ	7	0
5	ಜಮಖಂಡಿ	10	0
6	ಮುಧೋಳ	7	0
ಒಟ್ಟು		37	0
ಬೆಳಗಾವಿ ಉತ್ತರ			
1	ಚಿಕ್ಕೋಡಿ	7	0
2	ಗೋಕಾಕ	7	1
3	ಹುಕ್ಕೇರಿ	3	0
4	ಅಥಣಿ	10	0
5	ರಾಯಭಾಗ	10	0
ಒಟ್ಟು		37	1
ಬೆಳಗಾವಿ ದಕ್ಷಿಣ			
1	ಬೆಳಗಾವಿ ವಲಯ – 1	5	0
2	ಬೆಳಗಾವಿ ವಲಯ – 2	3	0
3	ಬೆಳಗಾವಿ ವಲಯ – 3	2	0
4	ಖಾನಾಪುರ	3	0
5	ರಾಮದುರ್ಗ	2	1

6	ಸವದತ್ತಿ	8	0
7	ಬೈಲಹೊಂಗಲ	5	1
ಒಟ್ಟು		28	2
ವಿಜಯಪುರ			
1	ಬ.ಬಾಗೇವಾಡಿ	7	2
2	ವಿಜಯಪುರ	10	0
3	ಇಂಡಿ	9	0
4	ಮುದ್ದೇಬಿಹಾಳ	3	2
5	ಸಿಂದಗಿ	5	2
ಒಟ್ಟು		34	6
ಧಾರವಾಡ			
1	ಧಾರವಾಡ	5	0
3	ಕಲಘಟಗಿ	3	0
4	ಕುಂದಗೋಳ	5	0
5	ನವಲಗುಂದ	4	1
6	ಹುಬ್ಬಳ್ಳಿ	8	0
ಒಟ್ಟು		25	1
ಹಾವೇರಿ			
1	ರಾಣೇಬೆನ್ನೂರು	4	1
2	ಬ್ಯಾಡಗಿ	1	0
3	ಹಿರೇಕೆರೂರು	3	0
4	ಹಾನಗಲ್	2	0
5	ಹಾವೇರಿ	5	0
6	ಸವಣೂರ	3	0
7	ಶಿಗ್ಗಾವಿ	5	1
ಒಟ್ಟು		23	2
	ಬೀದರ್		
1	ಔರಾದ	5	0
2	ಬಸವಕಲ್ಯಾಣ	7	1
3	ಭಾಲ್ಕಿ	3	0
4	ಬೀದರ್	11	0
5	ಹುಮನಾಬಾದ	2	0
ಒಟ್ಟು		28	1
ಕಲಬುರಗಿ			
1	ಸೇಡಂ	2	0
2	ಚಿಂಚೋಳಿ	5	0
3	ಚಿತ್ತಾಪೂರ	5	0
4	ಕಲಬುರಗಿ	8	2
6	ಆಳಂದ	9	0
7	ಜೇವರ್ಗಿ	4	1

8	ಅಫಜ್ಜಲಪುರ	0	2
ಒಟ್ಟು		33	5
ರಾಯಚೂರು			
1	ರಾಯಚೂರು	8	2
2	ಮಾನವಿ	3	1
3	ದೇವದುರ್ಗ	6	0
4	ಸಿಂಧನೂರು	5	1
5	ಲಿಂಗಸುಗೂರು	4	3
ಒಟ್ಟು		26	7
ಯಾದಗಿರಿ			
1	ಶಹಾಪೂರ	4	1
2	ಸುರಪೂರ	2	2
3	ಯಾದಗಿರಿ	7	1
ಒಟ್ಟು		13	4
ಬಳ್ಳಾರಿ			
1	ಬಳ್ಳಾರಿ	8	0
2	ಕುರುಗೋಡು	1	0
3	ಸಂಡೂರು	3	0
4	ಸಿರುಗುಪ್ಪ	5	0
5	ಹೆಚ್.ಬಿ.ಹಳ್ಳಿ	3	0
6	ಹಡಗಲಿ	4	1
7	ಹೊಸಪೇಟೆ	4	0
9	ಹರಪನಹಳ್ಳಿ	2	1
10	ಕೂಡ್ಲಿಗಿ	4	0
11	ಕೊಟ್ಟೂರು	2	0
12	ಕಂಪ್ಲಿ	4	0
ಒಟ್ಟು		40	2
ಚಿತ್ರದುರ್ಗ			
1	ಚಿತ್ರದುರ್ಗ	5	0
2	ಹೊಸದುರ್ಗ	3	1
3	ಹೊಳಲ್ಕೆರೆ	2	1
4	ಚಳ್ಳಕೆರೆ	4	0
5	ಹಿರಿಯೂರು	3	0
6	ಮೊಳಕಾಲ್ಮೂರು	3	1
ಒಟ್ಟು		20	3
ದಾವಣಗೆರೆ			
1	ದಾವಣಗೆರೆ	8	3
2	ಚನ್ನಗಿರಿ	2	1
3	ಹರಿಹರ	5	1
4	ಜಗಳೂರು	3	1

5	ಹೊನ್ನಾಳಿ	4	0
6	ನ್ಯಾಮತಿ	1	0
ಒಟ್ಟು		23	6
ಗದಗ			
1	ಗದಗ	5	0
2	ಮುಂಡರಗಿ	2	0
3	ನರಗುಂದ	2	0
4	ರೋಣ	1	0
5	ಗಜೇಂದ್ರಗಡ	3	0
6	ಶಿರಹಟ್ಟಿ	1	0
7	ಲಕ್ಷ್ಮೇಶ್ವರ	1	0
ಒಟ್ಟು		15	0
ಕೊಪ್ಪಳ			
1	ಕೊಪ್ಪಳ	7	0
2	ಗಂಗಾವತಿ	1	0
3	ಕಾರಟಗಿ	1	0
4	ಕನಕಗಿರಿ	2	1
5	ಕುಷ್ಟಗಿ	4	2
6	ಕುಕನೂರ	0	0
7	ಯಲಬುರ್ಗಾ	3	0
ಒಟ್ಟು		18	3
ದಕ್ಷಿಣ ಕನ್ನಡ			
1	ಮಂಗಳೂರು	9	0
2	ಬಂಟ್ವಾಳ	6	1
3	ಬೆಳ್ತಂಗಡಿ	0	0
4	ಪುತ್ತೂರು	4	0
5	ಸುಳ್ಯ	2	0
ಒಟ್ಟು		21	1
ಕೊಡಗು			
1	ಸೋಮವಾರಪೇಟೆ	2	0
2	ಮಡಿಕೇರಿ	4	0
3	ವಿರಾಜಪೇಟೆ	3	0
ಒಟ್ಟು		9	0
ಶಿವಮೊಗ್ಗ			
1	ಹೊಸನಗರ	2	1
2	ತೀರ್ಥಹಳ್ಳಿ	3	0
3	ಶಿಕಾರಿಪುರ	4	1
4	ಸಾಗರ	4	0
5	ಸೊರಬ	4	0
6	ಭದ್ರಾವತಿ	8	0

7	ಶಿವಮೊಗ್ಗ	5	2
ಒಟ್ಟು		30	4
ಉಡುಪಿ			
1	ಉಡುಪಿ	5	0
2	ಕಾಪು	0	0
3	ಬ್ರಹ್ಮಾವರ	3	0
4	ಕುಂದಾಪುರ	2	0
5	ಬೈಂದೂರು	1	0
6	ಕಾರ್ಕಳ	3	0
7	ಹೆಬ್ರಿ	0	0
ಒಟ್ಟು		14	0
ಉತ್ತರ ಕನ್ನಡ			
1	ಅಂಕೋಲಾ	2	0
2	ಕಾರವಾರ	2	0
3	ಭಟ್ಕಳ	2	0
4	ಹೊನ್ನಾವರ	2	0
5	ಕುಮಟಾ	2	0
6	ಯಲ್ಲಾಪುರ	1	0
7	ಶಿರಸಿ	1	0
8	ಸಿದ್ದಾಪುರ	1	0
9	ಮುಂಡಗೋಡ	1	0
10	ಜೋಯಿಡಾ	1	0
ಒಟ್ಟು		15	0
ಚಾಮರಾಜನಗರ			
1	ಚಾಮರಾಜನಗರ	4	0
2	ಗುಂಡ್ಲುಪೇಟೆ	3	2
3	ಕೊಳ್ಳೇಗಾಲ	5	0
ಚಾಮರಾಜನಗರ ಒಟ್ಟು		12	2
ಚಿಕ್ಕಮಗಳೂರು			
1	ಚಿಕ್ಕಮಗಳೂರು	7	0
2	ಕಡೂರು	2	0
3	ತರೀಕೆರೆ	3	0
4	ಕೊಪ್ಪ	3	0
5	ಮೂಡಿಗೆರೆ	3	0
6	ಎನ್.ಆರ್.ಪುರ	4	0
ಒಟ್ಟು		25	0
ಹಾಸನ			
1	ಆಲೂರು	2	0
2	ಹಾಸನ	4	0
3	ಬೇಲೂರು	2	0

4	ಚನ್ನರಾಯಪಟ್ಟಣ	7	0
5	ಅರಸೀಕೆರೆ	6	1
6	ಸಕಲೇಶಪುರ	4	1
7	ಅರಕಲಗೂಡು	3	1
8	ಹೊಳೆನರಸೀಪುರ	2	0
ಒಟ್ಟು		30	3
ಮಂಡ್ಯ			
1	ಮಂಡ್ಯ	7	0
2	ಮದ್ದೂರು	6	1
3	ಮಳವಳ್ಳಿ	3	1
4	ಶ್ರೀರಂಗಪಟ್ಟಣ	5	0
5	ಪಾಂಡವಪುರ	3	1
6	ನಾಗಮಂಗಲ	4	1
7	ಕೆ.ಆರ್.ಪೇಟೆ	2	0
ಒಟ್ಟು		30	4
ಮೈಸೂರು ಗ್ರಾಮಾಂತರ			
1	ನಂಜನಗೂಡು	2	0
2	ಟಿ.ನರಸೀಪುರ	4	1
3	ಹೆಚ್.ಡಿ.ಕೋಟೆ	4	1
4	ಹುಣಸೂರು	4	2
5	ಕೆ.ಆರ್.ನಗರ	4	0
6	ಪಿರಿಯಾಪಟ್ಟಣ	5	0
ಒಟ್ಟು		23	4
ಮೈಸೂರು ನಗರ			
1	ಮೈಸೂರು	8	0
ಒಟ್ಟು		8	0
ರಾಜ್ಯದ ಒಟ್ಟು		778	85

05

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 736
2. ಸದಸ್ಯರ ಹೆಸರು : ಶ್ರೀ ರಘುಮೂರ್ತಿ.ಟಿ (ಚಳ್ಳಕೆರೆ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಪ್ರಾರಂಭಗೊಂಡು ಎಷ್ಟು ವರ್ಷಗಳಾಗಿವೆ;	ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು ಅಕ್ಟೋಬರ್–2008 ರಲ್ಲಿ ಪ್ರಾರಂಭಿಸಲಾಗಿದ್ದು, ಸುಮಾರು 12 ವರ್ಷಗಳು ಗತಿಸಿರುತ್ತದೆ.
ಆ.	ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ ಯಾವುವು;	ಅನುದಾನದ ಲಭ್ಯತೆಯೊಂದಿಗೆ ಭೂಸ್ವಾಧೀನ ಸಮಸ್ಯೆಗಳನ್ನು ನಿವಾರಿಸಿಕೊಂಡು, ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು 2023–24 ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.
ಇ.	ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಸರ್ಕಾರ ಯಾವ ಕ್ರಮವಹಿಸುವುದು;	
ಈ	ಈ ಯೋಜನೆಯಲ್ಲಿ ಇದುವರೆವಿಗೆ ಸಾಧಿಸಿರುವ ಕಾಮಗಾರಿಯ ಭೌತಿಕ ಹಾಗೂ ಆರ್ಥಿಕ ಪ್ರಗತಿ ಮತ್ತು ಕಾಮಗಾರಿಯ ಪ್ರಸ್ತುತ ಸ್ಥಿತಿಗತಿಯ ಸಂಪೂರ್ಣ ವಿವರ ನೀಡುವುದು?	ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿ ಹಾಗೂ ಕಾಮಗಾರಿಯ ಪ್ರಸ್ತುತ ಸ್ಥಿತಿಗತಿಯ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಸಂಖ್ಯೆ: ಜಸಂಇ 70 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 736 ಗೆ ಅನುಬಂಧ

ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಅವಕಾಶ ಕಲ್ಪಿಸಿದ್ದ ಹರಿ ನೀರಾವರಿ ಪದ್ಧತಿಯನ್ನು ಸೂಕ್ಷ್ಮ ನೀರಾವರಿ ಪದ್ಧತಿಗೆ ಬದಲಾಯಿಸಿ ಒಟ್ಟು 29.90 ಟಿ.ಎಂ.ಸಿ. ನೀರಿನ ಬಳಕೆಯೊಂದಿಗೆ ಬರಪೀಡಿತ ಜಿಲ್ಲೆಗಳಾದ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಗಳ 5,57,022 ಎಕರೆ (2,25,515 ಹೆಕ್ಟೇರ್) ಭೂ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಸಲುವಾಗಿ ಮತ್ತು ಇದೇ ಜಿಲ್ಲೆಗಳ 367 ಸಣ್ಣ ನೀರಾವರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ. 50 ರಷ್ಟನ್ನು ತುಂಬಿಸುವ ಸಲುವಾಗಿ 2012-13ನೇ ಸಾಲಿನ ದರಪಟ್ಟಿಗಳನ್ವಯ ತಯಾರಿಸಿದ ರೂ.12,340.00 ಕೋಟಿಗಳ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ:6/3/2015 ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

<u>ಯೋಜನೆಯ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳು ಈ ಕೆಳಗಿನಂತಿವೆ:</u>

ಹಂತ-1

1. ಪ್ಯಾಕೇಜ್-1: ತುಂಗಾ ನದಿಯಿಂದ 17.40 ಟಿ.ಎಂ.ಸಿ ನೀರನ್ನು ಎತ್ತಿ ಭದ್ರಾ ಜಲಾಶಯಕ್ಕೆ ಹರಿಸುವುದು:
   - ಸದರಿ ಪ್ಯಾಕೇಜ್ ಕಾಮಗಾರಿಯು 2 ಪಂಪ್‌ಹೌಸ್ ಒಳಗೊಂಡಿದ್ದು, ಒಟ್ಟು 11.267 ಕಿ.ಮೀ. ಗುರುತ್ವ ಕಾಲುವೆಯನ್ನು ಒಳಗೊಂಡಿರುತ್ತದೆ.
   - ಕಾಲುವೆ: 7.3 ಕಿ.ಮೀ ಅಗೆತ, 4.76 ಕಿ.ಮೀ ಲೈನಿಂಗ್ ಪೂರ್ಣಗೊಂಡಿರುತ್ತದೆ.
   - ಸಿ.ಡಿ ಕಾಮಗಾರಿಗಳು: ಒಟ್ಟು-28 ರಲ್ಲಿ, 8 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.
   - ಪಂಪ್‌ಹೌಸ್-1: Upto EOT crane beam top level completed. ಮೆಷಿನರಿ ಸರಬರಾಜು ಆಗಿದ್ದು, ಅಳವಡಿಸಬೇಕಾಗಿರುತ್ತದೆ. Electrical substation works and transmission line is under progress.
   - ಪಂಪ್‌ಹೌಸ್-2: Upto Raft and 3m wall completed. ಮೆಷಿನರಿ ಸರಬರಾಜು ಆಗಿದ್ದು, ಅಳವಡಿಸಬೇಕಾಗಿರುತ್ತದೆ. Electrical substation works and transmission line is under progress.
2. ಪ್ಯಾಕೇಜ್-2: ಭದ್ರಾ ಜಲಾಶಯದಿಂದ 29.90 ಟಿ.ಎಂ.ಸಿ. ನೀರನ್ನು ಅಜ್ಜಂಪುರದ ಹತ್ತಿರ ವಿತರಣಾ ತೊಟ್ಟಿಗೆ ಹರಿಸುವುದು:
   - ಸದರಿ ಪ್ಯಾಕೇಜ್ ಕಾಮಗಾರಿಯು 2 ಪಂಪ್‌ಹೌಸ್ ಒಳಗೊಂಡಿದ್ದು, ಒಟ್ಟು 40.29 ಕಿ.ಮೀ. ಉದ್ದದ ಗುರುತ್ವ ಕಾಲುವೆಯನ್ನು ಒಳಗೊಂಡಿರುತ್ತದೆ. ಕಾಮಗಾರಿಯು ಭೌತಿಕವಾಗಿ ಮುಕ್ತಾಯವಾಗಿರುತ್ತದೆ.
3. ಪ್ಯಾಕೇಜ್-3: ಅಜ್ಜಂಪುರ ಸುರಂಗ ನಿರ್ಮಾಣ:
   - ಈ ಪ್ಯಾಕೇಜ್ ಕಾಮಗಾರಿಯು ಅಜ್ಜಂಪುರ ಗ್ರಾಮದ ಹತ್ತಿರ ಸುಮಾರು 6.90 ಕಿ.ಮೀ ಉದ್ದದ ಸುರಂಗ ನಿರ್ಮಾಣ, 225 ಮೀ ಅಪ್ರೋಚ್ ಕಾಲುವೆ ಹಾಗೂ 2656 ಮೀ. ಎಕ್ಸಿಟ್ ಕಾಲುವೆ ನಿರ್ಮಾಣವನ್ನು ಒಳಗೊಂಡಿರುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಹಂತ-2

4. ತರೀಕೆರೆ ಏತ ನೀರಾವರಿ:
   - ತರೀಕೆರೆ ತಾಲ್ಲೂಕಿನ 79 ಕೆರೆಗಳನ್ನು ತುಂಬಿಸಲು ಮತ್ತು 20150 ಹೆ. ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಲ್ಲಿ ನೀರೊದಗಿಸುವ ರೂ.812.02 ಕೋಟಿ ಮೊತ್ತದ ತರೀಕೆರೆ ಏತ ನೀರಾವರಿ ಯೋಜನಾ ಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.
   - ಕಾಮಗಾರಿಯ ವಿದ್ಯುತ್ ಸಂಪರ್ಕದ ಪ್ರಸ್ತಾವನೆ ಅನುಮೋದನೆಗೊಂಡಿದ್ದು ಸ್ವಯಂ ಕಾರ್ಯಗತ ಯೋಜನೆಯಡಿ ಪ್ರಾರಂಭಿಸಲಾಗಿರುತ್ತದೆ. ಮೈನ್ ಪಂಪ್ ಹೌಸ್ ಹಾಗೂ 11 ಸಂಖ್ಯೆ ಸಂಪ್ ಕಮ್ ಪಂಪ್ ಹೌಸ್ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಪ್ಯಾಕೇಜ್-1ರ 6.6 ಕಿಮೀ ಎಂ.ಎಸ್ ಪೈಪ್ ಹಾಗೂ 53.22 ಕಿಮೀ ಎಚ್.ಡಿ.ಪಿ.ಈ ಪೈಪ್ ಲೇಯಿಂಗ್ ಪೂರ್ಣಗೊಂಡಿರುತ್ತದೆ. ಪ್ಯಾಕೇಜ್-2 ರ 18 ಕಿಮೀ ಎಂ.ಎಸ್ ಪೈಪ್ ಹಾಗೂ 103.22 ಕಿಮೀ ಎಚ್.ಡಿ.ಪಿ.ಇ ಪೈಪ್ ಲೇಯಿಂಗ್ ಪೂರ್ಣಗೊಂಡಿರುತ್ತದೆ.

5. ಚಿತ್ರದುರ್ಗ ಶಾಖಾ ಕಾಲುವೆ:

- ಒಟ್ಟು 134.597 ಕಿ.ಮೀ ಗಳಲ್ಲಿ 72.516 ಕಿ.ಮೀ ರಷ್ಟು ಅಗೆತ, 27.41 ಲೈನಿಂಗ್ ಪೂರ್ಣಗೊಂಡಿರುತ್ತದೆ. ಒಟ್ಟು 317 ಸಿ.ಡಿಗಳಿದ್ದು, 57 ಸಿ.ಡಿ ಗಳು ಪೂರ್ಣಗೊಂಡಿದ್ದು, 102 ಪ್ರಗತಿಯಲ್ಲಿದೆ, 158 ಸಿ.ಡಿ. ಗಳನ್ನು ಪ್ರಾರಂಭಿಸಬೇಕಾಗಿದೆ. ಹಾಗೂ 9 ಅಕ್ವಾಡಕ್ಟ್ ಗಳಲ್ಲಿ 2 ಪೂರ್ಣಗೊಂಡಿದ್ದು, 5 ಪ್ರಗತಿಯಲ್ಲಿದೆ, ಒಟ್ಟು 4 ಟನಲ್‌ಗಳಲ್ಲಿ 2 ಪೂರ್ಣಗೊಂಡಿದ್ದು 2 ಪ್ರಗತಿಯಲ್ಲಿದೆ.
- ಚಿತ್ರದುರ್ಗ ಶಾಖಾ ಕಾಲುವೆಯ ಕಿ.ಮೀ. 0.00 ರಿಂದ 61.23 ರ ವರೆಗಿನ 36000 ಹೆ. ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಪ್ರಾಥಮಿಕ ಹಂತದ ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಪೂರ್ಣಗೊಳಿಸಿದ್ದು, ಅಂದಾಜು ಪತ್ರಿಕೆಗಳನ್ನು ದಿ:18.06.2020 ರಂದು ಜರುಗಿದ ಡ್ರಿಪ್ ಸಮಿತಿ ಸಭೆಯಲ್ಲಿ ಮಂಡಿಸಿ ಚರ್ಚಿಸಿದ್ದು ಅದರಂತೆ ಅಂದಾಜು ಪತ್ರಿಕೆಗಳನ್ನು ಪರಿಷ್ಕರಿಸಲಾಗುತ್ತಿದೆ.

6. ಜಗಳೂರು ಶಾಖಾ ಕಾಲುವೆ :

- ಚಿತ್ರದುರ್ಗ ಶಾಖಾ ಕಾಲುವೆಯ ಕಿ.ಮೀ 116.11 ರಲ್ಲಿ ಪ್ರಾರಂಭವಾಗುವ ಜಗಳೂರು ಶಾಖಾ ಕಾಲುವೆಯ ವ್ಯಾಪ್ತಿಯಡಿ ಬರುವ ರೈತರು ಹೆಚ್ಚಿನ ನೀರಿನ ಬೇಡಿಕೆಯೊಂದಿಗೆ ಪ್ರತಿಭಟನೆ ಮಾಡಿ ಪರ್ಯಾಯ ಪಂಕ್ತೀಕರಣಕ್ಕಾಗಿ ಕೋರಿದ್ದು, ಇದನ್ನು ಅಭ್ಯಸಿಸಲು ತಜ್ಞರ ಸಮಿತಿಯನ್ನು ಸರ್ಕಾರದ ಪತ್ರ ದಿನಾಂಕ:12.12.2017 ರಲ್ಲಿ ರಚಿಸಲಾಗಿರುತ್ತದೆ. ತಜ್ಞರ ಸಮಿತಿಯು ನೀಡಿರುವ ಅಂತಿಮ ವರದಿಯನ್ವಯ 2.40 ಟಿ.ಎಂ.ಸಿ ನೀರಿನ ಹಂಚಿಕೆಗೆ ಸರ್ಕಾರದಿಂದ ದಿನಾಂಕ:20-01-2020 ರಂದು ಅನುಮೋದನೆಯನ್ನು ನೀಡಲಾಗಿರುತ್ತದೆ.

7. ಚಿತ್ರದುರ್ಗ ಶಾಖಾ ಕಾಲುವೆ ಅಡಿಯಲ್ಲಿನ ಫೀಡರ್ ಕಾಲುವೆಗಳು:

- ಹೊಳಲ್ಕೆರೆ ಫೀಡರ್ ಕಾಲುವೆ: ಚಿತ್ರದುರ್ಗ ಶಾಖಾ ಕಾಲುವೆಯಡಿ ಬರುವ ಹೊಳಲ್ಕೆರೆ ಫೀಡರ್ ಕಾಲುವೆಯ ಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಇದರಡಿ 4.53 ಕಿ.ಮೀ ಉದ್ದ ಕಾಲುವೆಯ ನಿರ್ಮಾಣ, 64.50 ಕಿ.ಮೀ ಪೈಪ್‌ಲೈನ್ ಮತ್ತು 15 ಸಿ.ಡಿ ಕಾಮಗಾರಿಗಳಿದ್ದು, ಈ ಪೈಕಿ 2.0 ಕಿ.ಮೀ ವರೆಗೆ ಅಗೆತ, 57.00 ಕಿ.ಮೀ ವರೆಗೆ ಪೈಪ್‌ಲೈನ್ ಅಳವಡಿಕೆ ಮತ್ತು 3 ಸಿ.ಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ 12 ಸಿ.ಡಿ. ಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.
- ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಕಾಮಗಾರಿ: ಚಳ್ಳಕೆರೆ ತಾಲ್ಲೂಕಿನ 51 ಹಾಗೂ ಮೊಳಕಾಲ್ಮೂರು ತಾಲ್ಲೂಕಿನ 20 ಕೆರೆಗಳನ್ನು ತುಂಬಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.
- ಪಾವಗಡ ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಕಾಮಗಾರಿ: ಕುಡಿಯುವ ನೀರಿಗಾಗಿ ಪಾವಗಡ ತಾಲ್ಲೂಕಿನ 30 ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

8. ತುಮಕೂರು ಶಾಖಾ ಕಾಲುವೆ:

- ಒಟ್ಟು 159.684 ಕಿ.ಮೀ ಗಳಲ್ಲಿ 23.215 ಕಿ.ಮೀ ರಷ್ಟು ಅಗೆತ ಪೂರ್ಣಗೊಂಡಿರುತ್ತದೆ. ಒಟ್ಟು 446 ಸಿ.ಡಿಗಳಿದ್ದು, 19 ಸಿ.ಡಿಗಳು ಪೂರ್ಣಗೊಂಡಿದ್ದು, 26 ಪ್ರಗತಿಯಲ್ಲಿದೆ,401 ಸಿ.ಡಿ. ಗಳನ್ನು ಪ್ರಾರಂಭಿಸಬೇಕಾಗಿದೆ. ಹಾಗೂ 9 ಅಕ್ವಾಡಕ್ಟ್ ಗಳಲ್ಲಿ 6 ಪ್ರಗತಿಯಲ್ಲಿದೆ, 1 ಟನಲ್ ಕಾಮಗಾರಿಯು ಪ್ರಾರಂಭಿಸಬೇಕಾಗಿರುತ್ತದೆ.
- ತುಮಕೂರು ಶಾಖಾ ಕಾಲುವೆಯ ಕಿ.ಮೀ. 0.00 ರಿಂದ 76.00 ರ ವರೆಗಿನ 28600 ಹೆ. ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಪ್ರಾಥಮಿಕ ಹಂತದ ಸರ್ವೆ ಮತ್ತು ತನಿಖಾ ಕಾರ್ಯ ಪ್ರಗತಿಯಲ್ಲಿದೆ.

9.ತುಮಕೂರು ಶಾಖಾ ಕಾಲುವೆ ಅಡಿಯಲ್ಲಿನ ಫೀಡರ್ ಕಾಲುವೆಗಳು:

- ಶಿರಾ ತಾಲ್ಲೂಕಿನಲ್ಲಿ ಕೆರೆ ತುಂಬಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳು ಜಾರಿಯಲ್ಲಿರುತ್ತವೆ.
- ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕೆರೆ ತುಂಬಿಸುವ ಕಾಮಗಾರಿಯ ಟೆಂಡರ್ ಆಹ್ವಾನಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆರ್ಥಿಕ ಪ್ರಗತಿ:

ಯೋಜನೆಯ ಪುನರ್ ಪರಿಷ್ಕೃತ ಅಂದಾಜು ಮೊತ್ತ ರೂ 20852.00 ಕೋಟಿಗಳಾಗಲಿದೆ ಎಂದು ಅಂದಾಜಿಸಲಾಗಿದೆ. (2018-19ನೇ ಸಾಲಿನ ದರ ಪಟ್ಟಿಯಂತೆ). ಭದ್ರಾ ಮೇಲ್ದಂಡೆ ಯೋಜನೆಯಡಿಯ ಕಾಮಗಾರಿಗಳಿಗೆ ಒಟ್ಟಾರೆ ಪ್ರಾರಂಭದಿಂದ ಇದುವರೆವಿಗೆ, ಆಗಸ್ಟ್-2020ರ ಅಂತ್ಯಕ್ಕೆ ರೂ. 4015.28 ಕೋಟಿಗಳ ಸಂಚಿತ ವೆಚ್ಚ ಮಾಡಲಾಗಿದೆ.

****

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 747
2. ಸದಸ್ಯರ ಹೆಸರು : ಶ್ರೀ. ತುಕಾರಾಮ್ ಈ. (ಸಂಡೂರ್)
3. ಉತ್ತರಿಸಬೇಕಾದ ದಿನಾಂಕ : 22-09-2020.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	2020-21ರ ಆಗಸ್ಟ್ ಅಂತ್ಯಕ್ಕೆ ವಿತ್ತೀಯ ಹೊಣೆಗಾರಿಕೆಯ ದರ ಎಷ್ಟು; (ವಿವರ ನೀಡುವುದು);	ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ,2002 ರನ್ವಯ (ಕೆಳಗಿನ ಕೋಷ್ಟಕ ನೋಡಿ)
ಆ	ವಿತ್ತೀಯ ಹೊಣೆಗಾರಿಕೆಯ ಬಿಕ್ಕಟ್ಟನ್ನು ಹೇಗೆ ನಿಭಾಯಿಸಲಾಗುತ್ತದೆ?	ವಿತ್ತೀಯ ಹೊಣೆಗಾರಿಕೆಯ ಬಿಕ್ಕಟ್ಟನ್ನು ನಿಭಾಯಿಸಲು ರಾಜ್ಯ ಸರ್ಕಾರದಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವುಗಳ ಪೈಕಿ ಪ್ರಮುಖ ಕ್ರಮಗಳ ಮಾಹಿತಿ ಕೆಳಕಂಡಂತೆ ಇರುತ್ತದೆ. 1. ಸಂಪನ್ಮೂಲಗಳ ಕ್ರೂಢೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು. 2. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವುದು. 3. ಕೇಂದ್ರ ಸರ್ಕಾರವು ಅನುವು ಮಾಡಿಕೊಡುವಷ್ಟು ಸಾಲವನ್ನು ಪಡೆಯುವುದು.

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ,2002 ರನ್ವಯ

ವಿವರ	2020-21 ನೇ ಆಯವ್ಯಯ ಅಂದಾಜಿನಂತೆ ರೂ	ಜುಲೈ -2020ರ ಅಂತ್ಯಕ್ಕೆ ಮಹಾ ಲೇಖಪಾಲರ ಲೆಕ್ಕ
		(ರೂ.ಕೋಟಿಗಳಲ್ಲಿ)
ವಿತ್ತೀಯ ಕೊರತೆ	46072	8729
ರಾಜಸ್ವ ಕೊರತೆ	-143(*)	3214

(*) – ಚಿನ್ಹೆಯು ರಾಜಸ್ವ ಹೆಚ್ಚಳವನ್ನು ಸೂಚಿಸುತ್ತದೆ.

ಸಂಖ್ಯೆ: ಆಇ 41 ಬಿಜಿಎಲ್ 2020

ಬಿ.ಎಸ್. ಯಡಿಯೂರಪ್ಪ (signature)

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 748
2. ಸದಸ್ಯರ ಹೆಸರು : ಶ್ರೀ. ತುಕಾರಾಮ್ ಈ. (ಸಂಡೂರ್)
3. ಉತ್ತರಿಸಬೇಕಾದ ದಿನಾಂಕ : 22-09-2020.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದ ಆದಾಯ ತೆರಿಗೆಯಲ್ಲಿ ಕೇಂದ್ರದ ಪಾಲಿನ ಮೊತ್ತವೆಷ್ಟು;	2020-21ನೇ ಸಾಲಿನಲ್ಲಿ ಮಹಾಲೇಖಪಾಲರ ಕಛೇರಿಯಿಂದ ಜುಲೈ 2020ರ ಅಂತ್ಯಕ್ಕೆ ಸ್ವೀಕೃತವಾದ ವರದಿಯನ್ವಯ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದ ತೆರಿಗೆಯ ಹಂಚಿಕೆ ಹಾಗೂ ಸಹಾಯಾನುದಾನದ ವಿವರಗಳು ಈ ಕೆಳಕಂಡಂತಿರುತ್ತವೆ: (see table below)
ಆ	ಇದರಲ್ಲಿ, ರಾಜ್ಯಕ್ಕೆ ಸಿಗುವ ಅನುದಾನದ ಮೊತ್ತವೆಷ್ಟು;	
ಇ	ಯಾವ ಯೋಜನೆಗಳಿಗೆ ಕೇಂದ್ರ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುತ್ತಿದೆ;	ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಈ	ಈ ಅನುದಾನಗಳ ಅವಧಿ ಎಲ್ಲಿಯವರೆಗೆ ಇರುತ್ತದೆ.	ಕೇಂದ್ರ ಸರ್ಕಾರವು ಜನಪರ ಮತ್ತು ದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಿವಿಧ ಯೋಜನೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಸದರಿ ಯೋಜನೆಗಳ ಅಗತ್ಯತೆ ಮತ್ತು ಅವಶ್ಯಕತೆಗನುಗುಣವಾಗಿ ಪ್ರತಿ ವರ್ಷ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಕೇಂದ್ರದ ಯೋಜನೆಗಳು ಚಾಲ್ತಿಯಲ್ಲಿರುವವರೆಗೆ ಅನುದಾನದ ಅವಧಿ ಮುಂದುವರೆಯುತ್ತದೆ.

(ರೂ. ಕೋಟಿಗಳಲ್ಲಿ)

ವಿವರ	2020-21ರ ಆಯವ್ಯಯ ಅಂದಾಜು	ಜುಲೈ 2020ರ ಅಂತ್ಯಕ್ಕೆ ಮಹಾಲೇಖಪಾಲರ ಲೆಕ್ಕ
ಕೇಂದ್ರದ ತೆರಿಗೆ ಹಂಚಿಕೆ	28591.00	6417.28
ಕೇಂದ್ರದ ಸಹಾಯಾನುದಾನ	31570.00	13217.53

ಸಂಖ್ಯೆ: ಆಇ 40 ಬಿಜಿಎಲ್ 2020

(ಸಹಿ)

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಅನುಬಂಧ

ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ವಿವರ

(ರೂ. ಲಕ್ಷ ಗಳಲ್ಲಿ)

ಲೆಕ್ಕ ಶೀರ್ಷಿಕೆ	ವಿವರಗಳು	ಮಹಾಲೇಖಪಾಲರ ಲೆಕ್ಕ ಜುಲೈ 2020 ರ ಅಂತ್ಯಕ್ಕೆ
1601-06-101-1-01	ಎನ್.ಎಮ್.ಎಸ್.ಎ. – ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ	335.00
1601-06-101-1-05	ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ	4601.20
1601-06-101-1-07	ಕೃಷಿ ಯಾಂತ್ರಿಕತೆಯ ಮೇಲಿನ ಉಪ ಅಭಿಯಾನ	6245.35
1601-06-101-1-09	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	5950.00
1601-06-101-1-36	ರಾಷ್ಟ್ರೀಯ ತೋಟಗಾರಿಕಾ ಅಭಿಯಾನ	5000.00
1601-06-101-1-67	ರಾಷ್ಟ್ರೀಯ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮ	2290.03
1601-06-101-1-86	ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ	898.53
1601-06-101-2-33	ಸ್ವಚ್ಛ ಭಾರತ–ಗ್ರಾಮೀಣ	12630.68
1601-06-101-2-34	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ	18808.07
1601-06-101-2-35	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	83056.87
1601-06-101-2-36	ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ	9528.97
1601-06-101-2-56	ಕೃಷೋನ್ನತಿ ಯೋಜನೆ (ಎನ್.ಎಂ.ಎಸ್.ಎ. ಅಡಿಯಲ್ಲಿ ಕೃಷಿ ಅರಣ್ಯಗಾರಿಕೆ)	189.75
1601-06-101-2-60	ಹುಲಿ ಯೋಜನೆ	616.97
1601-06-101-2-62	ಆನೆ ಯೋಜನೆ ಕರ್ನಾಟಕ	330.40
ಆ)	ಭಾರಿ ಮಳೆಯಿಂದ ಆದ ಅನಾಹುತಗಳು ಹಾಗೂ ಪ್ರದೇಶಗಳ ವಿವರ ನೀಡುವುದು; ಇದರಿಂದ ಆದ ನಷ್ಟವೆಷ್ಟು; (ಪೂರ್ಣ ವಿವರ ನೀಡುವುದು)	<u>ರಾಜರಾಜೇಶ್ವರಿ ನಗರ ವಲಯ</u> 1. <u>ವೃಷಭಾವತಿ ಕಣಿವೆ (ಪ್ರೈಮರಿ / ಸೆಕೆಂಡರಿ)</u> ದಿನಾಂಕ: 25-06-2020 ರಂದು ಸುರಿದ ಭಾರಿ ಮಳೆಯಿಂದಾಗಿ ವಾರ್ಡ್ ಸಂಖ್ಯೆ: 198ರ ಕೆಂಗೇರಿ ಬಳಿ ಬಿಡಿಎ ವಾಣಿಜ್ಯ ಸಂಕೀರ್ಣದ ಎದುರು ಭಾಗದಲ್ಲಿ ವೃಷಭಾವತಿ ನಾಲೆಗೆ ಈ ಹಿಂದೆ ಸ್ಥಳೀಯ ಆಡಳಿತದಿಂದ ನಿರ್ಮಿಸಿದ್ದ ತಡೆಗೋಡೆಯು ಕುಸಿದಿರುತ್ತದೆ. ಇದರಿಂದಾಗಿ ಯಾವುದೇ ಪ್ರಾಣ ಹಾನಿ ಅಥವಾ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುವುದಿಲ್ಲ. 2. <u>ವಾರ್ಡ್ ಸಂಖ್ಯೆ:40ರ ದೊಡ್ಡಬಿದಿರುಕಲ್ಲು ಭವಾನಿ ನಗರ</u> ಸದರಿ ಬಡಾವಣೆಯು Low Lying Area ಆಗಿದ್ದು, ಭಾರಿ ಮಳೆ ಸುರಿದ ಕಾರಣ ನೀರಿನ ಪ್ರಮಾಣ ಹೆಚ್ಚಾಗಿದ್ದು, ಇದರಿಂದಾಗಿ ಬಡಾವಣೆಯಲ್ಲಿ ನೀರು ನಿಂತಿರುತ್ತದೆ. ಇದರಿಂದಾಗಿ ಯಾವುದೇ ಪ್ರಾಣಹಾನಿ ಹಾಗೂ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುವುದಿಲ್ಲ.

... 2/-

ದಾಸರಹಳ್ಳಿ ವಲಯ

ಚೊಕ್ಕಸಂದ್ರ ಮತ್ತು ವಾರ್ಡ್ ನಂ.39ರಲ್ಲಿ ಭಾರಿ ಮಳೆ ಸುರಿದ ಕಾರಣ ನೀರಿನ ಪ್ರಮಾಣ ಹೆಚ್ಚಾಗಿದ್ದು, ಇದರಿಂದಾಗಿ ಬಡಾವಣೆಯಲ್ಲಿ ನೀರು ನಿಂತಿರುತ್ತದೆ. ಯಾವುದೇ ಪ್ರಾಣ ಹಾನಿ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗಿರುವುದಿಲ್ಲ.

ಯಲಹಂಕ ವಲಯ

ಯಲಹಂಕ ವಲಯದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ರಾಚೇನಹಳ್ಳಿ ಕೆರೆಯ ಸುತ್ತಮುತ್ತ ಮರಿಯಣ್ಣನ ಪಾಳ್ಯ, ಟಾಟಾ ನಗರ, ಬಸವ ಸಮಿತಿ ಲೇಔಟ್, ದೊಡ್ಡ ಬೊಮ್ಮಸಂದ್ರ ಹಾಗೂ ಭಾಗಶ: ಸಿಂಗಾಪುರ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿನಾಂಕ: 08-09-2020 ರಂದು ಸುರಿದ ಭಾರಿ ಮಳೆಯಿಂದ ಯಾವುದೇ ಪ್ರಾಣಹಾನಿ ಹಾಗೂ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುವುದಿಲ್ಲ.

ಮಹದೇವಪುರ ವಲಯ

ಹೊರಮಾವು ವಾರ್ಡ್-25 ರ ಪ್ರದೇಶದಲ್ಲಿ ರಾಜಕಾಲುವೆ ಹೆಚ್-400 ರ ಅಗಲವು 45 ಮೀಟರ್ ಇದ್ದು, ರೈಲ್ವೆ ಸೇತುವೆಯ ಎರಡು ಕಿಂಡಿಗಳು ತಲಾ 4.7 X 2.6 ಸೆಕ್ಷನ್ ಮಾತ್ರ ಇರುತ್ತವೆ. ಸದರಿ ಕಿರಿದಾದ ಕಿಂಡಿಗಳಿಂದಾಗಿ ಮಳೆಗಾಲದಲ್ಲಿ ಆಗಬಹುದಾದ ಅನಾಹುತವನ್ನು ಅರಿತು ದಿನಾಂಕ: 19-05-2020 ರಂದು ರೈಲ್ವೆ ಸಿಬ್ಬಂದಿಯವರೊಂದಿಗೆ ಜಂಟಿ ತಪಾಸಣೆ ನಡೆಸಿ, ಹೆಚ್ಚುವರಿ ಕಿಂಡಿಗಳನ್ನು ಒದಗಿಸಲು ಕೋರಲಾಗಿತ್ತು. ದಿನಾಂಕ: 08-09-2020 ರಂದು ಸುತ್ತಮುತ್ತಲಿನ ಪ್ರದೇಶ ಮತ್ತು ಮೇಲ್ದಂಡೆ ಪ್ರದೇಶವಾದ ಬ್ಯಾಟರಾಯನಪುರದಲ್ಲಿಯೂ ಸಹ ಸುಮಾರು 130 ಮಿ.ಮೀ ನಷ್ಟು ಸುರಿದ ಮಳೆಯಿಂದ ಅತೀ ಹೆಚ್ಚು ನೀರು ಹರಿದುಬಂದು, ರೈಲ್ವೆ ಸೇತುವೆಯ ಕಿಂಡಿಗಳಲ್ಲಿ ಸರಾಗವಾಗಿ ಮುಂದೆ ಸಾಗದೆ ಸುತ್ತಮುತ್ತಲಿನ ತಗ್ಗು ಪ್ರದೇಶಗಳಾದ ಶ್ರೀ ಸಾಯಿ ಬಡಾವಣೆ, ವಡ್ಡರಪಾಳ್ಯ (ಹೊರಮಾವು ಮುಖ್ಯ ರಸ್ತೆ), ಹೆಣ್ಣೂರು ಮುಖ್ಯ ರಸ್ತೆ, ಬ್ಲೇಸಿಂಗ್ ಗಾರ್ಡನ್ ಮತ್ತು ಕಾವೇರಿ ಬಡಾವಣೆ ಜಲಾವೃತಗೊಂಡು ನಿವಾಸಿಗಳು ಸಂಕಷ್ಟಕ್ಕೆ ಒಳಗಾಗಿರುತ್ತಾರೆ.

. . . 3/-

		ಪೂರ್ವ ವಲಯ ಇತ್ತೀಚೆಗೆ ಸುರಿದ ಭಾರಿ ಮಳೆಯ ಕಾರಣ ನೀರಿನ ಪ್ರಮಾಣ ಹೆಚ್ಚಾಗಿದ್ದು, ಒಡಾವಣೆಯಲ್ಲಿ ನೀರು ನಿಂತಿರುತ್ತದೆ. ಆದರೆ ರಾಜಕಾಲುವೆಯಿಂದಾಗಿ ಯಾವುದೇ ರೀತಿ ಪ್ರವಾಹ ಉಂಟಾಗಿರುವುದಿಲ್ಲ.
ಇ)	ಸಂತ್ರಸ್ತದಾರರಿಗೆ ಸರ್ಕಾರದ ವತಿಯಿಂದ ನೀಡಿದ ಪರಿಹಾರವೆಷ್ಟು	ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾದ ನಂತರ ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.
ಈ)	ಮಳೆ ನೀರು ಸರಾಗವಾಗಿ ಹರಿದು ಹೋಗಲು ಸರ್ಕಾರ ರೂಪಿಸಿದ ಕಾರ್ಯಕ್ರಮಗಳಾವುವು? (ಪೂರ್ಣ ವಿವರ ನೀಡುವುದು)	1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಡಿಕೆಯಂತೆ ವಾರ್ಷಿಕ ಸರಾಸರಿ 890 ಮಿ.ಮೀ ಇಂದ 1200 ಮಿ.ಮೀ ಮಳೆಯಾಗುವ ನಿರೀಕ್ಷೆಯಿರುತ್ತದೆ. 2. ಸದರಿ ಮಳೆಯು ವಾರ್ಷಿಕ 60 ರಿಂದ 70 ದಿನಗಳು ಆಗುವ ಇತಿಹಾಸವಿದ್ದು, ಪ್ರತಿ ದಿವಸದ ಮಳೆಯು ಸರಾಸರಿ 18.00 ಮಿ.ಮೀ ಇರುತ್ತದೆ. 3. ಈ ಹಿಂದೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಂದಾಜು ದಿನಂಪ್ರತಿ ಪ್ರತಿ ಗಂಟೆಗೆ ಸರಿ ಸುಮಾರು 40.00 ಮಿ.ಮೀ ಮಳೆಯಾದರೆ ರಾಜಕಾಲುವೆಯಿಂದ ಮಳೆ ನೀರು ಉಕ್ಕಿ ಹರಿದು ಅನಾಹುತಗಳು ಸಂಭವಿಸುತ್ತಿರುವುದು ಸಾಮಾನ್ಯವಾಗಿದೆ. 4. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ರಾಜಕಾಲುವೆಯ ಉದ್ದ 842.00 ಕಿ.ಮೀ ಪೈಕಿ, ತಡೆಗೋಡೆ ಇರುವಂತಹ 440.00 ಕಿ.ಮೀ ಉದ್ದದ ರಾಜಕಾಲುವೆಯನ್ನು ವಾರ್ಷಿಕ ನಿರ್ವಹಣಾ ಯೋಜನೆ ಅಡಿಗೆ ತರಲಾಗಿದ್ದು, ಸದರಿ ಯೋಜನೆಯ ಫಲಶ್ರುತಿಯಿಂದ, ಹಾಲಿ ರಾಜಕಾಲುವೆಯ ಸಾಮರ್ಥ್ಯ ಸರಿಸುಮಾರು 60.00 ಮಿ.ಮೀ ನಿಂದ 70.00 ಮಿ.ಮೀ ವರೆಗೂ ಮಳೆಯಾದರೂ ಯಾವುದೇ ಅನಾಹುತ ಸಂಭವಿಸುತ್ತಿರುವುದಿಲ್ಲ. 5. ಆದರೆ, ಮಳೆಗಾಲದಲ್ಲಿ ಮಳೆಯ ತೀವ್ರತೆಯು ಪ್ರತಿ ಗಂಟೆಗೆ ಸುಮಾರು 70.00 ಮಿ.ಮೀ ಗೂ ಹೆಚ್ಚಿಗೆ ಆದ ಸಂಧರ್ಭದಲ್ಲಿ ರಾಜಕಾಲುವೆಗಳು ಉಕ್ಕಿ ಹರಿಯುದ ಸಾಧ್ಯತೆಗಳು ಇರುತ್ತವೆ. 6. ಇಂತಹ ಪರಿಸ್ಥಿತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆಳಕಂಡ ಕ್ರಿಯಾಯೋಜನೆಯಲ್ಲಿ ವ್ಯವಸ್ಥಿತ ರೂಪದಲ್ಲಿ ಮಳೆಹಾನಿ ತಡೆಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. • ತುರ್ತು ಕಾರ್ಯಕ್ರಮಗಳು. • ಅಲ್ಪಾವಧಿ ಕಾರ್ಯಕ್ರಮಗಳು. • ದೀರ್ಘಾವಧಿ ಕಾರ್ಯಕ್ರಮಗಳು.

<u>ತುರ್ತು ಕಾರ್ಯಕ್ರಮಗಳು :</u> ತುರ್ತು ಕಾರ್ಯಕ್ರಮಗಳ ಅಡಿಯಲ್ಲಿ ಉಪ ವಿಭಾಗದ ಹಂತದಲ್ಲಿ 63 ಕಂಟ್ರೋಲ್ ರೂಂಗಳನ್ನು ಸ್ಥಾಪಿಸಲಾಗಿದ್ದು, ಸದರಿ ಕಂಟ್ರೋಲ್ ರೂಂಗಳಲ್ಲಿ ನೀರು ಎತ್ತುವ ಪಂಪುಗಳು, ಕಾರ್ಮಿಕರು ಮತ್ತು ಟ್ರ್ಯಾಕ್ಟರ್‌ಗಳನ್ನು ನಿಯೋಜಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ತುರ್ತಾಗಿ ನಿರ್ವಹಿಸಲಾಗುತ್ತಿದೆ.

"Flash flood" ಸಂದರ್ಭದಲ್ಲಿ ರಾಜಕಾಲುವೆಯಿಂದ ಮಳೆನೀರು ಉಕ್ಕಿ ಹರಿಯುವುದನ್ನು ತಡೆಗಟ್ಟಲು ಸಂಗ್ರಹಿಸಿಕೊಳ್ಳಲಾದ ಮರಳು ಚೀಲಗಳನ್ನು ಅಳವಡಿಸಿ ಮಳೆ ಅನಾಹುತಗಳನ್ನು ತಡೆಗಟ್ಟಲಾಗುತ್ತಿರುತ್ತದೆ. ಇದರ ಜೊತೆಗೆ ಮಳೆ ಗಾಳಿಗೆ ಬಿದ್ದ ಮರಗಳನ್ನು ತೆರವುಗೊಳಿಸಲು ವಿಧಾನ ಸಭಾ ಕ್ಷೇತ್ರವಾರು 27 ತಂಡಗಳನ್ನು ರಚಿಸಲಾಗಿದ್ದು, ಸದರಿ ತಂಡಗಳು ಮಳೆ ಸಂದರ್ಭದಲ್ಲಿ ಬಿದ್ದಂತಹ ಮರಗಳನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

<u>ಅಲ್ಪಾವಧಿ ಕಾರ್ಯಕ್ರಮಗಳು :</u> ಅಲ್ಪಾವಧಿ ಕಾರ್ಯಕ್ರಮದಡಿಯಲ್ಲಿ ನಿರಂತರವಾಗಿ ರಾಜಕಾಲುವೆಗಳಿಂದ ಮತ್ತು ರಸ್ತೆ ಬದಿಯ ಮೋರಿಗಳಿಂದ ಹೂಳನ್ನು ತೆಗೆಯುವ ಕಾರ್ಯ ನಿರ್ವಹಿಸಲಾಗುತ್ತಿರುತ್ತದೆ.

<u>ದೀರ್ಘಾವಧಿ ಕಾರ್ಯಕ್ರಮಗಳು :</u> ದೀರ್ಘಾವಧಿ ಯೋಜನೆಯಲ್ಲಿ ಬೆಂಗಳೂರು ನಗರದಲ್ಲಿ ಒಟ್ಟು 209 ಸ್ಥಳಗಳನ್ನು ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸ್ಥಳಗಳೆಂದು ಗುರುತಿಸಲಾಗಿದ್ದು, ಸದರಿ ಸ್ಥಳದ ತಡೆಗೋಡೆ ನಿರ್ಮಾಣ / ಮರು ವಿನ್ಯಾಸ ಮತ್ತು ಸೇತುವೆಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ಸರ್ಕಾರವು ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಕೈಗೆತ್ತಿಕೊಳ್ಳಲಾಗುತ್ತದೆ.

<u>ವೈಜ್ಞಾನಿಕ ಕ್ರಮಗಳು :</u> ಮೇಲೆ ತಿಳಿಸಿರುವ ಕ್ರಮಗಳಲ್ಲದೆ, ರಾಜಕಾಲುವೆ ಪ್ರದೇಶಗಳಲ್ಲಿ "Telemetric Rain Gauge" ಗಳನ್ನು ಹಾಗೂ ನೀರಿನ ಮಟ್ಟ ಅಳೆಯಲು ಮತ್ತು ಮುನ್ನೆಚ್ಚರಿಕೆ ನೀಡುವ ಉಪಕರಣವಾದ "Telemetric Water Level Sensor" ಗಳನ್ನು ಅಳವಡಿಸಲು ಕ್ರಮವಹಿಸಲಾಗಿದ್ದು, ಅದರಂತೆ, ಈಗಾಗಲೇ 26 ಸೂಕ್ಷ್ಮ ಪ್ರದೇಶಗಳಲ್ಲಿ ಸದರಿ "Telemetric Water Level Sensor" ಗಳನ್ನು ಅಳವಡಿಸಲಾಗಿದೆ.

		ಅಲ್ಪಾವಧಿ ಕಾರ್ಯಕ್ರಮದಡಿಯಲ್ಲಿ ಹೆಣ್ಣೂರು ಮುಖ್ಯರಸ್ತೆಯಿಂದ ರಾಜಕಾಲುವೆ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಮುಖಾಂತರ ಒಂದು ನೀರುಗಾಲುವೆ (Lead off Drain) ನಿರ್ಮಾಣ ಮಾಡಲು ಮತ್ತು ದೀರ್ಘಾವಧಿ ಕಾರ್ಯಕ್ರಮದಡಿಯಲ್ಲಿ ಮತ್ತು ಹೆಣ್ಣೂರು ರಸ್ತೆಯಲ್ಲಿರುವ ಏರಿ ಪ್ರದೇಶದಲ್ಲಿ ಹೆಚ್ಚುವರಿಯಾಗಿ ಇನ್ನೆರಡು ಸೇತುವೆಗಳನ್ನು ನಿರ್ಮಿಸಿ, ಮಳೆನೀರು ಸರಾಗವಾಗಿ ಹರಿಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. ಮುಂದುವರೆದು, ರೈಲ್ವೆ ಇಲಾಖೆಯವರು ಎರಡು ಸೇತುವೆಗಳನ್ನು ನಿರ್ಮಿಸಿಕೊಡಲು ತಾತ್ವಿಕ ಅನುಮೋದನೆಯನ್ನು ನೀಡಿದ್ದು, ಕಾಮಗಾರಿಯ ವೆಚ್ಚಕ್ಕೆ ಅನುಗುಣವಾಗಿ ಅಂದಾಜು ಪಟ್ಟಿಯನ್ನು ಸಹ ಒದಗಿಸಿರುತ್ತಾರೆ. ವೈಜ್ಞಾನಿಕ ಕಾರ್ಯಕ್ರಮದ ಅಡಿಯಲ್ಲಿ ರಾಚೇನಹಳ್ಳಿ ಕೆರೆಗೆ ಜಲಾಶಯಗಳಿಗೆ ಅಳವಡಿಸುವ ರೀತಿಯಲ್ಲಿ Sluice Gate ಗಳನ್ನು ಅಳವಡಿಸಲು ಯೋಜಿಸಲಾಗಿರುತ್ತದೆ.

ಸಂಖ್ಯೆ: ನಅಇ 185 ಎಂಎನ್‌ವೈ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 843
2. ಸದಸ್ಯರ ಹೆಸರು : ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ)
3. ಉತ್ತರಿಸುವ ದಿನಾಂಕ : 22-09-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 2018-19 ನೇ ಹಾಗೂ 2019-20ನೇ ಸಾಲಿನಲ್ಲಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಕೈಗೊಂಡಿದ್ದು, ಎಷ್ಟು ರಸ್ತೆಗಳ ಎಷ್ಟು ಗುಂಡಿಗಳನ್ನು ಮುಚ್ಚಲಾಗಿದೆ; (ವಿವರ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 8 ವಲಯಗಳಲ್ಲಿ, 2018-19ನೇ ಸಾಲಿನಲ್ಲಿ 7,060 ರಸ್ತೆಗಳಲ್ಲಿ 18,336 ರಸ್ತೆ ಗುಂಡಿಗಳನ್ನು ಮತ್ತು 2019-20 ನೇ ಸಾಲಿನಲ್ಲಿ 8,401 ರಸ್ತೆಗಳಲ್ಲಿ 19,184 ರಸ್ತೆ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಈ ರಸ್ತೆ ಗುಂಡಿಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ವಲಯ	2018-19		2019-20	
	ರಸ್ತೆಗಳು	ರಸ್ತೆ ಗುಂಡಿಗಳು	ರಸ್ತೆಗಳು	ರಸ್ತೆ ಗುಂಡಿಗಳು
ಪಶ್ಚಿಮ	933	2567	718	1523
ದಕ್ಷಿಣ	788	5335	702	5853
ಪೂರ್ವ	1665	2778	4091	5052
ಯಲಹಂಕ	756	2741	447	1919
ದಾಸರಹಳ್ಳಿ	780	1469	800	1205
ಮಹದೇವಪುರ	420	1387	352	1455
ಬೊಮ್ಮನಹಳ್ಳಿ	1690	1823	1253	1748
ರಾಜರಾಜೇಶ್ವರಿನಗರ	28	236	38	429
ಒಟ್ಟು	**7060**	**18336**	**8401**	**19184**

ಕ್ರ.ಸಂ	ಪ್ರಶ್ನೆ	ಉತ್ತರ
ಆ	ಸದರಿ ಗುಂಡಿಗಳನ್ನು ಮುಚ್ಚಲು ಆಧುನಿಕ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ಸರ್ಕಾರ ಖರೀದಿಸಲಾಗಿತ್ತೇ; ಹಾಗಿದ್ದಲ್ಲಿ, ಅದರ ಪೂರ್ಣ ವಿವರ ಮತ್ತು ಖರ್ಚು ವೆಚ್ಚಗಳನ್ನು ನೀಡುವುದು;	ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಆಧುನಿಕ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ಸರ್ಕಾರವು ಖರೀದಿಸಿರುವುದಿಲ್ಲ.

. . . 2/-

ಇ	ಪ್ರಸಕ್ತ ಸಾಲಿನಲ್ಲಿ ಮಳೆಗಾಲಕ್ಕಿಂತ ಮುಂಚಿತವಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆಯೇ; ಎಷ್ಟು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ; ಇನ್ನೂ ರಸ್ತೆ ಗುಂಡಿಗಳನ್ನು ಮುಚ್ಚಲು ಬಾಕಿಯಿದೆಯೇ; ಇದ್ದರೆ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	ಹೌದು. ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಮಳೆಗಾಲಕ್ಕಿಂತ ಮುಂಚಿತವಾಗಿ 5,859 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಮತ್ತು 2,225 ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವು ಬಾಕಿ ಇರುತ್ತದೆ. ಬಾಕಿ ಇರುವ ರಸ್ತೆ ಗುಂಡಿಗಳನ್ನು ಸೆಪ್ಟೆಂಬರ್-2020ರ ಅಂತ್ಯದೊಳಗಾಗಿ ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ಸದರಿ ರಸ್ತೆ ಗುಂಡಿಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ವಲಯ	ಮುಚ್ಚಲಾಗಿರುವ ರಸ್ತೆ ಗುಂಡಿಗಳು	ಬಾಕಿ ಇರುವ ರಸ್ತೆ ಗುಂಡಿಗಳು
ಪಶ್ಚಿಮ	975	309
ದಕ್ಷಿಣ	724	164
ಪೂರ್ವ	556	196
ಯಲಹಂಕ	1919	330
ದಾಸರಹಳ್ಳಿ	676	488
ಮಹದೇವಪುರ	187	319
ಬೊಮ್ಮನಹಳ್ಳಿ	676	378
ರಾಜರಾಜೇಶ್ವರಿನಗರ	146	41
ಒಟ್ಟು	**5859**	**2225**

ಸಂಖ್ಯೆ: ನಅಇ 181 ಎಂಎನ್‌ವೈ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 855
2 ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ. ಕೋಟೆ)
3 ಉತ್ತರಿಸುವ ದಿನಾಂಕ : 22-09-2020
4 ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಯಾವಾಗಿನಿಂದ ಜಾರಿಗೆ ಬಂದಿದೆ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧವನ್ನು ಪಾಲಿಕೆಯ ಸುತ್ತೋಲೆ ಸಂಖ್ಯೆ: ಆ/ಪಿಆರ್/774/ 2016-17, ದಿನಾಂಕ: 04-05-2016 ರನ್ವಯ ದಿನಾಂಕ: 04-05-2016 ರಿಂದ ಜಾರಿಗೆ ಬಂದಿರುತ್ತದೆ.
ಆ)	ಕೇಂದ್ರ ಸರ್ಕಾರ ಮತ್ತು ಪರಿಸರ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸಿಲಾಗುತ್ತಿದೆಯೇ;	ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ. ಕೇಂದ್ರ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಪ್ಲಾಸ್ಟಿಕ್ ನಿರ್ವಹಣೆ ಮತ್ತು ನಿಭಾವಣೆ ನಿಯಮ, 2016ನ್ನು ದಿನಾಂಕ: 18-03-2016 ರಲ್ಲಿ ಅಧಿಸೂಚಿಸಿದ್ದು, ಸದರಿ ಅಧಿಸೂಚನೆಯನ್ನು ದಿನಾಂಕ: 18-03-2016 ರಿಂದ ರಾಜ್ಯದಲ್ಲಿ ನಿಷೇಧಿಸಲಾಗದ ಪ್ಲಾಸ್ಟಿಕ್ ಕುರಿತಂತೆ ಪಾಲಿಸಲಾಗುತ್ತಿದೆ.
ಇ)	ಈ ಬಗ್ಗೆ ರಾಜ್ಯ ಪರಿಸರ ಮಾಲಿನ್ಯ ಮಂಡಳಿಯ ಕರ್ತವ್ಯಗಳೇನು;	ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪ್ಲಾಸ್ಟಿಕ್ ಬಳಕೆ ನಿಷೇಧ ಸಂಬಂಧ ರಾಜ್ಯ ಸರ್ಕಾರವು ದಿನಾಂಕ: 11-03-2016 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2016 ರನ್ವಯ ಈ ಕೆಳಗೆ ತಿಳಿಸಿರುವ ಕರ್ತವ್ಯಗಳನ್ನು ಸೂಚಿಸಲಾಗಿದೆ. The prescribed Authority means the Authority- a) For enforcement of the provisions of these rules related to registration, manufacturer and recycling shall be the State Pollution Control board and in respect of a Union territory shall be the pollution Control committee; ಈ ನಿರ್ದೇಶನವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಸರ್ಕಾರದ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು

. . .2.

		ಪರಿಸರ) ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಎಲ್ಲಾ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆಯ ಎಲ್ಲಾ ಸಹಾಯಕ ಆಯುಕ್ತರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಎಲ್ಲಾ ಪ್ರಾದೇಶಿಕ ಪರಿಸರ ಅಧಿಕಾರಿಗಳು ಅಪರಾಧ ಸ್ವರೂಪಕ್ಕೆ ಅನುಗುಣವಾಗಿ ಪರಿಸರ (ಸಂರಕ್ಷಣೆ) ಕಾಯ್ದೆ, 1986ರ ಸೆಕ್ಷನ್ 19ರ ಅನ್ವಯ ಪ್ರದತ್ತವಾಗಿರುವ ಅಧಿಕಾರದಂತೆ ಆಯಾ ವ್ಯಾಪ್ತಿಯಲ್ಲಿ ಬರುವ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಕ್ರಮ ಜರುಗಿಸಬಹುದಾಗಿರುತ್ತದೆ.
ಈ)	ಈವರೆಗೆ ಎಷ್ಟು ಪ್ರಮಾಣದ ಅನಧಿಕೃತ ಮಾರಾಟದ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ; ವಿಧಿಸಿದ ದಂಡವೆಷ್ಟು;	2015 ರಿಂದ ಈ ತಹಲ್‌ವರೆವಿಗೂ 4,66,655 ಕೆ.ಜಿ.ಗಳಷ್ಟು ಪ್ಲಾಸ್ಟಿಕ್‌ನ್ನು ವಶಪಡಿಸಿಕೊಂಡಿದ್ದು, ರೂ. 4,17,25,355 ಗಳು ದಂಡ ವಿಧಿಸಲಾಗಿರುತ್ತದೆ.
ಉ)	ಬಳಕೆ ಮಾಡುವ ವಾಣಿಜ್ಯ ಹೊಟೇಲ್ ಮಾಲೀಕರ ವಿರುದ್ಧ ಕೈಗೊಂಡ ಕ್ರಮಗಳೇನು; ಇಂದಿಗೂ ಸಹ ನಾಗರೀಕರು ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	ಪ್ಲಾಸ್ಟಿಕ್ ಬಳಕೆ ಮಾಡುವ ವಾಣಿಜ್ಯ ಹೋಟೆಲ್ ಮಾಲೀಕರ ವಿರುದ್ಧ ದಂಡವನ್ನು ವಿಧಿಸಲಾಗುತ್ತಿದೆ ಹಾಗೂ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಆಯಾ ಕಛೇರಿಗಳ ಆವರಣದಲ್ಲೇ ಸಂಸ್ಕರಿಸುವ, ಸದರಿ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂಧಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಕಡ್ಡಾಯವಾಗಿ ತಮ್ಮ ಮನೆಯಲ್ಲಿಯೇ ಸಂಸ್ಕರಿಸುವ ಹಾಗೂ ಹಣ್ಣು ಮತ್ತು ತರಕಾರಿ ಇತ್ಯಾದಿಕಗಳ ಖರೀದಿಯಲ್ಲಿ ಬಟ್ಟೆ ಬ್ಯಾಗ್ ಬಳಸಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಸಂಬಂಧ ನಿರ್ದೇಶನವನ್ನು ನೀಡಿ ರಾಜ್ಯ ಸರ್ಕಾರವು ದಿನಾಂಕ: 13-09-2019 ರಂದು ಸುತ್ತೋಲೆ ಸಂಖ್ಯೆ: ನಅಇ 89 ಎಂಎನ್‌ವೈ 2019ನ್ನು ಹೊರಡಿಸಲಾಗಿರುತ್ತದೆ (ಸದರಿ ಸುತ್ತೋಲೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

ನಅಇ 293 ಎಂಎನ್‌ಯು 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಅನುಬಂಧ

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-III Part-III	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೯, ೨೦೧೯ (ಭಾದ್ರಪದ ೨೮, ಶಕ ವರ್ಷ ೧೯೪೦) Bengaluru, Thursday, September 19, 2019 (Bhadrapada 28, Shaka Varsha 1940)	ನಂ. ೭೭೯ No. 779

ನಗರಾಭಿವೃದ್ಧಿ ಸಚಿವಾಲಯ

ಸುತ್ತೋಲೆ

ಸಂಖ್ಯೆ: ನಅಇ/89/ಎಂಎನ್‌ವೈ/2019, ಬೆಂಗಳೂರು, ದಿನಾಂಕ: 13.09.2019

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಆಯಾ ಕಛೇರಿಗಳ ಆವರಣದಲ್ಲೇ ಸಂಸ್ಕರಿ ಸುವ, ಸದರಿ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಕಡ್ಡಾಯವಾಗಿ ತಮ್ಮ ಮನೆಯಲ್ಲಿಯೇ ಸಂಸ್ಕರಿಸುವ ಹಾಗೂ ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಖರೀದಿಯಲ್ಲಿ ಬಟ್ಟೆ ಬ್ಯಾಗ್ ಬಳಸಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಬಗ್ಗೆ.

ಉಲ್ಲೇಖ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪತ್ರ ಸಂಖ್ಯೆ: ಆ.ಆ.ಶಾ/ಪಿ.ಆರ್ (G)752/2019-20, ದಿನಾಂಕ: 01-07-2019.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿಗಳು, ನ್ಯಾಯಾಲಯಗಳು, ನಿಗಮ/ಮಂಡಳಿಗಳು, ಪ್ರಾಧಿಕಾರಗಳು, ಆಯೋಗಗಳು, ಇಲಾಖೆಗಳು ಸ್ವಾಯತ್ತ ಸಂಸ್ಥೆಗಳ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು 03 ಬಗೆಗಳಲ್ಲಿ ಸಂಗ್ರಹಿಸಿ ಹಸಿತ್ಯಾಜ್ಯವನ್ನು ತಮ್ಮ ಮನೆಯಲ್ಲಿಯೇ ಸಂಸ್ಕರಿಸಿ ಗೊಬ್ಬರಗೊಳಿಸಬೇಕಾಗಿ ಹಾಗೂ ಇತರೆ ತ್ಯಾಜ್ಯವನ್ನು ನೋಂದಾಯಿತ ತ್ಯಾಜ್ಯ ಮರುಬಳಕೆದಾರರಿಗೆ ನೀಡುವಂತೆ ಕ್ರಮವಹಿಸುವ ಹಾಗೂ ಸದರಿ ಅಧಿಕಾರಿ/ಸಿಬ್ಬಂದಿಗಳು ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಖರೀದಿಯಲ್ಲಿ ಬಟ್ಟೆ/ನಾರು/ಉಣ್ಣೆ ಚೀಲಗಳನ್ನು ಬಳಸುವಂತೆ ಹಾಗೂ ಪ್ಲಾಸ್ಟಿಕ್ ಬಳಕೆಗೆ ನಿಷೇಧವನ್ನು ಹೇರುವ ಕುರಿತಂತೆ ಸರ್ಕಾರವು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿ ತಪ್ಪದೇ ಪಾಲಿಸುವಂತೆ ಸೂಚಿಸಿದೆ.

- ಎಲ್ಲಾ ಸರ್ಕಾರಿ ಕಛೇರಿಗಳು ತಮ್ಮಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು 03 ಬಗೆಗಳಲ್ಲಿ (ಹಸಿತ್ಯಾಜ್ಯ, ಒಣತ್ಯಾಜ್ಯ/ಮರುಬಳಕೆ ತ್ಯಾಜ್ಯ ಹಾಗೂ ನೈರ್ಮಲ್ಯ ತ್ಯಾಜ್ಯ)

ಕಡ್ಡಾಯವಾಗಿ ವಿಂಗಡಿಸಿ ಪ್ರತ್ಯೇಕವಾಗಿ ತ್ಯಾಜ್ಯವನ್ನು ಸಂಗ್ರಹಿಸಲು 03 ಬಗೆಯ ವಿವಿಧ ಬಣ್ಣದ ಬಿನ್‌ಗಳನ್ನು ಎಲ್ಲಾ ಕಛೇರಿಗಳಲ್ಲಿ ಇರಿಸಲು ಕ್ರಮವಹಿಸುವುದು.

- ಕಛೇರಿಯಲ್ಲಿ ಉತ್ಪತ್ತಿಯಾಗುವ ಹಸಿತ್ಯಾಜ್ಯ ಪ್ರಮಾಣಕ್ಕನುಸಾರವಾಗಿ ಕಛೇರಿಯ ಆವರಣದಲ್ಲೇ ಹಸಿತ್ಯಾಜ್ಯ ಸಂಸ್ಕರಣೆ ಮಾಡಲು ಅಗತ್ಯ ಕ್ರಮವಹಿಸುವುದು. ಒಣತ್ಯಾಜ್ಯ/ಮರುಬಳಕೆ ತ್ಯಾಜ್ಯ, ಎಲೆಕ್ಟ್ರಾನಿಕ್ ತ್ಯಾಜ್ಯವನ್ನು ನೋಂದಣಿ ಹೊಂದಿದ ಮರುಬಳಕೆದಾರರಿಗೆ ನೀಡಲು ಕ್ರಮವಹಿಸುವುದು, ಉಳಿದಂತೆ ನೈರ್ಮಲ್ಯ ತ್ಯಾಜ್ಯವನ್ನು ಪಾಲಿಕೆಯ ವಾಹನಗಳಿಗೆ ನೀಡಲು ಕ್ರಮವಹಿಸುವುದು.

- ಎಲ್ಲಾ ಕಛೇರಿಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಬಳಸಿ ಬಿಸಾಡುವಂತಹ ವಸ್ತುಗಳನ್ನು ಸಂಪೂರ್ಣವಾಗಿ ನಿಷೇಧಿಸುವುದು ಹಾಗೂ ಅಧಿಕಾರಿ/ಸಿಬ್ಬಂದಿ ವರ್ಗದವರು ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಬಳಸಿ ಬಿಸಾಡುವಂತಹ ವಸ್ತುಗಳನ್ನು ಬಳಸದಂತೆ ನಿರ್ದೇಶಿಸುವುದು. ಎಲ್ಲಾ ಕಛೇರಿಗಳಲ್ಲಿ ಉತ್ಪತ್ತಿಯಾಗುವ ಪುನರ್‌ಬಳಕೆ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಲು ನೋಂದಾಯಿತ ಪುನರ್‌ಬಳಕೆದಾರರೊಂದಿಗೆ ನೋಂದಣಿ ಮಾಡಿಕೊಳ್ಳುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಕಡ್ಡಾಯವಾಗಿ 03 ಬಗೆಗಳಲ್ಲಿ ವಿಂಗಡಿಸಬೇಕಾಗಿ ಹಾಗೂ ಹಸಿತ್ಯಾಜ್ಯವನ್ನು ತಮ್ಮ ಮನೆಗಳಲ್ಲಿಯೇ ಸಂಸ್ಕರಣೆ ಮಾಡಿ ಗೊಬ್ಬರಗೊಳಿಸುವಿಕೆಗೆ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಕಛೇರಿಗಳ ಇಲಾಖಾ ಮುಖ್ಯಸ್ಥರು ಕ್ರಮವಹಿಸುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಖರೀದಿಯಲ್ಲಿ ಬಟ್ಟೆ/ನಾರು/ಉಣ್ಣೆ ಚೀಲಗಳನ್ನು ಕಡ್ಡಾಯವಾಗಿ ಬಳಸಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ಕಛೇರಿಯ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಈ ಮೇಲ್ಕಂಡ ವಿಷಯಗಳನ್ನು ಪಾಲಿಸಿರುವ ಕುರಿತಂತೆ ಸರ್ಕಾರಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸುವುದು.

ಲಕ್ಷ್ಮೀಸಾಗರ್ .ಎನ್.ಕೆ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೩೦೦

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	858
2	ಸದಸ್ಯರ ಹೆಸರು	:	ಶ್ರೀ ಸುರೇಶ ಬಿ.ಎಸ್. (ಹೆಬ್ಬಾಳ)
3	ಉತ್ತರಿಸುವ ದಿನಾಂಕ	:	22-09-2020
4	ಉತ್ತರಿಸುವ ಸಚಿವರು	:	ಗೃಹ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಪೊಲೀಸ್ ಇಲಾಖೆಗೆ ಮಂಜೂರಾದ ಎ ಮತ್ತು ಬಿ ಗುಂಪಿನ ಹುದ್ದೆಗಳೆಷ್ಟು;</td><td rowspan="2">ಪೊಲೀಸ್ ಇಲಾಖೆಯ ಗ್ರೂಪ್-ಎ ಮತ್ತು ಬಿ ವೃಂದದ ಅಧಿಕಾರಿಗಳ ಮಂಜೂರಾದ ಹಾಗೂ ಭರ್ತಿ ಮಾಡಲಾದ ಹುದ್ದೆಗಳ ವಿವರಗಳು ಈ ಕೆಳಕಂಡಂತಿರುತ್ತದೆ:

<table>
<tr><th>ಕ್ರ.ಸಂ</th><th>ವೃಂದ</th><th>ಮಂಜೂರಾದ ಹುದ್ದೆಗಳು</th><th>ಭರ್ತಿ ಮಾಡಲಾದ ಹುದ್ದೆಗಳು</th></tr>
<tr><td>1.</td><td>ಗ್ರೂಪ್-ಎ</td><td>1022</td><td>831</td></tr>
<tr><td>2.</td><td>ಗ್ರೂಪ್-ಬಿ</td><td>2069</td><td>1689</td></tr>
</table></td></tr>
<tr><td>ಆ)</td><td>ಇದರಲ್ಲಿ ಹಾಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ;</td></tr>
<tr><td>ಇ)</td><td>ಇತರ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಪೊಲೀಸ್ ಇಲಾಖೆಯ ಅಧಿಕಾರಿಗಳ ಸಂಖ್ಯೆ ಎಷ್ಟು;</td><td>ಪೊಲೀಸ್ ಇಲಾಖೆಯ ಅಧಿಕಾರಿಗಳು ಇತರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ವಿವರ ಈ ಕೆಳಕಂಡಂತಿರುತ್ತದೆ:

<table>
<tr><th>ಕ್ರ.ಸಂ</th><th>ವೃಂದ</th><th>ಇತರೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ</th></tr>
<tr><td>1.</td><td>ಗ್ರೂಪ್-ಎ</td><td>25</td></tr>
<tr><td>2.</td><td>ಗ್ರೂಪ್-ಬಿ</td><td>38</td></tr>
<tr><td colspan="2">ಒಟ್ಟು</td><td>63</td></tr>
</table></td></tr>
<tr><td>ಈ)</td><td>ಯಾವ ಯಾವ ಇಲಾಖೆಗಳಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ? (ಅಧಿಕಾರಿವಾರು, ಇಲಾಖೆವಾರು ಮಾಹಿತಿ ನೀಡುವುದು)</td><td>ಪೊಲೀಸ್ ಇಲಾಖೆಯ ಅಧಿಕಾರಿಗಳು ಇತರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವರ್ಷವಾರು ಮಾಹಿತಿಯನ್ನು <u>ಅನುಬಂಧದಲ್ಲಿ</u> ನೀಡಲಾಗಿದೆ.</td></tr>
</table>

ಸಂಖ್ಯೆ: ಒಇ 213 ಪಿಇಜಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸುರೇಶ ಬಿ.ಎಸ್. (ಹೆಬ್ಬಾಳ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 858ಕ್ಕೆ ಸಂಬಂಧಿಸಿದ ಅನುಬಂಧ

Sl.N	Name of the Officer Sriyuths / Smt	Present Place of Working	Date of Charge
1	2	3	4
		IPS Officers	
1	N. Shiva Kumar, IPS	Additional Director General of Police and Commissioner, Transport Department, Bengaluru	06.09.2019
2	Prashant Kumar Thakur, IPS	Additional Director General of Police, Bengaluru Metropolitan Task Force, Bengaluru	02.01.2017
3	Dr. Harsha. P S, IPS	DIGP & & Commissioner, Information and Public Relations Department, Bengaluru	27.06.2020
4	S.N. Siddaramappa, IPS	Managing Director, KEONICS, Bengaluru	31.07.2020
5	Dr. Ram Niwas Sepat, IPS	SP & Director, KSRTC, Bengaluru	07.02.2020
6	Santosh Babu K, IPS	Superintendent of Police & Director, BMTC (IT), Bengaluru	14.11.2019
7	Arun K., IPS	SP, Sec & Vigilance, BMTC, Bengaluru	01.02.2020
		Superintendent of Police (Non-IPS)	
8	Dr. Shivakumar Gunare	SP, BDA, Bengaluru	28.10.2019
9	B.N.OBlesh	SP, BMTF, Bengaluru	28.08.2018
10	Kumaraswamy A.	SP, Bescom, Bengaluru	18.07.2019
11	Ravindra K.Gadadi	SP, Hescom Hubali	08.03.2019
12	Capt M.A.Aiyappa	SP, KPCL, Vigilance, Bengaluru	04.07.2018
13	Rashmi B.Paraddi	SP Chescom, Mysuru	16.02.2018
14	Savitha Hoogar	SP, Gescom, Kalaburagi	15.09.2020
		Deputy Superintendent of Police (Civil)	
15	Balakrishna.C	B.D.A. Bengaluru	02-09-2020
16	SriPada Dhasharatha Jalde	BMTF. Bengaluru	07-05-2020
17	Premasaiguddappa Rai	High Court Vig.	17-06-2019
18	Keshav K.E.	Karnataka Human Rights Commission	23-04-2016
19	Manjunath S.	Karnataka Human Rights Commission	19-11-2019
20	Manjunatha Choudry M.H.	BESCOM, Bengaluru	04-09-2020
21	Pavanandi.S	GESCOM, Kalaburagi	29-09-2018
22	Talawar V.V	HESCOM, Hubballi	15-10-2019
23	Halamurthy Rao.V.S	MESCOM, Mangaluru	26-08-2019
24	Shivakumar.T.M	CHESCOM, Mysuru	09-08-2019
25	Basavaraju R.Magadum	C.B.I. (ACB)	25-09-2017
		Police Inspector (Civil)	
26	Prakash R.	BMTF. Bengaluru	10-10-2019
27	Victor Simon	BMTF. Bengaluru	29-02-2-20
28	Ravi K.	B.D.A. Bengaluru	08-07-2020
29	Ravi Kumar	B.D.A. Bengaluru	01-10-2019
30	Firoz Khan	High Court Vig.	11-09-2020

31	Manjunath S.	High Court Vig.	23-08-2019
32	Pramod Kumar B.	High Court Vig.	11-09-2020
33	Raghavendra Imbrapur	Spl. Enforcement Cell. Bengaluru	21-08-2019
34	Sandeep Singh P.Murugod	HESCOM. Chikkodi	10-10-2018
35	Purushotham G.	BESCOM. Chikkaballapura	21-08-2019
36	Latha B.K.	BESCOM. Chitradurga	22-08-2019
37	Harati Radhakrishna	BESCOM. Davanagere	19-11-2019
38	Ravikumar R.G.	BESCOM. Hosakote	07-07-2020
39	Prabhakar G.	BESCOM. Indiranagar. Bengaluru	10-07-2020
40	Manjunatha B.S.	BESCOM. Jayanagar. Bengaluru	29-02-2020
41	Shivakumar K.M.	BESCOM. Kolar	11-08-2020
42	Suresha M.R.	BESCOM. Malleshwaram, Bengaluru	11-09-2020
43	Paul Preeya Kumar S.	BESCOM. Rajajinagar Bengaluru	11-09-2020
44	Manjunath B.	BESCOM. Ramanagar	14-01-2020
45	Radhakrishna T.S.	BESCOM. Tumakuru	30-10-2019
46	Mahadevaiah	CHESCOM. Chamarajanagar	22-01-2019
47	Renuka Prasad S	CHESCOM. Hassan	26-08-2019
48	Jagadish P.	CHESCOM. Madikeri	23-08-2019
49	Sandeep Kumar B.N.	CHESCOM. Mandya	23-08-2019
50	Sunil Kumar H.T.	CHESCOM. Mysuru	13-07-2020
51	Gayathri R.	GESCOM. Ballari	16-09-2020
52	Raghuveer Singh K.Takur	GESCOM. Bidar	22-08-2019
53	Sachin Shivaputra Chaluvadi	GESCOM. Kalaburagi	05-03-2020
54	Govindaraja K.G.	GESCOM. Koppal	19-12-2018
55	Hulugappa D.	GESCOM. Raichuru	16-09-2020
56	Veeranna S.Doddamani	GESCOM. Yadagiri	23-11-2018
57	Mallikarjun S. Tulasagiri	HESCOM. Bagalkot	01-10-2018
58	Tukaram B.Neelagar	HESCOM. Belagavi	22-06-2020
59	Siddalingappa Gowda Patil	HESCOM. Gadag	11-10-2019
60	Muttanagouda I	HESCOM. Haveri	11-11-2919
61	Murigeppa R.Channannavar	HESCOM. Hubballi	16-09-2020
62	Shivakumar B.	HESCOM. Karwara	26-08-2019
63	Mahadev N.Shirahatti	HESCOM. Vijayapura	19-10-2019

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	874
ಸದಸ್ಯರ ಹೆಸರು	:	ಡಾ॥ ಕೆ.ಅನ್ನದಾನಿ
ಉತ್ತರಿಸಬೇಕಾದ ದಿನಾಂಕ	:	22.09.2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ವಿದ್ಯುತ್ ಕ್ಷೇತ್ರದ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ಹಣವೆಷ್ಟು; ವಿದ್ಯುತ್ ಕ್ಷೇತ್ರದ ಅಭಿವೃದ್ಧಿಯಿಂದ ಟ್ರಾನ್ಸ್ ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟದಲ್ಲಿ ಕಡಿಮೆಯಾಗಿದೆಯೇ; (ಹಾಗಿದ್ದಲ್ಲಿ, ಕಂಪನಿವಾರು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು);	ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಕ.ವಿ.ಪ್ರ.ನಿ.ನಿ. ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಕ್ಷೇತ್ರದ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ಹಣದ ವಿವರಗಳು ಕೆಳಕಂಡಂತಿವೆ:

(ಕೋಟಿ ರೂ.ಗಳಲ್ಲಿ)

ಕಂಪನಿ ಹೆಸರು	2017–18	2018–19	2019–20
ಕವಿಪ್ರನಿನಿ	1145.63	2781.55	1617.68
ಬೆಸ್ಕಾಂ	1365.38	2041.96	1732.95
ಮೆಸ್ಕಾಂ	451.51	839.17	514.35
ಸೆಸ್ಕ್	474.00	453.76	452.21
ಹೆಸ್ಕಾಂ	473.86	487.81	589.94
ಜೆಸ್ಕಾಂ	238.28	732.55	516.14
ಒಟ್ಟು	4148.66	7336.8	5423.27

ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿ/ಯೋಜನೆಗಳ ಮೂಲಕ ಪ್ರಸರಣ ಮತ್ತು ವಿತರಣಾ (T&D Loss) ಶೇಕಡಾ ವಾರು ನಷ್ಟವು ಕಡಿಮೆಯಾಗಿರುತ್ತದೆ:

ಕಳೆದ 3 ವರ್ಷಗಳಲ್ಲಿ ಕ.ವಿ.ಪ್ರ.ನಿ.ನಿ. ಪ್ರಸರಣ ನಷ್ಟದ ಶೇಕಡಾವಾರು ವಿವರಗಳು ಕೆಳಕಂಡಂತಿದೆ:

ಕಂಪನಿ ಹೆಸರು	ಪ್ರಸರಣ ನಷ್ಟ %		
	2017–18	2018–19	2019–20
ಕವಿಪ್ರನಿನಿ	3.22	3.16	3.12

ಕಳೆದ 3 ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವಿತರಣಾ ನಷ್ಟದ ಶೇಕಡವಾರು ವಿವರಗಳು ಕೆಳಕಂಡಂತಿವೆ:

ಕಂಪನಿ ಹೆಸರು	ವಿತರಣಾ ನಷ್ಟ %		
	2017–18	2018–19	2019–20
ಬೆಸ್ಕಾಂ	13.17	12.27	12.48
ಮೆಸ್ಕಾಂ	11.32	10.52	10.07
ಸೆಸ್ಕ್	13.2	12.04	11.31
ಹೆಸ್ಕಾಂ	14.76	14.62	13.85
ಜೆಸ್ಕಾಂ	16.39	14.41	11.46

ಆ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಯಾವ ಮೂಲಗಳಿಂದ ಎಷ್ಟೆಷ್ಟು ವಿದ್ಯುಚ್ಛಕ್ತಿಯನ್ನು ಖರೀದಿಸಲಾಗಿದೆ, ಖರೀದಿಸಲಾದ ಪ್ರತಿ ಯೂನಿಟ್‌ನ ದರವೆಷ್ಟು; ಖರೀದಿಸಿದ ವಿದ್ಯುತ್‌ನ್ನು ಯಾವ ದರದಲ್ಲಿ ಗ್ರಾಹಕರಿಗೆ ಮಾರಾಟ ಮಾಡಲಾಗಿದೆ? (ವರ್ಷವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಕಳೆದ 3 ವರ್ಷಗಳಿಂದ ವಿದ್ಯುಚ್ಛಕ್ತಿಯನ್ನು ಖರೀದಿಸಲಾದ ಮೂಲಗಳ ವಿವರ, ಪ್ರಮಾಣ ಹಾಗೂ ಪ್ರತಿಯೂನಿಟ್‌ನ ದರದ ವರ್ಷವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. ಕೆ.ಇ.ಆರ್.ಸಿ. ಪ್ರತಿ ವರ್ಷ ನಿಗದಿಪಡಿಸಿದ ದರದಲ್ಲಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ವಿದ್ಯುತ್‌ನ್ನು ಮಾರಾಟ ಮಾಡಲಾಗಿದೆ.

ಸಂಖ್ಯೆ: ಎನರ್ಜಿ **128** ಪಿಪಿಎಂ **2020**

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಡಾ:ಕೆ.ಅನ್ನದಾನಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 874ಕ್ಕೆ ಅನುಬಂಧ

2017-18			
ಕಂಪನಿ ಹೆಸರು	ಖರೀದಿಸಿದ ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್)	ಸರಾಸರಿ ದರ ಪ್ರತಿಯೂನಿಟ್ ಗೆ (ರೂ. ಗಳಲ್ಲಿ)	ಮೊತ್ತ (ಕೋಟಿಗಳಲ್ಲಿ) ಓಪನ್ ಆಕ್ಸೆಸ್ ನ್ನು ಒಳಗೊಂಡಿದೆ
ಅಲ್ಪಾವಧಿ			
ಎಮ್ ಎಸ್ ಇಡಿಸಿಎಲ್ , ಮಹಾರಾಷ್ಟ್ರ	21.39	3.62	7.04
ಅಲ್ಪಾವಧಿ (5.4.2017 ರಿಂದ 30.4.2019 ವರೆಗೆ)			
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ - ಜೆ ಎಸ್ ಡ ಬ್ಲ್ಯೂ, ರತ್ನಗಿರಿ, ಮಹಾರಾಷ್ಟ್ರ	207.68	3.60	74.88
ಅಲ್ಪಾವಧಿ			
ಜೆಎಸ್‌ಡಬ್ಲ್ಯೂ ಎನಜಿ ಲಿಮಿಟೆಡ್	789.46	4.18	331.83
ಪಿಟಿಸಿ ಇಂಡಿಯಾ ಲಿಮಿಟೆಡ್ (ಸೆಂಬ್ ಕಾರ್ಪ - ಆಂಧ್ರ)	337.54	4.15	140.08
ಅಲ್ಪಾವಧಿ			
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ - 200 ಮೆವ್ಯಾ - ಸೆಂಬ್ ಕಾರ್ಪ - ಆಂಧ್ರ	559.94	4.08	228.45
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ - 300 ಮೆವ್ಯಾ - - ಸೆಂಬ್ ಕಾರ್ಪ - ಆಂಧ್ರ	889.06	4.08	362.73
ಪಿಟಿಸಿ ಇಂಡಿಯ ಲಿಮಿಟೆಡ್ - 100 ಮೆವ್ಯಾ - (ಜೆಪಿ, ಮಧ್ಯಪ್ರದೇಶ್)	263.60	4.08	107.15
ಶ್ರೀ ಸಿಮೆಂಟ್ - 100 ಮೆವ್ಯಾ, ರಾಜಸ್ಥಾನ	199.16	4.08	80.66
ಜೆಎಸ್‌ಡಬ್ಲ್ಯೂ ಎನಜಿ ಲಿಮಿಟೆಡ್, 200 ಮೆವ್ಯಾ	552.98	4.08	220.45
ಅಲ್ಪಾವಧಿ ಮೊತ್ತ	3820.81	4.07	1553.26
ಐ.ಇ.ಎಕ್ಸ್	22.33	3.91	8.74
ಕೇರಳ ರಾಜ್ಯ ವಿದ್ಯುತ್ ಮಂಡಳಿಗೆ ಒವರ್ ಆರ್ಚಿಂಗ್ ಒಪ್ಪಂದದಡಿಯಲ್ಲಿ ವಿದ್ಯುತ್ ಮಾರಾಟ	-1.18	4.39	-0.52
ಒಟ್ಟು	3841.97	4.06	1561.48

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಡಾ:ಕೆ.ಅನ್ನದಾನಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 874ಕ್ಕೆ ಅನುಬಂಧ

2018-19			
ಕಂಪನಿ ಹೆಸರು	ಖರೀದಿಸಿದ ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್)	ಸರಾಸರಿ ದರ ಪ್ರತಿಯೂನಿಟ್‌ಗೆ (ರೂ. ಗಳಲ್ಲಿ)	ಮೊತ್ತ (ಕೋಟಿಗಳಲ್ಲಿ) ಓಪನ್ ಆಕ್ಸೆಸ್ ನ್ನು ಒಳಗೊಂಡಿದೆ
ಅಲ್ಪಾವಧಿ			
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ – 200 ಮೆವ್ಯಾ – ಸೆಂಬ್ ಕಾರ್ಪ – ಆಂಧ್ರ	274.79	4.08	112.11
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ – 300 ಮೆವ್ಯಾ — ಸೆಂಬ್ ಕಾರ್ಪ – ಆಂಧ್ರ	275.37	4.08	112.35
ಪಿಟಿಸಿ ಇಂಡಿಯ ಲಿಮಿಟೆಡ್ – 100 ಮೆವ್ಯಾ – (ಜೆಪಿ, ಮಧ್ಯಪ್ರದೇಶ್)	108.57	4.08	44.30
ಶ್ರೀ ಸಿಮೆಂಟ್ - 100 ಮೆವ್ಯಾ, ರಾಜಸ್ಥಾನ	104.97	4.08	42.83
ಜೆಎಸ್‌ಡಬ್ಲ್ಯೂ ಎನಜಿ ಲಿಮಿಟೆಡ್, 200 ಮೆವ್ಯಾ	202.13	4.08	82.47
ಒಟ್ಟು ಖರೀದಿ	**965.83**	**4.08**	**394.06**
ಆಂಧ್ರಪ್ರದೇಶ ರಾಜ್ಯ ವಿದ್ಯುತ್ ಮಂಡಳಿಗೆ ಒವರ್ ಆರ್ಚಿಂಗ್ ಒಪ್ಪಂದದಡಿಯಲ್ಲಿ ವಿದ್ಯುತ್ ಮಾರಾಟ	**-0.90**	**8.35**	**-0.75**
ಇಂಡಿಯನ್ ಎನರ್ಜಿ ಎಕ್ಸ್ ಚೇಂಜ್ (ಐಇಎಕ್ಸ್) ನಲ್ಲಿ ವಿದ್ಯುತ್ ಮಾರಾಟ	**-802.64**	**4.22**	**-338.73**
ಒಟ್ಟು ಮಾರಾಟ	**-803.54**	**4.22**	**-339.48**
ನಿವ್ವಳ ಖರೀದಿ	**162.29**	**3.36**	**54.58**

2019-20
2019-20ನೇ ಸಾಲಿನಲ್ಲಿ ಯಾವುದೇ ಅಲ್ಪಾವಧಿ ವಿದ್ಯುತ್ ಖರೀದಿ ಮಾಡಲಾಗಿರುವುದಿಲ್ಲ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 878
2. ಸದಸ್ಯರ ಹೆಸರು : ಶ್ರೀ ಕೃಷ್ಣ ಬೈರೇಗೌಡ (ಬ್ಯಾಟರಾಯಪುರ)
3. ಉತ್ತರಿಸಬೇಕಾದ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಎತ್ತಿನಹೊಳೆ ಯೋಜನೆಯಡಿ ಯಾವ ಕಾಮಗಾರಿಯ ಪ್ರಗತಿ (ಭೌತಿಕ ಮತ್ತು ಆರ್ಥಿಕ) ಯಾವ ಹಂತದಲ್ಲಿದೆ; ಕಾಮಗಾರಿಗಳು ಪೂರ್ಣಗೊಳ್ಳುವ ದಿನಾಂಕಗಳೇನು;	ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಜಲಾಶಯದ ಕಾಮಗಾರಿ ಆರಂಭವಾಗದಿರಲು ಕಾರಣಗಳೇನು; ಯಾವಾಗ ಆರಂಭಿಸಲಾಗುವುದು;	ಬೈರಗೊಂಡ್ಲು ಜಲಾಶಯದ ನಿರ್ಮಾಣ ಕಾಮಗಾರಿಯನ್ನು ರೂ.592.34 ಕೋಟಿ ಮೊತ್ತದಲ್ಲಿ ಫೆಬ್ರವರಿ–2018ರಲ್ಲಿ ಗುತ್ತಿಗೆ ವಹಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಪೂರ್ವ ಸಿದ್ದತಾ ಕೆಲಸ ಕಾರ್ಯಗಳನ್ನು ಕೈಗೊಂಡಾಗ ಕೊರಟಗೆರೆ ತಾಲ್ಲೂಕಿನ ರೈತರು ಏಕರೂಪ ಭೂಪರಿಹಾರ ನೀಡಲು ಒತ್ತಾಯಿಸಿ ಅಡ್ಡಿಪಡಿಸಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಬೈರಗೊಂಡ್ಲು ಜಲಾಶಯ ನಿರ್ಮಾಣದ ಭೂಸ್ವಾಧೀನ ಸಮಸ್ಯೆಯು ಇತ್ಯರ್ಥಗೊಂಡ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು.
ಇ)	ಜಲಾಶಯದಿಂದ ಕೊಳವೆ ಮುಖಾಂತರ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ನೀರು ಕೊಂಡೊಯ್ಯುವ ಕಾಮಗಾರಿಗಳ ವಿವರಗಳೇನು; ಈ ಕಾಮಗಾರಿಗಳನ್ನು ಯಾವಾಗ ಆರಂಭಿಸಲಾಗುವುದು?	• ಬೈರಗೊಂಡ್ಲು ಜಲಾಶಯದಿಂದ ಕುಂದಾಣದವರೆಗೆ ನೀರನ್ನು ಎತ್ತಿ 45 ಕೀ.ಮಿ ರವರೆಗೆ ಕೊಳವೆಗಳ ಮೂಲಕ ನೀರನ್ನು ವಿತರಣಾತೊಟ್ಟಿಗೆ ಸಾಗಿಸಿ, ನಂತರ ವಿತರಣಾ ತೊಟ್ಟಿಯಿಂದ ಕೋಲಾರ ಮತ್ತು ಶ್ರೀನಿವಾಸಪುರ ಫೀಡರ್‌ಗಳನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ. • ಶ್ರೀನಿವಾಸಪುರ ಮತ್ತು ಕೋಲಾರ ಫೀಡರ್ ಕಾಲುವೆಯಿಂದ ಕೋಲಾರ ಜಿಲ್ಲೆಯ ಬಂಗಾರಪೇಟೆ, ಕೋಲಾರ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರು, ಶಿಡ್ಲಘಟ್ಟ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರ ತಾಲ್ಲೂಕುಗಳಿಗೆ ಕೊಳವೆಗಳ ಮೂಲಕ ಕುಡಿಯುವ ನೀರಿಗಾಗಿ ಮತ್ತು ಕೆರೆ ತುಂಬಿಸಲು ನೀರನ್ನು ಹರಿಸಲು ಉದ್ದೇಶಿಸಲಾಗಿರುತ್ತದೆ. • ಕುಂದಾಣ ಲಿಫ್ಟ್ ಮೂಲಕ ಹೆಸರಘಟ್ಟ ಜಲಾಶಯಕ್ಕೆ ನೀರು ಹರಿಸಲು ಯೋಜಿಸಲಾಗಿದೆ. • ಬೈರಗೊಂಡ್ಲು ಜಲಾಶಯ ಕಾಮಗಾರಿಯನ್ನು ಪ್ರಾರಂಭಿಸಿದ ನಂತರ ಮೇಲಿನ ಕಾಮಗಾರಿಗಳನ್ನು ಆರಂಭಿಸಲಾಗುವುದು.

ಸಂಖ್ಯೆ: ಜಸಂಇ 71 ಡಬ್ಲ್ಯೂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 878ಕ್ಕೆ ಅನುಬಂಧ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2 ಹಂತಗಳಲ್ಲಿ ಕೈಗೊಳ್ಳಲಾಗುತ್ತಿದೆ.

ಮೊದಲನೇ ಹಂತ: ಮೊದಲನೆ ಹಂತದ ಏತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

- ✓ ಒಟ್ಟಾರೆ 8 ವಿಯರ್‌ಗಳ ಪೈಕಿ ವಿಯರ್ ಸಂ. 1,4,5,6,8 ಕಾಮಗಾರಿಗಳು ಪೂರ್ಣಗೊಂಡಿದ್ದು, ವಿಯರ್ ಸಂ. 2,7ರ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. ವಿಯರ್-3 ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
- ✓ 9 ಪಂಪ್‌ಹೌಸ್‌ಗಳ ಪೈಕಿ ಪಂಪ್‌ಹೌಸ್ ಸಂ. 1,2,6,7,8&9 ಕಾಮಗಾರಿಗಳು ಪೂರ್ಣಗೊಂಡಿದ್ದು, ಪಂಪ್‌ಹೌಸ್ ಸಂ. 3,4,5 ರ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ 4 ವಿತರಣಾ ತೊಟ್ಟಿಗಳ ಪೈಕಿ ವಿತರಣಾ ತೊಟ್ಟಿ ಸಂ. 1, 2 & 4ರ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ವಿತರಣಾ ತೊಟ್ಟಿ 3ರ ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.
- ✓ ಒಟ್ಟು 126.31 ಕಿ.ಮೀ ಉದ್ದದ ಏರು ಕೊಳವೆಯ ಪೈಕಿ, ಇದುವರೆಗೆ 98.025 ಕಿ.ಮೀ ಏರು ಕೊಳವೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ 400/220ಕೆ.ವಿ ವಿದ್ಯುತ್ ಸ್ಥಾವರ ಮತ್ತು ಸಬ್ ಸ್ಟೇಷನ್ ಕಾಮಗಾರಿಗಳು ಕ್ರಮವಾಗಿ ಶೇ.90 % ಮತ್ತು ಶೇ.75% ರಷ್ಟು ಪೂರ್ಣಗೊಂಡಿವೆ.
- ✓ ವಿದ್ಯುತ್ ವಿತರಣಾ ಕಾಮಗಾರಿಯು ಪ್ರಗತಿಯಲ್ಲಿದೆ.
- ✓ ಒಟ್ಟಾರೆ ಮೊದಲನೇ ಹಂತದ ಏತ ಕಾಮಗಾರಿಗಳು ಮತ್ತು ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿ 2021ರ ಮುಂಗಾರಿನಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಯೋಜಿಸಲಾಗಿದೆ.

ಎರಡನೇ ಹಂತ: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತದಲ್ಲಿ ಸಕಲೇಶಪುರ ತಾಲ್ಲೂಕಿನ ಹರವನಹಳ್ಳಿ ವಿತರಣಾ ತೊಟ್ಟಿಯಿಂದ 259.00 ಕಿ.ಮೀ ಉದ್ದದ ಗುರುತ್ವ ಕಾಲುವೆಯನ್ನು (ಮಾರ್ಗದ ಮಧ್ಯದಲ್ಲಿ ಸುಮಾರು 10.47 ಕಿ.ಮೀ ಉದ್ದದ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಿಸುವುದು.

- ✓ ಎರಡನೇ ಹಂತದ ಗುರುತ್ವ ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಗುತ್ತಿಗೆ ವಹಿಸಲಾಗಿದ್ದು, ಕಿ.ಮೀ 0.00 ರಿಂದ ಕಿ.ಮೀ 240.00 ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿದೆ (ಕಿ.ಮೀ 199.620 ನಿಂದ 210.090 ಕಿ.ಮೀ ವರೆಗಿನ ಬೃಹತ್ ಮೇಲ್ಗಾಲುವೆ ಒಳಗೊಂಡಂತೆ).
- ✓ ಕಿ.ಮೀ 240.00 ರಿಂದ ಕಿ.ಮೀ 260.00 ರ ವರೆಗಿನ ಕಾಮಗಾರಿಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಪ್ರಾರಂಭಿಕ ಹಂತದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.
- ✓ 0.00ಕಿ.ಮೀ ನಿಂದ 33.00 ಕಿ.ಮೀ ವರೆಗಿನ ಗುರುತ್ವಾ ಕಾಲುವೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಮುಂಗಾರು 2021 ರಲ್ಲಿ ವೇದಾವತಿ ವ್ಯಾಲಿಗೆ ನೀರು ಹರಿಸಲು ಯೋಜಿಸಲಾಗಿದೆ.

...2

ಫೀಡರ್ ಕಾಲುವೆ ಕಾಮಗಾರಿಗಳು

✓ ಎತ್ತಿನಹೊಳೆ ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ ತುಮಕೂರು, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರಿಗಾಗಿ 1.163 ಟಿ.ಎಂ.ಸಿ ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ 1.476 ಟಿ.ಎಂ.ಸಿ. ನೀರನ್ನು ಒದಗಿಸುವ ಮಧುಗಿರಿ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ 0.506 ಟಿ.ಎಂ.ಸಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ 107 ಸಣ್ಣ ನೀರಾವರಿ ಕೆರೆಗಳಿಗೆ 1.320 ಟಿ.ಎಂ.ಸಿ. ನೀರನ್ನು ಒದಗಿಸುವ ಗೌರಿಬಿದನೂರು ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

- **ಪ್ರಸ್ತುತ ಪ್ರಗತಿಯಲ್ಲಿರುವ ಎತ್ತಿನಹೊಳೆ ಯೋಜನೆಯಡಿಯಲ್ಲಿನ ಕಾಮಗಾರಿಗಳನ್ನು 2022-23 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.**

- **ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿ, ಭೈರಗೊಂಡ್ಲು ಜಲಾಶಯದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಿಗೆ ನೀರೊದಗಿಸುವ ಕುಂದಾಣ ಲಿಫ್ಟ್ ಕಾಮಗಾರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಫೀಡರ್ ಕಾಲುವೆ ಕಾಮಗಾರಿಗಳನ್ನು ಭೈರಗೊಂಡ್ಲು ಜಲಾಶಯ ನಿರ್ಮಾಣದ ಭೂಸ್ವಾಧೀನ ಸಮಸ್ಯೆ ಇತ್ಯರ್ಥಗೊಂಡ ನಂತರ ಕೈಗೊಳ್ಳಲು ಯೋಜಿಸಲಾಗಿದೆ.**

- **ಒಟ್ಟಾರೆ ಎತ್ತಿನಹೊಳೆ ಯೋಜನೆಗೆ ಆಗಸ್ಟ್ 2020ರ ಅಂತ್ಯಕ್ಕೆ ರೂ.7220.34 ಕೋಟಿ ಸಂಚಿತ ವೆಚ್ಚ ಮಾಡಲಾಗಿದೆ.**

******

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 882
ಸದಸ್ಯರ ಹೆಸರು : ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ)
ಉತ್ತರಿಸಬೇಕಾದ ದಿನಾಂಕ : 22-09-2020
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಮೊದಲ ಹಂತವಾಗಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ರೂಪಿಸಲಾಗಿದೆ; ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಿರುವ ಕಾಮಗಾರಿಗಳು ಯಾವುವು; (ವಿವರ ನೀಡುವುದು)</td><td>ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಪ್ರಸ್ತಾಪಿಸಲಾಗಿರುವ ಮತ್ತು ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-ಎ ರಲ್ಲಿ ನೀಡಿದೆ.

ಈ ಯೋಜನೆಗಳಲ್ಲಿ ಮುಖ್ಯವಾಗಿ ಟೆಂಡರ್ ಶ್ಯೂರ್ ಮಾದರಿಯಲ್ಲಿ 36 ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಒಟ್ಟು ರೂ.481.65 ಕೋಟಿ ಮೊತ್ತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಮೊದಲ ಹಂತದಲ್ಲಿ (Phase-A) 7 ಪ್ಯಾಕೇಜ್ ಗಳಲ್ಲಿ 20 ರಸ್ತೆಗಳನ್ನು ಹಾಗೂ ಎರಡನೇ ಹಂತದಲ್ಲಿ (Phase-B) 6 ಪ್ಯಾಕೇಜ್‌ಗಳಲ್ಲಿ 16 ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ಮಾರ್ಟ್ ಟೆಂಡರ್ ಶ್ಯೂರ್ ಮಾದರಿಯ ಅನುಸಾರ Phase- B ಪ್ಯಾಕೇಜ್ ಸಂಖ್ಯೆ- 6ರಲ್ಲಿ ಕೆಳಗಿನ ಎರಡು ರಸ್ತೆಗಳನ್ನು ರೂ.27.30 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.
1. ಅವೆನ್ಯೂ ರಸ್ತೆಯ ಮೈಸೂರು ಬ್ಯಾಂಕ್ ರಸ್ತೆಯಿಂದ ಎಸ್.ಜೆ.ಪಿ ರಸ್ತೆ.
2. ರೀನಸ್ ರಸ್ತೆ- ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆಯಿಂದ ಲಾಂಗ್ ಫೋರ್ಡ್ ರಸ್ತೆ.
ಪ್ರಸ್ತುತ, ಅವೆನ್ಯೂ ರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ಸಂಸ್ಥೆಯಿಂದ ಒಳಚರಂಡಿ ಕಾಮಗಾರಿ ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ. ಸದರಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡ ನಂತರ ಸ್ಮಾರ್ಟ್‌ಸಿಟಿ ವತಿಯಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.</td></tr>
<tr><td>ಆ)</td><td>ಈ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಷ್ಟು ಹಂತಗಳು ಬೇಕು;</td><td>ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮಾರ್ಚ್-2021 ರೊಳಗಾಗಿ ಅನುಷ್ಠಾನದಲ್ಲಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.</td></tr>
<tr><td>ಇ)</td><td>ಈ ಯೋಜನೆಗಾಗಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು? (ವಿವರ ನೀಡುವುದು)</td><td>ಸ್ಮಾರ್ಟ್ ಸಿಟಿ ಅಡಿಯಲ್ಲಿ ಬೆಂಗಳೂರು ನಗರಕ್ಕೆ ಬಿಡುಗಡೆಯಾದ ಕೇಂದ್ರ ಸರ್ಕಾರದ ಅನುದಾನದ ವಿವರಗಳು ಈ ಕೆಳಗಿನಂತಿವೆ;
(ರೂ. ಕೋಟಿಗಳಲ್ಲಿ)
<table>
<tr><th rowspan="2">ವರ್ಷ</th><th colspan="2">ಯೋಜನೆ</th><th colspan="2">ಆಡಳಿತಾತ್ಮಕ ವೆಚ್ಚ (A&OE)</th><th rowspan="2">ಒಟ್ಟು</th></tr>
<tr><th>ಕೇಂದ್ರ</th><th>ರಾಜ್ಯ</th><th>ಕೇಂದ್ರ</th><th>ರಾಜ್ಯ</th></tr>
<tr><td>2018-19</td><td>50</td><td>50</td><td>-</td><td>-</td><td>100</td></tr>
<tr><td>2019-20</td><td>100</td><td>-</td><td>05</td><td>05</td><td>110</td></tr>
<tr><td>ಒಟ್ಟು</td><td>150</td><td>50</td><td>05</td><td>05</td><td>210</td></tr>
</table></td></tr>
</table>

ಸಂಖ್ಯೆ: ನಅಇ 260 ಸಿಎಸ್‌ಎಸ್ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯಮಂತ್ರಿಗಳು.

BENGULURU SMART CITY LIMITED- SCM PROJECT

ANNEXURE A

As on 18.09.2020

All In Crores

SN	Project-ID	Project Name	Stage as on 18.09.2020	Revised Project Cost
		Road works		
1	KAR-BEN-046	Revitalization of historic heart of the city - Smart Tender SURE Roads Phase A Package 1 1. Commercial Street-From Kamraj Road to Jumma Masjid Road (Near Bowring Hospital) 2. Kamaraj Road from M G Road up to Commercial Street and up to St. Johns Church Road.	Work under Progress	35.93
2	KAR-BEN-047	Redevelopment of historic heart of the city - Smart Tender SURE roads Phase A Package 2 1. Ulsoor Road from Dickenson Road to Kensington Road 2. Dickenson Road from M G Road to Kamraj Road	Work under Progress	29.27
3	KAR-BEN-048	Revitalization of historic heart of the city- Smart Tender SURE roads Phase APackage 3 1. Infantry Road from Ali Askar Road to Safina Plaza complex (Main Guard Cross Road) 2. Central Street from M G Road to Shivajinagar Bus Stand (TTMC) and up to Indian Express (Balekundri) Junction 3. Bowring Hospital Road from Main Guard Cross Road to HSIS Gosha Hospital	Work under Progress	53.26
4	KAR-BEN-049	Revitalization of historic heart of the city - Smart Tender SURE roads Phase APackage 4 1 Millers Road from Chalukya Circle to Cantonment via Queens Road 2. Raj Bhavan Road from Minsk Square to Basaveshwara Circle	Work under Progress	39.98
5	KAR-BEN-050	Revitalization of historic heart of the city - Smart Tender SURE roads Phase APackage 5 1. Mcgrath Road from Brigade Road up to Richmond Road 2 Convent Road from Richmond Road to Residency Road 3. Hayes Road from Richmond Road to Residency Road 4. Wood Street from Museum Road to Richmond Road 5. Castle Street from Museum Road to Richmond Road 6. Tate Lane - From Richmond road to castle street	Work under Progress	27.25
6	KAR-BEN-051	Revitalization of historic heart of the city - Smart Tender SURE roads Phase APackage 6 1. Kasturba Road from Siddalingaiah Circle to Minsq Square via Queens Statue (M.G Road) 2. Queens Road from M G Road to Cantonment Railway Station	Work under Progress	45.75
7	KAR-BEN-052	Revitalization of historic heart of the city-Smart Tender SURE roads Phase A Package 7 1. Raja Ram Mohan Roy Road from Richmond Circle to Hudson Circle. 2. Lavelle Road from M.G.Road to Richmond Circle. 3. Brigade Road from M.G.Road to War Memorial Junction.	Work under Progress	39.97
8	KAR-BEN-053	Revitalization of historic heart of the city - Smart Tender SURE roads Phase B Package 1 1 St.John's Road - from Kensington Road to St.John's Church Road 2. St.John's Church Road (New Bamboo Bazar Road to Promenade Road)	Work under Progress	44.29

BENGULURU SMART CITY LIMITED- SCM PROJECT

ANNEXURE A

As on 18.09.2020
All In Crores

SN	Project-ID	Project Name	Stage as on 18.09.2020	Revised Project Cost
9	KAR-BEN-054	Revitalizition of historic heart of the city - Smart Tender SURE roads Phase B Package 2 1.Miller's Road Extension (from Miller's Road Underpass to Haines Circle) 2. Cantonment Road (from Millers Road to Queens Road) 3. HKP Road (from Queens Road to Russel Market)	Work under Progress	43.42
10	KAR-BEN-055	Revitalization of historic heart of the city - Smart Tender SURE roads Phase B Package 3 1. Jumma Masjid Road - from Bowring Hospital Road Road to Russel Market 2. Chandni Chowk Road - from HKP Road to Shivaji Road	Work under Progress	16.94
11	KAR-BEN-056	Revitalization of historic heart of the city - Smart Tender SURE roads Phase B Package 4 1. Sethu Rao Road (from Mysore Road Junction to G. P Road) 2. Sethu Rao Cross Road (from Iyengar Road to Sethu Rao Road Junction) 3. NR Road (from SJP Road Junction to Cutchery Road Junction) 4. SJP Road (from KR Market Circle to NR Road Junction)	Work under progress	29.37
12	KAR-BEN-057	Revitalization of historic heart of the city - Smart Tender SURE roads Phase B Package 5 1.Race Course Road (from Palace Road to Hare Krishna Road) 2. Rajbhavan Road (from Millers Road Intersection to Ali Asker Road Intersection) 3. Palace Road (from Millers Road Intersection to Basaveshwara Circle)	Work under Progress	48.92
13	KAR-BEN-058	Revitalization of historic heart of the city - Smart Tender SURE roads Phase B Package 6 1. Avenue Road - from Mysore Bank Circle to SJP Road 2. Rhenius Street - from General KS Thimmaya Road to Langford Road	Work under progress	27.30
		Total		481.65
		Other Projects		
14	KAR-BEN-023	Integrated mobility towards creating vibrant destination Shivajinagar Bus Terminal Redevelopment (Terminus + Parking Structure + Subway)	Work under progress	3.98
15	KAR-BEN-025	Protection and Redevelopment of a Botanically Varied Parkland - Cubbon Park Phase A	Work under progress	22.73
16	KAR-BEN-065	Protection and Redevelopment of a Botanically Varied Parkland - Cubbon Park - Phase B	Work under progress	20.88
17	KAR-BEN-067	LED Lighting for Vidhan Soudha, Vikas Soudha, MS Building and VV Towers	Work under progress	1.94
18	KAR-BEN-062	KR Market Junction Integrated Mobility and Junction Improvement	Tender floated on 03.09.2020	20.00
19	KAR-BEN-024	Redevelopment of historic economic Centres - KR Market	Revised DPR under Progress	58.69
20	KAR-BEN-063	Setting up of Auditorium Block and Geological Rock Garden at Jawaharlal Nehru Planetarium	Tender under Progress	32.50
21	KAR-BEN-069	Project Rashmi- Womens Space at Workplace	DPR under Progress	2.00
22	KAR-BEN-066	Proposal for operation of electric buses feeder service to Namma Metro by BMTC – Fleet Procurement	Tender under Progress	50.00
23	KAR-BEN-041	ICCC - (Integrated Command and Control Centre)	Revised DPR under Progress	200.00
24		COVID-19 Crisis Management Health Infrastructure	DPR under Progress	26.85
		Grand Total		921.22

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	860
2	ಸದಸ್ಯರ ಹೆಸರು	:	ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ
3	ಉತ್ತರಿಸಬೇಕಾದ ದಿನಾಂಕ	:	22.09.2020
4	ಉತ್ತರಿಸುವವರು	:	ಸಣ್ಣ ನೀರಾವರಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯ ಕುಷ್ಟಗಿ ವಿಧಾನಸಭಾ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಕೆರೆಗಳನ್ನು ನಿರ್ಮಿಸಲಾಗಿದೆ; ಅವುಗಳ ಒಟ್ಟು ವಿಸ್ತೀರ್ಣವೆಷ್ಟು; (ವಿವರ ಒದಗಿಸುವುದು)	ಕೊಪ್ಪಳ ಜಿಲ್ಲೆ ಕುಷ್ಟಗಿ ವಿಧಾನಸಭಾ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 41 ಕೆರೆಗಳನ್ನು ನಿರ್ಮಿಸಲಾಗಿರುತ್ತದೆ. ಅವುಗಳ ಒಟ್ಟು ವಿಸ್ತೀರ್ಣ 1036.01 ಹೆಕ್ಟೇರ್ ಇರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಸದರಿ ಕೆರೆಗಳನ್ನು ಗ್ರಾಮಸ್ಥರು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾವುದೇ ಕೆರೆಗಳು ಗ್ರಾಮಸ್ಥರಿಂದ ಒತ್ತುವರಿಯಾಗಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ;	ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ಕಳೆದ ಮೂರು ವರ್ಷಗಳಲ್ಲಿ ಯಾವ ಕೆರೆಗಳನ್ನು ನಿರ್ಮಿಸಲಾಗಿದೆ;	ಕಳೆದ ಮೂರು ವರ್ಷಗಳಲ್ಲಿ ಕುಷ್ಟಗಿ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಹೊಸ ಕೆರೆಯನ್ನು ನಿರ್ಮಿಸಿರುವುದಿಲ್ಲ.
ಉ)	ಅದಕ್ಕಾಗಿ ಮಂಜೂರಾದ ಅನುದಾನ ಹಾಗೂ ಬಳಕೆಯಾದ ಅನುದಾನವೆಷ್ಟು;	ಪ್ರಶ್ನೆ ಉದ್ಭವಿಸುವುದಿಲ್ಲ
ಊ)	ಅನುದಾನ ಬಳಕೆಯಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತುತು ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿರುತ್ತದೆ?	ಪ್ರಶ್ನೆ ಉದ್ಭವಿಸುವುದಿಲ್ಲ

ಕಡತ ಸಂಖ್ಯೆ: MID 148 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ ಮಾನ್ಯ ವಿಧಾನಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:860ಕ್ಕೆ ಅನುಬಂಧ

ಕೊಪ್ಪಳ ಜಿಲ್ಲೆಯ ಕುಷ್ಟಗಿ ವಿಧಾನಸಭಾ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ ಕೆರೆಗಳ ವಿವರ

ಕ್ರ.ಸಂ.	ತಾಲ್ಲೂಕು	ಕೆರೆಯ ಹೆಸರು	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಒತ್ತುವರಿಯಾಗಿದೆಯೇ (ಹೌದು/ಇಲ್ಲ)	ಒತ್ತುವರಿಯಾದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ತೆರವುಗೊಳಿಸಿದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ಷರಾ
1	2	3	4	5	6	7	8
1	ಕುಷ್ಟಗಿ	ಬೀಳಗಿ ಕೆರೆ	15.00	ಇಲ್ಲ	–	–	
2	ಕುಷ್ಟಗಿ	ಕಲಾಲಬಂಡಿ ಕೆರೆ	20.00	ಇಲ್ಲ	–	–	
3	ಕುಷ್ಟಗಿ	ಕಬ್ಬರಗಿ ಕೆರೆ	10.00	ಇಲ್ಲ	–	–	
4	ಕುಷ್ಟಗಿ	ಹೊಸಳ್ಳಿ ಕೆರೆ	60.00	ಇಲ್ಲ	–	–	
5	ಕುಷ್ಟಗಿ	ಮಿಯಾಪುರ ಕೆರೆ	45.00	ಇಲ್ಲ	–	–	
6	ಕುಷ್ಟಗಿ	ಹನುಮಗೇರಾ ಕೆರೆ	17.00	ಇಲ್ಲ	–	–	
7	ಕುಷ್ಟಗಿ	ಹನುಮಸಾಗರ ಕೆರೆ	68.70	ಇಲ್ಲ	–	–	
8	ಕುಷ್ಟಗಿ	ಬಾದಮನಾಳ ಕೆರೆ	18.20	ಇಲ್ಲ	–	–	
9	ಕುಷ್ಟಗಿ	ಜಾಗೀರಗುಡದೂರ ಕೆರೆ	10.00	ಇಲ್ಲ	–	–	
10	ಕುಷ್ಟಗಿ	ವಿರುಪಾಪುರ ಕೆರೆ	14.00	ಇಲ್ಲ	–	–	
11	ಕುಷ್ಟಗಿ	ಹಿರೇಸಂದಿಹಾಳ ಕೆರೆ	13.00	ಇಲ್ಲ	–	–	
12	ಕುಷ್ಟಗಿ	ಮುದ್ದಲಗುಂದಿ ಕೆರೆ	16.38	ಇಲ್ಲ	–	–	
13	ಕುಷ್ಟಗಿ	ಮೆಣೇದಾಳ ಕೆರೆ	13.41	ಇಲ್ಲ	–	–	
14	ಕುಷ್ಟಗಿ	ನಾರಿನಾಳ ಕೆರೆ	24.20	ಇಲ್ಲ	–	–	
15	ಕುಷ್ಟಗಿ	ಜುಮಲಾಪುರ ಕೆರೆ	21.04	ಇಲ್ಲ	–	–	
16	ಕುಷ್ಟಗಿ	ಮೆಣಸಗೇರಾ ಕೆರೆ	21.11	ಇಲ್ಲ	–	–	
17	ಕುಷ್ಟಗಿ	ಅಪ್ಪರ್‌ಹಿರೇನಾಲಾ ಕೆರೆ	137.00	ಇಲ್ಲ	–	–	
18	ಕುಷ್ಟಗಿ	ರಾಯನಕೆರೆ	21.04	ಇಲ್ಲ	–	–	
19	ಕುಷ್ಟಗಿ	ವಿಠಲಾಪುರ ಕೆರೆ	24.60	ಇಲ್ಲ	–	–	

ಕ್ರ.ಸಂ.	ತಾಲ್ಲೂಕು	ಕೆರೆಯ ಹೆಸರು	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಒತ್ತುವರಿಯಾಗಿದೆಯೇ (ಹೌದು/ಇಲ್ಲ)	ಒತ್ತುವರಿಯಾದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ತೆರವುಗೊಳಿಸಿದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ಷರಾ
20	ಕುಷ್ಟಗಿ	ನಿಡಶೇಷಿ ಕೆರೆ	154.00	ಇಲ್ಲ	–	–	
21	ಕುಷ್ಟಗಿ	ಮರ ಕೆರೆ	189.00	ಇಲ್ಲ	–	–	
22	ಕುಷ್ಟಗಿ	ಮೆಣೇದಾಳ ಜಿನುಗುಕೆರೆ	4.06	ಇಲ್ಲ	–	–	
23	ಕುಷ್ಟಗಿ	ಹಿರೇಮನ್ನಾಪುರ ಜಿನುಗುಕೆರೆ	13.50	ಇಲ್ಲ	–	–	
24	ಕುಷ್ಟಗಿ	ಟೆಂಗುಂಟಿ ಜಿನುಗುಕೆರೆ	2.00	ಇಲ್ಲ	–	–	
25	ಕುಷ್ಟಗಿ	ಕಲಕೇರಿ ಜಿನುಗುಕೆರೆ	8.09	ಇಲ್ಲ	–	–	
26	ಕುಷ್ಟಗಿ	ಗಂಗನಾಳ ಜಿನುಗುಕೆರೆ	4.85	ಇಲ್ಲ	–	–	
27	ಕುಷ್ಟಗಿ	ಲಿಂಗದಳ್ಳಿ ಜಿನುಗುಕೆರೆ	6.07	ಇಲ್ಲ	–	–	
28	ಕುಷ್ಟಗಿ	ಕೊರಡಕೇರಾ ಜಿನುಗುಕೆರೆ	6.35	ಇಲ್ಲ	–	–	
29	ಕುಷ್ಟಗಿ	ವಣಗೇರಿ ಜಿನುಗುಕೆರೆ	5.40	ಇಲ್ಲ	–	–	
30	ಕುಷ್ಟಗಿ	ಗುಮಗೇರಿ ಜಿನುಗುಕೆರೆ	6.68	ಇಲ್ಲ	–	–	
31	ಕುಷ್ಟಗಿ	ನಂದಾಪುರ ಜಿನುಗುಕೆರೆ	5.71	ಇಲ್ಲ	–	–	
32	ಕುಷ್ಟಗಿ	ತಳುವಗೇರಾ ಜಿನುಗುಕೆರೆ	6.78	ಇಲ್ಲ	–	–	
33	ಕುಷ್ಟಗಿ	ವಿರಾಪುರ ಜಿನುಗುಕೆರೆ	5.00	ಇಲ್ಲ	–	–	
34	ಕುಷ್ಟಗಿ	ಮುದೇನೂರ ಜಿನುಗುಕೆರೆ	5.66	ಇಲ್ಲ	–	–	
35	ಕುಷ್ಟಗಿ	ಮನ್ನೇರಾಳ ಜಿನುಗುಕೆರೆ	7.00	ಇಲ್ಲ	–	–	
36	ಕುಷ್ಟಗಿ	ಗಡ್ಡೇರಹಟ್ಟಿ ಜಿನುಗುಕೆರೆ	6.07	ಇಲ್ಲ	–	–	
37	ಕುಷ್ಟಗಿ	ಗೇರಿಪುರ ಜಿನುಗುಕೆರೆ	5.00	ಇಲ್ಲ	–	–	
38	ಕುಷ್ಟಗಿ	ಕಳಮಳ್ಳಿ ಜಿನುಗುಕೆರೆ	2.51	ಇಲ್ಲ	–	–	
39	ಕುಷ್ಟಗಿ	ಹೊಮ್ಮಿನಾಳ ಜಿನುಗುಕೆರೆ	5.00	ಇಲ್ಲ	–	–	
40	ಕುಷ್ಟಗಿ	ಹೊನಗಡ್ಡಿ ಜಿನುಗುಕೆರೆ	6.53	ಇಲ್ಲ	–	–	
41	ಕುಷ್ಟಗಿ	ಅಮರಾಪುರ ತಾಂಡಾ ಜಿನುಗ	11.07	ಇಲ್ಲ	–	–	

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	879.
ಸದಸ್ಯರ ಹೆಸರು	:	ಶ್ರೀ ಕೃಷ್ಣಭೈರೇಗೌಡ (ಬ್ಯಾಟರಾಯನಪುರ)
ಉತ್ತರಿಸಬೇಕಾದ ದಿನಾಂಕ	:	22.09.2020.
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	14ನೇ ಹಣಕಾಸು ಆಯೋಗ 2015-2020ರ ಅವಧಿಗೆ ಕರ್ನಾಟಕಕ್ಕೆ ವಾರ್ಷಿಕ ಒದಗಬಹುದಾದ ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು ಎಷ್ಟು ಎಂದು ಅಂದಾಜಿಸಲಾಗಿತ್ತು; ಸದರಿ ವರ್ಷಗಳಿಗೆ ವಾಸ್ತವದಲ್ಲಿ ಬಂದ ಪಾಲು ಎಷ್ಟು;	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	2020-21ರಲ್ಲಿ ಆಯವ್ಯಯದಲ್ಲಿ ಯಾವ ಮೂಲಗಳಿಂದ ಎಷ್ಟು ಆದಾಯವನ್ನು ಅಂದಾಜಿಸಲಾಗಿತ್ತು; ಅದರಂತೆ ಇಲ್ಲಿಯವರೆಗೆ ಎಷ್ಟು ಆದಾಯ ಬರಬೇಕಿತ್ತು; ಇಂದಿನ ಅಂದಾಜಿನ ಪ್ರಕಾರ ಸದರಿ ಮೂಲಗಳಿಂದ ವರ್ಷಾಂತ್ಯಕ್ಕೆ ಎಷ್ಟು ಆದಾಯ ಬರಬಹುದು;	(ರೂ.ಕೋಟಿಗಳಲ್ಲಿ) — see table below

(ರೂ.ಕೋಟಿಗಳಲ್ಲಿ)

ವಿವರ	ಬಜೆಟ್ 2020-21	ಆಗಸ್ಟ್, 2020ರ ವರೆಗೆ ನಿರೀಕ್ಷಿಸಿದ ಆದಾಯ	ವರ್ಷಾಂತ್ಯದಲ್ಲಿ ನಿರೀಕ್ಷಿಸಿದ ಆದಾಯ
ಅ) ರಾಜ್ಯದ ಸ್ವಂತ ತೆರಿಗೆಗಳು- ಇದರಲ್ಲಿ	**111991.00**	**46663.00**	**78299.00**
ವಾಣಿಜ್ಯ ತೆರಿಗೆ	66327.00	27636.00	45233.00
ರಾಜ್ಯ ಅಬಕಾರಿ	22700.00	9458.00	20373.00
ಮುದ್ರಾಂಕ ಮತ್ತು ನೋಂದಣಿ ಶುಲ್ಕ	12655.00	5273.00	8359.00
ವಾಹನಗಳ ಮೇಲಣ ತೆರಿಗೆಗಳು	7115.00	2965.00	3460.00
ಇತರೆ	3194.00	1331.00	875.00
ಆ) ರಾಜ್ಯದ ಸ್ವಂತ ತೆರಿಗೆ ರಹಿತ ರಾಜಸ್ವ	7767.00	3236.00	3969.00
ಕೇಂದ್ರದ ತೆರಿಗೆಗಳಲ್ಲಿ ರಾಜ್ಯದ ಪಾಲು **	28591.00	11913.00	15017.00
ಕೇಂದ್ರ ಸರ್ಕಾರದಿಂದ ಸಹಾಯಾನುದಾನ */**	31570.00	13154.00	17372.00
ಒಟ್ಟು (ಆ)	**67928.00**	**28303.00**	**36358.00**
ರಾಜಸ್ವ ಸ್ವೀಕೃತಿ (ಅ+ಆ)	**179920.00**	**74967.00**	**114658.00**
ಇ) ವಿವಿಧ ಬಂಡವಾಳ ಜಮೆಗಳು	297.00	124.00	100.00
ಒಟ್ಟು ಸ್ವೀಕೃತಿ (ಅ+ಆ+ಇ)	**180217.00**	**75091.00**	**114758.00**

* GST ನಷ್ಟ ಪರಿಹಾರ ಒಳಗೊಂಡಿದೆ. ** ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹದ ಆಧಾರದ ಮೇಲೆ ನಿರ್ಧರಿಸಿರುತ್ತದೆ.

ಸಂಖ್ಯೆ: ಆಇ-ಆಇ 17 ಆಆಕೋ-2 / 2020

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಕೃಷ್ಣಭೈರೇಗೌಡ (ಬ್ಯಾಟರಾಯನಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 879ಕ್ಕೆ ಅನುಬಂಧ

14ನೇ ಹಣಕಾಸು ಆಯೋಗದ ಶಿಫಾರಸ್ಸಿನಡಿ 2015-2020ರ ಅವಧಿಗೆ ಕರ್ನಾಟಕಕ್ಕೆ ಕೇಂದ್ರದ ತೆರಿಗೆಯಲ್ಲಿ ಅಂದಾಜಿಸಿದ ರಾಜ್ಯದ ಪಾಲು

ಹಾಗೂ ವಾಸ್ತವದಲ್ಲಿ ರಾಜ್ಯಕ್ಕೆ ಬಂದ ಪಾಲಿನ ವಿವರಗಳು

(ರೂ.ಕೋಟಿಗಳಲ್ಲಿ)

ಲೆಕ್ಕ ಶೀರ್ಷಿಕೆ	ವಿವರಗಳು	ಬಜೆಟ್ 2015-16	ಲೆಕ್ಕ 2015-16	ಬಜೆಟ್ 2016-17	ಲೆಕ್ಕ 2016-17	ಬಜೆಟ್ 2017-18	ಲೆಕ್ಕ 2017-18	ಬಜೆಟ್ 2018-19	ಲೆಕ್ಕ 2018-19	ಬಜೆಟ್ 2019-20	ಲೆಕ್ಕ 2019-20 (ಮಾರ್ಚ್, 2020ರ ಅಂತ್ಯದವರೆಗೆ)
1	2	3	4	5	6	7	8	9	10	11	12
0005	ಕೇಂದ್ರ ಸರಕು ಮತ್ತು ಸೇವಾ ತೆರಿಗೆ	0.00	0.00	0.00	0.00	0.00	447.56	11953.96	8858.76	12047.35	8773.82
0008	ಸಂಯೋಜಿತ ಸರಕು ಮತ್ತು ಸೇವಾ ತೆರಿಗೆ	0.00	0.00	0.00	0.00	0.00	3204.72	989.73	707.00	0.00	0.00
0020	ನಿಗಮ ತೆರಿಗೆ	8209.89	7547.57	8461.88	9211.05	9397.25	9721.29	10429.29	12481.94	12891.30	10542.17
0021	ನಿಗಮ ತೆರಿಗೆಯ ಹೊರತು ವರಮಾನದ ಮೇಲಣ ತೆರಿಗೆಗಳು	6061.27	5252.47	6557.71	6401.72	8215.64	8208.94	9229.34	9192.40	10831.15	8260.51
0028	ವರಮಾನ ಮತ್ತು ವ್ಯಯಗಳ ಮೇಲಣ ಇತರೆ ತೆರಿಗೆಗಳು	0.00	0.15	0.00	0.00	0.00	0.00	0.00	65.01	0.00	0.00
0032	ಆಸ್ತಿ ಮೇಲಣ ತೆರಿಗೆ	-0.24	1.65	-0.26	21.08	-0.29	-0.29	-0.33	4.58	-0.35	0.46
0037	ಸೀಮಾ ಶುಲ್ಕ	3810.69	3830.22	4216.29	3962.25	4485.26	3203.80	1830.30	2544.18	2501.25	1959.84
0038	ಕೇಂದ್ರ ಅಬಕಾರಿ ಶುಲ್ಕ	2478.34	3181.60	3368.71	4524.54	4688.37	3348.80	1783.00	1690.77	1535.56	1362.62
0044	ಸೇವಾ ತೆರಿಗೆ	4229.84	4153.56	4374.52	4639.22	5121.83	3617.15	0.00	331.65	0.00	0.00
0045	ಸರಕು ಮತ್ತು ಸೇವೆಗಳ ಮೇಲಣ ಇತರೆ ತೆರಿಗೆ ಮತ್ತು ಶುಲ್ಕ	-0.01	16.12	-0.01	0.08	-0.01	-0.01	-0.01	18.54	0.00	19.58
	ಒಟ್ಟು	24789.78	23983.34	26976.84	28759.94	31908.05	31751.96	36215.28	35894.83	39806.26	30919.00